ಶನಿವಾರ, ಜನವರಿ 21, 2023 | ₹ 6.00

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನವಿಲು

ಗಣರಾಜ್ಯೋತ್ಸವದ ಅಂಗವಾಗಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನದಲ್ಲಿ ಗಮನ ಸೆಳೆಯುತ್ತಿರುವ ನವಿಲಿನ ಆಕೃತಿ

ಶನಿವಾರ, ಜನವರಿ 21, 2023 | ಬೆಂಗಳೂರು | ₹ 6.00 | ಸಂಪುಟ 00 | ಸಂಚಿಕೆ 21 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ವರ್ಚುವಲ್ ಜಗತ್ತು
ಬಿತ್ತುವ ಭಯ
ಮನಸ್ಸಿನಾಳಕ್ಕೆ ಇಳಿಯುವ
ಮುನ್ನ ಮದ್ದು ಅರೆಯಿರಿ

ಪ್ರಜಾವಾಣಿ ಚರ್ಚೆ
ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಲ್ಲಿ ಕಾರ್ಯಾಂಗದ ಪ್ರಾತಿನಿಧ್ಯ ಇರಬೇಕೇ?

‘ಗಾಂಧಿ- ಗೋಡ್ಸೆ ಸಿದ್ಧಾಂತಗಳ ಹೋರಾಟ’ 5
‘ಮುಖ್ಯ ನ್ಯಾಯಮೂರ್ತಿಗೇ ಭಯ ಇರುವ ದೇಶ’ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,622 ▼	18,028 ▼	₹58,770 (ಬೆಂಗಳೂರು) ▲	₹70,200 (ಬೆಂಗಳೂರು) ▲	81.17 ▲

‘ಕರ್ನಾಟಕ ಕಾನೂನು ಮಾಪನ ನಿಯಮ –2022’ ಜಾರಿಗೆ ಅಧಿಸೂಚನೆ

ತೂಕ, ಅಳತೆ ಮೋಸ: ಭಾರಿ ದಂಡ

• ನವ್ಯಾ ಪಿ.ಕೆ.

ಬೆಂಗಳೂರು: ಉತ್ಪನ್ನಗಳ ಪ್ಯಾಕೇಜ್, ಅಳತೆ ಮತ್ತು ತೂಕದಲ್ಲಿ ದೋಷ ಕಂಡು ಬಂದರೆ ವಿಧಿಸುವ ದಂಡದ ಪ್ರಮಾಣವನ್ನು ರಾಜ್ಯ ಸರ್ಕಾರ ಇದೇ ಜನವರಿಯಿಂದ ಶೇ 100 ರಿಂದ ಶೇ 900ರಷ್ಟು ಹೆಚ್ಚಿಸಿದೆ. ಪರಿಷ್ಕೃತ ದಂಡ ಪ್ರಮಾಣವು ಚಿಲ್ಲರೆ ವ್ಯಾಪಾರಿಗಳು, ಆಟೋ ಚಾಲಕರು, ಪೆಟ್ರೋಲ್ ಪಂಪ್ ಮಾಲೀಕರು ಸೇರಿ ಎಲ್ಲ ಬಗೆಯ ಸೇವಾ ಪೂರೈಕೆದಾರರಿಗೆ ಅನ್ವಯವಾಗಲಿದೆ.

ಇದೇ ಡಿಸೆಂಬರ್‌ನಲ್ಲಿ ‘ಕರ್ನಾಟಕ ಕಾನೂನು ಮಾಪನ (ಜಾರಿ) (ತಿದ್ದುಪಡಿ) ನಿಯಮ–2022’ದ ಅಧಿಸೂಚನೆ ಹೊರಡಿಸಲಾಗಿದ್ದು, ಅದರ ಅನ್ವಯ ವಿಧಿಸುವ ದಂಡದ ಮೊತ್ತ ₹ 5 ಸಾವಿರದಿಂದ ಆರಂಭವಾಗಲಿದೆ. ಡಿಸೆಂಬರ್‌ವರೆಗೆ ಜಾರಿಯಲ್ಲಿದ್ದ 2016ರ ನಿಯಮದ ಪ್ರಕಾರ ದಂಡದ ಮೊತ್ತ ₹ 2,500 ರಿಂದ ಆರಂಭವಾಗುತ್ತಿತ್ತು.

ಹೊಸ ನಿಯಮಗಳ ಪ್ರಕಾರ, ಪ್ಯಾಕ್ ಮಾಡಿದ ಸರಕುಗಳಲ್ಲಿ (ಆಹಾರ ಉತ್ಪನ್ನಗಳು, ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ವಸ್ತುಗಳು) ಅಸಮರ್ಪಕವಾಗಿ ಲೇಬಲ್ ಅಂಟಿಸಿದರೆ ತಯಾರಕರು, ವಿತರಕರು ₹ 5 ಸಾವಿರ ದಂಡ ಪಾವತಿಸಬೇಕಾಗುತ್ತದೆ. ಗರಿಷ್ಠ ಚಿಲ್ಲರೆ ಮಾರಾಟ ದರ (ಎಂಆರ್‌ಪಿ), ತೂಕ ಇತ್ಯಾದಿಗಳನ್ನು ಪ್ರದರ್ಶಿಸದಿರುವುದೂ ನಿಯಮಗಳ ಉಲ್ಲಂಘನೆ ಆಗಲಿದೆ. ಉತ್ಪನ್ನವನ್ನು ಸ್ವತಃ ಪ್ಯಾಕ್ ಮಾಡುವ ಚಿಲ್ಲರೆ ವ್ಯಾಪಾರಿಗಳು, ಅಸಮರ್ಪಕವಾಗಿ ಲೇಬಲ್ ಹಾಕಿದರೆ ₹ 2,500 ದಂಡ ಪಾವತಿಸಬೇಕಾಗಿದೆ. ಈ ದಂಡ ಪ್ರಮಾಣವು ಈ ಹಿಂದೆ ಕ್ರಮವಾಗಿ ₹ 2,500 ಮತ್ತು ₹ 500 ಆಗಿದ್ದವು. ಅಂದರೆ, ದಂಡ ಮೊತ್ತವು ಕ್ರಮವಾಗಿ ಶೇ 100 ಮತ್ತು ಶೇ 400ರಷ್ಟು ಹೆಚ್ಚಳವಾಗಿದೆ.

ವಿಷಯ	ಪರಿಷ್ಕೃತ ದಂಡ	ಹಿಂದಿನ ದಂಡ
	(₹ ಗಳಲ್ಲಿ)	
ಪ್ರಮಾಣಿತವಲ್ಲದ ತೂಕ, ಅಳತೆ ಬಳಕೆ	5,000	2,500
ಪ್ರಮಾಣಿತವಲ್ಲದ ಕ್ರಮದಲ್ಲಿ ವಹಿವಾಟು	10,000	1,000
ಪ್ರಮಾಣಿತವಲ್ಲದ ಕ್ರಮದಲ್ಲಿ ದರ ಪಟ್ಟಿ ಪ್ರದರ್ಶನ	10,000	5,000
ನಿಗದಿತ ಪ್ರಮಾಣಕ್ಕಿಂತ ವ್ಯತ್ಯಸ್ತ ಪ್ರಮಾಣದಲ್ಲಿ ಪೂರೈಕೆ	10,000	1,000
ಪ್ಯಾಕ್ ಮಾಡಿದ ಉತ್ಪನ್ನಗಳ ಅಸಮರ್ಪಕ ಲೇಬಲ್	5,000	2,500
ಪ್ಯಾಕ್ ಮೇಲೆ ನಮೂದಿಸಿದ ಪ್ರಮಾಣ ಇಲ್ಲದಿದ್ದರೆ	15,000	15,000

ಪ್ಯಾಕ್ ಮಾಡಿದ ಉತ್ಪನ್ನದಲ್ಲಿ ನಮೂದಿಸಿದ ನಿವ್ವಳ ಪ್ರಮಾಣ ಇಲ್ಲದೇ ಇದ್ದರೆ ತಯಾರಕರು, ವಿತರಕರಿಗೆ ವಿಧಿಸುವ ದಂಡ ಮೊತ್ತವು ಈ ಹಿಂದಿನಂತೆಯೇ (₹ 15 ಸಾವಿರ) ಇರಲಿದೆ. ಆದರೆ, ಚಿಲ್ಲರೆ ವ್ಯಾಪಾರಿಗಳು ಈ ನಿಯಮವನ್ನು ಉಲ್ಲಂಘಿಸಿದರೆ ವಿಧಿಸುವ ದಂಡವನ್ನು ₹ 1 ಸಾವಿರದಿಂದ ₹ 5 ಸಾವಿರಕ್ಕೆ (ಶೇ 400) ಹೆಚ್ಚಿಸಲಾಗಿದೆ. ಪ್ರಮಾಣಿತ ತೂಕ ಮತ್ತು ಅಳತೆಗಳನ್ನು ಬಳಸದ ಮಾರಾಟಗಾರರಿಗೆ ದಂಡ ವಿಧಿಸಲು ಈ ನಿಯಮಗಳನ್ನು ರೂಪಿಸಲಾಗಿದೆ.

‘1, 2 ಮತ್ತು 5 ಕೆಜಿ ತೂಕದ ಪ್ರಮಾಣಿತ ತೂಕವನ್ನು ವ್ಯಾಪಾರಿಗಳು ಬಳಸಬೇಕು. ಆದರೆ, ಕೆಲವು ವ್ಯಾಪಾರಿಗಳು 3 ಕೆಜಿ ತೂಕಕ್ಕೆ ಪ್ರಮಾಣಿತ ತೂಕದ ಬದಲು ಬೇರೊಂದು ವಸ್ತುವನ್ನು ಬಳಸುತ್ತಾರೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ಸಣ್ಣ ಪುಟ್ಟ ಅಂಗಡಿಯವರು, ಆಟೋ ಚಾಲಕರಿಗೂ ಪರಿಷ್ಕೃತ ನಿಯಮವು ಅನ್ವಯಿಸಲಿದೆ. ಆದರೆ, ಮಾನವೀಯತೆಯ ಆಧಾರದಲ್ಲಿ ಅಂಥವರಿಗೆ ವಿಧಿಸುವ ದಂಡ ಪ್ರಮಾಣವನ್ನು ₹ 500 ರ ಒಳಗೆ ಮಿತಿಗೊಳಿಸಲಾಗಿದೆ. ಹಳೆಯ ಮೀಟರ್‌ಗಳನ್ನು ಬಳಸುವ ಅಥವಾ ಹೊಸ ದರಗಳಿಗೆ ಅನ್ವಯವಾಗುವಂತೆ ತಮ್ಮ ಮೀಟರ್‌ಗಳನ್ನು ನವೀಕರಿಸದ ಆಟೋ ಚಾಲಕರಿಗೆ ಈ ನಿಯಮದಡಿ ದಂಡ ವಿಧಿಸಲು ಅವಕಾಶವಿದೆ’ ಎಂದೂ ಅವರು ಹೇಳಿದರು.

ಪ್ರಮಾಣಿತವಲ್ಲದ ತೂಕ, ಅಳತೆ ಬಳಸಿಕೊಂಡು ವಾಣಿಜ್ಯ ವಹಿವಾಟು ನಡೆಸುವವರಿಗೆ ₹ 10 ಸಾವಿರ ದಂಡ ವಿಧಿಸಲು ಹೊಸ ನಿಯಮದಲ್ಲಿ ಅವಕಾಶವಿದೆ. ಪ್ಯಾಕ್ ಮಾಡದ ಸರಕುಗಳನ್ನು (ಪೆಟ್ರೋಲ್ ಅಥವಾ ಪಡಿತರ ಧಾನ್ಯ ಇತ್ಯಾದಿ) ಮಾರಾಟಗಾರ ಖಚಿತಪಡಿಸಿದ ಪ್ರಮಾಣದಷ್ಟು ಪೂರೈಸದಿದ್ದರೂ ಇದೇ ದಂಡ ಅನ್ವಯವಾಗಲಿದೆ. ಈ ಎರಡೂ ಅಪರಾಧಗಳಿಗೆ ಈ ಹಿಂದೆ ಕೇವಲ ₹ 1 ಸಾವಿರ ದಂಡ ವಿಧಿಸಲಾಗುತ್ತಿತ್ತು.

‘ಪ್ರಮಾಣಿತವಲ್ಲದ ಅಳತೆಗಳನ್ನು ಬಳಸಿಕೊಂಡು ಉತ್ಪನ್ನಗಳ ಜಾಹೀರಾತು ಅಥವಾ ದರ ಪಟ್ಟಿ ಪ್ರದರ್ಶಿಸಿದರೆ ಇನ್ನು ಮುಂದೆ ₹ 10 ಸಾವಿರ ದಂಡ ವಿಧಿಸಲಾಗುವುದು. ಉದಾಹರಣೆಗೆ, ಚಿನ್ನದ ದರದ ಜಾಹೀರಾತುಗಳು ಕೆಜಿ, ಗ್ರಾಂನಲ್ಲಿ ಇರಬೇಕು’ ಎಂದು ಅಧಿಕಾರಿ ಹೇಳಿದರು.

ನಿಯಮ ಉಲ್ಲಂಘನೆ ಗಮನಕ್ಕೆ ಬಂದರೆ ಕರೆ ಮಾಡಿ (080-22253500) ಅಥವಾ ಇ-ಮೇಲ್ ಮೂಲಕ (clm-lm-ka@nic.in) ಗ್ರಾಹಕರು ದೂರು ನೀಡಬಹುದು.

ಏರ್ ಇಂಡಿಯಾಗೆ ₹30 ಲಕ್ಷ ದಂಡ ವಿಧಿಸಿದ ಡಿಜಿಸಿಎ

ವಿಮಾನದಲ್ಲಿ ಮಹಿಳೆ ಮೇಲೆ ಮೂತ್ರ ವಿಸರ್ಜಿಸಿದ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಏರ್ ಇಂಡಿಯಾ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಮೇಲೆ ಸಹಪ್ರಯಾಣಿಕನೊಬ್ಬ ಮದ್ಯದ ಅಮಲಿನಲ್ಲಿ ಮೂತ್ರ ವಿಸರ್ಜನೆ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿ ವಿಮಾನಯಾನ ಸಂಸ್ಥೆಗೆ ಡಿಜಿಸಿಎ ಶುಕ್ರವಾರ ₹ 30 ಲಕ್ಷ ದಂಡ ವಿಧಿಸಿದೆ. ಪೈಲಟ್‌ನ ಪರವಾನಗಿಯನ್ನು ಮೂರು ತಿಂಗಳು ಕಾಲ ಅಮಾನತು ಮಾಡಿದೆ.

ಅಲ್ಲದೇ, ‘ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗಿದ್ದಕ್ಕಾಗಿ’ ಏರ್ ಇಂಡಿಯಾದ ನಿರ್ದೇಶಕಿಗೆ (ವಿಮಾನದಲ್ಲಿ ಸೇವೆಗಳು) ₹ 3 ಲಕ್ಷ ದಂಡ ವಿಧಿಸಲಾಗಿದೆ.

ಪ್ರಯಾಣಿಕನ ಅನುಚಿತ ವರ್ತನೆಗಾಗಿ ವಿಮಾನಯಾನ ಸಂಸ್ಥೆಯೊಂದಕ್ಕೆ ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಇದೇ ಮೊದಲ ಬಾರಿಗೆ ದಂಡ ವಿಧಿಸಿದೆ.

ನ್ಯೂಯಾರ್ಕ್‌ನಿಂದ ದೆಹಲಿಗೆ ಬರುತ್ತಿದ್ದ ವಿಮಾನದಲ್ಲಿ ಕಳೆದ ವರ್ಷ ನವೆಂಬರ್ 26ರಂದು ಈ ಘಟನೆ ನಡೆದಿತ್ತು. ಈ ಕುರಿತು ವಿಮಾನಯಾನ ಸಂಸ್ಥೆಯು ಡಿಜಿಸಿಎಗೆ ಜ.4ರಂದು ವರದಿ ಸಲ್ಲಿಸಿತ್ತು. ಏರ್‌ಇಂಡಿಯಾ ಸಲ್ಲಿಸಿದ ಲಿಖಿತ ಉತ್ತರವನ್ನು ಪರಿಶೀಲಿಸಿದ ನಂತರ ಡಿಜಿಸಿಎ, ಈ ಕ್ರಮ ಕೈಗೊಂಡಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಏರ್ ಇಂಡಿಯಾ ವಕ್ತಾರ, ‘ನಮ್ಮಿಂದ ಆಗಿರುವ ನ್ಯೂನತೆಗಳನ್ನು ಒಪ್ಪಿಕೊಳ್ಳುತ್ತೇವೆ’ ಎಂದಿದ್ದಾರೆ.

8ನೇ ಪುಟ ನೋಡಿ

ಡಿಜಿಸಿಎ ಕ್ರಮ: ಮಿಶ್ರ ಪ್ರತಿಕ್ರಿಯೆ

ಏರ್ ಇಂಡಿಯಾಕ್ಕೆ ದಂಡ ವಿಧಿಸಿ, ಪೈಲಟ್‌ನ ಪರವಾನಗಿಯನ್ನು ಅಮಾನತುಗೊಳಿಸಿರುವ ಡಿಜಿಸಿಎ ಕ್ರಮಕ್ಕೆ ವಿಮಾನಯಾನ ಉದ್ಯಮ ವಲಯದಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

‘ಸುರಕ್ಷತೆಯನ್ನು ಖಾತರಿಪಡಿಸುವುದು ಡಿಜಿಸಿಎ ಕೆಲಸ. ಅದಕ್ಕೆ ದಂಡ ವಿಧಿಸಲು ಅಧಿಕಾರ ಇದೆಯೇ’ ಎಂದು ಕೆಲವರು ಪ್ರಶ್ನಿಸಿದ್ದಾರೆ. ಇನ್ನು ಕೆಲವರು, ಈ ಪ್ರಕರಣದಲ್ಲಿ ‘ಅಕೌಂಟೆಬಲ್ ಮ್ಯಾನೇಜರ್’ ಶಿಕ್ಷೆಯಿಂದ ಪಾರಾಗಿದ್ದು ಸರಿಯಲ್ಲ ಎಂದಿದ್ದಾರೆ.

8ನೇ ಪುಟ ನೋಡಿ

ಭಾರತ-ಚೀನಾ ಗಡಿ: ಯುದ್ಧ ಸಿದ್ಧತೆ ಪರಿಶೀಲಿಸಿದ ಜಿನ್‌ಪಿಂಗ್

ಬೀಜಿಂಗ್ (ಪಿಟಿಐ): ಪೂರ್ವ ಲಡಾಖ್‌ನ ಭಾರತ-ಚೀನಾ ಗಡಿಯಲ್ಲಿ ನಿಯೋಜಿಸಿರುವ ಸೇನಾ ತುಕಡಿ ಯುದ್ಧ ಸ್ಥಿತಿ ಎದುರಿಸಲು ಸಜ್ಜುಗೊಂಡಿದೆಯೇ ಎಂಬುದನ್ನು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ವಿಡಿಯೊ ಸಂವಾದ ಮೂಲಕ ಪರಿಶೀಲಿಸಿದರು ಎಂದು ಅಧಿಕೃತ ಮಾಧ್ಯಮ ಶುಕ್ರವಾರ ವರದಿ ಮಾಡಿವೆ.

ಷಿಜಿಯಾಂಗ್ ಮಿಲಿಟರಿ ಕಮಾಂಡ್ ಅಡಿಯ ಖುಂಜೇರಾಬ್‌ನಲ್ಲಿ ಗಡಿ ರಕ್ಷಣಾ ಪರಿಸ್ಥಿತಿ ಬಗ್ಗೆ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಪ್ರಧಾನ ಕಚೇರಿಯಿಂದ ಸೈನಿಕರನ್ನು ಉದ್ದೇಶಿಸಿ ಅವರು ಮಾತನಾಡಿದ್ದಾರೆ.

‘ಇತ್ತೀಚಿನ ವರ್ಷಗಳಲ್ಲಿ ಈ ಪ್ರದೇಶ ನಿರಂತರವಾಗಿ ಹೇಗೆ ಬದಲಾಗುತ್ತಿದೆ ಮತ್ತು ಅದು ಸೇನೆ ಮೇಲೆ ಹೇಗೆ ಪರಿಣಾಮ ಬೀರಿದೆ’ ಎಂಬುದನ್ನು ಜಿನ್‌ಪಿಂಗ್ ಉಲ್ಲೇಖಿಸಿದ್ದಾರೆ ಎಂದು ವಿಡಿಯೊದಲ್ಲಿ ತಿಳಿಸಲಾಗಿದೆ.

ಈಗ ಗಡಿಯಲ್ಲಿ 24 ಗಂಟೆಗಳ ಮೇಲ್ವಿಚಾರಣೆ ನಡೆಸಲಾಗುತ್ತಿದೆ ಎಂದು ಸೈನಿಕರೊಬ್ಬರು ಉತ್ತರಿಸಿದರು.

ಸೈನಿಕರ ಸ್ಥಿತಿ ಬಗ್ಗೆ ಕೇಳಿದ ಷಿ, ವಾಸಯೋಗ್ಯ ಪ್ರದೇಶದಲ್ಲಿ ಅವರು ತಾಜಾ ತರಕಾರಿಗಳನ್ನು ಸ್ವೀಕರಿಸಲು ಸಮರ್ಥರಾಗಿದ್ದಾರೆಯೇ ಎಂದು ಕೇಳಿದರು. ಗಡಿ ಗಸ್ತು ಮತ್ತು ನಿರ್ವಹಣಾ ಕಾರ್ಯಗಳ ಬಗ್ಗೆ ಜಿನ್‌ಪಿಂಗ್ ಮಾಹಿತಿ ಪಡೆದರು.

ಫೆಬ್ರುವರಿ 10ರಿಂದ ವಿಧಾನಮಂಡಲ ಅಧಿವೇಶನ

ಬೆಂಗಳೂರು: ರಾಜ್ಯ ವಿಧಾನಮಂಡಲದ ಪ್ರಸಕ್ತ ಸಾಲಿನ ಮೊದಲ ಅಧಿವೇಶನವನ್ನು ಫೆಬ್ರುವರಿ 10 ರಿಂದ ನಡೆಸಲು ಸಂಪುಟ ಸಭೆಯಲ್ಲಿ ನಿರ್ಧರಿಸಿದ್ದು, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಂದು ಉಭಯ ಸದನಗಳ ಜಂಟಿ ಅಧಿವೇಶನವನ್ನುದ್ದೇಶಿಸಿ ಭಾಷಣ ಮಾಡುವರು.

ಶುಕ್ರವಾರ ಸಂಪುಟ ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಫೆ.10 ರಂದು ಜಂಟಿ ಅಧಿವೇಶನ ನಡೆಸಲು ನಿರ್ಧರಿಸಲಾಗಿದೆ. ಫೆ. 16 ರವರೆಗೂ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯಲಿದೆ. ಫೆ.17 ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್ ಮಂಡಿಸುವ ಸಾಧ್ಯತೆ ಇದೆ’ ಎಂದರು.

‘ಅಧಿವೇಶನದ ಕೊನೆಯ ದಿನಾಂಕವನ್ನು ನಿಗದಿ ಮಾಡಿಲ್ಲ. ಚುನಾವಣಾ ವರ್ಷವಾಗಿರುವ ಕಾರಣ ಶಾಸಕರ ಹಾಜರಿ, ಆಸಕ್ತಿಯನ್ನು ತಿಳಿದುಕೊಂಡು ಕಲಾಪ ಸಲಹಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗುವುದು’ ಎಂದು ತಿಳಿಸಿದರು.

ಬಾನೆಟ್ ಮೇಲೆ ಯುವಕ • ಪ್ರತ್ಯೇಕ ಎಫ್‌ಐಆರ್ • ಮಹಿಳೆ ಸೇರಿ ಐವರ ಸೆರೆ

4 ಕಿ.ಮೀ ಕಾರು ಚಲಾಯಿಸಿ ಕೊಲೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾನೆಟ್ ಮೇಲೆ ಎರಗಿದ್ದ ದರ್ಶನ್ ಎಂಬುವರನ್ನು ಕಾರಿನ ಮೇಲೆಯೇ 4 ಕಿ.ಮೀ.ವರೆಗೂ ಹೊತ್ತೊಯ್ದು ಕೊಲೆಗೆ ಯತ್ನಿಸಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಪ್ರಿಯಾಂಕಾ ಎಂಬುವರನ್ನು ಜ್ಞಾನಭಾರತಿ ಪೊಲೀಸರು ಬಂಧಿಸಿದ್ದಾರೆ.

ಕಾರು ಚಾಲಕಿ ಪ್ರಿಯಾಂಕಾ ಅವರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ದರ್ಶನ್ ಹಾಗೂ ಅವರ ಮೂವರು ಸ್ನೇಹಿತರನ್ನೂ ಪೊಲೀಸರು ಸೆರೆ ಹಿಡಿದಿದ್ದಾರೆ.

‘ಶುಕ್ರವಾರ ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ದರ್ಶನ್ ಹಾಗೂ ಪ್ರಿಯಾಂಕಾ ಅವರ ಪತಿ ಪ್ರಮೋದ್, ದೂರು– ಪ್ರತಿದೂರು ನೀಡಿದ್ದಾರೆ. ಇದರನ್ವಯ ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಘಟನೆಯ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಅವುಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಕಾರಿನ ಬಾನೆಟ್ ಮೇಲೆ ಅಪಾಯದ ಸ್ಥಿತಿಯಲ್ಲಿದ್ದ ಯುವಕ ದರ್ಶನ್

‘ದರ್ಶನ್ ಅವರು ಪಾಪರೆಡ್ಡಿಪಾಳ್ಯದಲ್ಲಿ ರೆಸ್ಟೋರೆಂಟ್ ನಡೆಸುತ್ತಿದ್ದಾರೆ. ಅವರು ಮನೆಯಿಂದ ರೆಸ್ಟೋರೆಂಟ್‌ಗೆ ಮಾರುತಿ ಸ್ವಿಫ್ಟ್ ಕಾರಿನಲ್ಲಿ ಹೊರಟಿದ್ದರು. ಪ್ರಿಯಾಂಕಾ ತಮ್ಮ ಪತಿ ಜೊತೆ ಆಸ್ಪತ್ರೆಯಿಂದ ಮನೆಗೆ ಟಾಟಾ ನೆಕ್ಸಾನ್ ಕಾರಿನಲ್ಲಿ ತೆರಳುತ್ತಿದ್ದರು’ ಎಂದು ತಿಳಿಸಿದರು.

ಸಾಯುತ್ತೇನೆಂದರೂ ಕಾರು ನಿಲ್ಲಿಸಲಿಲ್ಲ: ‘ಉಲ್ಲಾಳ ಮುಖ್ಯರಸ್ತೆಯ ಸಿಗ್ನಲ್‌ನಲ್ಲಿ ಕಾರು ನಿಲ್ಲಿಸಿದ್ದೆ. ಕೆಂಪು ಸಿಗ್ನಲ್ ಇದ್ದರೂ ಕಾರು ಚಲಾಯಿಸಿಕೊಂಡು ಬಂದಿದ್ದ ಪ್ರಿಯಾಂಕಾ, ನನ್ನ ಕಾರಿಗೆ ಅಡ್ಡವಾಗಿ ನಿಲ್ಲಿಸಿದ್ದರು. ಕೆಂಪು ಸಿಗ್ನಲ್ ಇರುವುದು ಕಾಣುವುದಿಲ್ಲವೇ ? ಎಂದು ಕೇಳಿದ್ದೆ. ಕೋಪಗೊಂಡ ಪ್ರಿಯಾಂಕಾ, ಮಧ್ಯದ ಬೆರಳು ತೋರಿಸಿ ಕಾರು ಚಲಾಯಿಸಿಕೊಂಡು ಮಂಗಳೂರು ಕಾಲೇಜು ಕಡೆ ಹೊರಟಿದ್ದರು’ ಎಂದು ದರ್ಶನ್ ದೂರಿನಲ್ಲಿ ತಿಳಿಸಿದ್ದಾರೆ.

‘ಆರೋಪಿ ಕಾರು ಹಿಂಬಾಲಿಸಿಕೊಂಡು ಹೋಗಿ, ಮಾರ್ಗ ಮಧ್ಯೆ ತಡೆದಿದ್ದೆ. ಅಷ್ಟರಲ್ಲೇ ಸ್ನೇಹಿತರೂ ಸ್ಥಳಕ್ಕೆ ಬಂದಿದ್ದರು. ಪ್ರಿಯಾಂಕಾ ಕಾರಿನಿಂದ ಇಳಿದಿರಲಿಲ್ಲ. ಅವರ ಜೊತೆಗಿದ್ದ ವ್ಯಕ್ತಿಯೊಬ್ಬ ಕಾರಿನಿಂದ ಇಳಿದು ನನ್ನ ಮುಖಕ್ಕೆ ಗುದ್ದಿ, ಅಂಗಿ ಹರಿದ’

‘ಗಲಾಟೆ ಕಂಡು ಸಾರ್ವಜನಿಕರು ಸ್ಥಳದಲ್ಲಿ ಸೇರಿದ್ದರು. ಪೊಲೀಸರು ಸಹ ಸ್ಥಳಕ್ಕೆ ಬಂದಿದ್ದರು. ಇಬ್ಬರಿಗೂ ಠಾಣೆಗೆ ಬರುವಂತೆ ಹೇಳಿದ್ದರು. ಠಾಣೆಗೆ ಬರಲು ಒಪ್ಪದ ಪ್ರಿಯಾಂಕಾ ಹಾಗೂ ಇತರರು, ಕಾರು ಸಮೇತ ಸ್ಥಳದಿಂದ ಪರಾರಿಯಾಗಲು ಮುಂದಾದರು. ಅವರ ಕಾರು ಮುಂದಕ್ಕೆ ಹೋಗದಂತೆ ತಡೆಯಲು ಯತ್ನಿಸಿ, ಬಾನೆಟ್ ಮೇಲೆ ಎರಗಿದೆ. ಅದೇ ಸ್ಥಿತಿಯಲ್ಲೇ ಆರೋಪಿ ಪ್ರಿಯಾಂಕಾ, ಕಾರು ಚಲಾಯಿಸಿಕೊಂಡು ಹೊರಟರು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

9ನೇ ಪುಟ ನೋಡಿ

ಗೂಗಲ್: 12 ಸಾವಿರ ನೌಕರರ ವಜಾ

ನ್ಯೂಯಾರ್ಕ್ (ಪಿಟಿಐ): ಗೂಗಲ್ ಕಂಪನಿಯು ಒಟ್ಟು 12 ಸಾವಿರ ನೌಕರರನ್ನು ಕೆಲಸದಿಂದ ತೆಗೆಯುವುದಾಗಿ ಹೇಳಿದೆ. ಜಾಗತಿಕವಾಗಿ ಆರ್ಥಿಕ ಹಿಂಜರಿತ ಎದುರಾಗಬಹುದು ಎಂಬ ಭೀತಿಯ ನಡುವೆ ನೌಕರರನ್ನು ಕೆಲಸದಿಂದ ತೆಗೆಯುತ್ತಿರುವ ತಂತ್ರಜ್ಞಾನ ಕಂಪನಿಗಳ ಸಾಲಿಗೆ ಈಗ ಗೂಗಲ್ ಕೂಡ ಸೇರಿದೆ. ಉದ್ಯೋಗ ಕಡಿತಕ್ಕೆ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸುಂದರ್ ಪಿಚ್ಚೈ ವಿಷಾದವನ್ನೂ ವ್ಯಕ್ತಪಡಿಸಿದ್ದಾರೆ. 3B

ಒಳ ಪುಟಗಳು

ಅಂಗನವಾಡಿ ಕಾರ್ಯಕರ್ತೆಯರು ವಶಕ್ಕೆ 6
ಬೇರೊಬ್ಬ ಮಹಿಳೆಗೂ ಹೀಗೇ ಕಿರುಕುಳ ನೀಡಿದ್ದ: ಸ್ವಾತಿ ಮಲಿವಾಲ್ 8

ಚಿನಕುರಳಿ

ಪ್ರಕಾಶ್ ಶೆಟ್ಟಿ

ಚುಟುಕು ಸುದ್ದಿ

ಇಂದು 'ಪಿಂಚಣಿ ಆದಾಲತ್'

ಬೆಂಗಳೂರು: ಆನೇಕಲ್ ತಾಲ್ಲೂಕಿನ ಸರ್ಜಾಪುರ ಹೋಬಳಿಯ ಚಿಕ್ಕದಾಸರಹಳ್ಳಿ ಗ್ರಾಮದ ಸರ್ಕಾರಿ ಶಾಲೆ ಹಿಂಭಾಗ ಆವರಣದಲ್ಲಿ ಜ.21ರಂದು ಬೆಳಿಗ್ಗೆ 10ಕ್ಕೆ 'ಪಿಂಚಣಿ ಆದಾಲತ್' ನಡೆಯಲಿದೆ. ಉಪ ವಿಭಾಗಾಧಿಕಾರಿ ಎ.ಎನ್.ರಘುನಂದನ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂದು 'ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ' ಕಾರ್ಯಕ್ರಮ

ಬೆಂಗಳೂರು: ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಕಗ್ಗಲೀಪುರ ಗ್ರಾಮದಲ್ಲಿ ಜ.21ರಂದು ಬೆಳಿಗ್ಗೆ 10ಕ್ಕೆ 'ಜಿಲ್ಲಾಧಿಕಾರಿ ನಡೆ ಹಳ್ಳಿಗಳ ಕಡೆ' ಕಾರ್ಯಕ್ರಮ ನಡೆಯಲಿದೆ.

ಜಿಲ್ಲಾಧಿಕಾರಿ ಕೆ.ಎ.ದಯಾನಂದ್ ಸಾರ್ವಜನಿಕರ ಸಮಸ್ಯೆ ಆಲಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸ್ಯಾಂಕಿ ಮೇಲ್ಸೇತುವೆ ಬೇಡ: ವಿದ್ಯಾರ್ಥಿಗಳಿಂದ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ, ವೈಯಾಲಿಕಾವಲ್ ಮತ್ತು ಸದಾಶಿವನಗರದ ಸುಮಾರು 2 ಸಾವಿರ ವಿದ್ಯಾರ್ಥಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದು, ಸ್ಯಾಂಕಿ ರಸ್ತೆಯಲ್ಲಿ ಮೇಲ್ಸೇತುವೆ ನಿರ್ಮಾಣ ಪ್ರಸ್ತಾವವನ್ನು ಕೈಬಿಡಬೇಕೆಂದು ಒತ್ತಾಯಿಸಿದ್ದಾರೆ.

'ಬೊಮ್ಮಾಯಿ ಅಂಕಲ್' ಎಂದು ಪೋಸ್ಟ್ ಕಾರ್ಡ್‌ನಲ್ಲಿ ಬರಹ ಆರಂಭಿಸಿದ್ದು, ಸ್ಥಳೀಯ ಜನರ ಸಲಹೆಯನ್ನು ಕೇಳದೆ ಬಿಬಿಎಂಪಿ ಮೇಲ್ಸೇತುವೆ ನಿರ್ಮಿಸುವ ಯೋಜನೆ ಆರಂಭಿಸಿದೆ. ಈ ಯೋಜನೆಯಿಂದ ಮಕ್ಕಳಿಗೆ ಆರೋಗ್ಯದ ಮೇಲೆ ಸಾಕಷ್ಟು ದುಷ್ಪರಿಣಾಮ ಬೀರುತ್ತದೆ. ಸ್ಟೆಲ್ಲಾ ಮೆರಿಸ್ ಶಾಲೆಗೆ ಸಂಬಂಧಿಸಿದ ಸಾಕಷ್ಟು ಭೂಮಿ ಈ ಯೋಜನೆಗೆ ಹೋಗುತ್ತದೆ ಎಂದು ಹೇಳಿದ್ದಾರೆ.

'ಮಕ್ಕಳು ಪ್ರಾರ್ಥನೆ ಸಲ್ಲಿಸುವ, ಕ್ರೀಡಾ ಚಟುವಟಿಕೆ ನಡೆಸುವ ಮತ್ತು ಊಟ ಮಾಡುವ ಸ್ಥಳದಲ್ಲಿ ಮೇಲ್ಸೇತುವೆ ನಿರ್ಮಾಣವಾಗಲಿದೆ. ಸಮೀಪವಿರುವ ಪೂರ್ಣಪ್ರಜ್ಞ ಶಾಲೆಗೂ ಸಂಕಷ್ಟ ಉಂಟಾಗಲಿದ್ದು, ವಿದ್ಯಾರ್ಥಿಗಳು ನಿತ್ಯವೂ ಕ್ರೀಡಾ ಚಟುವಟಿಕೆಗೆ ಮೈದಾನಕ್ಕೆ ಹೋಗಲು ಸಮಸ್ಯೆಯಾಗಲಿದೆ. ನಮಗೆ ಮಕ್ಕಳ ಸುರಕ್ಷತೆ ಬಗ್ಗೆ ಆತಂಕ ಎದುರಾಗಿದೆ' ಎಂದು ಸ್ಥಳೀಯರು ಹೇಳಿದರು.

'ಸಂಚಾರ ದಟ್ಟಣೆಗೆ ಕಾವೇರಿ ಚಿತ್ರಮಂದಿರ ಬಳಿ ಇರುವ ಅಂಡರ್‌ಪಾಸ್ ಕಾರಣ. ಸ್ಯಾಂಕಿ ಮೇಲ್ಸೇತುವೆಯಿಂದ ಇದಕ್ಕೆ ಪರಿಹಾರ ಸಿಗುವುದಿಲ್ಲ. ಈ ಮೇಲ್ಸೇತುವೆ ನಿರ್ಮಾಣದಿಂದ ವಾಹನಗಳು ಬೇಗ ಚಲಿಸಿ, ಅಂಡರ್‌ಪಾಸ್‌ನಲ್ಲಿ ಮತ್ತಷ್ಟು ದಟ್ಟಣೆಯಾಗಲಿದೆ. ಈ ಪ್ರದೇಶವನ್ನು ಮತ್ತಷ್ಟು ಹಾಳು ಮಾಡುವುದು ಬೇಡ' ಎಂದು ಸ್ಥಳೀಯರಾದ ಕೆ.ಆರ್. ಅಯ್ಯರ್ ಹೇಳಿದರು.

ಸಾಹಿತಿ ಪುಸ್ತಕಮನೆ ಹರಿಹರಪ್ರಿಯ ಆಗ್ರಹ ● ಪುಸ್ತಕ ಸಂಸ್ಕೃತಿ ದಿನ ಆಚರಣೆ

'ಸರ್ಕಾರಿ ಶಾಲೆ ಮುಚ್ಚುವ ಕೆಲಸ ನಿಲ್ಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾನ್ವೆಂಟ್‌ಗಳನ್ನು ತೆರೆಯಲು ಉತ್ತೇಜನ ಕೊಟ್ಟು ಸರ್ಕಾರಿ ಶಾಲೆಗಳನ್ನು ಮುಚ್ಚುವ ಕೆಲಸ ಯಾವುದೇ ಕಾರಣಕ್ಕೂ ಮಾಡಬಾರದು' ಎಂದು ಸಾಹಿತಿ ಪುಸ್ತಕಮನೆ ಹರಿಹರಪ್ರಿಯ ಆಗ್ರಹಿಸಿದರು.

ರಂಗೋತ್ರಿ ಮಕ್ಕಳ ರಂಗಶಾಲೆ ನಗರದಲ್ಲಿ ಶುಕ್ರವಾರ ಆಯೋಜಿಸಿದ ಪುಸ್ತಕ ಸಂಸ್ಕೃತಿ ದಿನ ಕಾರ್ಯಕ್ರಮದಲ್ಲಿ 70ನೇ ಜನ್ಮದಿನಾಚರಣೆಯ ಪ್ರಯುಕ್ತ ಅವರಿಗೆ ಪುಸ್ತಕ ತುಲಾಭಾರ ನಡೆಸಲಾಯಿತು.

ಬಳಿಕ ಮಾತನಾಡಿದ ಅವರು, 'ಕೆಲ ಪುಸ್ತಕಗಳನ್ನು ನಾನು ಓದಿದ ಗದ್ದೆಹೊಸೂರು ಸರ್ಕಾರಿ ಶಾಲೆಗೆ ನೀಡಬೇಕೆಂದು ನಿರ್ಧರಿಸಿದೆ. ಆದರೆ, ಆ ಶಾಲೆ ಈಗ ಮುಚ್ಚಿದೆ ಎಂದು ತಿಳಿದು ಬೇಸರವಾಯಿತು. ಆಂಗ್ಲ ಮಾಧ್ಯಮದ ಶಾಲೆಗಳ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ. ಹಳ್ಳಿಗಳಲ್ಲಿರುವ ಶಾಲೆಗಳನ್ನು ಉಳಿಸಬೇಕು. ನಮ್ಮ ಊರುಗಳಿಗೆ ಕೈಲಾದ ಕೊಡುಗೆ ನೀಡಬೇಕು. ನಮ್ಮ ಮನೆಯಲ್ಲಿ 5 ಲಕ್ಷ ಪುಸ್ತಕಗಳಿವೆ. ಪಿಲ್ಲರ್ ಇಲ್ಲದ ಮನೆಯಲ್ಲಿ ಇನ್ನಷ್ಟು ಪುಸ್ತಕ ಇರಿಸಿದಲ್ಲಿ ಮನೆ ಕುಸಿದು ಬೀಳಲಿದೆ' ಎಂದರು.

ಪುಸ್ತಕಮನೆ ಹರಿಹರಪ್ರಿಯ ಅವರಿಗೆ ಪುಸ್ತಕ ತುಲಾಭಾರ ನಡೆಸಲಾಯಿತು. ಬರಗೂರು ರಾಮಚಂದ್ರಪ್ಪ, ಜೆಪಿಟಿ ಚಂದ್ರು, ರಂಗೋತ್ರಿಯ ಸಂಸ್ಥಾಪಕ ಕಾರ್ಯದರ್ಶಿ ಕುಮಾರ್ ಕೆ.ಎಚ್, ಎಂ. ಪ್ರಿಯದರ್ಶಿನಿ, ಹರಿಹರಪ್ರಿಯ ಅವರ ಪತ್ನಿ ಸುನಂದಾ ಹಾಗೂ ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ ಇದ್ದಾರೆ. –ಪ್ರಜಾವಾಣಿ ಚಿತ್ರ

ಬೀದಿ ಜಗಳ ಆಗಬಾರದು: ಸಾಹಿತಿ ಬರಗೂರು ರಾಮಚಂದ್ರಪ್ಪ, 'ಇತ್ತೀಚಿನ ದಿನಗಳಲ್ಲಿ ಜಾತಿವಾದ, ಧಾರ್ಮಿಕ ಮೂಲಭೂತವಾದ ವಿಜೃಂಭಿಸುತ್ತಿದೆ. ಜಾತಿ ತಾರತಮ್ಯತೆ ತೋರುವ ಅನೇಕರು ನಮ್ಮ ನಡುವೆ ಇದ್ದಾರೆ. ಭಿನ್ನಾಭಿಪ್ರಾಯದ ನಡುವೆ ಸ್ನೇಹದಿಂದ ಬದುಕುವುದು ಪ್ರಜಾಪ್ರಭುತ್ವದ ಲಕ್ಷಣ. ಭಿನ್ನಾಭಿಪ್ರಾಯ ಬೀದಿ ಜಗಳ ಆಗಬಾರದು' ಎಂದು ಅವರು ತಿಳಿಸಿದರು.

'ದೇಶದಲ್ಲಿ ಸುಮಾರು 19 ಸಾವಿರ ನೋಂದಾಯಿತ ಪ್ರಕಾಶನ ಸಂಸ್ಥೆಗಳಿವೆ. ₹ 26 ಸಾವಿರ ಕೋಟಿ ಬಂಡವಾಳವನ್ನು ಪುಸ್ತಕೋದ್ಯಮದಲ್ಲಿ ಹೂಡಲಾಗುತ್ತಿದೆ. 80 ಸಾವಿರಕ್ಕೂ ಅಧಿಕ ಪುಸ್ತಕಗಳು ವರ್ಷಕ್ಕೆ ಪ್ರಕಟವಾಗುತ್ತವೆ. ಪುಸ್ತಕ ಸಂಸ್ಕೃತಿಯ ಸಂರಕ್ಷಣೆ ಸಂಖ್ಯೆಯಿಂದ ನಿರ್ಧಾರವಾಗುವುದಿಲ್ಲ. ಒಂದು ಪುಸ್ತಕವೂ ಹೊಸದನ್ನು ಸೃಷ್ಟಿಸಬಹುದು. ಪುಸ್ತಕ ಸಂಸ್ಕೃತಿ ಸಮನ್ವಯ ಸಾಧಿಸಬೇಕು' ಎಂದು ಹೇಳಿದರು.

ಎಸ್.ಎಲ್.ಎನ್. ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥೆ ಎಂ. ಪ್ರಿಯದರ್ಶಿನಿ, 'ಪುಸ್ತಕಮನೆ ಹರಿಹರಪ್ರಿಯ ಅವರು ಸಾಂಸ್ಕೃತಿಕ ಲೋಕಕ್ಕೆ ಅದ್ಭುತ ಪರಿಕಲ್ಪನೆ ನೀಡಿದ್ದಾರೆ' ಎಂದರು.

ಕಾಂಗ್ರೆಸ್ ಮುಖಂಡ ಹಾಗೂ ಬಯಲು ಪರಿಷತ್ ಅಧ್ಯಕ್ಷ ವೈ.ಎಸ್.ವಿ. ದತ್ತ, ಹರಿಹರಪ್ರಿಯ ಅವರ 'ಕುವೆಂಪು ಒಲವು ನಿಲವು' ಕೃತಿ ಬಿಡುಗಡೆಯ ಹಿಂದಿನ ಘಟನೆಗಳು ಹಾಗೂ 1979ರಲ್ಲಿ ಪಕ್ಷಾಂತರ ವಿರೋಧಿಸಿ ಸಮಾರಂಭ ನಡೆಸಿದ್ದನ್ನು ನೆನಪಿಸಿಕೊಂಡರು. 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಅಂಚೆ ಚೀಟಿ ಬಿಡುಗಡೆ ಮಾಡಿದರು.

ನಗರದಲ್ಲಿ ಇಂದು

ಪುರಂದರ ಗಾನ ನಮನ: ರಾಯಚೂರು ಶೇಷಗಿರಿದಾಸ್ ಮತ್ತು ತಂಡ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ದೇವರಚಿಕ್ಕನಹಳ್ಳಿ, ಬನ್ನೇರುಘಟ್ಟ ರಸ್ತೆ, ಸಂಜೆ 6



ಶೇಷಗಿರಿದಾಸ್

ಪುರಂದರದಾಸರ ಆರಾಧನಾ ಮಹೋತ್ಸವ: ಬೆಳಿಗ್ಗೆ 9–15ರಿಂದ: ಉಪನ್ಯಾಸ: ಹ.ರ. ನಾಗರಾಜದಾಸರು, ಪುರಂದರ ದಾಸರ ವಿಗ್ರಹದ ಮೆರವಣಿಗೆ, ಭಜನೆ: ಸರಸ್ವತಿ ಸಂಗೀತ ಶಾಲೆ, ಹಿರಣ್ಮಯಿ ಸಂಗೀತ ಶಾಲೆ, ಸಭಾ ಕಾರ್ಯಕ್ರಮ: ಸಂಜೆ 6: ಉಪನ್ಯಾಸ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಅತಿಥಿಗಳು: ವಿದ್ಯಾಧೀಶಾಚಾರ್ಯ ಗುತ್ತಲ್, ಎ.ಬಿ. ಶಾಮಾಚಾರ್ಯ, ಎಂ.ಆರ್.ವಿ. ಪ್ರಸಾದ್, ಎಸ್. ವೆಂಕಟೇಶಮೂರ್ತಿ, ಆಯೋಜನೆ: ಶ್ರೀನಿವಾಸ ಉತ್ಸವ ಬಳಗ, ಸ್ಥಳ: ದಿಗ್ವಿಜಯ ಲಕ್ಷ್ಮೀನರಸಿಂಹ ದೇವಸ್ಥಾನದ ಆವರಣ, ಉತ್ತರಾಧಿಮಠ, ಬಸವನಗುಡಿ

'ಸರಳಾ ರಂಗನಾಥ ರಾವ್ ಪ್ರಶಸ್ತಿ ಪ್ರದಾನ', 'ನಿನ್ನೆಯ ನಾಳೆಗಳು' ಪುಸ್ತಕ ಬಿಡುಗಡೆ: ಉದ್ಘಾಟನೆ: ಮಾವಿನಕೆರೆ ರಂಗನಾಥನ್, ಪ್ರಸ್ತಾವನೆ: ಬಿ.ಎನ್. ರಂಗನಾಥ ರಾವ್, ಪ್ರಶಸ್ತಿ ಪ್ರದಾನ: ಎಚ್.ಎಲ್. ಪುಷ್ಪಾ, ಪ್ರಶಸ್ತಿ ಪುರಸ್ಕೃತರು: ಭಾಗೀರಥಿ ಹೆಗಡೆ, ಭಾಷಣ: ಎಲ್. ಜಿ. ಮೀರಾ, ಆಯೋಜನೆ: ಸರಳಾ ರಂಗನಾಥ ರಾವ್ ಸ್ಮಾರಕ ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ. ಕಲಾ ಭವನ, ನರಸಿಂಹರಾಜ ಕಾಲೊನಿ, ಬೆಳಿಗ್ಗೆ 10

ಸ್ವಾಮಿ ವಿವೇಕಾನಂದ ವಿದ್ಯಾಶಾಲಾ ಪ್ರೌಢಶಾಲೆಯ ಸುವರ್ಣ ಮಹೋತ್ಸವ: ಅಧ್ಯಕ್ಷತೆ: ಸ್ವಾಮಿ ನಿತ್ಯಸ್ಥಾನಂದ ಮಹಾರಾಜ್, ಅತಿಥಿಗಳು: ಬಿ.ಸಿ. ನಾಗೇಶ್, ಚಕ್ರವರ್ತಿ ಸೂಲಿಬೆಲೆ, ತೇಜಸ್ವಿಸೂರ್ಯ, ಉಪಸ್ಥಿತಿ: ತೇಜಸ್ವಿನಿ ಅನಂತಕುಮಾರ್, ಎಂ.ಆರ್. ದೊರೆಸ್ವಾಮಿ, ಎಲ್.ಎ. ರವಿಸುಬ್ರಮಣ್ಯ, ವೂಡೇ.ಪಿ. ಕೃಷ್ಣ, ಆಯೋಜನೆ: ಮತ್ತು ಸ್ಥಳ: ಸ್ವಾಮಿ ವಿವೇಕಾನಂದ ಶೈಕ್ಷಣಿಕ ಸಂಸ್ಥೆ, ಬನಶಂಕರಿ 1ನೇ ಹಂತ, ಬೆಳಿಗ್ಗೆ 10

ಸುಭಾಷ್ ಚಂದ್ರ ಬೋಸ್ ಅವರ ಜನ್ಮದಿನದ ವಾರ್ಷಿಕ ಚಟುವಟಿಕೆಗಳ ಸಮಾರೋಪ ಸಮಾರಂಭ: ಅತಿಥಿ: ಡಾ.ಸುಧಾ ಕಾಮತ್, ಭಾಷಣ: ಅಜಯ್ ಕಾಮತ್, ಆಯೋಜನೆ: ಎಐಡಿಎಸ್‌ಒ, ಸ್ಥಳ: ಯುವಿಸಿಇ ಅಲುಮ್ನಿ ಅಸೋಸಿಯೇಷನ್ ಹಾಲ್, ಕೆ.ಆರ್. ವೃತ್ತ, ಬೆಳಿಗ್ಗೆ 10.15

ರಾಜ್ಯಮಟ್ಟದ ಸಾಂಸ್ಕೃತಿಕ ಮತ್ತು ಪ್ರೇರಣಾ ಕಾರ್ಯಕ್ರಮ: ಅತಿಥಿಗಳು: ಎಲ್. ಹನುಮಂತಯ್ಯ, ಕೆ.ಎಸ್. ಲತಾಕುಮಾರಿ, ಶ್ವೇತಾ ಜಿ.ಎನ್., ರಕ್ಷಾ ರಾಮಯ್ಯ, ರವೀಂದ್ರ ಭಟ್ಟ, ಆಯೋಜನೆ: ಸ್ನೇಹದೀಪ್ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, ಸ್ಥಳ: ಜಲಮಂಡಳಿ ರಜತ್ ಭವನ, ಮಲ್ಲೇಶ್ವರ, ಬೆಳಿಗ್ಗೆ 10.30

'ಲೇಪಾಕ್ಷಿ' ಪುಸ್ತಕ ಬಿಡುಗಡೆ: ಅತಿಥಿ: ಶ್ರೀನಿವಾಸ್ ಅರ್ಕ, ಉಪಸ್ಥಿತಿ: ಸದಾಶಿವ ಶೆಣೈ ಕೆ., ಪಾವುಲೂರು ಸುಬ್ಬಾರಾವ್, ರಾಧಾಕೃಷ್ಣ ರಾಜು, ಕೆ.ಸಿ. ವಸಂತಕವಿತ, ಮೈನಾಸ್ವಾಮಿ, ಬಿ.ಆರ್. ಕೃಷ್ಣ, ಅಧ್ಯಕ್ಷತೆ: ಕೆ.ಆರ್. ನರಸಿಂಹನ್, ಆಯೋಜನೆ: ಮೈನಾಸ್ವಾಮಿ ಪಬ್ಲಿಕೇಶನ್, ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

'ಲೀಲಾವತೀ' ನಾಟಕ ಪ್ರದರ್ಶನ: ನಿರ್ದೇಶನ: ಎಚ್.ಎನ್. ಉಮೇಶ್, ಆಯೋಜನೆ: ಬೆಂಗಳೂರು ಲಲಿತಕಲಾ ಪರಿಷತ್, ದಿ ಅಕಾಡೆಮಿ ಟ್ರಸ್ಟ್, ಸ್ಥಳ: ಡಾ.ಎಚ್.ಎನ್. ಕಲಾಕ್ಷೇತ್ರ, ಬೆಳಿಗ್ಗೆ 11.30

ಆಧುನಿಕ ಜೀವನದಲ್ಲಿ ವೈದಿಕ ಜ್ಞಾನ: ಶಿವ ಪ್ರಕಾಶನಂದ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಆಟ್ಟಾ ಗಲಾಟ,ಇಂದಿರಾನಗರ 1ನೇ ಹಂತ, ಬೆಳಿಗ್ಗೆ 11.30

ಯೋಗ ವಿಜ್ಞಾನ ಕೇಂದ್ರದ ವಾರ್ಷಿಕೋತ್ಸವ: ಅತಿಥಿಗಳು: ಎಚ್. ಆರ್. ನಾಗೇಂದ್ರ, ಎಸ್.ಆರ್. ವಿಶ್ವನಾಥ್, ರಮೇಶ್.ಬಿ. ಉಮರಾಣಿ, ಅಧ್ಯಕ್ಷತೆ: ಗೋಪಾಲಕೃಷ್ಣ ಹೆಗಡೆ, ಆಯೋಜನೆ: ಯೋಗ ವಿಜ್ಞಾನ ಕೇಂದ್ರ, ಸ್ಥಳ: ಡಾ.ಬಿ. ಆರ್. ಅಂಬೇಡ್ಕರ್ ಭವನ, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ಯಲಹಂಕ ನ್ಯೂಟೌನ್, ಸಂಜೆ 4

ಕೃಷ್ಣ ಸೆಟ್ಟಿ ಅವರು ಕಲಾಕೃತಿಗಳ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ಮಾಣಿಕ್ಯವೇಲು ಮ್ಯಾನಷನ್, ಅರಮನೆ ರಸ್ತೆ, ಸಂಜೆ 4.30

ಸದ್ಯೋಜಾತ ಭಟ್ಟ ಅವರ 'ಜಿತ್ವರೀ ಇದು ಕಾಶೀ' ಪುಸ್ತಕ ಬಿಡುಗಡೆ: ಅತಿಥಿಗಳು: ಕೆ.ಎನ್. ಗಣೇಶಯ್ಯ, ನಾ. ಸೋಮೇಶ್ವರ, ಎಸ್.ಎನ್. ಸೇತುರಾಮ್, ಮಹೇಂದ್ರ ಡಿ., ಸದ್ಯೋಜಾತ ಭಟ್ಟ, ಆಯೋಜನೆ: ಸಮನ್ವಿತಾ, ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಕೆಂಗುಂಟೆ ವೃತ್ತ, ಸಂಜೆ 5

ಉದಯಭಾನು ನವೀಕೃತ ಪುಸ್ತಕ ಭಂಡಾರದ ಉದ್ಘಾಟನೆ: ಸತೀಶ್ ಕುಮಾರ್ ಎಸ್. ಹೊಸಮನಿ, ಅತಿಥಿಗಳು: ಪಿ.ವಿ. ನಾರಾಯಣ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಸಂಜೆ 5

ಸಾಂಸ್ಕೃತಿಕ ಉತ್ಸವ: ಉದ್ಘಾಟನೆ: ಎಂ. ಕೃಷ್ಣಪ್ಪ, ಅಧ್ಯಕ್ಷತೆ: ಪ್ರಿಯಕೃಷ್ಣ, ಅತಿಥಿಗಳು: ಬಿ.ಟಿ. ಲಲಿತಾನಾಯಕ್, ಅಂದಾನಪ್ಪ, ಮಹೇಂದ್ರ ಮುನ್ನೋತ್, ಮುನಿರಾಮೇಗೌಡ, ಹರೀಶ್, ಆಯೋಜನೆ: ಲಕ್ಷ್ಮೀ ಕಲಾನಿಕೇತನ ಟ್ರಸ್ಟ್, ಸ್ಥಳ: ನಗರ ಕೇಂದ್ರ ಗ್ರಂಥಾಲಯ, ಹಂಪಿನಗರ, ಸಂಜೆ 5

ಕನ್ನಡ ಸಾಹಿತ್ಯ–ಸಂಗೀತ ಯಾನ ಮತ್ತು ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ರಾಮಸ್ವಾಮಿ ಅಯ್ಯಂಗಾರ್, ಪ್ರಶಸ್ತಿ ಪುರಸ್ಕೃತರು: ಬಿ.ಆರ್. ಲಕ್ಷ್ಮಣರಾವ್, ಹೊ.ನಾ. ರಾಘವೇಂದ್ರ ಗರ್ತಿಕೆರೆ, ಆಯೋಜನೆ: ಪ್ರಣತಿ ಪ್ರತಿಷ್ಠಾನ, ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಸಂಜೆ 5

'ವಾಲೀ ವಧೆ' ಯಕ್ಷಗಾನ ಪ್ರದರ್ಶನ: **ಪ್ರಸ್ತುತಿ:** ಫಾಟಕ್ ಯಕ್ಷ ಸಂಸ್ಕೃತಿ ಟ್ರಸ್ಟ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನದ ಸಾಂಸ್ಕೃತಿಕ ಮಂದಿರ, ಜಯನಗರ, 9ನೇ ಬ್ಲಾಕ್, ಸಂಜೆ 5.30

ಸಂಗೀತ ಕಾರ್ಯಕ್ರಮ: ಅಧ್ಯಕ್ಷತೆ: ಪಿ. ಭುಜಂಗರಾವ್, ಅತಿಥಿ: ಚಿಂಚೋಳಿ ಸುಧೀಂದ್ರ, ಪ್ರವಚನ: ಶ್ರೀಧರಾಚಾರ್ ಹಾವನೂರು, ಗಾಯನ: ಶ್ರೀಪಾದ. ಆರ್. ಗಡ್ಡಿ, ರಾಧಿಕಾ.ಆರ್.ಚಿಂಚೋಳಿ, ವಿಲಾಸ್.ಆರ್. ಎಣ್ಣಿ, ಹಾರ್ಮೋನಿಯಂ: ಲಚ್ಚಣ್ಣ ಹಳೇಪೇಟೆ, ತಬಲಾ: ಶಿವಲಿಂಗಪ್ಪ.ಎಚ್.ಕಿನ್ನಾಳ್, ಅಕ್ಷೋಭ್ಯ ಎ.ಕೆ., ಆಯೋಜನೆ: ಮಹಿದಾಸ ಸಂಗೀತ ವಿದ್ಯಾಲಯ ಹಾಗೂ ಸಾಂಸ್ಕೃತಿಕ ಕೇಂದ್ರ, ಸ್ಥಳ: ರಾಘವೇಂದ್ರಸ್ವಾಮಿ ದೇವಸ್ಥಾನ, ಕಾವಲ್‌ಬೈರಸಂದ್ರ, ಸಂಜೆ 5.30

ದೃಷ್ಟಿ ರಾಷ್ಟ್ರೀಯ ನೃತ್ಯೋತ್ಸವ: ಭರತನಾಟ್ಯ: ಶೋಭನಾ, ಆಯೋಜನೆ: ದೃಷ್ಟಿ ಆರ್ಟ್ ಫೌಂಡೇಷನ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5.30



ಶೋಭನಾ

ದಾಸರ ಕೃತಿಗಳಲ್ಲಿ ಹಾಸ್ಯ ಮತ್ತು ವಿಡಂಬನೆ: ಕಾರ್ತಿಕ್ ಹೆಬ್ಬಾರ್, ತಬಲಾ: ದೇವರಾಜ್, ಆಯೋಜನೆ: ಪುರಂದರದಾಸರ ಮೆಮೋರಿಯಲ್ ಟ್ರಸ್ಟ್, ಸ್ಥಳ: ಪುರಂದರ ಮಂಟಪ, ದೇವರಕೆರೆ, ಸಂಜೆ 6

'ಸಡನ್ನಾಗಿ ಸತ್ತೋದ್ರೆ..!?' ನಾಟಕ ಪ್ರದರ್ಶನ: ನಿರ್ದೇಶನ: ಶೈಲೇಶ್ ಕುಮಾರ್ ಎಂ.ಎಂ., ಆಯೋಜನೆ: ಸೈಡ್ ವಿಂಗ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

ಮೈಸೂರು ಉದ್ಯಾನಕಲಾ ಸಂಘ
ಲಾಲ್‌ಬಾಗ್, ಬೆಂಗಳೂರು
ಸಭಾ ತಿಳುವಳಿಕೆ ಪ್ರಕಟಣೆ

ಮೈಸೂರು ಉದ್ಯಾನಕಲಾ ಸಂಘ, ಲಾಲ್‌ಬಾಗ್, ಬೆಂಗಳೂರು ಇದರ ಆಡಳಿತ ಮಂಡಳಿಯ ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಕೆಳಕಂಡ ವಿಷಯಸೂಚಿಗಳ ಬಗ್ಗೆ ಚರ್ಚಿಸಿ / ಪರ್ಯಾಲೋಚಿಸಿ ನಿರ್ಣಯಿಸಲು, ಮೈಸೂರು ಉದ್ಯಾನ ಕಲಾ ಸಂಘದ ಪದನಿಮಿತ್ತ ಅಧ್ಯಕ್ಷರು ಇವರ ನಿರ್ದೇಶನದ ಮೇರೆಗೆ **ದಿನಾಂಕ: 31.01.2023 ರಂದು ಅಪರಾಹ್ನ 12:00 ಘಂಟೆಗೆ** ಮೈಸೂರು ಉದ್ಯಾನಕಲಾ ಸಂಘದ ಕಛೇರಿಯಲ್ಲಿ ಆಡಳಿತ ಮಂಡಳಿ ಸಭೆಯನ್ನು ಕರೆಯಲಾಗಿದೆ. ಸದರಿ ಸಭೆಗೆ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಹಾಜರಾಗುವಂತೆ ತಿಳಿಸಿದೆ. ಈ ಕುರಿತು ಸಭಾ ಸೂಚನಾ ಪತ್ರವನ್ನು ನೋಂದಾಯಿಸಿದ ವಿಳಾಸ ಹಾಗೂ ಸಂಘದ ಕಛೇರಿಯ ಪ್ರಕಟಣಾ ಫಲಕದಲ್ಲಿ ಜಾರಿಗೊಳಿಸಿದೆ. ಇಲ್ಲವಾದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

ಸಹಿ/–
ಪದನಿಮಿತ್ತ ಕಾರ್ಯದರ್ಶಿಗಳು ಹಾಗೂ ಉಪ ನಿರ್ದೇಶಕರು
ಮೈಸೂರು ಉದ್ಯಾನಕಲಾ ಸಂಘ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ಸಂ.: ಬಿಡಿಎ/ಇಇ–ದಕ್ಷಿಣ/ಕಾಮಗಾರಿ/ಟಿ–03/2022–23 ದಿನಾಂಕ: 19.01.2023
ಅಲ್ಪಾವಧಿ–ಟೆಂಡರ್‌ಗಾಗಿ ಆಹ್ವಾನ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ http://eproc.karnataka.gov.in ಮೂಲಕ ಮಾತ್ರ)

ಆಯುಕ್ತರು, ಬೆಂಅಪ್ರಾ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಬೆಂಅಪ್ರಾ, ಬೆಂಗಳೂರು, ದಕ್ಷಿಣ ವಿಭಾಗ ಇವರು ಕೆಳಕಂಡ ಕಾಮಗಾರಿಗೆ ನೋಂದಣಿಯಾದ 1ನೇ ದರ್ಜೆ ಗುತ್ತಿಗೆದಾರರು ಅಥವಾ ತತ್ಸಮಾನ ಕೆಪಿಡಬ್ಲ್ಯೂಡಿ/ಬೆಂಅಪ್ರಾ/ರಾಹೆ/ಎಂಇಎಸ್/ರೈಲ್ವೇಸ್‌ನ ಗುತ್ತಿಗೆದಾರರುಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರಿಂಗ್ ಪದ್ಧತಿ ಮೂಲಕ ಐಟಂ ದರದ ಟೆಂಡರುಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು: ಬನಶಂಕರಿ 6ನೇ ಹಂತ ಬಡಾವಣೆಯ 1ನೇ ಮತ್ತು 2ನೇ ಬ್ಲಾಕ್‌ಗಳಲ್ಲಿ ಮತ್ತು ಬನಶಂಕರಿ 6ನೇ ಹಂತ ಬಡಾವಣೆಯ ಮುಂದುವರೆದ 4ನೇ 'ಬಿ' ಬ್ಲಾಕ್‌ನಲ್ಲಿ ರಸ್ತೆ ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವುದಕ್ಕಾಗಿ ಅಂದಾಜು ವಿವರ. ಇಂಡೆಂಟ್ ನಂ: ಬೆಂಅಪ್ರಾ/2022–23/ ಆರ್‌ಡಿ/ವರ್ಕ್–ಇಂಡೆಂಟ್ 1541. ಟೆಂಡರ್‌ಗಿಟ್ಟಿರುವ ಅಂದಾಜು ವೆಚ್ಚ: ರೂ. 3074.00 ಲಕ್ಷಗಳು. ಇಎಂಡಿ: ರೂ. 31.00 ಲಕ್ಷಗಳು.

ಹೆಚ್ಚಿನ ವಿವರಗಳಿಗೆ **http://eproc.karnataka.gov.in** ಗೆ ಲಾಗ್‌ಆನ್ ಆಗಬಹುದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ 080–46010000/ 22631200ಗೆ ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
BDA/PRO/TN/37/2022-23 ದಕ್ಷಿಣ ವಿಭಾಗ, ಬೆಂಅಪ್ರಾ, ಬೆಂಗಳೂರು

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427, ಫ್ಯಾಕ್ಸ್: 08156 – 295427
ಇಮೇಲ್ – eemidcbpura@gmail.com
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಸಂಖ್ಯೆ:ಕಾಸಬ/ತಾಂಶಾ/ಸ.ಇಂ/ಟೆಂಡರ್ ಪ್ರಕಟಣೆ ಸಂಖ್ಯೆ:17/2022–23, ದಿನಾಂಕ:19.01.2023
4702 ಪ್ರಧಾನ ಕಾಮಗಾರಿಗಳು ಅಣೆಕಟ್ಟು ಮತ್ತು ಪಿಕಪ್ ಯೋಜನೆ ಅಡಿಯಲ್ಲಿ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಶಿಡ್ಲಘಟ್ಟ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ಪ್ರಧಾನ ಕಾಮಗಾರಿಗಳು ಅಣೆಕಟ್ಟು ಮತ್ತು ಪಿಕಪ್ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲ್ಯೂ 2 ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1 ಮತ್ತು 2 ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. **ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 03/02/2023 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ: 07/02/2023 ಬೆಳಿಗ್ಗೆ 11.00 ಗಂಟೆಯ ನಂತರ** (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. **ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.**

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560002
ದೂರವಾಣಿ. 080–22213530/22241325
ಸಂ. ಡಿಕೆಸಿ/17015/203/2022 ದಿನಾಂಕ: 20–01–2023
ಟೆಂಡರ್ ಪ್ರಕಟಣೆ

2022–23ನೇ ಸಾಲಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ **ಕನ್ನಡ ಭವನ, ಚಾಲುಕ್ಯ ವಿಭಾಗ, ರವೀಂದ್ರ ಕಲಾಕ್ಷೇತ್ರ ಹಾಗೂ ಕಲಾಗ್ರಾಮಕ್ಕೆ** ಹೊರಗುತ್ತಿಗೆ ಆಧಾರದ ಮೇಲೆ ಸ್ವಚ್ಛತಾಗಾರರು ಹಾಗೂ ತೋಟಮಾಲಿ ಸಿಬ್ಬಂದಿ ಸೇವೆಯನ್ನು ಪಡೆಯಲು ಕಾರ್ಮಿಕ ಇಲಾಖೆಯ 1948ರ ಕನಿಷ್ಠ ವೇತನಗಳ ಅಧಿನಿಯಮ (1948)ರ ಕೇಂದ್ರ ಅಧಿನಿಯಮ ಸಂಖ್ಯೆ:11)5ನೇ ಪ್ರಕರಣದ 1ನೇ ಉಪ ಪ್ರಕರಣದ (ಬಿ) ಖಂಡದ ದರಗಳನ್ವಯ ನಿಗದಿಪಡಿಸಿದ ವೇತನದಂತೆ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಿದ ಏಜೆನ್ಸಿ ಮೂಲಕ ಟೆಂಡರ್‌ನ್ನು (ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

1) ಟೆಂಡರ್ ಪ್ರಕಟಣೆ ಸಂಖ್ಯೆ ಹಾಗೂ ದಿನಾಂಕ: ಸಂಖ್ಯೆ: ಡಿಕೆಸಿ–17015/203/2022 ದಿನಾಂಕ: 21.01.2023. **2)** ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್ ದಿನಾಂಕ: **http://www.eproc.karnataka.gov.in** ದಿನಾಂಕ:21.01.2023 **3)** ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. 70,00,000/– **4)** ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ: **06.02.2023 ಸಂಜೆ 4.00 ಗಂಟೆಗೆ 5)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **07.02.2023 ಬೆಳಿಗ್ಗೆ 11.00 ಗಂಟೆಗೆ 6)** ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **09.02.2023 ಬೆಳಿಗ್ಗೆ 11.00 ಗಂಟೆಗೆ 7)** ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ ರೂ. 1,75,000/– **8)** ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560002. ದೂರವಾಣಿ ಸಂಖ್ಯೆ: 080–22213530.

ಸಹಿ/– ನಿರ್ದೇಶಕರು
DIPR/CP/4197/2022-23 ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಚಿಕ್ಕಬಳ್ಳಾಪುರ ವಿಭಾಗ : ಚಿಕ್ಕಬಳ್ಳಾಪುರ
ಸಂ: ಕರಾಸಾ/ಚಿಬವಿ/ಸಂ/ವಾ/1498/2022–23 ದಿನಾಂಕ: 17.01.2023
ಇ–ಟೆಂಡರ್ ಪ್ರಕಟಣೆ

ಚಿಕ್ಕಬಳ್ಳಾಪುರ ವಿಭಾಗದ ವ್ಯಾಪ್ತಿಯ ಬಾಗೇಪಲ್ಲಿ ಮತ್ತು ಗೌರಿಬಿದನೂರು ಘಟಕದಲ್ಲಿನ ಉಪಹಾರ ಗೃಹಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ದಿನಾಂಕ:**20.01.2023** ರಿಂದ ಇ–ಟೆಂಡರ್ ಪ್ರಕಟಣೆಯ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://eproc.karnataka.gov.in/** ನಿಂದ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ದಿನಾಂಕ: **10.02.2023ರ 15:00 ಗಂಟೆಗೆ** ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವಾಗಿರುತ್ತದೆ ಮತ್ತು ಇ–ಟೆಂಡರ್ ಡಿಡಿ (ಅರ್ಜಿ ಶುಲ್ಕ / ಇ.ಎಂ.ಡಿ ಮೂಲ ಡಿ.ಡಿ) / ದಾಖಲಾತಿಗಳನ್ನು ದಿನಾಂಕ: **11.02.2023** & ದಿನಾಂಕ: **13.02.2023** ರಂದು ಸಮಯ **10:00** ರಿಂದ ಸಮಯ **15:00 ಗಂಟೆಯವರೆಗಿನ** ಅವಧಿಯಲ್ಲಿ ಈ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ದಿನಾಂಕ:**14.02.2023** ರಂದು **ಬೆಳಗ್ಗೆ 10:00 ಗಂಟೆಗೆ** ಇ–ಹರಾಜು/ಟೆಂಡರ್ ಬಿಡ್ ತೆರೆಯುವ ದಿನವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ನಿಗಮ, ಚಿಕ್ಕಬಳ್ಳಾಪುರ ವಿಭಾಗ ರವರ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. **ಸಹಾಯಕ ಕಾರ್ಮಿಕ ಕಲ್ಯಾಣಾಧಿಕಾರಿ ಮೊಬೈಲ್ ಸಂ.: 7760990356.**

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ
ವಾಸಾಸಂಇ/ವಾಪ್ರ/ಎಲ್‌ಸಿ/ 4203/2022–23 ಕ.ರಾ.ರ.ಸಾ.ನಿಗಮ, ಚಿಕ್ಕಬಳ್ಳಾಪುರ ವಿಭಾಗ

ಕರ್ನಾಟಕ ಬೆಟಾಲಿಯನ್ ಎನ್ ಸಿಸಿ (ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್)
ಸರ್ಕಾರಿ ಆರ್‌ಸಿ ಕಾಲೇಜು ಕ್ಯಾಂಪಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001 ದೂರವಾಣಿ: 080–22976503
No 601/Accts/De-Kitting/2023 Dated: 20-01-2023
ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

07 ಫೆಬ್ರುವರಿ 2023 ರಂದು ಬೆಂಗಳೂರಿನ ಕೊತ್ತನೂರಿನಲ್ಲಿರುವ ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಉಪ ಮಹಾನಿರ್ದೇಶಕ ಎನ್‌ಸಿಸಿ ಅಭಿನಂದನಾ ಸಮಾರಂಭದಲ್ಲಿ ಅಧಿಕಾರಿಗಳು, ಎಎನ್‌ಒಗಳು, ಪಿಐ ಸಿಬ್ಬಂದಿ, ಎನ್‌ಸಿಸಿ ಸಿಬ್ಬಂದಿ, ಎನ್‌ಸಿಸಿ ಕೆಡೆಟ್‌ಗಳು, ಪೋಷಕರು ಮತ್ತು ಅತಿಥಿಗಳು ಸೇರಿದಂತೆ 500 ಸದಸ್ಯರಿಗೆ ಭೋಜನವನ್ನು ಒದಗಿಸಲು ಮೊಹರು ಮಾಡಿದ ಕೊಟೇಶನ್ ಗಳನ್ನು ಆಹ್ವಾನಿಸಲಾಗಿದೆ. ಭೋಜನದ ವಿವರಗಳನ್ನು (ಮೆನು) ಈ ಕಛೇರಿಯಿಂದ **23 ಜನವರಿ 2023 ರಿಂದ 25 ಜನವರಿ 2023 ರವರೆಗೆ 1200 ಗಂಟೆಯಿಂದ 1500 ಗಂಟೆಗಳವರೆಗೆ ಪಡೆಯಬಹುದು.**

(ಎ) ಮೊದಲು ಕೊಟೇಶನ್ ಅನ್ನು ಸಲ್ಲಿಸಲು ಕೊನೆಯ ದಿನಾಂಕ – 28 ಜನವರಿ 2023 ರಂದು 1200 ಗಂಟೆಗಳು (ಬಿ) ಟೆಂಡರ್ ತೆರೆಯುವ ದಿನಾಂಕ – 29 ಜನವರಿ 2023 ರಂದು 1300 ಗಂಟೆಗಳು.

ಸಹಿ/–
ದಾಮೋದರನ್ ಪಿ ಪಿ
ಲೆಫ್ಟಿನೆಂಟ್ ಕರ್ನಲ್ ಕಮಾಂಡಿಂಗ್ ಆಫೀಸರ್
DIPR/CP/4196/GREENFMC/2022-23

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R Ambedkar Veedhi, Bengaluru – 560 001.Ph.No.080-22961016 / 22131385, E-mail: registrarbcu@gmail.com
ಟೆಂಡರ್ ಸಂಖ್ಯೆ: BCU/2022-23/IND41 ದಿನಾಂಕ: 19.01.2023
ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ

ಕಾಮಗಾರಿಯ ಹೆಸರು	Providing Gas line connection to the M.Sc Laboratory at Chemistry Department, Bengaluru City University, Central College Campus Bengaluru
ಇ.ಎಮ್.ಡಿ	ರೂ. 63,000/–
ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	27.01.2023 12.00 ಗಂಟೆಗಳವರೆಗೆ
ಪೂರ್ವ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ:	30.01.2023, 11.00 ಗಂಟೆಗೆ ಕುಲಸಚಿವರ ಕಛೇರಿ, ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	03.02.2023, 16.00 ಗಂಟೆಯ ವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	04.02.2023, 16.30 ಗಂಟೆಗೆ
ಹಣಕಾಸು ಬಿಡ್ ತೆರೆಯುವ ದಿನಾಂಕ	06.02.2023, 16.00 ಗಂಟೆಗೆ

ಸೂಚನೆ: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕ್ರಿಯೆ ಶುಲ್ಕ ಮತ್ತು ಇ.ಎಮ್.ಡಿ ಮೊತ್ತವನ್ನು ಪಾವತಿಸುವುದು.
ವಾಸಸಂಇ/ವಾ.ಪ್ರ/4217/ಎಸ್‌ಎಸ್‌ಸಿ/2022–23 ಕುಲಸಚಿವರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ಸಾರ್ವಜನಿಕ ಪ್ರಕಟಣೆ

ಡಾ|| ಕೆ. ಶಿವರಾಮಕಾರಂತ ಬಡಾವಣೆಗೆ ಅಧಿಸೂಚಿಸಿರುವ ಒಟ್ಟು 3546 ಎಕರೆ 12 ಗುಂಟೆ ಜಮೀನಿನ ಮಧ್ಯ ಭಾಗದಲ್ಲಿ ಬರುವ ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆಯಲ್ಲಿ ಕೈಬಿಟ್ಟು ಹೋಗಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಸಂಬಂಧ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ: M.A.No.1614-1616/2019, 1346-1348/2019 in C.A. No. 7661-7663/2018 ದಿನಾಂಕ 29.09.2021ರ ಆದೇಶದಂತೆ ದಿನಾಂಕ: 23.08.2022ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಸಂಖ್ಯೆ: BDA/ DC(LA)/67/2022-23 ರಂತೆ ಈ ಕೆಳಗೆ ನಮೂದಿಸಿರುವ ಗ್ರಾಮಗಳ ಒಟ್ಟು 245 ಎಕರೆ 16 ಗುಂಟೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸದರಿ ಪ್ರಾಥಮಿಕ ಅಧಿಸೂಚನೆಯಲ್ಲಿ ಒಳಗೊಂಡಿರುವ ಅಧಿಸೂಚಿತ ಜಮೀನಿನಲ್ಲಿ ನಿರ್ಮಾಣವಾಗಿರುವ ಕಟ್ಟಡಗಳ ಸಕ್ರಮೀಕರಣ ಕುರಿತಂತೆ ಕಟ್ಟಡ ಮಾಲೀಕರಿಂದ ಪ್ರಾಧಿಕಾರದಲ್ಲಿ ತೆರೆಯಲಾಗಿರುವ ಸಹಾಯ ಕೇಂದ್ರದಲ್ಲಿ ಅರ್ಜಿ ಸ್ವೀಕರಿಸಲಾಗುತ್ತಿದೆ. ಅರ್ಹ ಕಟ್ಟಡ ಮಾಲೀಕರು ಕಟ್ಟಡಗಳ ಸಕ್ರಮೀಕರಣ ಕೋರಿ ಅರ್ಜಿ ಸಲ್ಲಿಸಲು **ದಿನಾಂಕ: 25.01.2023** ಕೊನೆಯ ದಿನಾಂಕವಾಗಿದ್ದು, ಅರ್ಹ ಕಟ್ಟಡ ಮಾಲೀಕರು **ದಿನಾಂಕ: 25.01.2023ರ ಒಳಗಾಗಿ** ಅಗತ್ಯ ದಾಖಲಾತಿಗಳೊಂದಿಗೆ ಪ್ರಾಧಿಕಾರದಲ್ಲಿ ತೆರೆಯಲಾಗಿರುವ ಸಹಾಯ ಕೇಂದ್ರದಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ತದನಂತರ ಸಲ್ಲಿಸಲಾಗುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಗ್ರಾಮಗಳ ವಿವರ

1) ಸೋಮಶೆಟ್ಟಿಹಳ್ಳಿ	7) ಮೇಡಿ ಅಗ್ರಹಾರ
2) ಲಕ್ಷ್ಮೀಪುರ	8) ಆವಲಹಳ್ಳಿ
3) ಗಾಣಿಗರಹಳ್ಳಿ	9) ರಾಮಗೊಂಡನಹಳ್ಳಿ
4) ಬ್ಯಾಲಕೆರೆ	10) ಕೆಂಪನಹಳ್ಳಿ
5) ಕಾಳತಮ್ಮನಹಳ್ಳಿ	11) ವೀರಸಾಗರ
6) ಗುಣಿಅಗ್ರಹಾರ	12) ದೊಡ್ಡಬೆಟ್ಟಹಳ್ಳಿ
	13) ಶ್ಯಾಮರಾಜಪುರ

ಸಹಿ/– ಜಸ್ಟೀಸ್ ಎ.ವಿ. ಚಂದ್ರಶೇಖರ್ ಸಮಿತಿ,
ಡಾ|| ಕೆ.ಶಿವರಾಮಕಾರಂತ ಬಡಾವಣೆ, ಬೆಂ.ಅ.ಪ್ರಾ., ಬೆಂಗಳೂರು

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com
ಸಂಖ್ಯೆ: ನೆಯೋಪ್ರಾ/CLU/85/2022–23 ದಿನಾಂಕ: 19–01–2023
ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **"ವ್ಯವಸಾಯ"** ವಲಯದಿಂದ **"ವಾಣಿಜ್ಯ (ವೇರ್‌ಹೌಸ್)"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಶ್ರೀ ಹೆಚ್.ಬಿ. ಜಯರಾಜ್ ಬಿನ್ ಲೇಟ್ ಶ್ರೀ ಹೆಚ್.ಆರ್. ಬಸವರಾಜ್ ಮತ್ತು ಮೆ: ಚಂದ್ರಕಿರಣ್ ಎಸ್ಟೇಟ್ ಡೆವಲಪರ್ಸ್ ಪ್ರೈ.ಲಿ., ರವರ ಪರವಾಗಿ ಗಣೇಶ್. ಜಿ.ಆರ್	ನೆಲಮಂಗಲ	ಕಸಬಾ	ಹ್ಯಾಡಾಳು	105/1	02–37	ವ್ಯವಸಾಯ	ವಾಣಿಜ್ಯ (ವೇರ್ ಹೌಸ್)
					105/2ಎ	01–23		
					105/2ಬಿ	01–01		
					105/3	01–23		
					106/2	02–14 (00ಎ–02ಗು 'ಎ' ಖರಾಬು ಸೇರಿ)		
					106/3	02–27 (00ಎ–02ಗು 'ಎ' ಖರಾಬು ಸೇರಿ)		
					106/4	01–03		
					107/1	00–20		
					107/2	00–09		
					107/3	00–31		
					107/4	00–31		
					ಒಟ್ಟು	15–19 (00ಎ–04ಗು 'ಎ' ಖರಾಬು ಸೇರಿ)		

ಷರಾ:– ಸದರಿ ಪ್ರಸ್ತಾವನೆಯಲ್ಲಿ ಅರ್ಜಿದಾರರು, ಪ್ರಸ್ತಾಪಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಉದ್ದೇಶದ ವಿನ್ಯಾಸಗಳು ಅನುಮೋದನೆಯಾಗಿದ್ದು, ವಾಣಿಜ್ಯ ಚಟುವಟಿಕೆ ಕೇಂದ್ರ ಇಲ್ಲದೇ ಇರುವುದರಿಂದ ಪ್ರಶ್ನಿತ ಜಮೀನಿನಲ್ಲಿ ಉತ್ತಮ ಸೌಲಭ್ಯಗಳನ್ನು ಒಳಗೊಂಡ ವಾಣಿಜ್ಯ ಚಟುವಟಿಕೆ ಕೇಂದ್ರ ಸ್ಥಾಪಿಸಿದಲ್ಲಿ ಸ್ಥಳೀಯ ಉದ್ದಿಮೆದಾರರಿಗೆ ಹಾಗೂ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ ಹಾಗೂ ಸುಮಾರು 25 ಜನ ಸ್ಥಳೀಯ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶವನ್ನು ಹೊಂದಿರುವುದು ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿರುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಾಣಿಜ್ಯ (ವೇರ್‌ಹೌಸ್)"** ಉದ್ದೇಶಕ್ಕೆ ಭೂ ಉಪಯೋಗ ನಿಗದಿ ಪಡಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ವಾಸಾಸಂಇ/ವಾ.ಪ್ರ/4199/ಅಡ್ವಟೋರ್/2022–23 ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ನೈಋತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. 19-S&T/MYS/2022
ದಿನಾಂಕ: 16.01.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ವಿವರಣೆ	ಅಂದಾಜು ಮೌಲ್ಯ
1	ಮೈಸೂರು ವಿಭಾಗದಲ್ಲಿ 2 ವರ್ಷಗಳವರೆಗೆ ಕರಡಿ, ಎಂಬಿಬಿಸಿ, ಹಳಿಯೂರು, ಅಮರಾವತಿ ಕಾಲೋನಿ–2 ಸಂಖ್ಯೆಗಳು, ಹರಿಹರ–2 ಸಂಖ್ಯೆಗಳು, ಕುಮಾರಪಟ್ಟಣಂ ಸೈಡಿಂಗ್, ದೇವರಗುಡ್ಡ, ಕಿ.ಮೀ. 334/ 900–335/000 ರಲ್ಲಿ ಇಂಟರ್‌ಲಾಕ್ಡ್ ಎಲ್‌ಸಿ–ಸಂಖ್ಯೆ 207 ರಲ್ಲಿ ಮೆ. ಅಮರ ರಾಜಾ ನಿರ್ಮಾಣದ ಸಮಗ್ರ ವಿದ್ಯುತ್ ಸರಬರಾಜು ವ್ಯವಸ್ಥೆಗಾಗಿ ವಾರ್ಷಿಕ ದುರಸ್ತಿ ಒಪ್ಪಂದ.	ರೂ. 20,36,851/-
2	ಮೂರು ವರ್ಷಗಳ ಅವಧಿಗೆ ಮೈಸೂರು ವಿಭಾಗದ ಹಿರಿಯ ಸೆಕ್ಷನ್ ಇಂಜಿನಿಯರ್/ ಸಿಗ್ನಲ್/ಹೊಳೆನರಸೀಪುರ ವಿಭಾಗದಲ್ಲಿ ಇಂಟರ್‌ಲಾಕ್ಡ್ ಪಾಯಿಂಟ್‌ನ ಸ್ಲೈಡ್ ಚೇರ್‌ಗಳ ಪಾಯಿಂಟ್ ಕ್ಲೀನಿಂಗ್ ಮತ್ತು ಲೂಬ್ರಿಕೇಶನ್ ನ ಹೊರಗುತ್ತಿಗೆ.	ರೂ. 14,46,984/-
3	ಮೂರು ವರ್ಷಗಳ ಅವಧಿಗೆ ಮೈಸೂರು ವಿಭಾಗದ ಹಿರಿಯ ಸೆಕ್ಷನ್ ಇಂಜಿನಿಯರ್/ ಸಿಗ್ನಲ್/ಕಬಕ ಪುತ್ತೂರು ವಿಭಾಗದಲ್ಲಿ ಇಂಟರ್‌ಲಾಕ್ಡ್ ಪಾಯಿಂಟ್‌ನ ಸ್ಲೈಡ್ ಚೇರ್‌ಗಳ ಕ್ಲೀನಿಂಗ್ ಮತ್ತು ಲೂಬ್ರಿಕೇಶನ್ ನ ಹೊರಗುತ್ತಿಗೆ (ಎಚ್‌ಎಂಆರ್‌ಡಿಸಿ ವಿಭಾಗ).	ರೂ. 15,69,645/-
4	ಮೂರು ವರ್ಷಗಳ ಅವಧಿಗೆ ಮೈಸೂರು ವಿಭಾಗದ ಹಿರಿಯ ಸೆಕ್ಷನ್ ಇಂಜಿನಿಯರ್/ಸಿಗ್ನಲ್/ಶಿವಮೊಗ್ಗ ವಿಭಾಗದಲ್ಲಿ ಇಂಟರ್‌ಲಾಕ್ಡ್ ಪಾಯಿಂಟ್‌ನ ಸ್ಲೈಡ್ ಚೇರ್‌ಗಳ ಕ್ಲೀನಿಂಗ್ ಮತ್ತು ಲೂಬ್ರಿಕೇಶನ್ ನ ಹೊರಗುತ್ತಿಗೆ.	ರೂ. 18,17,943.80
5	ಮೂರು ವರ್ಷಗಳ ಅವಧಿಗೆ ಮೈಸೂರು ವಿಭಾಗದ ಹಿರಿಯ ಸೆಕ್ಷನ್ ಇಂಜಿನಿಯರ್/ಸಿಗ್ನಲ್/ಚಿತ್ರದುರ್ಗ ವಿಭಾಗದಲ್ಲಿ ಇಂಟರ್‌ಲಾಕ್ಡ್ ಪಾಯಿಂಟ್‌ನ ಸ್ಲೈಡ್ ಚೇರ್‌ಗಳ ಕ್ಲೀನಿಂಗ್ ಮತ್ತು ಲೂಬ್ರಿಕೇಶನ್ ನ ಹೊರಗುತ್ತಿಗೆ.	ರೂ. 13,81,637.25
6	ಮೂರು ವರ್ಷಗಳ ಅವಧಿಗೆ ಮೈಸೂರು ವಿಭಾಗದ ಹಿರಿಯ ಸೆಕ್ಷನ್ ಇಂಜಿನಿಯರ್/ಸಿಗ್ನಲ್ /ಹರಿಹರ ವಿಭಾಗದಲ್ಲಿ ಇಂಟರ್‌ಲಾಕ್ಡ್ ಪಾಯಿಂಟ್‌ನ ಸ್ಲೈಡ್ ಚೇರ್‌ಗಳ ಕ್ಲೀನಿಂಗ್ ಮತ್ತು ಲೂಬ್ರಿಕೇಶನ್ ನ ಹೊರಗುತ್ತಿಗೆ.	ರೂ. 62,25,030/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07–02–2023, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಾಂ ಇಂಜಿನೀಯರ್/ಮೈಸೂರು
PUB/616/AAV/PRB/SWR/2022-23
S.W.Railways SWRRLY SWRRLY

ಬಿಜೆಪಿ ಪ್ರಾಬಲ್ಯ: ಸಮಬಲ ಪೈಪೋಟಿಗೆ ‘ಕೈ’, ದಳ ಸಜ್ಜು

● ಸಚ್ಚಿದಾನಂದ ಕುರಗುಂದ

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬೆಂಗಳೂರು: ನಗರದ ಉತ್ತರ ಭಾಗದಲ್ಲಿರುವ ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ಸದ್ಯ ಬಿಜೆಪಿಯದ್ದೇ ಪ್ರಾಬಲ್ಯ. ಬಿಜೆಪಿಯ ಈ ಭದ್ರಕೋಟೆ ಭೇದಿಸಿ ಸಮಬಲದ ಸ್ಪರ್ಧೆವೊಡ್ಡಲು ಜೆಡಿಎಸ್ ಮತ್ತು ಕಾಂಗ್ರೆಸ್ ಪಣತೊಟ್ಟಿವೆ.

ಈಗಾಗಲೇ ‘ಹ್ಯಾಟ್ರಿಕ್’ ಗೆಲುವು ಸಾಧಿಸಿರುವ ಶಾಸಕ ಮತ್ತು ಹಾಲಿ ಬಿಡಿಎ ಅಧ್ಯಕ್ಷರಾಗಿರುವ ಎಸ್. ಆರ್. ವಿಶ್ವನಾಥ್ ಅವರು ಈ ಬಾರಿಯೂ ಬಿಜೆಪಿಯ ಅಭ್ಯರ್ಥಿಯಾಗಿ ಮತ್ತೊಮ್ಮೆ ಕಣಕ್ಕಿಳಿಯುವುದು ಬಹುತೇಕ ಖಚಿತ.

ಜೆಡಿಎಸ್ ಮತ್ತು ಕಾಂಗ್ರೆಸ್ ಇನ್ನೂ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಿಲ್ಲ. ವಿಶ್ವನಾಥ್ ಅವರಿಗೆ ಪ್ರಬಲ ಸ್ಪರ್ಧೆ ಒಡ್ಡಬಲ್ಲ ಅಭ್ಯರ್ಥಿಗಳ ಹುಡುಕಾಟದಲ್ಲಿ ಈ ಪಕ್ಷಗಳು ತೊಡಗಿವೆ.

ಕ್ಷೇತ್ರ ಸ್ಥಿತಿ-ಗತಿ

ಕಾಂಗ್ರೆಸ್‌ನಲ್ಲಿ ಆಕಾಂಕ್ಷಿಗಳು ಹೆಚ್ಚಾಗಿರುವುದರಿಂದ ಆಯ್ಕೆ ಕಗ್ಗಂಟಾಗಿದೆ. ಕೇಶವ ಬಿ. ರಾಜಣ್ಣ, ನಾಗರಾಜಗೌಡ, ಗೋಪಾಲಕೃಷ್ಣ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಲಾವಣ್ಯ ನರಸಿಂಹಮೂರ್ತಿ, ಪಿ.ಚಂದ್ರಪ್ಪ, ಗೋಪಿನಾಥ್ ಸೇರಿದಂತೆ ಒಂಬತ್ತಕ್ಕೂ ಹೆಚ್ಚು ಮಂದಿ ಆಕಾಂಕ್ಷಿಗಳಾಗಿದ್ದಾರೆ. ಆಂತರಿಕ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಸುಗಮವಾಗಿ ಅಭ್ಯರ್ಥಿ ಆಯ್ಕೆ ಪೂರ್ಣಗೊಳಿಸುವ ಪ್ರಯತ್ನಗಳು ಕಾಂಗ್ರೆಸ್‌ನಲ್ಲಿ ನಡೆಯುತ್ತಿವೆ.

ಜೆಡಿಎಸ್ ಪಕ್ಷದಿಂದ ಹನುಮಂತೇಗೌಡ, ನಿವೃತ್ತ ಡಿವೈಎಸ್ಪಿ ಎನ್. ಕೃಷ್ಣಪ್ಪ, ಮುನೇಗೌಡ ಅವರು ಆಕಾಂಕ್ಷಿಗಳಾಗಿದ್ದಾರೆ. ಕಳೆದ ಬಾರಿ ವಿಧಾನಸಭಾ ಚುನಾವಣೆಯಲ್ಲಿ ವಿಶ್ವನಾಥ್ ಅವರಿಗೆ ತೀವ್ರ ಸ್ಪರ್ಧೆವೊಡ್ಡಿದ್ದ ಹನುಮಂತೇಗೌಡ ಅವರು ಎರಡನೇ ಸ್ಥಾನಕ್ಕೆ ತೃಪ್ತಿಕೊಟ್ಟುಕೊಳ್ಳಬೇಕಾಯಿತು. ಹೀಗಾಗಿ, ಜೆಡಿಎಸ್ ತನ್ನ ಮತಗಳನ್ನು ಮತ್ತಷ್ಟು ಕ್ರೋಡೀಕರಿಸುವ ಪ್ರಯತ್ನವನ್ನು ಈ ಬಾರಿಯೂ ಮುಂದುವರಿಸಲಿದೆ. ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ವಿವಿಧ ಸಮುದಾಯಗಳನ್ನು ಒಳಗೊಂಡಿರುವ ವೈವಿಧ್ಯತೆ ಹೊಂದಿರುವ ಕ್ಷೇತ್ರ ಇದಾಗಿದೆ. ಒಕ್ಕಲಿಗರ ಮತಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಆಯ್ಕೆ ಮಾಡಬಹುದು ಎಂದು ಪಕ್ಷದ ಮುಖಂಡರು ಹೇಳುತ್ತಾರೆ.

2013ರ ಚುನಾವಣೆಯಲ್ಲಿ ಎಸ್.ಆರ್. ವಿಶ್ವನಾಥ್ 75,507 ಮತಗಳನ್ನು ಪಡೆದು ಜಯಗಳಿಸಿದ್ದರು. ಜೆಡಿಎಸ್‌ನ ಬಿ. ಚಂದ್ರಪ್ಪ 57,110 ಮತಗಳನ್ನು ಪಡೆದಿದ್ದರು. ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಎಂ.ಎನ್. ಗೋಪಾಲಕೃಷ್ಣ ಅವರು 52,372 ಮತ ಪಡೆದಿದ್ದರು. ನಂತರ, 2018ರಲ್ಲಿ ವಿಶ್ವನಾಥ್ ಅವರು ಜೆಡಿಎಸ್ ವಿರುದ್ಧ 42,503 ಮತಗಳ ಅಂತರದಿಂದ ಜಯ ಸಾಧಿಸಿದ್ದರು.

ಮತ್ತೊಮ್ಮೆ ಗೆಲ್ಲಲೇಬೇಕು ಎನ್ನುವ ಛಲ ಹೊಂದಿರುವ ವಿಶ್ವನಾಥ್ ಅವರು ಹಲವಾರು ತೊಡಕುಗಳನ್ನು ಎದುರಿಸಬೇಕಾಗಿದೆ. ಬಿಡಿಎ ಅಭಿವೃದ್ಧಿಪಡಿಸುತ್ತಿರುವ ಡಾ. ಕೆ. ಶಿವರಾಮ ಕಾರಂತ ಬಡಾವಣೆಯ ಭೂಸ್ವಾಧೀನ ಸಮಸ್ಯೆ ಪ್ರಮುಖ ಚುನಾವಣಾ ವಿಷಯವಾಗಿ ಪ್ರಸ್ತಾಪವಾಗಬಹುದು. ಈ ಬಡಾವಣೆ ಅಭಿವೃದ್ಧಿಗಾಗಿ ಸ್ವಾಧೀನ ಪಡಿಸಿಕೊಂಡಿರುವ 3,546 ಎಕರೆ 12 ಗುಂಟೆ ಜಮೀನಿಗೆ 2013ರ ಪುನರ್‌ವಸತಿ, ಪುನರ್ ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ (ಎಲ್‌ಎಆರ್‌ಆರ್) ಕಾಯ್ದೆ ಅನ್ವಯ ಪರಿಹಾರ ನೀಡಬೇಕೆಂದು ಬೆಂಗಳೂರು ಉತ್ತರ ತಾಲ್ಲೂಕಿನ 17 ಗ್ರಾಮಗಳ ರೈತರು ಒತ್ತಾಯಿಸುತ್ತಿದ್ದಾರೆ.

ಜತೆಗೆ, ರಾಜಧಾನಿಯ ಉಪ ನಗರಗಳಲ್ಲಿ ಒಂದಾಗಿರುವ ಯಲಹಂಕದಲ್ಲಿ ಸಂಚಾರ ದಟ್ಟಣೆಯ ಕಿರಿಕಿರಿ ಜನರನ್ನು ಹೈರಾಣಾಗಿಸಿದೆ. ಸುಗಮ ಸಂಚಾರಕ್ಕೆ ಕೈಗೊಂಡಿರುವ ಯೋಜನೆಗಳು ಸಂಪೂರ್ಣ ಫಲಪ್ರದವಾಗಿಲ್ಲ. ಇಂತಹ ಹತ್ತಾರು ಸಮಸ್ಯೆಗಳನ್ನು ವಿಶ್ವನಾಥ್ ಎದುರಿಸಬೇಕಾಗಿದೆ.

ಯಲಹಂಕ

ಎಸ್.ಆರ್. ವಿಶ್ವನಾಥ್
ಹಾಲಿ ಶಾಸಕ (ಬಿಜೆಪಿ)

ಹಾಲಿ ಮತದಾರರ ವಿವರ

2,08,075 ಪುರುಷರು
1,99,066 ಮಹಿಳೆಯರು
76 ತೃತೀಯ ಲಿಂಗಿಗಳು
4,07,217 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	1,20,110	75,507	60,975
ಜೆಡಿಎಸ್	77,607	57,110	37,070
ಕಾಂಗ್ರೆಸ್	41,449	52,372	44,593

ವಿಜಯಪುರ: ಫೆಬ್ರುವರಿಯಲ್ಲೇ ವಿಮಾನ ಹಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ವಿಮಾನನಿಲ್ದಾಣ ಕಾಮಗಾರಿ ಮುಕ್ತಾಯ ಹಂತದಲ್ಲಿದ್ದು, ಫೆಬ್ರುವರಿ ಎರಡನೇ ವಾರದಿಂದಲೇ ವಿಮಾನಗಳ ಹಾರಾಟಕ್ಕೆ ಸಿದ್ಧತೆ ಮಾಡಿಕೊಳ್ಳುವಂತೆ ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸೂಚಿಸಿದರು.

ವಿಧಾನಸೌಧದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಮಾನನಿಲ್ದಾಣ ಕಾಮಗಾರಿಗಳ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಮೂರು ಹಂತದ ಕಾಮಗಾರಿಗಳ ಒಪ್ಪಂದಗಳನ್ನು ತ್ವರಿತವಾಗಿ ಮುಕ್ತಾಯಗೊಳಿಸಬೇಕು. ಇಂಡಿಗೋ, ಸ್ಟಾರ್ ಏರ್, ಅಲಯನ್ಸ್ ಏರ್ ಮತ್ತು ವಿಸ್ತಾರ ವಿಮಾನಯಾನ ಸಂಸ್ಥೆಗಳ ಜತೆಗೆ ವಿಮಾನಯಾನ ಹಾರಾಟ ಆರಂಭಿಸುವ ಕುರಿತು ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮಾತುಕತೆ ನಡೆಸಬೇಕು ಎಂದರು.

ಅಗ್ನಿಶಾಮಕ ಉಪಕರಣಗಳು, ನ್ಯಾವಿಗೇಷನ್ ಸಲಕರಣೆಗಳನ್ನು ಸ್ಥಾಪಿಸಲು, ವಿಮಾನನಿಲ್ದಾಣ ಪರವಾನಗಿ ಪ್ರಕ್ರಿಯೆಗೆ ದಾಖಲಾತಿಗಳನ್ನು ಸಿದ್ಧಪಡಿಸಲು ಸೂಚಿಸಿದರು.

ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳ • ಆಹಾರ ಪದಾರ್ಥಗಳ ರಫ್ತಿನಲ್ಲಿ ಭಾರತಕ್ಕೆ 9ನೇ ಸ್ಥಾನ

ಸಿರಿಧಾನ್ಯ ರಫ್ತಿಗೆ ಯೋಜನೆ: ಸಚಿವೆ ಶೋಭಾ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಿರುವ 'ಅಂತರರಾಷ್ಟ್ರೀಯ ಸಿರಿಧಾನ್ಯ ಮೇಳ'ದಲ್ಲಿ ರಾಗಿ ರಾಶಿಯನ್ನು ಮಹಿಳೆಯರು ಅಲಂಕರಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಸಿರಿಧಾನ್ಯಗಳನ್ನೂ ವಿದೇಶಕ್ಕೆ ರಫ್ತು ಮಾಡಲು ಕೇಂದ್ರವು ಯೋಜನೆ ರೂಪಿಸಿದೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಕೃಷಿ ಇಲಾಖೆ ಶುಕ್ರವಾರ ನಗರದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳದಲ್ಲಿ ಮಾತನಾಡಿದ ಅವರು, 'ಆಹಾರ ಪದಾರ್ಥಗಳ ರಫ್ತಿನಲ್ಲಿ ಭಾರತವು ವಿಶ್ವದಲ್ಲಿಯೇ 9ನೇ ಸ್ಥಾನದಲ್ಲಿದೆ. ಸ್ಥಳೀಯವಾಗಿ ಬೆಳೆಯುವ ಜೋಳ, ರಾಗಿ, ಊದಲು, ನವಣೆ, ಹಾರಕ, ಕೊರಲೆ, ಸಾಮೆಗೆ ಅಂತರರಾಷ್ಟ್ರೀಯ ಮಾರುಕಟ್ಟೆ ಕಲ್ಪಿಸಲು ತೀರ್ಮಾನಿಸಿದೆ. ಗುಣಮಟ್ಟದ ಸಿರಿಧಾನ್ಯ ಬೆಳೆದರೆ ಅಂತರರಾಷ್ಟ್ರೀಯ ಮಾರುಕಟ್ಟೆ ಕಲ್ಪಿಸಲು ಸಾಧ್ಯವಾಗಲಿದೆ. ಕೀಟನಾಶಕ ಹಾಗೂ ರಸಗೊಬ್ಬರ ಬಳಸದಿರುವ ಸಿರಿಧಾನ್ಯಕ್ಕೆ ಬೇಡಿಕೆ ಹೆಚ್ಚಿದೆ' ಎಂದು ಹೇಳಿದರು.

'ದೇಶದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಆಹಾರ ಉತ್ಪಾದನೆಯಾಗುತ್ತಿದೆ. ದೇಶದಲ್ಲಿ 21.4 ಕೋಟಿ ಟನ್ ಆಹಾರ ಹಾಗೂ 34.5 ಕೋಟಿ ಟನ್ ಹಣ್ಣು ಹಾಗೂ ತರಕಾರಿ ಉತ್ಪಾದನೆಯಾಗುತ್ತಿದೆ' ಎಂದು ಹೇಳಿದರು.

ಕೃಷಿ ಹಾಗೂ ರೈತ ಕಲ್ಯಾಣ ರಾಜ್ಯ ಸಚಿವ ಕೈಲಾಶ್ ಚೌಧರಿ ಮಾತನಾಡಿ, 'ಕೃಷಿ ಕ್ಷೇತ್ರದಲ್ಲಿ ಹೊಸ ತಾಂತ್ರಿಕತೆ ಜಾರಿಗೊಳಿಸಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ರಫ್ತು ಹೆಚ್ಚಿದರೆ ರೈತರ ಬದುಕು ಹಸನಾಗಲಿದೆ. ಸಾವಯವ ಕೃಷಿಗೆ ರೈತರು ಹೆಚ್ಚಿನ ಆದ್ಯತೆ ನೀಡಬೇಕು' ಎಂದರು.

ಮೇಳಕ್ಕೆ ಚಾಲನೆ ನೀಡಿದ ಸಿಎಂ ಬಸವರಾಜ ಬೊಮ್ಮಾಯಿ ಮಾತನಾಡಿ, 'ರೈತರ ಬದುಕಿನ ಅನಿಶ್ಚಿತತೆ ಬದಲಾಯಿಸಲು ವೈಜ್ಞಾನಿಕ ವರದಿ ಸಿದ್ಧಪಡಿಸಬೇಕು. ಬೇರೆ ದೇಶಗಳಲ್ಲಿ 10 ವರ್ಷದ ಮಳೆ ಪ್ರಮಾಣ, ಬಿತ್ತನೆ ಪ್ರಮಾಣ, ಆಹಾರ ಪದಾರ್ಥಗಳ ಉತ್ಪಾದನೆ, ಅಂತರರಾಷ್ಟ್ರೀಯ ಮಾರುಕಟ್ಟೆ, ಸ್ಥಳೀಯ ಮಾರುಕಟ್ಟೆ ಆಧರಿಸಿ ವರದಿ ತಯಾರಿಸುತ್ತಾರೆ. ರಾಜ್ಯದಲ್ಲೂ ಆ ಮಾದರಿಯಲ್ಲಿಯೇ ವರದಿ ತಯಾರಿಸಬೇಕು' ಎಂದು ಸೂಚಿಸಿದರು.

'ಗ್ರಾಮೀಣ ಪ್ರದೇಶದಲ್ಲಿ ಸಾಲ ನೀಡುವ ಪದ್ಧತಿ ಬದಲಾಗಬೇಕಾಗಿದೆ. ರಾಜ್ಯ ಸರ್ಕಾರ ಈ ವರ್ಷ 33 ಲಕ್ಷ ರೈತರಿಗೆ ಶೂನ್ಯ ಬಡ್ಡಿಯಲ್ಲಿ ಸಾಲದ ನೆರವು ನೀಡಿದ್ದು, 3 ಲಕ್ಷ ಹೊಸ ರೈತರಿಗೆ ಸಾಲ ನೀಡಲಾಗಿದೆ' ಎಂದು ಹೇಳಿದರು.

ಮೇಳದಲ್ಲಿ ತರೆಹೇವಾರಿ ಉತ್ಪನ್ನಗಳು

ಬೆಂಗಳೂರು: ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷದ ಅಂಗವಾಗಿ ಕೃಷಿ ಇಲಾಖೆ ಅರಮನೆ ಮೈದಾನದಲ್ಲಿ ಆಯೋಜಿಸಿರುವ ಸಿರಿಧಾನ್ಯ ಹಾಗೂ ಸಾವಯವ ಮೇಳ ಸಿರಿಧಾನ್ಯ ಪ್ರಿಯರನ್ನು ಆಕರ್ಷಿಸುತ್ತಿದೆ.

ವಸ್ತು ಪ್ರದರ್ಶನದಲ್ಲಿ ಹತ್ತಾರು ಮಳಿಗೆಗಳಿವೆ. ಅದರಲ್ಲಿ ಕೆಲವು ಮಳಿಗೆಗಳಲ್ಲಿ ಸಿರಿಧಾನ್ಯ, ಸಾವಯವ ಹಾಗೂ ನೈಸರ್ಗಿಕ ಉತ್ಪನ್ನಗಳು ಮಹತ್ವ ಸಾರುತ್ತಿವೆ.

ನೈಸರ್ಗಿಕ ಕೃಷಿ, ಪರಿಸರ ಸ್ನೇಹಿ ಉತ್ಪನ್ನಗಳು, ದೇಸೀಯ ಬಿತ್ತನೆ ಬೀಜಗಳ ಸಂರಕ್ಷಣೆ ಕುರಿತು ಮಾಹಿತಿ ತಿಳಿಸುವ ಮಳಿಗೆಗಳೂ ವಸ್ತು ಪ್ರದರ್ಶನದಲ್ಲಿವೆ. ಕೇರಳ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ಮಣಿಪುರ, ಅಸ್ಸಾಂ, ಅರುಣಾಚಲ ಪ್ರದೇಶದ ಮಾರಾಟಗಾರರು ಸಾವಯವ ಹಾಗೂ ಸಿರಿಧಾನ್ಯ ಉತ್ಪನ್ನಗಳನ್ನು ಪ್ರದರ್ಶಿಸಿದ್ದಾರೆ.

ಈ ಸಮ್ಮೇಳನವು 'ಸಿರಿಧಾನ್ಯ ಸಾವಯವ ಮತ್ತು ನೈಸರ್ಗಿಕ ಕೃಷಿ – ಸವಾಲುಗಳ ನಡುವೆ ಅವಕಾಶಗಳು' ಎಂಬ ವಿಷಯ ಆಧರಿಸಿ ನಡೆಯುತ್ತಿದ್ದು, ಸ್ಥಳದಲ್ಲೇ ಗಾಣದಿಂದ ಎಣ್ಣೆ ತಯಾರಿಕೆ, ದೇಸಿ ತುಪ್ಪ, ಕೊಡಗಿನ ಜೇನು, ಕೊಡಗು ಹಾಗೂ ಚಾಮರಾಜನಗರದ ಆದಿವಾಸಿಗಳ ತಯಾರಿಸಿದ ಕಾಫಿ ಪುಡಿ ಸೇರಿದಂತೆ ತರಹೇವಾರಿ ಪದಾರ್ಥಗಳು ಲಭ್ಯವಿದೆ.

ಆಹಾರ ಧಾನ್ಯಗಳ ಉತ್ಪಾದನೆ ಹಾಗೂ ವಾಣಿಜ್ಯ ಬೆಳೆಗಳ ನಡುವೆ ಸಮತೋಲನ ಕಾಯ್ದುಕೊಳ್ಳದಿದ್ದರೆ ಆಹಾರ ಭದ್ರತೆಗೆ ತೊಂದರೆಯಾಗಲಿದೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಪೌಷ್ಟಿಕಾಂಶದ ಬಗ್ಗೆ ಚಿಂತಿಸುವ ಕಾಲ ಹತ್ತಿರವಾಗಿದೆ. ₹ 25 ಕೋಟಿ ವೆಚ್ಚದಲ್ಲಿ ರಾಯಚೂರಿನಲ್ಲಿ ಸಿರಿಧಾನ್ಯ ಪಾರ್ಕ್ ನಿರ್ಮಿಸಲಾಗುವುದು
ಬಿ.ಸಿ.ಪಾಟೀಲ, ಕೃಷಿ ಸಚಿವ

ಸುದ್ದಿ 2 ನಿಮಿಷ

₹ 5 ಲಕ್ಷ ಪರಿಹಾರ ನೀಡಲು ಬಿಡಿಎಗೆ ಆದೇಶ

ಬೆಂಗಳೂರು: ಖಾಸಗಿ ವ್ಯಕ್ತಿಗೆ ಸೇರಿದ ಜಾಗವನ್ನು ಸ್ವಾಧೀನಕ್ಕೆ ಪಡೆಯದೆ ನಗರದ ಎಚ್‌ಎಎಲ್ 4ನೇ ಹಂತದ ಬಡಾವಣೆ ನಿರ್ಮಾಣಕ್ಕೆ ಬಳಸಿದ ಪ್ರಕರಣವೊಂದರಲ್ಲಿ 'ಜಮೀನಿನ ಮಾಲೀಕರಿಗೆ ₹ 5 ಲಕ್ಷ ಪರಿಹಾರ ಮತ್ತು ಎರಡು ಗುಂಟೆ ಅಭಿವೃದ್ಧಿಪಡಿಸಿದ ಜಾಗ ನೀಡಿ' ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಹೈಕೋರ್ಟ್ ಆದೇಶಿಸಿದೆ.

ಬಿಡಿಎ ಕ್ರಮ ಪ್ರಶ್ನಿಸಿ ಕೆ.ಶ್ರೀನಿವಾಸ ಮೂರ್ತಿ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ್ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಶಾಸನಾತ್ಮಕ ಪ್ರಾಧಿಕಾರವು ಕಾಯ್ದೆ ಮತ್ತು ಕಾನೂನಿಗೆ ಅನುಗುಣವಾಗಿ ಕಾರ್ಯ ನಿರ್ವಹಿಸಬೇಕು. ಜಮೀನು ಸ್ವಾಧೀನಕ್ಕೆ ಪಡೆಯುವ ಮುನ್ನವೇ ಬಡಾವಣೆ ನಿರ್ಮಾಣಕ್ಕೆ ಖಾಸಗಿ ವ್ಯಕ್ತಿಯ ಜಾಗವನ್ನು ಬಳಸಿಕೊಳ್ಳುವಂತಿಲ್ಲ' ಎಂದು ನ್ಯಾಯಪೀಠ ಬಿಡಿಎಗೆ ಚಾಟಿ ಬೀಸಿದೆ.

ನೆಲಮಂಗಲ ನಗರಸಭೆ ಅಧ್ಯಕ್ಷೆ ಸೇರಿ ಜೆಡಿಎಸ್‌ನ 11 ಸದಸ್ಯರು ಕಾಂಗ್ರೆಸ್‌ಗೆ

ಬೆಂಗಳೂರು: ನೆಲಮಂಗಲ ನಗರಸಭೆಯ ಅಧ್ಯಕ್ಷೆ ಸೇರಿದಂತೆ ಜೆಡಿಎಸ್‌ನ 11 ಸದಸ್ಯರು ಸಾಮೂಹಿಕವಾಗಿ ಶುಕ್ರವಾರ ಕಾಂಗ್ರೆಸ್ ಪಕ್ಷ ಸೇರಿದರು. ಇದರೊಂದಿಗೆ ನಗರಸಭೆಯಲ್ಲಿ ಜೆಡಿಎಸ್ ಅಧಿಕಾರ ಕಳೆದುಕೊಂಡಿದೆ.

ನೆಲಮಂಗಲ ನಗರಸಭೆಯಲ್ಲಿ ಜೆಡಿಎಸ್ 14 ಸದಸ್ಯರನ್ನು ಹೊಂದಿತ್ತು. ಈ ಪೈಕಿ, ಅಧ್ಯಕ್ಷೆ ಲತಾ ಹೇಮಂತ್ ಕುಮಾರ್, ಸದಸ್ಯರಾದ ರಾಜಮ್ಮ ಪಿಳ್ಳಪ್ಪ, ಆನಂದ್, ಆಂಜಿನಪ್ಪ, ಅಂಜನಮೂರ್ತಿ (ಪಾಪಣ್ಣಿ), ದಾಕ್ಷಾಯಿಣಿ ರವಿಕುಮಾರ್, ಪ್ರಸಾದ್, ಚೇತನ್, ಪುಷ್ಪಲತಾ ಮಾರೇಗೌಡ, ಭಾರತಿ ಬಾಯಿ ನಾರಾಯಣ್ ರಾವ್ ಸೇರಿ 11 ಸದಸ್ಯರು ಪಕ್ಷಾಂತರಗೊಂಡಿದ್ದಾರೆ. ಮೂವರಷ್ಟೇ ಜೆಡಿಎಸ್‌ನಲ್ಲಿ ಉಳಿದುಕೊಂಡಿದ್ದಾರೆ.

ವಿಧಾನ ಪರಿಷತ್ ಮಾಜಿ ಸದಸ್ಯ ಬೆಮೆಲ್ ಕಾಂತರಾಜು ಮತ್ತು ನೆಲಮಂಗಲ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಎನ್. ಶ್ರೀನಿವಾಸ್ ನೇತೃತ್ವದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು, ಪ್ರಮುಖ ಮುಖಂಡರು ಹಾಗೂ ಜೆಡಿಎಸ್‌ನ ನೂರಾರು ಕಾರ್ಯಕರ್ತರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಭಾರತೀಯ ಮಹಿಳಾ ವಕೀಲರ ಒಕ್ಕೂಟದ ಚುನಾವಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತೀಯ ಮಹಿಳಾ ವಕೀಲರ ಒಕ್ಕೂಟ'ದ ಕರ್ನಾಟಕ ಘಟಕಕ್ಕೆ 2023–24, 2024–25 ಹಾಗೂ 2025–26ನೇ ಸಾಲಿನ ಪದಾಧಿಕಾರಿಗಳ ಆಯ್ಕೆಗೆ ಶನಿವಾರ (ಜ.21) ಚುನಾವಣೆ ನಡೆಯಲಿದೆ.

'ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ, ಜಂಟಿ ಕಾರ್ಯದರ್ಶಿ ಮತ್ತು 7 ಜನ ಕಾರ್ಯಕಾರಿ ಸಮಿತಿ ಸದಸ್ಯರ ಸ್ಥಾನಕ್ಕೆ ಈ ಚುನಾವಣೆ ನಡೆಯಲಿದೆ. ಚುನಾವಣೆಯು ಹೈಕೋರ್ಟ್‌ನಲ್ಲಿರುವ ಬೆಂಗಳೂರು ವಕೀಲರ ಸಂಘದ ಹಾಲ್ ಸಂಖ್ಯೆ-1ರಲ್ಲಿ ಬೆಳಗ್ಗೆ 9ಗಂಟೆಯಿಂದ ಮಧ್ಯಾಹ್ನ 3ಗಂಟೆಯವರೆಗೆ ನಡೆಯಲಿದೆ. ನಂತರ ಎಣಿಕೆ ನಡೆದು ಫಲಿತಾಂಶ ಘೋಷಣೆಯಾಗಲಿದೆ' ಎಂದು ಚುನಾವಣಾಧಿಕಾರಿಯೂ ಆದ ಹಿರಿಯ ವಕೀಲ ಎ.ಜಿ.ಶಿವಣ್ಣ ಹಾಗೂ ಸಹಾಯಕ ಚುನಾವಣಾಧಿಕಾರಿ ಜಿ.ಎಂ. ಸುಮಿತ್ರಾ ತಿಳಿಸಿದ್ದಾರೆ.

ಅಕ್ರಮ ಬಂಧನ: ಡಿವೈಎಸ್ಪಿ ದಾಳಿ

ಶೇಷಾದ್ರಿಪುರ ಠಾಣೆ ಇನ್‌ಸ್ಪೆಕ್ಟರ್ ವಿರುದ್ಧ ದೂರು

ಬೆಂಗಳೂರು: ವ್ಯಕ್ತಿಯೊಬ್ಬರನ್ನು ಅಕ್ರಮವಾಗಿ ಬಂಧಿಸಿಡಲಾಗಿದ್ದ ಶೇಷಾದ್ರಿಪುರ ಠಾಣೆ ಮೇಲೆ ರಾಜ್ಯ ಮಾನವ ಹಕ್ಕು ಆಯೋಗದ ಅಧಿಕಾರಿಗಳು ಶುಕ್ರವಾರ ಸಂಜೆ ದಾಳಿ ಮಾಡಿದ್ದು, ಹಲವು ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

ಶೇಷಾದ್ರಿಪುರ ಠಾಣೆ ಇನ್‌ಸ್ಪೆಕ್ಟರ್ ಹೇಮಂತ್ ಕುಮಾರ್ ವಿರುದ್ಧ ರಾಜ್ಯ ಮಾನವ ಹಕ್ಕುಗಳ ಆಯೋಗದಲ್ಲಿ (ಎಸ್‌ಎಚ್‌ಆರ್‌ಸಿ) ದಾಖಲಾಗಿದ್ದ ಪ್ರಕರಣದಲ್ಲಿ ಡಿವೈಎಸ್ಪಿ ಕೇಶವ್ ನೇತೃತ್ವದ ತಂಡ ಈ ದಾಳಿ ಮಾಡಿತು.

'ಸ್ಥಳೀಯ ನಿವಾಸಿ ಆರ್. ಶ್ರೀಧರ್ ಎಂಬುವರನ್ನು ಪೊಲೀಸರು ಅಕ್ರಮ ಬಂಧನದಲ್ಲಿರಿಸಿದ್ದರು. ಯಾವುದೇ ದೂರು ಹಾಗೂ ಎಫ್‌ಐಆರ್ ಇಲ್ಲದಿದ್ದರೂ ಠಾಣೆಯಲ್ಲಿ ಕೂರಿಸಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಕುಟುಂಬಸ್ಥರಿಗೂ ಬೆದರಿಕೆಯೊಡ್ಡಿದ್ದರು. ಶ್ರೀಧರ್ ಅವರ ಅಕ್ರಮ ಬಂಧನ ಪ್ರಶ್ನಿಸಿದ್ದ ಮಗ ಚಂದರೇಶ್, ಆಯೋಗಕ್ಕೆ ದೂರು ನೀಡಿದ್ದರು' ಎಂದು ಮೂಲಗಳು ಹೇಳಿವೆ.

'ದೂರನ್ನು ಗಂಭೀರವಾಗಿ ಪರಿಗಣಿಸಿದ್ದ ಆಯೋಗ, ತನಿಖೆ ನಡೆಸುವಂತೆ ಐಜಿಪಿ ಅವರಿಗೆ ಸೂಚಿಸಿತ್ತು. ಅದರಂತೆ, ಡಿವೈಎಸ್ಪಿ ನೇತೃತ್ವದ ತಂಡ ಠಾಣೆ ಮೇಲೆ ದಾಳಿ ಮಾಡಿತು' ಎಂದು ಮೂಲಗಳು ತಿಳಿಸಿವೆ.

ದಾಳಿ ಸಂದರ್ಭದಲ್ಲಿ ಠಾಣೆಯಲ್ಲಿದ್ದ ಡೈರಿ, ಸಂದರ್ಶಕರ ಪುಸ್ತಕ ಸೇರಿದಂತೆ ಹಲವು ದಾಖಲೆಗಳನ್ನು ಜಪ್ತಿ ಮಾಡಲಾಗಿದೆ. ದಾಳಿ ಪೂರ್ಣಗೊಳಿಸಿರುವ ತಂಡ, ಆಯೋಗಕ್ಕೆ ವರದಿ ಸಲ್ಲಿಸಿದೆ. ಪ್ರಕರಣದ ಮುಂದಿನ ವಿಚಾರಣೆ ಜ. 31ರಂದು ನಡೆಯಲಿದೆ.

ಹಣಕ್ಕೆ ಪೀಡಿಸಿದ್ದ ಪೊಲೀಸರು: 'ಸಂತ್ರಸ್ತ ಶ್ರೀಧರ್ ಅವರನ್ನು ಬೆದರಿಸಿದ್ದ ಶೇಷಾದ್ರಿಪುರ ಠಾಣೆ ಪೊಲೀಸರು, ಹಣ ನೀಡುವಂತೆ ಪೀಡಿಸುತ್ತಿದ್ದರು. ಹಣ ನೀಡಲು ಶ್ರೀಧರ್ ಒಪ್ಪಿರಲಿಲ್ಲ. ಗುರುವಾರ (ಜ. 19) ಬೆಳಿಗ್ಗೆ 10.30ರ ಸುಮಾರಿಗೆ ಅವರನ್ನು ಹಿಡಿದುಕೊಂಡು ಠಾಣೆಗೆ ಕರೆದೊಯ್ದಿದ್ದರು. ಶುಕ್ರವಾರ ಸಂಜೆ 4 ಗಂಟೆಯವರೆಗೂ ಠಾಣೆಯಲ್ಲಿ ಕೂರಿಸಿದ್ದರು. ಹಣಕ್ಕಾಗಿ ಪುನಃ ಪೀಡಿಸಿ ಕಿರುಕುಳ ನೀಡಿದ್ದರು' ಎಂದು ಮೂಲಗಳು ಹೇಳಿವೆ.

'ಶುಕ್ರವಾರ ಸಂಜೆ ಠಾಣೆ ಮೇಲೆ ದಿಢೀರ್ ದಾಳಿ ಮಾಡಿದ ಡಿವೈಎಸ್ಪಿ ನೇತೃತ್ವದ ತಂಡ, ಶ್ರೀಧರ್ ಅವರನ್ನು ರಕ್ಷಿಸಿ ಬಿಡುಗಡೆಗೊಳಿಸಿತು. ಕರ್ತವ್ಯದಲ್ಲಿದ್ದ ಎಲ್ಲ ಸಿಬ್ಬಂದಿ ವಿವರ ದಾಖಲಿಸಿಕೊಂಡು, ಆಯೋಗಕ್ಕೆ ಸಲ್ಲಿಸಿದೆ' ಎಂದು ಮೂಲಗಳು ತಿಳಿಸಿವೆ.

ಗಾಂಜಾ ಮಾರಾಟ: ಆರೋಪಿ ವೈದ್ಯರ ವಜಾ

ಮಂಗಳೂರು: ಗಾಂಜಾ ಮಾರಾಟ ಮತ್ತು ಸೇವನೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಇಬ್ಬರು ವೈದ್ಯರನ್ನು ನಗರದ ಕಸ್ತೂರಬಾ ವೈದ್ಯಕೀಯ ಕಾಲೇಜಿನ (ಕೆಎಂಸಿ) ಆಡಳಿತ ಮಂಡಳಿಯು ಕೆಲಸದಿಂದ ತೆಗೆದುಹಾಕಿದೆ. ಪ್ರಕರಣದಲ್ಲಿ ಆರೋಪಿಗಳಾಗಿರುವ 7 ವಿದ್ಯಾರ್ಥಿಗಳನ್ನು ಅಮಾನತು ಮಾಡಿದೆ.

ಕೆಎಂಸಿ ಆಸ್ಪತ್ರೆಯ ಗಾಯಾಳುಗಳ ಚಿಕಿತ್ಸಾ ವಿಭಾಗದಲ್ಲಿ ವೈದ್ಯಕೀಯ ಅಧಿಕಾರಿಯಾಗಿದ್ದ ಡಾ.ಸಮೀರ್ ಹಾಗೂ ಜನರಲ್ ಮೆಡಿಸಿನ್ ವಿಭಾಗದಲ್ಲಿ ಹಿರಿಯ ಸ್ಥಾನಿಕ ವೈದ್ಯ (ಪ್ರೊಬೇಷನರಿ) ಡಾ.ಬಾಲಾಜಿ ಅವರನ್ನು ಆಂತರಿಕ ಶಿಸ್ತು ಸಮಿತಿಯ ವರದಿ ಆಧಾರದಲ್ಲಿ ಸಂಸ್ಥೆಯ ಡೀನ್ ಡಾ.ಬಿ. ಉನ್ನಿಕೃಷ್ಣನ್ ವಜಾಗೊಳಿಸಿದ್ದಾರೆ.

ಎಂಬಿಬಿಎಸ್ ಇಂಟರ್ನ್‌ಷಿಪ್ ವಿದ್ಯಾರ್ಥಿನಿ ಕೇರಳದ ನದಿಯಾ ಸಿರಾಜ್, 4ನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿನಿ ಮಹಾರಾಷ್ಟ್ರದ ಪುಣೆಯ ಇರಾ ಬಾಸಿನ್, ಎಂಬಿಬಿಎಸ್ ಇಂಟರ್ನ್‌ಷಿಪ್ ವಿದ್ಯಾರ್ಥಿನಿ ಆಂಧ್ರಪ್ರದೇಶದ ವರ್ಷಿಣಿ ಪ್ರಾಥಿ, ಎಂ.ಎಸ್.ಆರ್ಥೊ ಮೂರನೇ ವರ್ಷದ ವಿದ್ಯಾರ್ಥಿ ದೆಹಲಿಯ ಕ್ಷಿತಿಜ್ ಗುಪ್ತ, ಪೆಥಾಲಜಿ ಎಂ.ಡಿ ವಿದ್ಯಾರ್ಥಿ ತುಮಕೂರಿನ ಹರ್ಷ ಕುಮಾರ್, ನಾಲ್ಕನೇ ವರ್ಷ ಬಿಡಿಎಸ್ ವಿದ್ಯಾರ್ಥಿನಿ ಡಾ.ರಿಯಾ ಛಡ್ಡಾ ಹಾಗೂ ಡಾ.ಮಣಿಮಾರನ್ ಮುತ್ತು ಅವರನ್ನು ಬಂಧಿಸಲಾಗಿತ್ತು.

ಮಾದಕ ಪದಾರ್ಥ ದಂಧೆಯಲ್ಲಿ ತೊಡಗಿದ್ದ ಆರೋಪದಡಿ ಅನಿವಾಸಿ ಭಾರತೀಯ ನೀಲ್ ಕಿಶೋರಿಲಾಲ್ ರಾಮ್‌ಜಿ ಷಾ ಎಂಬಾತನನ್ನು ಜ.7 ರಂದು ಪೊಲೀಸರು ಬಂಧಿಸಿದ್ದರು. ಆತ ನೀಡಿದ್ದ ಮಾಹಿತಿ ಆಧರಿಸಿ ಇತರ 14 ಮಂದಿಯನ್ನು ಬಂಧಿಸಿದ್ದರು. ಅವರಲ್ಲಿ ಕೆಎಂಸಿಯ ಏಳು ವಿದ್ಯಾರ್ಥಿಗಳು ಹಾಗೂ ಇಬ್ಬರು ವೈದ್ಯರು ಸೇರಿದ್ದರು.

10 ವರ್ಷಗಳಿಂದ ಪ್ರಭಾರದಲ್ಲಿಯೇ ನಡೆಯುತ್ತಿರುವ ಸಂಸ್ಥೆ

ನೆಫ್ರೋ-ಯುರಾಲಜಿ ಸಂಸ್ಥೆಗಿಲ್ಲ ಪೂರ್ಣಾವಧಿ ನಿರ್ದೇಶಕ

• ವರುಣ ಹೆಗಡೆ

ಬೆಂಗಳೂರು: ಮೂತ್ರಪಿಂಡ ಮತ್ತು ಮೂತ್ರಕೋಶ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವಲ್ಲಿ ಮುಂಚೂಣಿಯಲ್ಲಿರುವ ನೆಫ್ರೋ-ಯುರಾಲಜಿ ಸಂಸ್ಥೆಗೆ 10 ವರ್ಷಗಳಿಂದ ಪೂರ್ಣಾವಧಿ ನಿರ್ದೇಶಕರಿಲ್ಲ. ಇದರಿಂದ ಸಂಸ್ಥೆಯ ವಾರ್ಷಿಕ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ.

2013ರಿಂದ ಸಂಸ್ಥೆಗೆ ಪೂರ್ಣಾವಧಿ ನಿರ್ದೇಶಕರನ್ನು ನೇಮಕ ಮಾಡಿಲ್ಲ. ಮುಖ್ಯಮಂತ್ರಿಯೇ ಸಂಸ್ಥೆಯ ಆಡಳಿತ ಮಂಡಳಿ ಅಧ್ಯಕ್ಷರಾಗಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವರು ಉಪಾಧ್ಯಕ್ಷರಾಗಿದ್ದಾರೆ. ಆಡಳಿತ ಮಂಡಳಿಯ ಸಭೆಗಳಲ್ಲಿ ಸಂಸ್ಥೆಯ ನಿರ್ದೇಶಕ ಸ್ಥಾನದ ಬಗ್ಗೆ ಚರ್ಚೆ ನಡೆಯುತ್ತಿದ್ದರೂ ಸರ್ಕಾರ ಈವರೆಗೂ ನೇಮಕಾತಿ ನಡೆಸಿಲ್ಲ. ಇದರಿಂದ ನಿರ್ದೇಶಕ ಹುದ್ದೆಯು ಪ್ರಭಾರದಲ್ಲಿಯೇ ಇದ್ದು, 150 ಹಾಸಿಗೆಗಳ ಕಟ್ಟಡ ನಿರ್ಮಾಣ ಸೇರಿ ವಿವಿಧ ಯೋಜನೆಗಳು ಕುಂಟುತ್ತಾ ಸಾಗುತ್ತಿವೆ. ಸರ್ಕಾರದ ಈ ನಡೆ ಸಂಸ್ಥೆಯಲ್ಲಿನ ವೈದ್ಯರ ಅಸಮಾಧಾನಕ್ಕೂ ಕಾರಣವಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಸಂಸ್ಥೆ, 2007ರಿಂದ ಸೇವೆ ಒದಗಿಸುತ್ತಿದೆ. ಡಾ.ವೆಂಕಟೇಶ್ ಅವರು ಪ್ರಥಮ ನಿರ್ದೇಶಕರಾಗಿದ್ದರು. ಅವರನ್ನೇ ಎರಡು ಬಾರಿ ನಿರ್ದೇಶಕ ಸ್ಥಾನದಲ್ಲಿ ಮುಂದುವರಿಸಲಾಗಿತ್ತು. ಬಳಿಕ ಡಾ.ಎಂ. ಶಿವಲಿಂಗಯ್ಯ ಅವರನ್ನು ಪ್ರಭಾರ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿತ್ತು. ತದನಂತರ ಡಾ.ಆರ್.ಕೇಶವ ಮೂರ್ತಿ ಅವರನ್ನು ಪ್ರಭಾರ ಸ್ಥಾನದಲ್ಲಿ ಇರಿಸಲಾಗಿದೆ.

ನೇಮಕಾತಿಗೆ ತಡೆಯಾಜ್ಞೆ: ಪೂರ್ಣಾವಧಿ ನಿರ್ದೇಶಕರ ನೇಮಕಾತಿಗೆ ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದಾಗಲೆಲ್ಲ ಸಂಸ್ಥೆಯ ನಿರ್ದೇಶಕ ಸ್ಥಾನದ ಆಕಾಂಕ್ಷಿಗಳಲ್ಲಿ ಒಬ್ಬರು ನ್ಯಾಯಮಂಡಳಿಯಲ್ಲಿ ತಡೆಯಾಜ್ಞೆ ತರುತ್ತಿದ್ದಾರೆ. ಈ ಬಗ್ಗೆ ವರದಿ ಸಲ್ಲಿಸುವಂತೆ 2022ರ ಡಿಸೆಂಬರ್ 14ರಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಇಲಾಖೆಯ ನಿರ್ದೇಶಕರಿಗೆ ಸೂಚಿಸಿದ್ದರು. 2021ರಲ್ಲಿ ನಿರ್ದೇಶಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಿದಾಗ ಐವರು ಅರ್ಜಿ ಸಲ್ಲಿಸಿದ್ದರು. ನಿರ್ದೇಶಕ ಹುದ್ದೆಯ ಅವಧಿ 4 ವರ್ಷಗಳು ಅಥವಾ ಸರ್ಕಾರದ ಮುಂದಿನ ಆದೇಶದವರೆಗೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿತ್ತು. ಆದರೆ, ಈವರೆಗೂ ನೇಮಕಾತಿ ನಡೆದಿಲ್ಲ.

'ಸಂಸ್ಥೆಗೆ ಪೂರ್ಣಾವಧಿ ನಿರ್ದೇಶಕರ ನೇಮಕಾತಿ ನಡೆಯದಿದ್ದರಿಂದ ಚಟುವಟಿಕೆ ಕುಂಟುತ್ತಾ ಸಾಗುತ್ತಿದೆ. ಕೇಶವಮೂರ್ತಿ ಅವರೇ ಐದಾರು ವರ್ಷಗಳಿಂದ ಪ್ರಭಾರದಲ್ಲಿ ಇದ್ದಾರೆ. ನೇಮಕಾತಿ ಪ್ರಕ್ರಿಯೆ ನಡೆದಲ್ಲಿ ನಿರ್ದೇಶಕ ಹುದ್ದೆ ಕೈತಪ್ಪುವ ಕಳವಳದಿಂದ ಅವರು, ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದಾಗಲೆಲ್ಲ ನ್ಯಾಯಮಂಡಳಿಯಲ್ಲಿ ತಡೆಯಾಜ್ಞೆ ತರುತ್ತಿದ್ದಾರೆ. ಅರ್ಹರಿಗೆ ಅವಕಾಶ ತಪ್ಪಿಸಲು ಹೀಗೆ ಮಾಡಲಾಗುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಸಂಸ್ಥೆಯ ವೈದ್ಯರೊಬ್ಬರು ಆರೋಪಿಸಿದರು.

ನೆಫ್ರೋ–ಯುರಾಲಜಿ ಸಂಸ್ಥೆ

ನಿರ್ದೇಶಕ ಸ್ಥಾನಕ್ಕೆ ವೈದ್ಯಕೀಯ ಶಿಕ್ಷಣ ಇಲಾಖೆ ಅರ್ಜಿ ಆಹ್ವಾನಿಸಿದ್ದು, ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಏನು ಬೇಕಾದರೂ ಆರೋಪಗಳನ್ನು ಮಾಡಬಹುದು.
ಡಾ.ಆರ್.ಕೇಶವಮೂರ್ತಿ, ನೆಫ್ರೋ-ಯುರಾಲಜಿ ಸಂಸ್ಥೆ ಪ್ರಭಾರ ನಿರ್ದೇಶಕ

ರೋಗಿಗಳ ಸಂಖ್ಯೆ ಹೆಚ್ಚಳ

ಡಯಾಲಿಸಿಸ್ ಹಾಗೂ ಮೂತ್ರಪಿಂಡಕ್ಕೆ ಸಂಬಂಧಿಸಿದ ವಿವಿಧ ಚಿಕಿತ್ಸೆಗಳಿಗೆ ಸಂಸ್ಥೆಗೆ ರಾಜ್ಯದ ವಿವಿಧೆಡೆಯಿಂದ ರೋಗಿಗಳು ಬರುತ್ತಾರೆ. ಸದ್ಯ ಸಂಸ್ಥೆಯಲ್ಲಿ 20 ಡಯಾಲಿಸಿಸ್ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಪ್ರತಿನಿತ್ಯ 80 ರಿಂದ 90 ಮಂದಿಗೆ ಡಯಾಲಿಸಿಸ್ ಮಾಡಲಾಗುತ್ತಿದೆ. ಸುಮಾರು 300 ರೋಗಿಗಳು ನಿತ್ಯ ಸಂಸ್ಥೆಗೆ ಭೇಟಿ ನೀಡುತ್ತಾರೆ. ಸದ್ಯ 160 ಹಾಸಿಗೆಗಳ ಸೌಲಭ್ಯ ಹೊಂದಿದೆ. ಮೂತ್ರಪಿಂಡ ಕಸಿ ಚಿಕಿತ್ಸೆ, ಡಯಾಲಿಸಿಸ್, ಶಸ್ತ್ರಚಿಕಿತ್ಸೆ ಸೇರಿ ವಿವಿಧ ಸೌಲಭ್ಯವನ್ನು ಸಂಸ್ಥೆ ಹೊಂದಿದೆ. ರೋಗಿಗಳ ಸಂಖ್ಯೆ ಹೆಚ್ಚಳದಿಂದ ಚಿಕಿತ್ಸೆಗೆ ಸಮಸ್ಯೆಯಾಗಿದ್ದು, 150 ಹಾಸಿಗೆಗಳ ಕಟ್ಟಡವನ್ನು 2018ರಿಂದ ನಿರ್ಮಿಸಲಾಗುತ್ತಿದೆ. ಅದು ಈವರೆಗೂ ಪೂರ್ಣಗೊಂಡಿಲ್ಲ.

ಅಂಗನವಾಡಿ ಸಹಾಯಕಿ ಸಾವು

ಶಿವಮೊಗ್ಗ: ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಸ್ವತಂತ್ರ ಸಂಘಟನೆಯಿಂದ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅನಾರೋಗ್ಯಕ್ಕೀಡಾಗಿ ಊರಿಗೆ ಮರಳಿದ್ದ ಶಿಕಾರಿಪುರ ತಾಲ್ಲೂಕಿನ ಇಡಕಿನ ಹೊಸಕೊಪ್ಪದ ಅಂಗನವಾಡಿ ಸಹಾಯಕಿ ನೀಲಮ್ಮ (58) ಶುಕ್ರವಾರ ನಿಧನರಾಗಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಂಘಟನೆಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುತ್ತಿದೆ. ಶಿವಮೊಗ್ಗ ಜಿಲ್ಲೆಯಿಂದ ತೆರಳಿದ್ದ ನೀಲಮ್ಮ ಜನವರಿ 18 ರಂದು ಬೆಂಗಳೂರಿನಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ದಿಢೀರನೆ ಅನಾರೋಗ್ಯಕ್ಕೆ ತುತ್ತಾಗಿದ್ದ ಅವರನ್ನು ಊರಿಗೆ ಕರೆತರಲಾಗಿತ್ತು. ಶಿಕಾರಿಪುರದಲ್ಲಿ ಮೃತಪಟ್ಟಿದ್ದಾರೆ.

'ನೀಲಮ್ಮಗೆ ಅಸ್ತಮಾ ಇದ್ದು, ಬೆಂಗಳೂರಿನ ಚಳಿಯಿಂದ ಅಸ್ವಸ್ಥರಾಗಿದ್ದರು. ಹೀಗಾಗಿ ಊರಿಗೆ ವಾಪಸ್ ತೆರಳಿದ್ದರು. ಅಲ್ಲಿ ಸಾವಿಗೀಡಾಗಿದ್ದಾರೆ' ಎಂದು ಸಂಘಟನೆಯ ಶಿಕಾರಿಪುರದ ಪ್ರತಿನಿಧಿ ಭಾರತಿ ಪ್ರತಿಕ್ರಿಯಿಸಿದರು.

ನೀಲಮ್ಮ ಸಾವಿನ ಹಿನ್ನೆಲೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟ್ವೀಟ್ ಮಾಡಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಮೀರ್–ಸಿದ್ದರಾಮಯ್ಯ ಗೋಪ್ಯ ಮಾತುಕತೆ

ಮೈಸೂರು: ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಶಾಸಕ ಜಮೀರ್ ಅಹಮದ್ ಖಾನ್ ಇಲ್ಲಿನ ಬನ್ನಿಮಂಟಪದಲ್ಲಿರುವ ಹೋಟೆಲ್‌ನಲ್ಲಿ ಶುಕ್ರವಾರ ರಾತ್ರಿ ಗೋಪ್ಯ ಮಾತುಕತೆ ನಡೆಸಿದರು.

'ಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲದಂತೆ ತೆಲಂಗಾಣದ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್ ಷಡ್ಯಂತ್ರ ಆರಂಭಿಸಿದ್ದಾರೆ' ಎಂದು ತೆಲಂಗಾಣದ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ಹೇಳಿಕೆ ಹಿನ್ನೆಲೆಯಲ್ಲಿ ನಾಯಕರು ಚರ್ಚಿಸಿದ್ದಾರೆ ಎನ್ನಲಾಗಿದೆ.

ಈ ವೇಳೆ ಪ್ರತಿಕ್ರಿಯೆ ಪಡೆಯಲು ಬಂದ ಮಾಧ್ಯಮ ಪ್ರತಿನಿಧಿಗಳ ವಿರುದ್ಧ ಸಿದ್ದರಾಮಯ್ಯ ಗರಂ ಆದರು. 'ಖಾಸಗಿ ಸಭೆಗಳಿಗೆಲ್ಲಾ ಏಕೆ ಬರುತ್ತೀರಿ? ತೆಲಂಗಾಣದ ಅಧ್ಯಕ್ಷರ ಹೇಳಿಕೆ ಬಗ್ಗೆ ಯಾರೂ ಮಾತನಾಡುವುದಿಲ್ಲ. ನೀವೆಲ್ಲರೂ ಹೋಗಿ' ಎಂದು ಹೊರ ಕಳುಹಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಜಮೀರ್, 'ನನಗಂತೂ ಯಾವುದೇ ಆಫರ್ ಬಂದಿಲ್ಲ. ನಾನು ಅಲ್ಲಿಗೆ ಹೋಗಿದ್ದು, ತೆಲಂಗಾಣ ಮುಖ್ಯಮಂತ್ರಿಯನ್ನು ಭೇಟಿಯಾಗಿದ್ದು ಸತ್ಯ. ಆದರೆ, ₹ 500 ಕೋಟಿ ಆಫರ್ ಅನ್ನು ಯಾರೂ ನನಗೆ ಕೊಟ್ಟಿಲ್ಲ. ಆ ಬಗ್ಗೆ ಗೊತ್ತೂ ಇಲ್ಲ. ಅಲ್ಲಿನ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ನನಗೆ ಮುಖ್ಯಮಂತ್ರಿಯನ್ನು ಭೇಟಿ ಮಾಡಿಸಿದ್ದರು. ಅದು ಸೌಜನ್ಯದ ಭೇಟಿಯಾಗಿತ್ತು' ಎಂದರು. 'ನಮ್ಮ ಭೇಟಿಯಲ್ಲಿ ರಾಜಕೀಯದ ಚರ್ಚೆ ನಡೆದಿಲ್ಲ. ಅವರ ಪಕ್ಷವೇ ಬೇರೆ, ನಮ್ಮದೇ ಬೇರೆ. ₹ 500 ಕೋಟಿಯನ್ನು ಯಾರು ಪಡೆದಿದ್ದಾರೆ ಎನ್ನುವುದನ್ನು ಆರೋಪ ಮಾಡಿದವರನ್ನೇ ಕೇಳಿ. ನಾನು ಭೇಟಿಯಾದ ತಕ್ಷಣ ಏನೇನೋ ಹಬ್ಬಿಸುತ್ತಾರೆ. ಆರೋಪ ಮಾಡಿದವರು ನನ್ನ ಹೆಸರನ್ನು ನಿರ್ದಿಷ್ಟವಾಗಿ ಹೇಳಿಲ್ಲ. ಹೀಗಾಗಿ ಯಾವುದೇ ಕ್ರಮದ ಬಗ್ಗೆ ಯೋಚಿಸಿಲ್ಲ. ನನ್ನ ಬಗ್ಗೆ ಮಾಧ್ಯಮದಲ್ಲಿ ಹೆಚ್ಚು ಚರ್ಚೆ ಆಗುತ್ತಿದೆಯಷ್ಟೆ' ಎಂದರು.

ಮುಗಿಯದ ಕಾಮಗಾರಿ; ಕ್ರೀಡಾ ಚಟುವಟಿಕೆಗಳಿಗೆ ಅಡ್ಡಿ • ತಪ್ಪದ ವಾಣಿಜ್ಯ ಚಟುವಟಿಕೆ

ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಟವಿಲ್ಲ!

• ಮಹಮ್ಮದ್ ನೂಮಾನ್

ಬೆಂಗಳೂರು: ಅಂಗಳದ ಒಂದು ಭಾಗದಲ್ಲಿ ರಾಶಿ ಬಿದ್ದಿರುವ ಕಲ್ಲು, ಮಣ್ಣು. ನಿರ್ಮಾಣ ಕಾಮಗಾರಿಗೆ ಅಲ್ಲಲ್ಲಿ ತೋಡಿರುವ ಗುಂಡಿ. ಇನ್ನೊಂದು ಕಡೆ ಒಂದಿಲ್ಲೊಂದು ವಾಣಿಜ್ಯ ಚಟುವಟಿಕೆ. ಇದರ ನಡುವೆ ಖಾಲಿಯಿರುವ ಒಂದಷ್ಟು ಜಾಗದಲ್ಲಿ ಆಟ...

ಬೆಂಗಳೂರಿನ ಇತಿಹಾಸದ ಭಾಗವಾಗಿರುವ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದ ಸದ್ಯದ ಸ್ಥಿತಿಯಿದು. ನವೀಕರಣದ ಹೆಸರಿನಲ್ಲಿ ನಡೆಯುತ್ತಿರುವ ಕಾಮಗಾರಿ ಆಮೆಗತಿಯಲ್ಲಿ ಸಾಗಿದ್ದು, ಇಲ್ಲಿ ಆಟವಾಡಲು ಬರುವವರಿಗೆ ಕಿರಿಕಿರಿ ಉಂಟಾಗಿದೆ.

ಕಳೆದ ವರ್ಷ ಏಪ್ರಿಲ್‌ನಲ್ಲಿ ಆರಂಭವಾಗಿರುವ ನಿರ್ಮಾಣ ಕಾಮಗಾರಿ 9 ತಿಂಗಳು ಕಳೆದರೂ ಮುಗಿದಿಲ್ಲ. ಕ್ರಿಕೆಟ್, ಫುಟ್‌ಬಾಲ್ ಒಳಗೊಂಡಂತೆ ವಿವಿಧ ಕ್ರೀಡೆಗೆ ಈ ಮೈದಾನವನ್ನೇ ಅವಲಂಬಿಸಿರುವವರು ಪರಿತಪಿಸುವಂತಾಗಿದೆ.

ಕಾಮಗಾರಿಯ ನಡುವೆಯೇ ಮೈದಾನವನ್ನು ಮೇಳಗಳು ಸೇರಿದಂತೆ ವಾಣಿಜ್ಯ ಉದ್ದೇಶಕ್ಕೆ ನೀಡುತ್ತಿರುವುದಕ್ಕೆ ಕ್ರೀಡಾಭಿಮಾನಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವಾರದ ಹಿಂದೆಯಷ್ಟೇ ಇಲ್ಲಿ ಅವರೆ ಬೇಳೆ ಮೇಳ ಆಯೋಜನೆಯಾಗಿತ್ತು.

ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ಕಾಮಗಾರಿಯ ನೋಟ ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಏನು ಕಾಮಗಾರಿ?: ನ್ಯಾಷನಲ್ ಕಾಲೇಜು ಮೈದಾನದಲ್ಲಿ ₹ 14 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮೈದಾನದ ಸುತ್ತಲೂ ಗ್ಯಾಲರಿ ಹಾಗೂ ಚಾವಣಿ ನಿರ್ಮಾಣ ಮಾಡಲಾಗುತ್ತದೆ. ಚಿಕ್ಕ ವೇದಿಕೆ ಕೂಡಾ ಬರಲಿದೆ.

'ಕೆಲಸ ಶುರು ಮಾಡಿದ ಬಳಿಕ ಮೇಳಗಳು, ಸಮಾವೇಶ ಸೇರಿದಂತೆ 15 ರಿಂದ 20 ಕಾರ್ಯಕ್ರಮಗಳಿಗೆ ಮೈದಾನವನ್ನು ನೀಡಲಾಗಿದೆ. ಇದರಿಂದ ಕಾಮಗಾರಿ ತಡವಾಗುತ್ತಿದೆ. ಕೆಲಸದ ಗುತ್ತಿಗೆ ವಹಿಸಿಕೊಂಡಿರುವವರೂ ಈ ಬಗ್ಗೆ ದೂರಿದ್ದಾರೆ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಅಸಹಾಯಕತೆ ವ್ಯಕ್ತಪಡಿಸಿದರು.

'ಚಾವಣಿ ನಿರ್ಮಾಣಕ್ಕಾಗಿ ಕೆಲವು ಮರಗಳ ರೆಂಬೆಗಳನ್ನು ಕತ್ತರಿಸಬೇಕಿತ್ತು. ಅದರ ಒಪ್ಪಿಗೆಗಾಗಿ ಒಂದೂವರೆ ತಿಂಗಳು ಕಾಯಬೇಕಾಯಿತು. ಇದು ಕೂಡಾ ಕಾಮಗಾರಿ ತಡವಾಗಲು ಕಾರಣ' ಎಂದರು.

ಮೈದಾನದಲ್ಲಿ ಯಾವುದೇ ಕಾರ್ಯಕ್ರಮಗಳಿಗೆ ಅವಕಾಶ ನೀಡದೆ ಮೂರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು.
ಮಹಾಂತೇಶ್, ಬಿಬಿಎಂಪಿ ದಕ್ಷಿಣ ವಲಯ ಕಾರ್ಯಪಾಲಕ ಎಂಜಿನಿಯರ್

'ಅನ್ಯ ಉದ್ದೇಶಕ್ಕೆ ಅಧಿಕ ಬಳಕೆ'

'ನ್ಯಾಷನಲ್ ಕಾಲೇಜು ಮೈದಾನಕ್ಕೆ ತನ್ನದೇ ಆದ ಇತಿಹಾಸವಿದೆ. ಜಿ.ಆರ್. ವಿಶ್ವನಾಥ್, ಬಿ.ಎಸ್.ಚಂದ್ರಶೇಖರ್, ಇಎಎಸ್ ಪ್ರಸನ್ನ ಅವರಂತಹ ಶ್ರೇಷ್ಠ ಆಟಗಾರರು ಕ್ರಿಕೆಟ್ ಕಲಿತ ಮೈದಾನ ಇದು. ಇಂತಹ ಮೈದಾನ ಅನ್ಯ ಉದ್ದೇಶಕ್ಕೆ ಬಳಕೆಯಾಗುತ್ತಿದ್ದು, ಕ್ರೀಡಾಪಟುಗಳಿಗೆ ತೊಂದರೆಯಾಗಿದೆ' ಎಂದು ಹಿರಿಯ ಕ್ರಿಕೆಟ್ ಕೋಚ್ ಒಬ್ಬರು ಹೇಳುತ್ತಾರೆ.

'ಹೈಕೋರ್ಟ್ ಆದೇಶಕ್ಕೆ ಬೆಲೆಯಿಲ್ಲ'

'ಈ ಮೈದಾನವನ್ನು ತಿಂಗಳಲ್ಲಿ ಐದಕ್ಕಿಂತ ಹೆಚ್ಚು ದಿನ ವಾಣಿಜ್ಯ ಉದ್ದೇಶಕ್ಕೆ ನೀಡುವಂತಿಲ್ಲ ಎಂಬ ಹೈಕೋರ್ಟ್ ಆದೇಶ ಇದ್ದರೂ, ಅದು ಪಾಲನೆಯಾಗುತ್ತಿಲ್ಲ' ಎಂದು ಶಂಕರಪುರಂ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಖಜಾಂಚಿ ಮಂಜುನಾಥ್ ದೂರಿದರು.

'ವಸ್ತುಪ್ರದರ್ಶನ, ಮೇಳ ನಡೆಸಲು ಐದು ದಿನಗಳಿಗೆ ಅನುಮತಿ ನೀಡುವರಾದರೂ ಮಳಿಗೆ ನಿರ್ಮಾಣ ಮತ್ತು ಅವುಗಳ ತೆರವು ಸೇರಿದಂತೆ 10ಕ್ಕೂ ಅಧಿಕ ದಿನಗಳ ಬೇಕಾಗುತ್ತದೆ' ಎಂದರು.

ಮೇಳಗಳಿಂದ ಅಡ್ಡಿ: 'ಕಾಮಗಾರಿಯ ನಡುವೆಯೇ ಮೇಳಗಳಿಗೆ ಅವಕಾಶ ನೀಡಲಾಗುತ್ತಿದೆ. ರಾಜಕಾರಣಿಗಳ ಪ್ರಭಾವ ಬಳಸಿ ವಾಣಿಜ್ಯ ಚಟುವಟಿಕೆಗಳಿಗೆ ಅನುಮತಿ ಪಡೆಯುತ್ತಾರೆ. ಮೇಳಗಳಿಗೆ ಬರುವವರು ಎಲ್ಲೆಂದರಲ್ಲಿ ವಾಹನ ನಿಲ್ಲಿಸುವರು. ಇದರಿಂದ ಇಲ್ಲಿನ ನಿವಾಸಿಗಳು ಹಾಗೂ ಕಾಮಗಾರಿ ನಡೆಸುವವರಿಗೆ ಅಡ್ಡಿಯಾಗಿದೆ' ಎಂಬುದು ಸ್ಥಳೀಯ ನಿವಾಸಿ ಹನುಮಂತ ರಾಜೇಂದ್ರ ಅವರ ದೂರು.

'ಈ ಮೈದಾನವು ಕ್ರೀಡಾ ಚಟುವಟಿಕೆ ಹೊರತುಪಡಿಸಿ ಇತರ ಎಲ್ಲ ಉದ್ದೇಶಗಳಿಗೆ ಬಳಕೆಯಾಗುತ್ತಿದೆ. ಮೇಳಗಳು ನಡೆದರೆ ಅಂಗಳ ಸ್ವಚ್ಛಗೊಳಿಸುವ ಕೆಲಸ ಮಾಡುವುದಿಲ್ಲ. ಸ್ಥಳೀಯ ನಿವಾಸಿಗಳು ಮತ್ತು ಇಲ್ಲಿಗೆ ಆಡಲು ಬರುವವರು ಸ್ವಂತ ಖರ್ಚಿನಿಂದ ಸ್ವಚ್ಛತೆ ನಡೆಸಬೇಕಾಗುತ್ತದೆ' ಎಂದು ಕದಂಬ ಕ್ರೀಡಾ ಸಂಘದ ಸದಸ್ಯ ರಂಗಸ್ವಾಮಿ ಅಸಮಾಧಾನ ಹೊರಹಾಕಿದರು.

ಸುಧಾ, ಮಯೂರ ಓದಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE
IN THE COURT OF THE CITY CIVIL JUDGE AT BANGALORE
O.S.NO. 908 OF 2022
BETWEEN:
SMT.PREMAVATHIAged about 60 years, W/o late Gopalakrishna D/o shamanna @ shamannareddy & Sarojamma (late), w/o sri. G. Gopalakrishna (late), R/at, No. 40, 7th main, I Cross, Aravind Residency, appareddypalya, Indiranagar, Bengaluru-560038
PLAINTIFF
AND:
SMT. PUSHPHA & OTHERS.
DEFENDANTS
NOTICE/SUMMONS TO THE DEFENDANTS No.1,5,6,14,18 to 21
D1. SMT. PUSHPHA D/o D.N. Chandrappa & Sharadamma (Late), Aged About 50 Years, R/at.No.2, 8th Cross Vivekananda Road, Bangalore-560 016.
D5. SMT.ROOPA D/o Nanjappa Reddy (Late) Aged About 43 years, R/at. No. 165, 2nd floor, 9th Cross, 1st Stage, Indira Nagara, Bangalore-560038.
D6. SRI.NAVEEN S/o Nanjappa Reddy Late, Aged about 4lyears, R/at. No. 165, 2nd floor, 9th Cross, 1st Stage, Indira Nagara, Bangalore-560038.
D14. SMT.P.RADHAMMA D/o Narayanaiah,W/o Pasupathi Late Aged major R/at. No.2979, 5th Cross, Mariyappana Palya, Bangalore-560020
D18. SRI. K.M.VEERAPPA REDDY S/o Muni Reddy Late Aged major R/at. No. 412, 7th Cross, Domlur, Bangalore-560071
D19.SMT. JAYASHREE REDDY D/o B.H.Muni Reddy Late Aged major, R/at. No. 412, 7th Cross, Domlur, Bangalore- 560071
D20.SRI. R.NAGARAJA S/o Ramalinga Chetty Aged major, R/at. No.11, 7th Cross, 2nd Stage, Indirangara, Bangalore- 560038
D21.SRI. KALA NAGARAJA W/o R. Nagaraja Aged major,, R/at. No.11, 7th Cross, 2nd Stage, Indirangara, Bangalore- 560038
Whereas the above named plaintiff instituted a suit against you and other defendants for partition and separate possession and to allot the plaintiff I/5th share over the Suit schedule properties.
You are hereby summoned to appear before this Hon'ble court H1-3 at 11 .A.M. in person or through advocate/ pleader to answer questiOns to the same. Which the suit will be heard and determined as ex-parte.
SCHEDULE PROPERTIES
ITEM NO.1 :All that piece and parcel of the House comprising tiles and mortar Built House situated at Civil Station, Domluru Village, Anjaneya Temple Street Bangalore- 560071 House Municipal Number136/154 measuring to on extent of 32 x41 feet's as per Gift deed dated 28/10/1946 in Item No.6 and bounded on the:-
East by : Vacant Land and House of D.V. Rama Reddy, West by : Vacant Land and House of Sarakki Venkatashamappa, North by: House of D.V. Rama Reddy,Lakshmaiah and South by : Hi Road.
ITEM NO.2 :All that piece and parcel of the (Barren Field located near Domlur Village and Backyard and Half Portion in Vacant land for tying bullocks as per Partition deed dated 02/07/1942 in Item No.7) Back yard and Vacant Space for Tying Bullocks Situated at Domluru Village, Bangalore- 560071, land bearing No.28 measuring to on extent of 16 Guntas Converted Land, as per Gift deed dated 28/10/1946 in Item No.8 and bounded on the:-
East by : House and Vacant Space of SarakkiGurappaShanbhogaralnamthi Land, West by : Land of Narayanappa, North by : Lands of Ramaiah Gurappa and South by : Hi Road.
ITEM NO.3 :All that piece and parcel of the (Barren Field located near Domlur Village and Backyard and Half Portion in Vacant land for tying bullocksas per Partition deed dated 02/07/1942 in Item No.12) land bearing No.28 measuring to on extent of 8guntas Converted out of 16 Guntas, as per Release deed dated 13/06/1969and bounded on the:
East by: Land Fallen to the share of Shamanna and Sarojamma, West by: Land of D.N. Chandra Reddy portion property of 8 guntas, North by: Lands of Ramaiah property and South by: Cross Road.
Given under my hand and seal of the court on this 19/1/2023
Sd/- Venkatarama Reddy.V.
Advocate
No.1/ 1A, Ramvilla, Bose Enclave, 14th Cross, 11th Main, Wilson Garden, Bangalore-560030.

BUNTS' SANGHA
RNS VIDYANIKETAN
No.324, Bunt's Sangha Complex, Chord Road, Vijayanagar, Bengaluru-560 040
TENDER NOTIFICATION
Invites EOI from Technically Competent & Financially Stable Suppliers for the following.
1. Text books & Note Books for School (Interested parties may collect tender documents from the office)
2. Uniforms for School & College
3. ERP solutions for School & College
Interested parties may submit the quotations within 10 days.
For further details please contact Bunts' Sangha RNS Vidyaniketan School Office
Ph: 080-23398922
info@bsrnsv.com
-Convener

JOB OPPORTUNITIES

Engg/ Production Technical

REQUIRED
Multi brand senior auto mechanic & auto Electrician cum Ac technician For light vehicles Own passport
Contact- 7899267494
Whatsup- 0097477096900
Email- Riyazsrs1289@gmail.com

Marketing & Sales

BUYMYEV TECHNOLOGY PRIVATE LIMITED
WALK IN INTERVIEW ON 23rd, 24th JAN FOR SALES/ MARKETINGADDRESS: #117/26, Nile Towers, 2nd Floor, 4th Main, Ganganagar, Bengaluru- 560032
CONTACT :+91-8310317300 EMAIL ID: support@buymyev.in

Teachers/ Professors

ELITE PUBLIC SCHOOL, Kempegowda layout, Laggere, Bangalore, requires teachers, ENGLISH LITERATURE MA/ BA with B.Ed, COMPUTER SCIENCE: Mca. CHEMISTRY: M.Sc chemistry 9972223344 / 9447727526 Mail: elitepublicschool@yahoo.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಪುಷ್ಪ ಪ್ರದರ್ಶನವನ್ನು ಕುತೂಹಲದಿಂದ ಜನರು ವೀಕ್ಷಿಸಿದರು (ಎಡಚಿತ್ರ), ಸಿಂಗಪುರದ 'ಗಾರ್ಡನ್ ಬೈ ದಿ ಬೇ' ಪರಿಕಲ್ಪನೆ ಪ್ರಮುಖ ಆಕರ್ಷಣೆಯಾಗಿದೆ —ಪ್ರಜಾವಾಣಿ ಚಿತ್ರಗಳು ಕಿಶೋರ್ ಕುಮಾರ್ ಬೋಳಾರ್

ಹಸಿರೀಕರಣಕ್ಕೆ ₹100 ಕೋಟಿ ಮೀಸಲು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಹಸಿರೀಕರಣದ ವಿಸ್ತರಣೆ ಮತ್ತು ಪರಿಸರದ ಸಂರಕ್ಷಣೆಗೆ ಬಜೆಟ್‌ನಲ್ಲಿ ₹100 ಕೋಟಿ ಮೀಸಲಿಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ 213 ನೇ ಫಲಪುಷ್ಪ ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, 'ರಾಜ್ಯದಲ್ಲಿ ಸಸ್ಯ ಸಂಪತ್ತು ಹೆಚ್ಚಿಸಲು ಹಾಗೂ ಹಸಿರು ಪದರದ ವಿಸ್ತರಣೆ ಮಾಡುವ ಮೂಲಕ ಪರಿಸರ ಸಮತೋಲನ ಕಾಯ್ದುಕೊಳ್ಳುವುದಕ್ಕೆ ಈ ಪರಿಸರಕ್ಕೆ ಸಂಬಂಧಿಸಿದ ಬಜೆಟ್ ಬಳಕೆಯಾಗಲಿದೆ' ಎಂದರು.

'ರಾಜ್ಯದಲ್ಲಿ ತೋಟಗಾರಿಕೆ ವಿಸ್ತರಣೆಗೆ ಈ ಬಾರಿಯ ಬಜೆಟ್‌ನಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಇದಕ್ಕಾಗಿ ವಿಶೇಷ ಅನುದಾನವನ್ನು ನೀಡುವ ಚಿಂತನೆ ಇದೆ. ಇದರಿಂದ, ತೋಟಗಾರಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲು ಸಾಧ್ಯವಾಗಲಿದೆ' ಎಂದು ಹೇಳಿದರು.

ಫಲಪುಷ್ಪ ಪ್ರದರ್ಶನ: ಹೂವುಗಳಲ್ಲಿ ಅರಳಿದ ಬೆಂಗಳೂರಿನ ಇತಿಹಾಸ ಕಣ್ತುಂಬಿಕೊಂಡ ರಾಜಧಾನಿಯ ಜನ

ಲಾಲ್‌ಬಾಗ್: ಕಂಗೊಳಿಸಿದ ಹೂವಿನ ಲೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಣ್ಣ ಬಣ್ಣದ ಸಾವಿರಾರೂ ಪುಷ್ಪಗಳ ಮಧ್ಯ ಕೆಂಪೇಗೌಡ ನಿರ್ಮಿಸಿರುವ ಕೋಟೆ, ಅದರ ಮೇಲೆ, ಕಾಡುಮಲ್ಲೇಶ್ವರ ದೇವಸ್ಥಾನ, ಟಿಪ್ಪು ಬೇಸಿಗೆ ಅರಮನೆ, ಬೆಂಗಳೂರು ಅರಮನೆ ಕಣ್ಮನ ಸೆಳೆಯುತ್ತಿವೆ.

ತೋಟಗಾರಿಕೆ ಇಲಾಖೆ ಲಾಲ್ ಬಾಗ್‌ನ ಗಾಜಿನ ಮನೆಯಲ್ಲಿ ಗಣ ರಾಜ್ಯೋತ್ಸವ ಅಂಗವಾಗಿ ಹಮ್ಮಿ ಕೊಂಡಿರುವ 213ನೇ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಚಾಲನೆ ನೀಡಿದರು.

ಉದ್ಯಾನನಗರಿಯ 1500 ವರ್ಷಗಳ ಇತಿಹಾಸ ವಿಷಯಾಧಾರಿತ ಫಲಪುಷ್ಪ ಪ್ರದರ್ಶನದಲ್ಲಿ ವೃಷಭಾವತಿ ನದಿಯ ಮೂಲ, ಗಡಿ ಗೋಪುರ, ವಿಧಾನಸೌಧ, ಹೈಕೋರ್ಟ್ ಮತ್ತು ವಿಜ್ಞಾನ ತಂತ್ರಜ್ಞಾನದ ಕಲಾಕೃತಿಗಳು ಆಂಥೂರಿಯಂ, ಲಿಲ್ಲಿ, ಜೆರ್‌ಬೆರಾ, ಸೇವಂತಿಗೆ, ಆರ್ಕಿಡ್ಸ್, ಕಾರ್ನೇಷನ್ಸ್ ವಿವಿಧ ಬಗೆಯ 30 ಸಾವಿರ ಹೂವುಗಳ ಆಕರ್ಷಕ ಜೋಡಣೆ ನಡುವೆ ಪುಷ್ಪ ಪ್ರಿಯರನ್ನು ಕೈ ಬೀಸಿ ಕರೆಯುತ್ತಿವೆ.

ಹೂವಿನ ಜಲಪಾತ (ಮೆಗಾ ಫ್ಲೋರಲ್ ಫ್ಲೋ): ಗಾಜಿನ ಮನೆಯ ಕೇಂದ್ರ ಭಾಗದ ಹಿಂಬದಿಯಲ್ಲಿ 2.50 ಲಕ್ಷಕ್ಕೂ ಹೆಚ್ಚು ಸೇವಂತಿಗೆ ಹೂವುಗಳಿಂದ ಅರಳಿದ ಫ್ಲೋರಲ್ ಫ್ಲೋ ಪರಿಕಲ್ಪನೆಯಲ್ಲಿ 40 ಅಡಿ ಉದ್ದದ ಪುಷ್ಪಧಾರೆ ಗಮನ ಸೆಳೆಯಿತು.

ಜಾನೂರ್ ಕಲೆಗೆ ಫಿದಾ ಆದ ಪ್ರೇಕ್ಷಕರು: ಜಾನೂರ್ ಕಲೆಯ ಮೂಲಕ ಕಪ್ಪು ಸುಂದರಿ ಪ್ರತಿಮೆಗೆ ಎಳೆ ತೆಂಗಿನ ಗರಿಗಳಿಂದ ತೊಡಿಸಿದ್ದ ಉಡುಗೆ ರೂಪದರ್ಶಿಯರನ್ನು ನಾಚಿಸುವಂತಿತ್ತು. ಸೆಲ್ಫಿ ಬೂತ್, ಪಕ್ಷಿಗಳು ಹಾಗೂ ಇತರೆ ಕಲೆಗಳು ನೋಡುಗರ ಮನಸೂರೆಗೊಂಡವು. ಜನರು ತಮ್ಮ ಇಷ್ಟದ ಪ್ರದರ್ಶನಗಳ ಎದುರು ನಿಂತು ಫೋಟೊ ತೆಗೆಸಿಕೊಳ್ಳುತ್ತಿದ್ದರು.

ಕಣ್ಮನ ಸೆಳೆದ ಬೋನ್ಸಾಯ್ ಗಿಡಗಳು: ಗಾಜಿನ ಮನೆಯ ಬಲಭಾಗದಲ್ಲಿ 15ಕ್ಕೂ ಹೆಚ್ಚು ಆಕರ್ಷಕ ಬೋನ್ಸಾಯ್ ಗಿಡಗಳು ನೋಡುಗರ ಮನಸೆಳೆದವು.

ಗಾಜಿನ ಮನೆಯ ಹಿಂಭಾಗ ನಿರ್ಮಿಸಿರುವ ಕುಟೀರದಲ್ಲಿ ಹೊಯ್ಸಳ ಸಾಮ್ರಾಜ್ಯ, ವಿಜಯನಗರ ಸಾಮ್ರಾಜ್ಯ, ನಾಡಪ್ರಭು ಕೆಂಪೇಗೌಡರ ಆಳ್ವಿಕೆ, ಬಿಜಾಪುರ ಸುಲ್ತಾನರು, ಮರಾಠರು, ಮೊಘಲರು, ಚಿಕ್ಕದೇವರಾಜ ಒಡೆಯರ್, ಹೈದರ್ ಅಲಿ, ಟಿಪ್ಪು, ಮುಮ್ಮಡಿ ಕೃಷ್ಣರಾಜ ಒಡೆಯರ್, ಬ್ರಿಟಿಷ್ ಕಮಿಷನರ್ ಆಡಳಿತ ಮತ್ತು 1947ರಿಂದ ಇದುವರೆಗಿನ ಬೆಂಗಳೂರಿನ ಇತಿಹಾಸದ ಸಂಕ್ಷಿಪ್ತ ಚಿತ್ರಣವನ್ನು ಕಟ್ಟಿಕೊಡಲಾಗಿದೆ.

'ಉದ್ಯಾನನಗರಿಯ ಗತವೈಭವ ಮರುಕಳಿಸಲು ಕ್ರಮ'

'ಬೆಂಗಳೂರು ಈಗಾಗಲೇ ಉದ್ಯಾನನಗರಿ ಎಂದು ಹೆಸರುವಾಸಿಯಾಗಿದೆ. ಆದರೆ, ಅಭಿವೃದ್ಧಿ ಹೆಸರಿನಲ್ಲಿ ಈ ಹೆಸರು ಹಿಂದೆ ಸರಿದಿದೆ. ಮತ್ತೆ ಈ ಗತವೈಭವವನ್ನು ಮರುಕಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಲಾಲ್‌ಬಾಗ್, ಕಬ್ಬನ್ ಉದ್ಯಾನಗಳನ್ನು ಉತ್ತಮವಾಗಿಟ್ಟುಕೊಳ್ಳಬೇಕು. ಬಿಬಿಎಂಪಿ ನಿರ್ವಹಿಸುವ ಉದ್ಯಾನಗಳಲ್ಲಿ ಹೆಚ್ಚಿನ ಗಿಡ-ಮರಗಳನ್ನು ಬೆಳೆಸಬೇಕು.

ನಗರದ ಹೊರವಲಯದಲ್ಲಿ ಹೊಸ ಉದ್ಯಾನಗಳನ್ನು ನಿರ್ಮಿಸುವ ಮೂಲಕ ಉದ್ಯಾನನಗರಿ ಎಂಬ ಹೆಸರನ್ನು ಕಾಯಂಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ' ಎಂದು ಭರವಸೆ ನೀಡಿದರು.

ಪ್ರದರ್ಶನಕ್ಕೆ ಶುಕ್ರವಾರ ಭೇಟಿ ನೀಡಿದವರು	
ವಯಸ್ಕರು	5,169
ಮಕ್ಕಳು	286
ಒಟ್ಟು	5,455
ಸಂಗ್ರಹವಾದ ಹಣ	₹3.70ಲಕ್ಷ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೆಂಗಳೂರಿನ ಇತಿಹಾಸ ಪುಷ್ಪಗಳಲ್ಲಿ ಮರುಸೃಷ್ಟಿಸಲಾಗಿದ್ದು, ವಿದ್ಯಾರ್ಥಿಗಳು ಇದರ ಸಂಪೂರ್ಣ ಲಾಭ ಪಡೆದುಕೊಳ್ಳಬೇಕು.
ವಿಜಯ್ ಸಿಂಹ, ಪ್ರೇಕ್ಷಕ

ಬೆಂಗಳೂರಿನ ಪ್ರಾಚೀನ ದೇವಸ್ಥಾನದಿಂದ ಹಿಡಿದು ಇದು ವರೆಗಿನ ವಿಜ್ಞಾನ-ತಂತ್ರಜ್ಞಾನದ ಹಬ್ ಆಗಿ ಬೆಳೆದಿರುವ ನಗರವನ್ನು ಹೂವುಗಳಲ್ಲಿ ಅನಾವರಣ ಮಾಡಲಾಗಿದೆ.
ಅನುಪಮಾ ವೇದಾಚಲ, ಪ್ರೇಕ್ಷಕಿ

ಫಲಪುಷ್ಪ ಪ್ರದರ್ಶನವನ್ನು ಐದು ವರ್ಷಗಳಿಂದ ನೋಡುತ್ತಿದ್ದೇನೆ. ನಗರದ ಐತಿಹಾಸಿಕ ವೈಭವವನ್ನು ಪುಷ್ಪಗಳಲ್ಲಿ ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ.
ಭವ್ಯಾ, ಪ್ರೇಕ್ಷಕಿ

ಪೊಲೀಸ್ ನೋಟಿಸ್: ಅನಾರೋಗ್ಯವೆಂದ ಮೆಟ್ರೊ ಎಂ.ಡಿ

ಅಂಜುಂ ಪರ್ವೇಜ್

ಬೆಂಗಳೂರು: ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿಬಿದ್ದು ತಾಯಿ– ಮಗು ಮೃತಪಟ್ಟ ಪ್ರಕರಣದ ಪೊಲೀಸ್ ವಿಚಾರಣೆಗೆ ಗೈರಾಗಿರುವ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಅಂಜುಂ ಪರ್ವೇಜ್, ಅನಾರೋಗ್ಯ ಕಾರಣ ನೀಡಿ ಕಾಲಾವಕಾಶ ಕೋರಿದ್ದಾರೆ.

ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಪಿಲ್ಲರ್ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಬ್ಬಿಣದ ಚೌಕಟ್ಟು ಜ. 10ರಂದು ಬೆಳಿಗ್ಗೆ ಬೈಕ್ ಮೇಲೆ ಉರುಳಿಬಿದ್ದಿತ್ತು. ಬೈಕ್‌ನಲ್ಲಿ ಹೊರಟಿದ್ದ ತಾಯಿ ತೇಜಸ್ವಿನಿ ಸುಲಾಖೆ (28) ಹಾಗೂ ಎರಡೂವರೆ ವರ್ಷದ ಮಗು ವಿಹಾನ್ ಮೃತಪಟ್ಟಿದ್ದರು. ತೇಜಸ್ವಿನಿ ಅವರ ಪತಿ ಲೋಹಿತ್ ಕುಮಾರ್ ಸುಲಾಖೆ (33) ಹಾಗೂ ಮಗಳು ವಿಸ್ಮಿತಾ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು.

ಘಟನಾ ಸ್ಥಳಕ್ಕೆ ಪ್ರತ್ಯೇಕವಾಗಿ ಭೇಟಿ ನೀಡಿದ್ದ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಹಾಗೂ ಹೈದರಾಬಾದ್ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ತಜ್ಞರು ಮಾದರಿಗಳನ್ನು ಸಂಗ್ರಹಿಸಿದ್ದರು.

ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಬಿಎಂಆರ್‌ಸಿಎಲ್ ಎಂಜಿನಿಯರ್‌ಗಳನ್ನು ವಿಚಾರಣೆ ನಡೆಸಿದ್ದರು. ಅವರ ಹೇಳಿಕೆಗೆ ಪೂರಕವಾದ ಮಾಹಿತಿ ಸಂಗ್ರಹಿಸಲು ವ್ಯವಸ್ಥಾಪಕ ನಿರ್ದೇಶಕ ಅಂಜುಂ ಫರ್ವೇಜ್ ಅವರಿಗೆ ನೋಟಿಸ್ ನೀಡಿದ್ದರು. ಗುರುವಾರ (ಜ. 19) ವಿಚಾರಣೆಗೆ ಬರುವಂತೆ ಸೂಚಿಸಿದ್ದರು.

ಅನಾರೋಗ್ಯವೆಂದು ಹೇಳಿ ವಿಚಾರಣೆಗೆ ಗೈರಾಗಿರುವ ಫರ್ವೇಜ್, 'ಕೆಲದಿನ ಕಾಲಾವಕಾಶ ನೀಡಿ. ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ವಿಚಾರಣೆಗೆ ಬರುತ್ತೇನೆ' ಎಂದು ಪೊಲೀಸರನ್ನು ಕೋರಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿಯೊಬ್ಬರು, 'ಅಂಜುಂ ಫರ್ವೇಜ್ ಅವರಿಗೆ ಎರಡನೇ ಬಾರಿ ನೋಟಿಸ್ ನೀಡಲಾಗುವುದು' ಎಂದು ಹೇಳಿದರು.

'ಘಟನಾ ಸ್ಥಳದಲ್ಲಿ ಮಾದರಿ ಸಂಗ್ರಹಿಸಿ ಪರಿಶೀಲನೆ ನಡೆಸಿರುವ ಐಐಎಸ್ಸಿ ಹಾಗೂ ಐಐಟಿ ತಜ್ಞರ ವರದಿಗಾಗಿ ಕಾಯುತ್ತಿದ್ದೇವೆ' ಎಂದರು.

12 ವಾಹನ ಕಳ್ಳತನ: ಶಿಕ್ಷಕಿ ಸರ ಕದ್ದು ಸಿಕ್ಕಿಬಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ 12 ದ್ವಿಚಕ್ರ ವಾಹನಗಳನ್ನು ಕದ್ದು ಪರಾರಿಯಾಗಿದ್ದ ಇಬ್ಬರು ಆರೋಪಿಗಳು, ಹನುಮಂತನಗರದಲ್ಲಿ ಶಿಕ್ಷಕಿಯೊಬ್ಬರ ಚಿನ್ನದ ಸರ ಕಿತ್ತೊಯ್ದಿದ್ದ ಪ್ರಕರಣದಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ.

'ಹನುಮಂತನಗರ ನಿವಾಸಿಯಾದ 56 ವರ್ಷದ ಶಿಕ್ಷಕಿಯೊಬ್ಬರು, ತಮ್ಮ ಚಿನ್ನದ ಸರ ಕಳುವಾದ ಬಗ್ಗೆ ದೂರು ನೀಡಿದ್ದರು. ತನಿಖೆ ಕೈಗೊಂಡು ಪಂತರಪಾಳ್ಯದ ಸುನೀಲ್‌ಕುಮಾರ್ (37) ಹಾಗೂ ವಿನಾಯಕ್ ಬಡಾವಣೆಯ ಬಿ. ಶ್ರೀನಿವಾಸ್ (25) ಎಂಬುವರನ್ನು ಬಂಧಿಸಲಾಗಿದೆ. ಇವರಿಬ್ಬರು ಚಿನ್ನದ ಸರದ ಜೊತೆ ದ್ವಿಚಕ್ರ ವಾಹನಗಳನ್ನೂ ಕದಿಯುತ್ತಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿಗಳಿಂದ 27 ಗ್ರಾಂ ತೂಕದ ಚಿನ್ನದ ಸರ, 12 ದ್ವಿಚಕ್ರ ವಾಹನಗಳು ಹಾಗೂ ಜನರನ್ನು ಹೆದರಿಸಲು ಬಳಸುತ್ತಿದ್ದ ಚಾಕು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ದೂರುದಾರ ಶಿಕ್ಷಕಿ, ಜ. 4ರಂದು ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಐದನೇ ಮುಖ್ಯರಸ್ತೆಯಲ್ಲಿ ಅವರ ವಾಹನ ತಡೆದಿದ್ದ ಆರೋಪಿಗಳು, ಚಾಕು ತೋರಿಸಿ ಕೊಲೆ ಬೆದರಿಕೆಯೊಡ್ಡಿದ್ದರು. ನಂತರ, ಚಿನ್ನದ ಸರ ಕಿತ್ತುಕೊಂಡು ಸ್ಥಳದಿಂದ ಪರಾರಿಯಾಗಿದ್ದರು.'

'ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ವಾಹನ ಕದ್ದು ಪರಾರಿಯಾಗಿದ್ದ ಆರೋಪಿಗಳ ಬಗ್ಗೆ ಯಾವುದೇ ಸುಳಿವು ಇರಲಿಲ್ಲ. ಚಿನ್ನದ ಸರ ಕಳ್ಳತನ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಿದಾಗಲೇ, ವಾಹನ ಕಳ್ಳತನ ಪ್ರಕರಣಗಳು ಪತ್ತೆಯಾದವು. ಕೆಂಗೇರಿ, ಚನ್ನಮ್ಮನಕೆರೆ ಅಚ್ಚುಕಟ್ಟು, ಕೆ.ಜಿ. ನಗರ, ಗಿರಿನಗರ, ಬನಶಂಕರಿ ಹಾಗೂ ಹಲಸೂರು ಗೇಟ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಕದ್ದಿರುವುದಾಗಿ ಆರೋಪಿಗಳು ತಪ್ಪೊಪ್ಪಿ ಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

ದರೋಡೆ ಕಥೆ ಕಟ್ಟಿ ₹ 10 ಲಕ್ಷ ಮುಚ್ಚಿಟ್ಟಿದ್ದ

ಮುಂಗಡ ಹಣ ತನ್ನದಾಗಿಸಿಕೊಳ್ಳಲು ನಾಟಕ • ಪಾದರಕ್ಷೆ ಮಾರಾಟ ಏಜೆನ್ಸಿ ಮಾಲೀಕ ಬಂಧನ

ಪ್ರಜಾವಾಣಿ ವಾರ್ತೆ



ಮೂಲರಾಮ್

ಬೆಂಗಳೂರು: ಪಾದರಕ್ಷೆ ಮಾರಾಟ ಮಳಿಗೆಗಳ ವ್ಯಾಪಾರಿಗಳು ನೀಡಿದ್ದ ₹ 10 ಲಕ್ಷವನ್ನು ತನ್ನದಾಗಿಸಿಕೊಳ್ಳಲು ದರೋಡೆ ಕಥೆ ಕಟ್ಟಿ ಪೊಲೀಸರಿಗೆ ಸುಳ್ಳು ದೂರು ನೀಡಿದ್ದ ಆರೋಪಿ ಮೂಲರಾಮ್ ಎಂಬುವರನ್ನು ಚಾಮರಾಜಪೇಟೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಮೂಲರಾಮ್, ಮನವರ್ತಪೇಟೆಯಲ್ಲಿ ಮೆಟ್ರೊ ಪಾದರಕ್ಷೆ ಮಾರಾಟ ಏಜೆನ್ಸಿ ನಡೆಸುತ್ತಿದ್ದ. ಪಾದರಕ್ಷೆ ಪೂರೈಕೆ ಸಂಬಂಧ ನಗರದ ಹಲವು ಮಳಿಗೆಗಳ ವ್ಯಾಪಾರಿಗಳು ಮುಂಗಡ ಹಣ ನೀಡಿದ್ದರು. ಅದೇ ಹಣವನ್ನು ತನ್ನದಾಗಿಸಿಕೊಳ್ಳಲು ದರೋಡೆ ನಾಟಕವಾಡಿದ್ದ' ಎಂದು ಪೊಲೀಸರು ಹೇಳಿದರು.

'ಮೂಲರಾಮ್ ನೀಡಿದ್ದ ದೂರು ನಿಜವೆಂದು ನಂಬಿ ತನಿಖೆ ಆರಂಭಿಸಲಾಗಿತ್ತು. ಆದರೆ, ಘಟನೆ ನಡೆದ ಬಗ್ಗೆ ಯಾವುದೇ ಪುರಾವೆಗಳು ಸಿಕ್ಕಿರಲಿಲ್ಲ. ಆತನ ಮೇಲೆಯೇ ಅನುಮಾನ ಬಂದಿತ್ತು. ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡ. ಏಜೆನ್ಸಿಯ ಗೋದಾಮಿನಲ್ಲಿ ಹಣ ಮುಚ್ಚಿಟ್ಟಿದ್ದ ಸಂಗತಿ ಬಾಯ್ಬಿಟ್ಟಿದ್ದ. ನಂತರ, ಗೋದಾಮಿಗೆ ಹೋಗಿ ₹ 10 ಲಕ್ಷ ಜಪ್ತಿ ಮಾಡಲಾಗಿದೆ' ಎಂದರು.

ಸಾಲ ತೀರಿಸಲು ದರೋಡೆ ಕಥೆ: 'ಆರೋಪಿ ಹಲವರ ಬಳಿ ಸಾಲ ಮಾಡಿದ್ದ. ಆದರೆ, ಅದನ್ನು ತೀರಿಸಲು ಸಾಧ್ಯವಾಗಿರಲಿಲ್ಲ. ಸಾಲ ಕೊಟ್ಟವರು ಕಿರುಕುಳ ನೀಡಲಾರಂಭಿಸಿದ್ದರು. ಅವಾಗಲೇ ಆರೋಪಿ, ₹ 10 ಲಕ್ಷ ತನ್ನದಾಗಿಸಿಕೊಂಡು ಸಾಲ ತೀರಿಸಲು ದರೋಡೆ ಕಥೆ ಕಟ್ಟಿದ್ದ' ಎಂದು ಪೊಲೀಸರು ಹೇಳಿದರು.

ಇತ್ತೀಚೆಗೆ ಠಾಣೆಗೆ ಬಂದಿದ್ದ ಮೂಲರಾಮ್, ತಮ್ಮ ₹ 10 ಲಕ್ಷ ದರೋಡೆ ಆಗಿರುವುದಾಗಿ ದೂರು ನೀಡಿದ್ದರು. 'ಪಾದರಕ್ಷೆ ಅಂಗಡಿ ಮಾಲೀಕರು ನೀಡಿದ್ದ ಹಣ ತೆಗೆದುಕೊಂಡು ಬೈಕ್‌ನಲ್ಲಿ ಹೊರಟಿದ್ದೆ. ಮೈಸೂರು ರಸ್ತೆಯ ಸಿರ್ಸಿ ವೃತ್ತ ಬಳಿ ನನ್ನನ್ನು ಅಡ್ಡಗಟ್ಟಿದ್ದ ದುಷ್ಕರ್ಮಿಗಳು, ಸಿಸಿಬಿ ಪೊಲೀಸರೆಂದು ಹೇಳಿ ಹಣ ಕಿತ್ತುಕೊಂಡಿದ್ದರು. ತಮ್ಮ ಬಳಿಯ ಬ್ಲೇಡ್‌ನಿಂದ ಕೈ ಬೆರಳಿಗೆ ಗಾಯ ಮಾಡಿ ಪರಾರಿಯಾಗಿದ್ದಾರೆ' ಎಂಬುದಾಗಿ ಮೂಲರಾಮ್ ದೂರಿನಲ್ಲಿ ತಿಳಿಸಿದ್ದರು.'

'ಬಂಧನ ಬಳಿಕ ನಿಜ ಸಂಗತಿ ಬಾಯ್ಬಿಟ್ಟಿರುವ ಮೂಲರಾಮ್, 'ಬ್ಯಾಗ್‌ನಲ್ಲಿದ್ದ ₹ 10 ಲಕ್ಷವನ್ನು ಗೋದಾಮಿನಲ್ಲಿ ಇರಿಸಿದ್ದೆ. ನಂತರ, ಬ್ಯಾಗ್‌ನಲ್ಲಿ ಹಳೇ ಬಟ್ಟೆ ತುಂಬಿಕೊಂಡು ಸಿರ್ಸಿ ವೃತ್ತಕ್ಕೆ ಹೋಗಿದ್ದೆ. ಖಾಲಿ ಜಾಗದಲ್ಲಿ ಬ್ಯಾಗ್ ಬಿಸಾಕಿ, ನನ್ನ ಬಳಿಯ ಬ್ಲೇಡ್‌ನಿಂದ ಕೈ ಬೆರಳಿಗೆ ಇರಿದುಕೊಂಡಿದ್ದೆ. ನಂತರವೇ ಠಾಣೆಗೆ ಬಂದು ಸುಳ್ಳು ದೂರು ನೀಡಿದ್ದೆ' ಎಂದು ತಪ್ಪೊಪ್ಪಿಕೊಂಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಬೈಕ್ ಅಡ್ಡಗಟ್ಟಿ ಸುಲಿಗೆ: ₹ 62 ಲಕ್ಷ ಜಪ್ತಿ

ಬೆಂಗಳೂರು: ಚಿನ್ನಾಭರಣ ಮಳಿಗೆಯೊಂದರ ಕೆಲಸಗಾರರನ್ನು ಅಡ್ಡಗಟ್ಟಿ ಹಣ ಸುಲಿಗೆ ಮಾಡಿದ್ದ ಮೂವರು ಆರೋಪಿಗಳನ್ನು ಕಲಾಸಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಕಲಾಸಿಪಾಳ್ಯದ ಮಹಮ್ಮದ್ ಜಿಲಾನ್ (27), ಶಿವಾಜಿನಗರದ ಅಬ್ದುಲ್ ವಹಾಬ್ ಅಲಿಯಾಸ್ ಕಮರ್ (35) ಹಾಗೂ ಪೃಥ್ವಿಕ್ (20) ಬಂಧಿತರು. ಇವರಿಂದ ₹ 62 ಲಕ್ಷ ಜಪ್ತಿ ಮಾಡಲಾಗಿದೆ. ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು, ಆತನ ಬಳಿಯೂ ಮತ್ತಷ್ಟು ಹಣವಿರುವ ಮಾಹಿತಿ ಇದೆ' ಎಂದು ಪೊಲೀಸರು ಹೇಳಿದರು.

'ಚಿನ್ನಾಭರಣ ವ್ಯಾಪಾರಿ ಬಳಿ ಕೆಲಸ ಮಾಡುತ್ತಿದ್ದ ವರುಣ್ ಸಿಂಗ್ ಪನ್ವಾರ್ ಹಾಗೂ ಕೃಷ್ಣಪ್ಪ, ಹಲವು ಮಳಿಗೆಗಳಿಂದ ಸಂಗ್ರಹಿಸಿದ್ದ ಹಣವನ್ನು ತೆಗೆದುಕೊಂಡು ಬೈಕ್‌ನಲ್ಲಿ ಹೊರಟಿದ್ದರು. ಅವರನ್ನು ಅಡ್ಡಗಟ್ಟಿದ್ದ ಆರೋಪಿಗಳು, ಹಣ ಸುಲಿಗೆ ಮಾಡಿ ಪರಾರಿಯಾಗಿದ್ದರು. ಈ ಸಂಬಂಧ ವರುಣ್ ಹಾಗೂ ಕೃಷ್ಣಪ್ಪ ದೂರು ನೀಡಿದ್ದರು.'

'ದೂರು ನೀಡುವ ವೇಳೆ ಕೇವಲ ₹ 10 ಲಕ್ಷ ಸುಲಿಗೆ ಆಗಿರುವುದಾಗಿ ತಪ್ಪು ಮಾಹಿತಿ ನೀಡಿದ್ದರು. ಆರೋಪಿಗಳನ್ನು ಬಂಧಿಸಿದಾಗ, ₹ 62 ಲಕ್ಷ ಪತ್ತೆಯಾಗಿದೆ. ಈ ಬಗ್ಗೆ ಪುನಃ ಹೇಳಿಕೆ ನೀಡಿರುವ ದೂರುದಾರರು, 'ದಾಖಲೆ ಸಮೇತ ಲೆಕ್ಕ ನೀಡಲು ಹಣದ ಬಗ್ಗೆ ತಪ್ಪು ಮಾಹಿತಿ ನೀಡಲಾಗಿತ್ತು' ಎಂದಿದ್ದಾರೆ. ಹಣದ ಲೆಕ್ಕದ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ತಿಳಿಸಿದರು.

ಅಪರಾಧ ಸುದ್ದಿಗಳು

ಬಿಎಂಟಿಸಿ: ವಜಾ ನೌಕರರ ಮರು ನೇಮಕ

ಬೆಂಗಳೂರು: ಮುಷ್ಕರದಲ್ಲಿ ಭಾಗಿಯಾಗಿ ಸೇವೆಯಿಂದ ವಜಾಗೊಂಡಿದ್ದ 54 ಬಿಎಂಟಿಸಿ (ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ) ನೌಕರರಿಗೆ ಶುಕ್ರವಾರ ಮರುನೇಮಕ ಪತ್ರ ನೀಡಲಾಯಿತು.

ಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಸಚಿವ ಆರ್.ಶ್ರೀರಾಮುಲು ಆದೇಶ ಪತ್ರ ಹಸ್ತಾಂತರಿಸಿದರು. 2021ರ ಏಪ್ರಿಲ್‌ನಲ್ಲಿ ವೇತನ ಪರಿಷ್ಕರಣೆಗಾಗಿ ನಡೆದ ಮುಷ್ಕರದಲ್ಲಿ ಪಾಲ್ಗೊಂಡಿದ್ದ ನೌಕರರನ್ನು ಸೇವೆಯಿಂದ ವಜಾಗೊಳಿಸಲಾಗಿತ್ತು. ಅವರನ್ನು ಮರು ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂದು ಬಿಎಂಟಿಸಿ ಪ್ರಕಟಣೆ ತಿಳಿಸಿದೆ.

ಮಹಿಳೆ- ಪುರುಷ ನಾಪತ್ತೆ: ಠಾಣೆ ಮೆಟ್ಟಿಲೇರಿದ ಅವರ ಪತಿ- ಪತ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೇ ಕಟ್ಟಡದ ನೆಲ ಹಾಗೂ ಮೊದಲ ಮಹಡಿಯಲ್ಲಿ ಪ್ರತ್ಯೇಕವಾಗಿ ವಾಸವಿದ್ದ ಮಹಿಳೆ–ಪುರುಷ ಏಕಕಾಲದಲ್ಲಿ ನಾಪತ್ತೆಯಾಗಿದ್ದು, ಹುಡುಕಿಕೊಡುವಂತೆ ಅವರಿಬ್ಬರ ಪತಿ– ಪತ್ನಿ ಪೊಲೀಸರಿಗೆ ದೂರು ನೀಡಿದ್ದಾರೆ.

'ಮಾರುತಿ ನಗರದಲ್ಲಿ ನೆಲೆಸಿದ್ದ ಮಹಿಳೆ ಹಾಗೂ ಪುರುಷ, 2022ರ ಡಿಸೆಂಬರ್ 9ರಂದು ಮನೆಯಿಂದ ಹೋದವರು ವಾಪಸು ಬಂದಿಲ್ಲ. ಈ ಬಗ್ಗೆ ಇವರಿಬ್ಬರ ಪತಿ– ಪತ್ನಿ, ಜ್ಞಾನಭಾರತಿ ಠಾಣೆಗೆ ಪ್ರತ್ಯೇಕ ದೂರು ನೀಡಿದ್ದಾರೆ. ಅದರನ್ವಯ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಮಗಳ ಜೊತೆ ಮಹಿಳೆ ನಾಪತ್ತೆ: '22 ವರ್ಷದ ಮಹಿಳೆ, ಪತಿ ಹಾಗೂ ಮಗಳ ಜೊತೆ ನೆಲ ಮಹಡಿಯ ಮನೆಯಲ್ಲಿ ವಾಸವಿದ್ದರು. ಡಿ. 9ರಂದು ಬೆಳಿಗ್ಗೆ ಪತಿ ಕೆಲಸಕ್ಕೆ ಹೋಗಿದ್ದರು. ಪತಿಗೆ ಕರೆ ಮಾಡಿದ್ದ ಮಹಿಳೆ, ಮಗಳನ್ನು ಶಾಲೆಗೆ ಬಿಡಲು ಹೊರಟಿರುವುದಾಗಿ ಹೇಳಿದ್ದರು. ಇದಾದ ನಂತರ ಅವರು ವಾಪಸು ಬಂದಿಲ್ಲ. ತಮ್ಮೊಂದಿಗೆ ಮಗಳನ್ನೂ ಕರೆದುಕೊಂಡು ಹೋಗಿದ್ದಾರೆ' ಎಂದು ಮಹಿಳೆಯ ಪತಿ ದೂರಿನಲ್ಲಿ ತಿಳಿಸಿದ್ದಾರೆ.

'ಮಹಿಳೆಯು ತಮ್ಮ ಮೊಬೈಲ್ ಸ್ವಿಚ್ ಆಫ್ ಮಾಡಿ, ಮನೆಯಲ್ಲೇ ಇಟ್ಟು ಹೋಗಿದ್ದಾರೆ. ಎಲ್ಲ ಕಡೆ ಹುಡುಕಿದರೂ ಯಾವುದೇ ಸುಳಿವು ಸಿಕ್ಕಿಲ್ಲ' ಎಂದೂ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸ್ಯಾಂಟ್ರೊ ಕಾರಿನಲ್ಲಿ ಹೋದರು: '37 ವರ್ಷದ ಪುರುಷ, ಪತ್ನಿ ಹಾಗೂ ಇಬ್ಬರು ಮಕ್ಕಳ ಜೊತೆ ಮೊದಲ ಮಹಡಿ ಮನೆಯಲ್ಲಿ ವಾಸವಿದ್ದರು. ಡಿ. 9ರಂದು ಸ್ಯಾಂಟ್ರೊ ಕಾರಿನಲ್ಲಿ ಹೋದವರು ವಾಪಸು ಮನೆಗೆ ಬಂದಿಲ್ಲ' ಎಂದು ಪುರುಷನ ಪತ್ನಿ ದೂರಿನಲ್ಲಿ ತಿಳಿಸಿದ್ದಾರೆ.

ಡಿಸಿಪಿ ಭೇಟಿ: 'ನಾಪತ್ತೆಯಾಗಿರುವ ಮಹಿಳೆ–ಪುರುಷ ಅವರನ್ನು ಬೇಗನೇ ಹುಡುಕಿಕೊಡಿ' ಎಂದು ಒತ್ತಾಯಿಸಿ ಅವರಿಬ್ಬರ ಪತಿ–ಪತ್ನಿ ಡಿಸಿಪಿ ಲಕ್ಷ್ಮಣ ನಿಂಬರಗಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

₹ 30 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಬೆಂಗಳೂರು: ಕೇರಳದಿಂದ ಗಾಂಜಾ ತಂದು ನಗರದಲ್ಲಿ ಮಾರಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ಕೇರಳದ ತ್ರಿಶೂರ್ ಜಿಲ್ಲೆಯ ಆನಂದು (29), ಇ.ಯು. ಬಾಬು (4) ಬಂಧಿತರು. ಇವರಿಬ್ಬರಿಂದ ₹ 30 ಲಕ್ಷ ಮೌಲ್ಯದ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆನಂದು ಹಾಗೂ ಬಾಬು, ಓಮ್ನಿ ವಾಹನದಲ್ಲಿ ಗಾಂಜಾ ಪೊಟ್ಟಣಗಳನ್ನು ಇಟ್ಟುಕೊಂಡು ಜ. 17ರಂದು ಸಂಜೆ ಎಚ್‌ಬಿಆರ್ ಬಡಾವಣೆಗೆ ಬಂದಿದ್ದರು. ಗಾಂಜಾ ಖರೀದಿಸಲು ಬರುತ್ತಿದ್ದ ವ್ಯಕ್ತಿಯೊಬ್ಬರಿಗಾಗಿ ರಸ್ತೆ ಬದಿಯಲ್ಲಿ ಕಾಯುತ್ತಿದ್ದರು. ಈ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಯಿತು' ಎಂದು ಪೊಲೀಸರು ಹೇಳಿದರು.

ರಥೋತ್ಸವ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ಶುಕ್ರವಾರ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರೆಯ ಪ್ರಯುಕ್ತ ನಡೆದ ರಥೋತ್ಸವದಲ್ಲಿ ಅಪಾರ ಜನರು ಪಾಲ್ಗೊಂಡರು.
ಪ್ರಜಾವಾಣಿ ಚಿತ್ರ: ಅನೂಪ್ ರಾಘ. ಟಿ.

ಜೈಪುರ ಸಾಹಿತ್ಯೋತ್ಸವದ 'ಪ್ರಜಾಪ್ರಭುತ್ವ' ಗೋಷ್ಠಿಯಲ್ಲಿ ಶಶಿ ತರೂರ್

ಸರ್ಕಾರದ ನೋಟಿಸ್ ಬೋರ್ಡ್ ಆದ ಸಂಸತ್

ಪ್ರಜಾವಾಣಿ ವಾರ್ತೆ

ಶಶಿ ತರೂರ್

ಜೈಪುರ: ಕೇಂದ್ರ ಸರ್ಕಾರವು ಸಂಸತ್ತನ್ನು ತನ್ನ ನೋಟಿಸ್ ಬೋರ್ಡ್ ಎನ್ನುವಂತೆ ಸೀಮಿತ ಮಾಡಿಬಿಟ್ಟಿದೆ ಎಂದು ರಾಜಕಾರಣಿ, ಸಾಹಿತಿ ಶಶಿ ತರೂರ್ ವಿಷಾದಿಸಿದರು.

ಜೈಪುರ ಸಾಹಿತ್ಯೋತ್ಸವದ ಎರಡನೇ ದಿನವಾದ ಶುಕ್ರವಾರ ಅವರು 'ಸಸ್ಟೇನಿಂಗ್ ಡೆಮಾಕ್ರಸಿ; ನರ್ಚರಿಂಗ್ ಡೆಮಾಕ್ರಸಿ' (ಪ್ರಜಾಪ್ರಭುತ್ವದ ಉಳಿವು, ಪೋಷಣೆ) ಗೋಷ್ಠಿಯಲ್ಲಿ ತ್ರಿಪುರ್ ದಮನ್ ಸಿಂಗ್ ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದರು.

ಹಿಂದೆ 1962ರಲ್ಲಿ ಚೀನಾ ಎದುರು ಯುದ್ಧ ನಡೆದ ಸಂದರ್ಭದಲ್ಲೂ ಸಂಸತ್‌ನಲ್ಲಿ ರಾಜಕಾರಣಿಗಳು ತಾವು ಮಾಡಿದ ಕೆಲಸಗಳನ್ನು ಪ್ರಶ್ನಿಸುವ ಪರಿಪಾಟವಿತ್ತು. ಗುಲಾಬ್ ನಬಿ ಆಜಾದ್ ಅವರು ಆರೋಗ್ಯ ಸಚಿವಾಗಿದ್ದಾಗ ಒಂದು ಮಸೂದೆ ಕುರಿತು ಪ್ರಶ್ನೆ ಎದ್ದಿದ್ದಕ್ಕೆ, ಮತ್ತೆ ಕರಡನ್ನೇ ತಿದ್ದಿಕೊಂಡು ಬರಲು ಒಪ್ಪಿದ್ದರು. ಈಗಿನ ಸರ್ಕಾರ ತನಗೆ ಏನು ಹೇಳಬೇಕಿದೆಯೊ, ಮಾಡಬೇಕಿದೆಯೊ ಅದನ್ನಷ್ಟೆ ಸಂಸತ್‌ನಲ್ಲಿ ಮಾಡುತ್ತಿದೆ. ಭಿನ್ನಮತ ಎನ್ನುವುದು ಸಾಧ್ಯವಿಲ್ಲವಾಗಿದೆ. ವಿಪ್ ನೀಡಿ, ಕಟ್ಟಿಹಾಕಿ ತಮಗೆ ಏನು ಬೇಕೋ ಅದನ್ನೇ ಮಾಡಿಕೊಳ್ಳುತ್ತಾರೆ ಎಂದು ಬೇಸರದಿಂದ ಹೇಳಿದರು.

ಸತ್ಯಾಗ್ರಹ, ಪ್ರತಿಭಟನೆ ಹಿಂದೆ ವಸಾಹತುಶಾಹಿಗಳ ವಿರುದ್ಧದ ಅಸ್ತ್ರವಾಗಿದ್ದವು. ಅವನ್ನು ಸ್ಥಳೀಯ ಸಮಸ್ಯೆಯಾಗಿ ಬಗೆಹರಿಸಿಕೊಳ್ಳಲು ಸಂಸತ್ತನ್ನು ಬಳಸಿಕೊಳ್ಳುವುದು ಅಂಬೇಡ್ಕರ್ ಅವರಿಗೆ ಇಷ್ಟವಿರಲಿಲ್ಲ. ಸದನದಲ್ಲಿ ಆರೋಗ್ಯಕರ ಸಂವಾದವನ್ನು ಅವರು ಬಯಸಿದ್ದರು. ಜವಾಹರಲಾಲ್ ನೆಹರೂ ಕೂಡ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಉಳ್ಳವರೇ ಆಗಿದ್ದರು ಎಂದರು.

ಸಮಸ್ಯೆಗಳನ್ನು ಸರ್ಕಾರದ ಯೋಜನೆಗಳಿಂದ ಬಗೆಹರಿಸಿಕೊಳ್ಳಲು ಒತ್ತಡ ತರುವುದೇ ಸರಿಯಾದ ಕ್ರಮ. ಜನರ ನಡುವೆ ಸುಖಾಸುಮ್ಮನೆ ಹೋರಾಡಿದರಷ್ಟೆ ಸಾಲುವುದಿಲ್ಲ. ಅಣ್ಣಾ ಹಜಾರೆ ಚಳವಳಿ ಜೋರಾಗಿತ್ತಾದರೂ ಅದು ಒಂದು ಉತ್ತಮ ಯೋಜನೆ ರೂಪುಗೊಳ್ಳಲು ಇಂಬುಗೊಡಲಿಲ್ಲ ಎಂದು ಉದಾಹರಿಸಿದರು.

ಟರ್ಕಿ, ಹಂಗರಿ, ಬ್ರೆಜಿಲ್ ಮೊದಲಾದ ದೇಶಗಳಲ್ಲಿ ಪ್ರಜಾಪ್ರಭುತ್ವದ ಗುಣಮಟ್ಟದಲ್ಲಿ ಕುಸಿತವಾಗಿದೆ. ಭಾರತದ ಸ್ಥಿತಿಯೂ ಅದೇ ಆಗಿದೆ ಎಂದು ವಿಶ್ವದ ಹಲವು ವಿದ್ವಾಂಸರು ಅಧ್ಯಯನ ಮಾಡಿ ತಿಳಿಸಿದ್ದಾರೆ. ನರೇಂದ್ರ ಮೋದಿ ಸೇರಿದಂತೆ ಕೆಲವು ದೇಶಗಳ ನಾಯಕರು ಧರ್ಮದ ಆಧಾರದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಬಿಂಬಿಸಿಕೊಳ್ಳುತ್ತಿದ್ದಾರೆ ಎಂದು ಅವರು ವಿಶ್ಲೇಷಿಸಿದರು.

ನೊಬೆಲ್ ಪುರಸ್ಕೃತರ ಅಕ್ಷರ ಪ್ರಸವ

ತಾಂಜೇನಿಯಾದಲ್ಲಿ ಹುಟ್ಟಿ, ಯುರೋಪ್ ವಸಾಹತೀಕರಣದ ಸಂದರ್ಭದಲ್ಲಿ ನಿರಾಶ್ರಿತರಾಗಿ ಇಂಗ್ಲೆಂಡ್ ಸೇರಿದ ಬಾಲ್ಯದ ದಿನಗಳನ್ನು ನೊಬೆಲ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಅಬ್ದುಲ್‌ರಜಾಕ್ ಗುರ್ನಾ ತಮ್ಮ ಬದುಕು ಹಾಗೂ ಬರಹ ಕುರಿತ ಸಂವಾದದಲ್ಲಿ ಶುಕ್ರವಾರ ನೆನಪಿಸಿಕೊಂಡರು.

ಯಾವುದೇ ಕುಶಲ ಕೆಲಸದ ಅರಿವಿಲ್ಲದ, ಕಷ್ಟ ಅನುಭವಿಸಿದ್ದವರ ಸ್ಥಿತಿಯನ್ನೇ ಕಂಡಿರದೇ ಇದ್ದ ತಮ್ಮ ಬಾಲ್ಯದಿಂದ ಯೌವನದ ದಿನಗಳಲ್ಲಿ ಬರೆಯುವ ತುಡಿತ ಮೂಡಿದ್ದನ್ನು ಅವರು ಹೇಳಿಕೊಂಡರು. ಮೊದಲು ಕರಡು ಪ್ರತಿಯ ರೂಪದಲ್ಲಿದ್ದ ಹಾಳೆಗಳು ಆಮೇಲೆ ಕೃತಿಯಾದ ಸುಖವನ್ನೂ ಮೆಲುಕು ಹಾಕಿದರು. ಮೊದಲ ಕೃತಿ ಪ್ರಸವಕ್ಕೆ ವರ್ಷಗಟ್ಟಲೆ ಕಾಯಬೇಕಾಗಿ ಬಂದದ್ದನ್ನು, ಬರೆಯುವುದು ಸುಖ– ಉತ್ಕಟತೆಯಾದರೆ ಕೊನೆಯವರೆಗೆ ಉಳಿಯುತ್ತದೆ ಎನ್ನುವುದನ್ನೂ ಹಂಚಿಕೊಂಡರು.

ನಕಲಿ ದಾಖಲೆ ಸೃಷ್ಟಿಸಿ ಶಾಸಕರ ನಿವೇಶನ ಕಬಳಿಕೆ?

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಶಾಸಕ ಗೂಳಿಹಟ್ಟಿ ಡಿ. ಶೇಖರ್ ಅವರ ಬಿಡಿಎ ನಿವೇಶನವನ್ನು ಕಬಳಿಸಲಾಗಿದ್ದು, ಈ ಸಂಬಂಧ ಸಂಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಿವೇಶನ ಕಬಳಿಕೆ ಸಂಬಂಧ ಶಾಸಕ ಗೂಳಿಹಟ್ಟಿ ಶೇಖರ್ ಅವರು ದೂರು ನೀಡಿದ್ದಾರೆ. ರಾಮಮೂರ್ತಿ ಅಲಿಯಾಸ್ ಮಣಿವಣ್ಣನ್, ಅನುರಾಧಾ, ದೀಪಿಕಾ ಸೇರಿ 8 ಜನರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗೂಳಿಹಟ್ಟಿ ಅವರಿಗೆ 2015ರಲ್ಲಿ ಆರ್.ಎಂ.ವಿ 2ನೇ ಹಂತದಲ್ಲಿ 50x80 ಚದರ ಅಡಿ ಅಳತೆಯ ನಿವೇಶನ ಮಂಜೂರಾಗಿತ್ತು. ಇದೇ ನಿವೇಶನ ಹೆಸರಿನಲ್ಲಿ ಆರೋಪಿಗಳು ನಕಲಿ ದಾಖಲೆ ಸೃಷ್ಟಿಸಿದ್ದಾರೆ' ಎಂದು ತಿಳಿಸಿವೆ.

ವಿಷಾದ ವ್ಯಕ್ತಪಡಿಸಿದ ಸಿಇಒ ಸುಂದರ್ ಪಿಚ್ಚೈ

ಗೂಗಲ್: 12 ಸಾವಿರ ನೌಕರರ ವಜಾ

ನ್ಯೂಯಾರ್ಕ್ (ಪಿಟಿಐ): ಗೂಗಲ್ ಕಂಪನಿಯು ಒಟ್ಟು 12 ಸಾವಿರ ನೌಕರರನ್ನು ಕೆಲಸದಿಂದ ತೆಗೆಯುವುದಾಗಿ ಹೇಳಿದೆ. ಜಾಗತಿಕವಾಗಿ ಆರ್ಥಿಕ ಹಿಂಜರಿತ ಎದುರಾಗಬಹುದು ಎಂಬ ಭೀತಿಯ ನಡುವೆ ನೌಕರರನ್ನು ಕೆಲಸದಿಂದ ತೆಗೆಯುತ್ತಿರುವ ತಂತ್ರಜ್ಞಾನ ಕಂಪನಿಗಳ ಸಾಲಿಗೆ ಈಗ ಗೂಗಲ್ ಕೂಡ ಸೇರಿದೆ.

'ತುಸು ತಾಪತ್ರಯದ ಸುದ್ದಿಯೊಂದನ್ನು ನಾನು ಹಂಚಿಕೊಳ್ಳಬೇಕಿದೆ. ನಾವು ನಮ್ಮ ನೌಕರರ ಸಂಖ್ಯೆಯನ್ನು 12 ಸಾವಿರದಷ್ಟು ಕಡಿಮೆ ಮಾಡಲು ನಿರ್ಧರಿಸಿದ್ದೇವೆ' ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸುಂದರ್ ಪಿಚ್ಚೈ ಅವರು ನೌಕರರಿಗೆ ಬರೆದಿರುವ ಇ-ಮೇಲ್‌ನಲ್ಲಿ ಹೇಳಿದ್ದಾರೆ.

ಉದ್ಯೋಗ ಕಡಿತವು ಎಲ್ಲ ಪ್ರದೇಶಗಳಿಗೂ ಅನ್ವಯವಾಗುತ್ತದೆ ಎಂದು ಅವರು ತಿಳಿಸಿದ್ದಾರೆ. 'ಕಳೆದ ಎರಡು ವರ್ಷಗಳಲ್ಲಿ ನಾವು ನಾಟಕೀಯ ಬೆಳವಣಿಗೆಯ ಸಂದರ್ಭಗಳನ್ನು ನೋಡಿದ್ದೇವೆ. ಆ ಬೆಳವಣಿಗೆಗೆ ಅನುಗುಣವಾಗಿ ಹಾಗೂ ಅದಕ್ಕೆ ಇನ್ನಷ್ಟು ಇಂಬು ಕೊಡುವ ಉದ್ದೇಶದಿಂದ ನಾವು ಅಂದಿನ ಆರ್ಥಿಕ ವಾಸ್ತವಗಳಿಗೆ ಹೊಂದಿಕೆಯಾಗುವಂತೆ ನೇಮಕಾತಿ ನಡೆಸಿದೆವು. ಆದರೆ ಇಂದಿನ ವಾಸ್ತವ ಬೇರೆ' ಎಂದು ಪಿಚ್ಚೈ ಅವರು ಇ-ಮೇಲ್‌ನಲ್ಲಿ ವಿವರಿಸಿದ್ದಾರೆ.

ಈ ವಾರದ ಆರಂಭದಲ್ಲಿ ಮೈಕ್ರೊಸಾಫ್ಟ್ ಕಂಪನಿಯು ತಾನು 10 ಸಾವಿರ ನೌಕರರನ್ನು ಕೆಲಸದಿಂದ ತೆಗೆಯುತ್ತಿರುವುದಾಗಿ ಪ್ರಕಟಿಸಿತು. ಅಮೆಜಾನ್ ಕೂಡ 18 ಸಾವಿರ ನೌಕರರನ್ನು ಕೆಲಸದಿಂದ ತೆಗೆಯುತ್ತಿದೆ. ಮೆಟಾ ಕಂಪನಿಯು 11 ಸಾವಿರ ಜನರನ್ನು ವಜಾಗೊಳಿಸುತ್ತಿದೆ.

'ಅಮೆರಿಕದಲ್ಲಿ ನಾವು ಸಂಬಂಧಿಸಿದ ಉದ್ಯೋಗಿಗಳಿಗೆ ಪ್ರತ್ಯೇಕ ಇ-ಮೇಲ್ ಕಳುಹಿಸಿದ್ದೇವೆ. ಇತರ ದೇಶಗಳಲ್ಲಿ ಅಲ್ಲಿನ ಕಾನೂನು ಹಾಗೂ ಪದ್ಧತಿಗಳ ಕಾರಣದಿಂದಾಗಿ ಈ ಪ್ರಕ್ರಿಯೆಯು ವಿಳಂಬವಾಗಲಿದೆ' ಎಂದು ಪಿಚ್ಚೈ ತಿಳಿಸಿದ್ದಾರೆ. ಉದ್ಯೋಗ ಕಡಿತಕ್ಕೆ ಅವರು ತೀವ್ರ ವಿಷಾದವನ್ನೂ ವ್ಯಕ್ತಪಡಿಸಿದ್ದಾರೆ. ಈ ರೀತಿ ಆಗುತ್ತಿರುವುದಕ್ಕೆ ತಾವು ಸಂಪೂರ್ಣ ಹೊಣೆ ಹೊರುವುದಾಗಿ ಹೇಳಿದ್ದಾರೆ.

ಮಸ್ತ್ ಲುಕ್ ನೀಡುವ ಸ್ಲೀವ್ಸ್

ಫ್ಯಾಷನ್

ಜಾನಕಿ ಎಸ್.

ಫ್ಯಾಷನ್ ಪ್ರಿಯರಿಗೆ ಧರಿಸುವ ಯಾವ ಉಡಗೆಯಾದರು ಸರಿ, ಅದು ಹೊಸ ಶೈಲಿಯದ್ದಾಗಿರಬೇಕು. ಅದರಲ್ಲೂ ಸೀರೆ ವಿಷಯದಲ್ಲಿ, ಅದು ಎಲ್ಲರಿಗೂ ಒಪ್ಪುವಂಥದ್ದಾಗಿರಬೇಕು. ಆ ಸೀರೆಗೆ ಖುಷಿಕೊಡುವ ಮ್ಯಾಚಿಂಗ್ ರವಿಕೆ ಇದ್ದರೆ ಸಿಕ್ಕಾಪಟ್ಟೆ ಖುಷಿ !

ಈಗಾಗಲೇ ಪರಿಚಿತವಾಗಿರುವ ಗ್ರ್ಯಾಂಡ್ ಎಂಬ್ರಾಯ್ಡರಿ ವರ್ಕ್, ಪ್ಯಾಚ್ ವರ್ಕ್, ಲೇಸ್ ವರ್ಕ್ ಬ್ಲೌಸ್‌ಗಳಿಗೆ ತೋಳುಗಳು ಸಾಮಾನ್ಯವಾಗಿ ಎಲಬೊಸ್ಲೀವ್ಸ್, ಶಾರ್ಟ್ ಸ್ಲೀವ್ಸ್ , ತ್ರಿಫೋರ್ತ್ ಸ್ಲೀವ್ಸ್ ರೂಢಿಯಲ್ಲಿವೆ. ಈಗ ಫ್ಯಾಷನ್/ಟ್ರೆಂಡ್ ಬದಲಾಗಿದೆ.

ಫ್ರಾಕ್, ಶಾರ್ಟ್ಸ್ ಟಾಪ್‌ಗಳಲ್ಲಿ ಕಾಣಿಸುತ್ತಿದ್ದ ತೋಳಿನ ಮಾದರಿಗಳು ಸೀರೆ ಬ್ಲೌಸ್‌ಗಳಲ್ಲಿ ಕಾಣಿಸುತ್ತಿದೆ. ಪಫ್, ಬಲೂನ್ ತೋಳು, ಬೆಲ್ ತೋಳು, ಲೇಯರ್ಡ್ ಸ್ಲೀವ್ಸ್, ಬಿಶಪ್ ಕಪ್ ಸ್ಲೀವ್ಸ್ ಬಟರ್ ಫ್ಲೈ ಸ್ಲೀವ್ಸ್, ಕೌಲ್ ಸ್ಲೀವ್ಸ್, ಸರ್ಕ್ಯುಲರ್ ಸ್ಲೀವ್ಸ್ , ಹಾಲ್ಟರ್ ಸ್ಲೀವ್ಸ್ , ಪೆಟಲ್ ಸ್ಲೀವ್ಸ್, ಅಂಬ್ರೆಲಾ ತೋಳು, ಹೀಗೆ ಸಾಕಷ್ಟು ಮಾದರಿಯ ತೋಳುಗಳ ಆಯ್ಕೆ ನಾರಿಯರಿಗೆ ಇದೆ. ಈ ಸರದಿಯಲ್ಲಿ ಸಾಗುವವರಿಗೆ ವಯಸ್ಸಿನ ನಿರ್ಬಂಧವಿಲ್ಲ. 'ನಾರಿ ನಿನ್ನ ಮಾರಿ ಮ್ಯಾಗ ನಗಿ ನವಿಲು ಆಡುತಿತ್ತ ಓಡುತ್ತಿತ್ತ' ಅನ್ನೊ ಬೇಂದ್ರೆ ಸಾಲುಗಳು ಉಟ್ಟುತೊಟ್ಟು ಖುಷಿಪಡುವ ಅವಳ ಮೊಗ ನೋಡಿದಾಗ ನೆನಪಾಗುತ್ತದೆ.

ಎಲ್ಲಾ ರೀತಿಯ ಬಟ್ಟೆಗಳು ಎಲ್ಲಾ ತೋಳಿನ ಮಾದರಿಗೆ ಸೆಟ್ ಆಗುವುದಿಲ್ಲ. ಹಾಗಾಗಿ ಬಟ್ಟೆ ಆಯ್ಕೆ ಮಾಡುವಾಗ ಮೊದಲೇ ತಿಳಿದು ಕೊಂಡಿದ್ದರೆ ಉತ್ತಮ.

- **ಬಲೂನ್ (ಪುಗ್ಗಾ) ತೋಳು:** ರೇಷ್ಮೆ ಬಟ್ಟೆಗೆ ತುಂಬಾ ಚೆನ್ನಾಗಿ ಹೊಂದುತ್ತದೆ. ಇದರಲ್ಲಿ ನಾಲ್ಕಾರು ವಿಧಾನವಿದೆ. ಭುಜದ ಲೈನಿಂದ ನೆರಿಗೆ ಹಚ್ಚಿ ತುದಿ ಭಾಗದಲ್ಲಿ ಅಗಲ ಪಟ್ಟಿ ಅಥವಾ ಜರಿ ಬಾರ್ಡರ್ ಹಚ್ಚಲಾಗುತ್ತದೆ. ಇನ್ನೊಂದು ವಿಧದಲ್ಲಿ ಕಡಗೋಲು ರೀತಿ ಸಣ್ಣ ನೆರಿಗೆ ಹಿಡಿದು ತೋಳಿನ ತುದಿ ಭಾಗದಲ್ಲೂ ಅದೇ ಚಿಕ್ಕ ನರಿಗೆ ಮುಂದುವರಿದಿರುತ್ತದೆ.
- **ಅಂಬ್ರೆಲಾ ತೋಳು:** ಯುವತಿಯರು ತುಂಬಾ ಇಷ್ಟಪಡುವಂತಹ ರವಿಕೆಯ ತೋಳಿನ ವಿನ್ಯಾಸ ಇದು. ಜಾರ್ಜೆಟ್, ಶಿಫಾನ್, ಸಿಂಥೆಟಿಕ್ ಬಟ್ಟೆಗಳು ಈ ತೋಳುಗಳಿಗೆ ಸೂಕ್ತ. ಡಬಲ್ ಲೇಯರ್ಡ್, ಎರಡು ಬಣ್ಣದ ಬಟ್ಟೆ ಬಳಸಿದ ಅಂಬ್ರೆಲಾ ತೋಳು ವಿಶೇಷವಾಗಿರುತ್ತದೆ. ಸಪೂರ(ತೆಳು) ಕೈಗಳಿಗೆ ಅಂದವಾಗಿರುತ್ತದೆ.
- **ಪೆಟಲ್ ಸ್ಲೀವ್ಸ್:** ಇದು ಕೂಡ ಈಗ ಟ್ರೆಂಡಿಯಾಗಿದೆ. ವಿವಿಧ ಬಗೆ ಇರುವ ಈ ತೋಳು ಒಂದರ ಮೇಲೆ ಇನ್ನೊಂದು ಬಟ್ಟೆಯಿಂದ ಮಾಡಿರುತ್ತಾರೆ. ಕೆಲವೊಮ್ಮೆ ಉದ್ದ–ಗಿಡ್ಡ ಕಾಣುವಂತೆ ಮಾಡಿರುವದರಿಂದ ತೋಳಿನ ತುದಿ ತೋರಣದ ತರಹ ಕಾಣಿಸುತ್ತದೆ.

ಕ್ಯಾಪ್ ಸ್ಲೀವ್ಸ್, ಶಾರ್ಟ್ ಸ್ಲೀವ್, ಹಾಲ್ಟರ್ ಸ್ಲೀವ್ಸ್ ಇವೆಲ್ಲಾ ಆರ್ಮ್‌ಹೋಲ್‌ವರೆಗೆ ಮಾತ್ರ ಇರುವುದರಿಂದ ಸ್ಲೀವ್ ಲೆಸ್ ಹಾಕುವವರಿಗೆ ಹೊಸ ವಿಧಾನವಾಗಿದೆ. ಖುಷಿ ಕೊಡುತ್ತದೆ.

- **ಪಫ್ ತೋಳು :** ನೆಟೆಡ್ ಬಟ್ಟೆಯಲ್ಲಿ ಸುಂದರವಾಗಿ ಕಾಣುತ್ತದೆ. ಉದ್ದ ಗಿಡ್ಡ ಯಾವ ತರಹದಲ್ಲಿ ಹಾಕಿದರು ಅಂದವಾಗಿರುತ್ತದೆ.
- **ಬೆಲ್ ತೋಳು:** ಬುಜದ(ಶೋಲ್ಡರ್) ಲೈನಿಗೆ ಸರಿಯಾಗಿ ಗಿಡ್ಡ ತೋಳು ಹಚ್ಚಿಸಬಹುದು ಅಥವಾ ಕೈ ಉದ್ದದ ಮುಕ್ಕಾಲು ಭಾಗದ ತೋಳಿಗೆ ಬೆಲ್ ಮಾಡಿಸಿದರೂ ಇನ್ನಷ್ಟು ಫ್ಯಾಷನಬಲ್ ಆಗಿರುತ್ತದೆ.
- **ಕಿಮೊ ಸ್ಲೀವ್:** ಇದು ಆರಾಮದಾಯಕವಾಗಿರುತ್ತದೆ. ಭುಜದಿಂದ ಸಾದಾ ತೋಳಿನಂತಿದ್ದು ಕೆಳಭಾಗದಲ್ಲಿ ಅಗಲವಿರುವದರಿಂದ ಎಲ್ಲಾ ತರಹದ ಬಟ್ಟೆ ಇದಕ್ಕೆ ಹೊಂದುತ್ತದೆ.
- **ಬಿಷಪ್ ತೋಳು:** ಮುಂಗೈವರೆಗೆ ಇರುವ ಈ ತೋಳಿನ ತುದಿಯಲ್ಲಿ ಸಣ್ಣ ಎರಡು ನೆರಿಗೆ ಇರುತ್ತವೆ. ಚಿಕ್ಕ ಪಟ್ಟಿ ಹಚ್ಚಿರುತ್ತಾರೆ. ಹಾಗಾಗಿ ತೋಳಿನ ಕೆಳಭಾಗ ಅಗಲ ದೊಡ್ಡದಾಗಿ ಕಾಣುತ್ತದೆ. ಜಾರ್ಜೆಟ್,ಶಿಫಾನ್ ತರದ ಬಟ್ಟೆ ಇದಕ್ಕೆ ಸೂಕ್ತ.
- **ಬಾಕ್ಸಿ ಕ್ಯಾಪ್ ಸ್ಲೀವ್ಸ್**, ಸರ್ಕ್ಯುಲರ್ ತೋಳಿನ ಬ್ಲೌಸಗಳು ಈಗ ತನ್ನದೇ ಶೈಲಿಯಲ್ಲಿ ಮಿಂಚುತ್ತಿದೆ. ಶೈನಿಂಗ್ ಇರುವ ಬಟ್ಟೆ ಸ್ಯಾಟಿನ್, ಕೋರಾ ಸಿಲ್ಕ್ ಚೆನ್ನಾಗಿ ಕಾಣುತ್ತದೆ. ಡಾಟ್ ಪ್ರಿಂಟ್, ಫ್ಲವರ್ ಪ್ರಿಂಟ್ ಇರುವ ಬಟ್ಟೆಗಳು ಸೂಕ್ತ.
- **ಬೊವ್ ಸ್ಲೀವ್ಸ್:** ಇದು ತೋಳಿನ ಆಕಾರ ಯಾವುದೇ ಇರಲಿ ಉದ್ದ, ಪಫ್, ಕೋಲ್ಡ್ ಸ್ಲೀವ್, ಸ್ಲಿಟ್ ಸ್ಲೀವ್ಸ್‌ಗಳಿಗೆ ಕೆಳಭಾಗಕ್ಕೆ ವಿಭಿನ್ನ ರೀತಿಯ ಬೊವ್ ಮಾಡಿದರೆ ಆ ತೋಳಿನ ಅಂದಕ್ಕೆ ಸಾಟಿ ಇನ್ನೊಂದಿಲ್ಲ.

ಹಕೊಬಾ ಬಟ್ಟೆಯಿಂದ ತೋಳು ಮಾಡಿದ ಬ್ಲೌಸ್ ಕಾಟನ್ ಸೀರೆಯೊಂದಿಗೆ ಧರಿಸಿದಾಗ ಕ್ಲಾಸಿ ಲುಕ್ ಕೊಡುತ್ತದೆ. ಹಳೆ ಬ್ಲೌಸ್‌ಗಳಿಗೂ ತೋಳುಗಳನ್ನು ಮಿಕ್ಸ್ ಮ್ಯಾಚ್ ಮಾಡಿ ಹೊಸ ರೂಪ ಕೊಡಬಹುದು.

ಆಧುನಿಕ ಬದುಕಿಗೆ ಬೆಸೆದುಕೊಂಡಿರುವ ವರ್ಚುವಲ್ ಜಗತ್ತಿನಲ್ಲಿ ಏನಿಲ್ಲ, ಎಲ್ಲವೂ ಉಂಟು. ಮನಸ್ಸಿನಾಳದಲ್ಲಿ ತಲ್ಲಣದ ತರಂಗವೇಳಿಸಲು ಅಶ್ಲೀಲ ಮೆಸೇಜ್ ಒಂದು ನೆಪ. ಭಯವನ್ನೇ ಬಿತ್ತುವ ಕೈಗಳು ಕೆಲವೊಮ್ಮೆ ಕಾನೂನಿನ ಕೋಳಕ್ಕೆ ಸಿಗದೇ ಹೋಗಬಹುದು. ಅವು ಬಿತ್ತುವ ಭಯ ಮನಸ್ಸಿನಾಳಕ್ಕೆ ಇಳಿಯುವ ಮುನ್ನ ಮದ್ದು ಅರೆಯಿರಿ.

ವರ್ಚುವಲ್ ಗುಮ್ಮನಿಗೆ ಬೆಚ್ಚದಿರಿ

ರೂಪಾ ಕೆ.ಎಂ.

ಪ್ರಕರಣ 1: ಒಂದು ಮಟ ಮಟ ಮಧ್ಯಾಹ್ನ ಯಾವುದೋ ಅಪರಿಚಿತ ನಂಬರ್‌ನಿಂದ ಯಾರದ್ದೋ ಪಾನ್ ಕಾರ್ಡ್ ಫೋಟೋವನ್ನು ಅಶ್ಲೀಲ ಚಿತ್ರಗಳಿಗೆ ಮಾರ್ಫ್ ಮಾಡಿ ಹರಿಬಿಟ್ಟ ಸಂದೇಶ. ಇದನ್ನು ನೋಡುತ್ತಿದ್ದಂತೆ ಗೃಹಿಣಿ ಕ್ಷಮಾಳ ಮುಖದಲ್ಲಿ ಗಾಬರಿ, ಆತಂಕ. ಕೂಡಲೇ ಆ ಮೆಸೇಜ್ ಅನ್ನು ಡಿಲೀಟ್ ಮಾಡಿ, ನಂಬರ್ ಅನ್ನು ಬ್ಲಾಕ್‌ಗೆ ಹಾಕಿದಳು. ಆದರೆ, ಒಂದು ವಾರವಾದರೂ ಅವಳ ಮನಸ್ಸಿನಲ್ಲಿ ಹುದುಗಿದ್ದ ಭಯ ಕಡಿಮೆಯಾಗಲೇ ಇಲ್ಲ. ಪದೇ ಪದೇ ಎಲ್ಲದರ ಪಾಸ್‌ವರ್ಡ್ ಬದಲಾಯಿಸಿದಳು. ಆದರೂ ತನ್ನ ಮೊಬೈಲ್‌ನಿಂದ ಸೆಲ್ಫಿ ತೆಗೆದುಕೊಳ್ಳುವುದಕ್ಕೂ ಭಯ. ಯಾರಾದಾರೂ ಆಗಂತುಕರು ಈ ಫೋಟೊವನ್ನು ಕದ್ದು ಬೇರೆ ಯಾವುದಕ್ಕಾದರೂ ಮಾರ್ಫ್ ಮಾಡಿಬಿಟ್ಟರೆ? ಮತ್ತೆ ಮತ್ತೆ ಆಪ್ತರಲ್ಲಿ ಇದಕ್ಕೆ ಪರಿಹಾರ ಕೇಳಿದಳು. ಗೂಗಲ್‌ನಲ್ಲಿರುವ ಅಷ್ಟೂ ಮಾಹಿತಿಯನ್ನು ಬಗೆದು ನೋಡಿದಳು. ಏನು ಮಾಡಿದರೂ ಒಳಗೆ ಅಡಗಿದ್ದ ಭಯ ಮಾತ್ರ ಹೋಗದು...

ಪ್ರಕರಣ 2: ದ್ವಿತೀಯ ಪಿಯು ಓದುತ್ತಿರುವ ಸ್ನೇಹಾ ಮನೆಯಿಂದ ದೂರವಿದ್ದು, ಹಾಸ್ಟೆಲ್‌ನಲ್ಲಿದ್ದುಕೊಂಡು ಕಲಿಯುತ್ತಿದ್ದಾಳೆ. ಈಚೀಚೆಗೆ ಅವಳು ಮನೆಯಲ್ಲಿದ್ದರೂ ಎರಡೆರಡು ಬಾರಿ ಬಾತ್‌ರೂಂ ಕೀಲಿ ಸರಿಯಾಗಿ ಹಾಕಿಕೊಂಡಿದ್ದೇನೆಯೇ? ಎಂಬ ಪ್ರಶ್ನೆ ಕೇಳಿಕೊಳ್ಳುತ್ತಾಳೆ. ಬಾತ್‌ರೂಂನ ಕಿಟಕಿಗಳೆಲ್ಲವೂ ಸರಿಯಾಗಿ ಮುಚ್ಚಿವೆಯೇ? ಯಾವುದಾದರೂ ಕಿಂಡಿ ಉಳಿದು, ಅಲ್ಲಿಂದ ಯಾರಾದರೂ ವಿಡಿಯೊ ಮಾಡಿಬಿಟ್ಟರೆ? ಎಂಬ ಆತಂಕ ಅವಳದ್ದು. ತಾನೊಬ್ಬಳೇ, ಖಾಸಗಿಯಾಗಿರುವಾಗ ತನ್ನ ಫೋನ್ ಕ್ಯಾಮೆರಾ ಆನ್ ಆಗಿಲ್ಲವೆಂಬುದನ್ನು ಮತ್ತೊಮ್ಮೆ ಖಾತ್ರಿಪಡಿಸಿಕೊಳ್ಳುತ್ತಾಳೆ.

ಪ್ರಕರಣ 3: ಲಾಕ್‌ಡೌನ್‌ನಲ್ಲಿ ಕೆಲಸ ಕಳೆದುಕೊಂಡ ಸೌಮ್ಯಾ ವರ್ಕ್ ಫ್ರಂ ಹೋಂ ಇರುವಂಥ ಕೆಲಸಕ್ಕಾಗಿಯೇ ಅರ್ಜಿ ಹಾಕಿದಳು. ಸಂದರ್ಶನ ಜಿಲ್ಲಾ ಕಚೇರಿಯಲ್ಲಿಯೇ ನಡೆಯಿತು. ಸಂದರ್ಶನ ತೆಗೆದುಕೊಂಡ ಕಂಪನಿಯ ಪೂರ್ವಾಪರ ವಿಚಾರಿಸಿದರೆ ಅದೊಂದು ನಕಲಿ ಕಂಪನಿಯೆಂಬುದು ಖಾತ್ರಿಯಾಗಿತ್ತು. ಇದರ ಸಹವಾಸವೇ ಬೇಡವೆಂದು ಸುಮ್ಮನಾಗಿದ್ದಳು. ಒಂದು ಬೆಳಗಿನ ಜಾವ ಇದ್ದಕ್ಕಿದ್ದ ಹಾಗೆ ಕರೆಯೊಂದು ಬಂದಿತ್ತು. ರಿಸೀವ್ ಮಾಡಿದರೆ ಅದೇ ನಕಲಿ ಕಂಪನಿಯ ನೇಮಕಾತಿ ವಿಭಾಗದ ಮುಖ್ಯಸ್ಥನ ಅಶ್ಲೀಲ ಮಾತುಗಳು!

ಈ ಮೂರು ಪ್ರಕರಣಗಳಲ್ಲಿ ಅಡಗಿರುವ ಅಂಶವೊಂದೆ ಭಯ. ಅಶ್ಲೀಲತೆಯನ್ನು ಅಸ್ತ್ರವಾಗಿ ಬಳಸಿಕೊಂಡು ಭಯ ಬಿತ್ತುವ ಕೆಲಸ ಈಗಿನದ್ದೇನಲ್ಲ. ಆದರೆ, ಅದರ ಸ್ವರೂಪ ಮಾತ್ರ ಹೊಸತು. ಧೈರ್ಯವಾಗಿರುವ ಹೆಣ್ಣುಮಕ್ಕಳ ಮುಂದೆ ಅಶ್ಲೀಲ ಪದಪುಂಜ ಪ್ರಯೋಗಿಸಿಬಿಟ್ಟರೆ ಅವರು ಅಲ್ಲಿಂದ ದೂರ ಸರಿದಾರೂ ಎನ್ನುವ ತಂತ್ರ ಮೊದಲಿನಿಂದಲೂ ಚಾಲ್ತಿಯಲ್ಲಿದೆ. ಈಗೀಗ ಈ ಜಾಗವನ್ನು ಅಶ್ಲೀಲ ವಿಡಿಯೊ, ಅಶ್ಲೀಲ ಬೈಗುಳ ತುಂಬಿದ ಮೆಸೇಜ್, ಮಾರ್ಫ್ ವಿಡಿಯೊಗಳು ಆಕ್ರಮಿಸಿಕೊಂಡಿವೆ. ಇವು ವರ್ಚುವಲ್ ಲೋಕದ ಗುಮ್ಮನಂತೆ ಆಕಾರ ಪಡೆದುಕೊಂಡು ಅವ್ಯಕ್ತ ಭಯವನ್ನು ಸೃಷ್ಟಿಸಿವೆ.

ಇಂಥ ಭಯದ ಕರಿನೆರಳು ಎಂಥವರನ್ನೂ ಬೆಂಬಿಡದೇ ಕಾಡುತ್ತದೆ. ಅದರಲ್ಲಿಯೂ ಸೂಕ್ಷ್ಮ ಮನಸ್ಸಿನವರಾದರೆ ಇಂಥ ಭಯದಿಂದ ಹೊರಬರಲು ಬಹಳ ಸಮಯವೇ ಬೇಕಾಗಬಹುದು. ಅದು ಇನ್ನಿತರ ಮಾನಸಿಕ ಕ್ಲೇಶವನ್ನು ಉಂಟು ಮಾಡಬಹುದು. ಅವರ ಮನೋಜಗತ್ತನ್ನು ಈ ಭಯದ ಗುಮ್ಮವೇ ಆಳಬಹುದು.

ಅವ್ಯಕ್ತ ಭಯ ವ್ಯಕ್ತಿತ್ವಕ್ಕೆ ಮಾರಕ

ವರ್ಚುವಲ್ ಲೋಕದಲ್ಲಿ ಕಾಣುವ ಈ ಗುಮ್ಮ ಒಮ್ಮೆ ಅನುಭವಕ್ಕೆ ಬಂದರೆ ಅದರ ತೆಕ್ಕೆಯಿಂದ ಅಷ್ಟು ಸುಲಭವಾಗಿ ಬಿಡಿಸಿಕೊಳ್ಳಲಾಗದು. ಅವ್ಯಕ್ತ ಭಯ ಆತಂಕದ ಮನಸ್ಥಿತಿಯನ್ನು(ಆಕ್ಸೈಂಟಿ) ರೂಪಿಸುತ್ತದೆ. ಈ ಮನಸ್ಥಿತಿಗೆ ಕೇಳುವ ಕಿವಿಗಳು ಇಲ್ಲದೇ ಹೋದರೆ ಅದು ಗೀಳಾಗಿ, ಕ್ರಮೇಣ ಖಿನ್ನತೆಯಾಗಿ ಪರಿವರ್ತನೆಗೊಳ್ಳುತ್ತದೆ.

ಆದ ಕೆಟ್ಟ ಅನುಭವವೇ ಪದೇ ಪದೇ ಆಗಬಹುದು ಎಂದು ಮನಸ್ಸು ಅಂದಾಜಿಸುತ್ತದೆ. ಇದರಿಂದ ಯಾವುದೇ ವಿಚಾರವನ್ನು ಪದೇ ಪದೇ ಪರಿಶೀಲಿಸುವ ಗೀಳು ಹೆಚ್ಚುತ್ತದೆ. ಉದಾಹರಣೆಗೆ ಪದೇ ಪದೇ ಪಾಸ್‌ವರ್ಡ್ ಬದಲಾಯಿಸುವ, ಕ್ಯಾಮೆರಾ ಆನ್ ಆಗಿದೆಯೇ ಎಂದು ಪರಿಶೀಲಿಸುವ ಸ್ಥಿತಿ. ಈ ಗೀಳು ಬೇರೆ ಯಾವ ಕೆಲಸವನ್ನು ಮಾಡಲು ಸಾಧ್ಯವಾಗದಷ್ಟರ ಮಟ್ಟಿಗೆ ಮನಸ್ಸನ್ನು ತನ್ನ ಹತೋಟಿಗೆ ತೆಗೆದುಕೊಳ್ಳುತ್ತದೆ. ಒಂದು ಸಣ್ಣ ಆತಂಕದ ಎಳೆ ಗೀಳಾಗಿ ಬದುಕಿನ ಯಾವ ಖುಷಿಯ ಕ್ಷಣವನ್ನು ಅನುಭವಿಸಲು ಸಾಧ್ಯವಾಗದಂತೆ ಮಾಡಿಬಿಡುತ್ತದೆ. ಯಾರಲ್ಲೂ ನಂಬಿಕೆಯನ್ನು ಉಳಿಸಿಕೊಳ್ಳಲಾಗದ, ನಂಬಿಕೆಯ ಮೇಲೆಯೇ ನಂಬಿಕೆ ಕಳೆದುಕೊಂಡ ಸ್ಥಿತಿ ಉಂಟಾಗುತ್ತದೆ. ಇದರಿಂದ ವ್ಯಕ್ತಿತ್ವದ ಬೆಳವಣಿಗೆಯಾಗುವುದಿಲ್ಲ. ವೈಯಕ್ತಿಕ ಹಾಗೂ ವೃತ್ತಿ ಬದುಕಿನಲ್ಲಿಯೂ ಈ ಪ್ರವೃತ್ತಿಯ ಜನರು ಪ್ರಗತಿ ಕಾಣದೇ ಖಿನ್ನತೆಗೆ ಜಾರುತ್ತಾರೆ. ನಡವಳಿಕೆಯಲ್ಲಿ ಒಂದು ಬಗೆಯ ಚಂಚಲತೆ ಉಂಟಾಗಬಹುದು.

ಪರಿಹಾರವೇನು ?

'ಯಾವುದೇ ಭಯವಿರಲಿ, ಅದು ಕ್ರಮೇಣ ಅಭ್ಯಾಸವಾಗಿ ಬಿಟ್ಟರೆ ಬದುಕು ದುಸ್ತರವಾಗುತ್ತದೆ. ಆತಂಕ ಎಂಬುದು ಬದುಕನ್ನು ಹಿಂಡಿ ಹಿಪ್ಪೆ ಮಾಡಿಬಿಡುತ್ತದೆ. ಹಾಗಾಗಿ ಇಂಥ ಭಯ ಎದುರಾದಾಗ ಕೂಡಲೇ ಮನಸ್ಸಿಗೆ ಹತ್ತಿರವಿರುವವರೊಂದಿಗೆ ಮನ ಬಿಚ್ಚಿ ಮಾತನಾಡಿ ಎನ್ನುತ್ತಾರೆ ಮನಃಶಾಸ್ತ್ರಜ್ಞೆ ಅರ್ಪಿತಾ ಮಿರ್ಚಾಂದನಿ.

ಅರ್ಪಿತಾ ಮಿರ್ಚಾಂದನಿ

ಯಾರಾದರೂ ಇಂಥ ಅಶ್ಲೀಲವೆನಿಸುವ ಸಂದೇಶ ಕಳುಹಿಸಿದರೆ ಮೊದಲಿಗೆ ಅತ್ಯಾಪ್ತರ ಹತ್ತಿರ ಹೇಳಿಕೊಳ್ಳಿ. ಕಾನೂನು ಕ್ರಮ ತೆಗೆದುಕೊಳ್ಳುವುದು ಎಲ್ಲ ಎರಡನೆಯ ಹಂತ. ಮೊದಲಿಗೆ ಇಂಥ ಸಂದರ್ಭದಲ್ಲಿ ಮನಸ್ಸನ್ನು ಗಟ್ಟಿ ಮಾಡಿಕೊಳ್ಳುವುದು ಹೇಗೆ ಎಂದು ಯೋಚಿಸಿ. ಆಗಿರುವ ಘಟನೆಯಿಂದ ಮನಸ್ಸಿಗೆ ಗಾಸಿಯಾಗಿದ್ದರೂ ಅಲ್ಲಿಂದ ಹೊರ ಬರುವುದು ಹೇಗೆ ಎಂಬುದರ ಕಡೆ ಗಮನ ಕೊಡಿ. ಯೋಚನಾ ಧಾಟಿಯಲ್ಲಿ ಆಗುತ್ತಿರುವ ಬದಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿ. ಸ್ವಪರೀಕ್ಷೆ ಎನ್ನುವುದು ಅತ್ಯಗತ್ಯ. ಆ ನಂತರವಷ್ಟೆ ಸೂಕ್ತ ತಜ್ಞರನ್ನು ಭೇಟಿ ಮಾಡಿ, ಸಮಸ್ಯೆಯನ್ನು ಹೇಳಿಕೊಳ್ಳಬಹುದು ಎಂಬುದು ಅವರ ಸಲಹೆ.

ಜಾಗ್ರತೆ ವಹಿಸಬೇಕಾದ ಸಂಗತಿ

- ಇಂಟರ್‌ನೆಟ್, ಸಾಮಾಜಿಕ ಮಾಧ್ಯಮ ಅದರ ಬಳಕೆಯ ಬಗ್ಗೆ ಸರಿಯಾಗಿ ತಿಳಿದುಕೊಳ್ಳಲು ಪ್ರಯತ್ನಿಸಿ. ಪ್ರತಿ ನಡೆಯನ್ನು ಎಚ್ಚರದಿಂದ ಇಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ.
- ಸ್ನೇಹ, ಸಂಬಂಧ ಎಷ್ಟೇ ಗಾಢವಾಗಿರಲಿ. ಚೌಕಟ್ಟನ್ನು ಹಾಕಿಕೊಳ್ಳಿ. ಖಾಸಗಿ ಕ್ಷಣವನ್ನು ವಿಡಿಯೊವಾಗದಂತೆ ಎಚ್ಚರ ವಹಿಸಿ.
- ಯಾವುದೇ ವೈಯಕ್ತಿಕ ಮಾಹಿತಿ ಕೇಳುವ ಮೆಸೇಜ್‌ಗಳಿಗೆ ಸ್ಪಂದಿಸದಿರಿ. ಮನಸ್ಸಿಗೆ ಹಿತವಲ್ಲ ಎನಿಸುವ ಸಂಗತಿಗೆ ಆಸ್ಪದ ಕೊಡಬೇಡಿ.
- ವೈಯಕ್ತಿಕ ಮಾಹಿತಿಯನ್ನು ಕದಿಯುವ ವೆಬ್‌ಸೈಟ್‌ಗಳ ಬಗ್ಗೆ ಜಾಗ್ರತೆ ಇರಲಿ.

ಪೋಷಕರು/ ಸಂಗಾತಿಗಳು ಏನು ಮಾಡಬಹುದು?

- ಏನೋ ತಪ್ಪು ಮಾಡಿರಬೇಕು, ಅದಕ್ಕೆ ಈ ರೀತಿಯಾಗಿದೆ ಎಂಬ ಧೋರಣೆ ಬಿಟ್ಟುಬಿಡಿ. ಒಂದೊಮ್ಮೆ ತಪ್ಪು ಮಾಡಿದ್ದರೂ ಅದನ್ನು ಸಹಜವಾಗಿ ಸ್ವೀಕರಿಸುವ ಗುಣ ಬೆಳೆಸಿಕೊಳ್ಳಿ
- ಎಂಥ ಪರಿಸ್ಥಿತಿಯನ್ನು ಹೇಳಿಕೊಳ್ಳುವ ಮುಕ್ತ ವಾತಾವರಣ ಮತ್ತು ನಂಬುಗೆಯ ಸಂಬಂಧವಿರುವಂತೆ ನೋಡಿಕೊಳ್ಳಿ.
- ಹದಿಹರೆಯದ ಮಕ್ಕಳು ತಂತ್ರಜ್ಞಾನ ಬಳಸುವಾಗ ಅದರಲ್ಲಿನ ಲೋಪದೋಷಗಳು, ತೊಂದರೆಗಳ ಬಗ್ಗೆಯೂ ನಿಧಾನವಾಗಿ ಆಗಾಗ್ಗೆ ಹೇಳುತ್ತಿರಿ.
- ತಂತ್ರಜ್ಞಾನದ ಬಗ್ಗೆ ಸಂಪೂರ್ಣವಾಗಿ ಅರಿತುಕೊಂಡು, ಅರಿವು ಮೂಡಿಸುವ ಕೆಲಸ ಮಾಡಿ.

ಚಳಿಗೆ ಬಿಸಿ ಬ್ರೆಡ್ ರೋಲ್ಸ್

ಎಲ್ಲೆಲ್ಲೂ ಚಳಿ ಚಳಿ. ಮುಂಜಾನೆ–ಸಂಜೆ ಎರಡೂ ಅವಧಿಯಲ್ಲೂ ಕೊರೆಯುವಂತಹ ಚಳಿ. ಚಳಿಗಾಲದಲ್ಲಿ ಹಸಿವು ಹೆಚ್ಚು, ಜೊತೆಗೆ ಬಿಸಿ ಬಿಸಿ ತಿನಿಸುಗಳು ಬೇಕೆನಿಸುತ್ತದೆ, ಅಲ್ವಾ. ಇಂಥ ಥಂಡಿಗಾಲಕ್ಕೆ ಹೇಳಿ ಮಾಡಿಸಿದ್ದು ಬ್ರೆಡ್‌ನಿಂದ ಮಾಡುವ ತಿನಿಸುಗಳು. ದಿಢೀರನೆ ತಯಾರಿಸಬಹುದಾದ ಇಂಥ ತಿನಿಸುಗಳ ರೆಸಿಪಿಯನ್ನು ಕೆ.ವಿ.ರಾಜಲಕ್ಷ್ಮಿ ಇಲ್ಲಿ ಪರಿಚಯಿಸಿದ್ದಾರೆ.

ನಳಪಾಕ

ಬ್ರೆಡ್ ಕುಕೀಸ್

ಬೇಕಾಗುವ ಸಾಮಗ್ರಿ: ಸ್ವೀಟ್ ಬ್ರೆಡ್ 6 ರಿಂದ 8 ಸ್ಲೈಸ್, ಎರಡು ಚಮಚ ಕಡಲೆಹಿಟ್ಟು, ಒಣಕೊಬ್ಬರಿ ತುರಿ 1 ಚಮಚ, ಗೋಡಂಬಿ 4, ಚಿಟಿಕೆ ಉಪ್ಪು.

ಮಾಡುವ ವಿಧಾನ: ಮೇಲೆ ಹೇಳಿದ ಎಲ್ಲ ಸಾಮಗ್ರಿಗಳನ್ನು ಮಿಕ್ಸಿಯಲ್ಲಿ ಒಟ್ಟಿಗೆ ಹಾಕಿ ಪುಡಿ ಮಾಡಿಕೊಳ್ಳಿ. ಈ ಮಿಶ್ರಣಕ್ಕೆ ಸ್ವಲ್ಪವೇ ನೀರು ಚಿಮುಕಿಸಿ. ಗಟ್ಟಿಯಾಗಿ ಕಲಸಿಕೊಳ್ಳಿ. ನಂತರ ಅಚ್ಚಿನಲ್ಲಿ ಬೇಕಾದ ಆಕಾರ ಮಾಡಿಕೊಳ್ಳಿ. ನಂತರ ಅವುಗಳನ್ನು ಎಣ್ಣೆಯಲ್ಲಿ ಕರಿಯಿರಿ. ಹದ ನೋಡಿ ತೆಗೆಯಿರಿ. ಬ್ರೆಡ್ ಕುಕ್ಕೀಸ್ ರೆಡಿ. ಇದನ್ನು ಯಾವುದೇ ಸಾಸ್ ಅಥವಾ ಚಟ್ನಿಯೊಂದಿಗೆ ಸೇವಿಸಬಹುದು.

ಬ್ರೆಡ್ ರೋಲ್ಸ್

ಬೇಕಾಗುವ ಸಾಮಗ್ರಿ: ಸಾದಾ ಬ್ರೆಡ್ 6 ಸ್ಲೈಸ್, ಸಣ್ಣ ರವೆ ಅರ್ಧ ಕಪ್, ಮಧ್ಯಮ ಗಾತ್ರದ ಈರುಳ್ಳಿ 1, ಹಸಿರು ಮೆಣಸಿನಕಾಯಿ 2, ಶುಂಠಿ ಸಣ್ಣ ತುಂಡು, ತಾಜಾ ಕೊತ್ತಂಬರಿಸೊಪ್ಪು ಒಂದು ಹಿಡಿ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಬ್ರೆಡ್ ಸ್ಲೈಸ್ ಗಳನ್ನು ಎರಡು ಮಡಿಕೆ ಹೋಳುಗಳಾಗಿ ತುಂಡರಿಸಿ. ಈರುಳ್ಳಿಯನ್ನು ನಾಲ್ಕೈದು ಹೋಳುಗಳಾಗಿ ಹೆಚ್ಚಿಕೊಳ್ಳಿ. ಹಸಿರುಮೆಣಸಿನಕಾಯಿ, ಶುಂಠಿ, ಕೊತ್ತಂಬರಿ ಸೊಪ್ಪುಗಳೊಂದಿಗೆ ಒಟ್ಟಿಗೆ ಮಿಕ್ಸಿಯಲ್ಲಿ ಹಾಕಿ ಪುಡಿ ಮಾಡಿಕೊಳ್ಳಿ. ಈ ಮಿಶ್ರಣಕ್ಕೆ ರವೆ, ಉಪ್ಪು ಸೇರಿಸಿ. ಅಗತ್ಯಬಿದ್ದಲ್ಲಿ ಒಂದರಿಂದ ಎರಡು ಚಮಚ ನೀರು ಚುಮುಕಿಸಿ ಗಟ್ಟಿಯಾಗಿ ಕಲಸಿಕೊಳ್ಳಿ. ಕಲಸಿದ ಹಿಟ್ಟಿನಿಂದ ಚಾಕ್‌ಪೀಸ್ ತರಹ ಉದ್ದ ಆಕಾರ ಮಾಡಿ. ನಂತರ ಆ ತುಂಡುಗಳನ್ನು ಎಣ್ಣೆಯಲ್ಲಿ ಕರಿಯಿರಿ. ಗರಿ ಗರಿ, ಕ್ರಿಸ್ಪಿಯಾದ ಬ್ರೆಡ್ ರೋಲ್ಸ್ ರೆಡಿ

ಬ್ರೆಡ್ ಕಾರ್ನ್ ಫ್ರೈ

ಬೇಕಾಗುವ ಸಾಮಗ್ರಿ: ಗೋಧಿ ಬ್ರೆಡ್ 6 ರಿಂದ 8 ಸ್ಲೈಸ್‌ಗಳು. ಅಮೆರಿಕನ್ ಕಾರ್ನ್ ಬೀಜ 25 ರಿಂದ 30, ಸಣ್ಣ ರವೆ 1 ಚಮಚ, ಕಡಲೆಹಿಟ್ಟು ಒಂದು ಚಮಚ, ಅಚ್ಚಮೆಣಸಿನಪುಡಿ 1 ಚಮಚ, ರುಚಿಗೆ ತಕ್ಕಸ್ಟು ಉಪ್ಪು.

ಮಾಡುವ ವಿಧಾನ: ಬ್ರೆಡ್ ತುಂಡುಗಳನ್ನು ನೀರಲ್ಲಿ ಅದ್ದಿ ಹಿಂಡಿ, ಮೆತ್ತಗಾಗಿಸಿ. ಇದಕ್ಕೆ ಮೇಲೆ ಹೇಳಿದ ಉಳಿದ ಸಾಮಗ್ರಿಗಳನ್ನು ಸೇರಿಸಿ ಕಲೆಸಿಕೊಂಡು ವಡೆಯಾಕಾರದಲ್ಲಿ ತಟ್ಟಿ. ಎಣ್ಣೆಯಲ್ಲಿ ಕರಿಯಿರಿ. ಬ್ರೆಡ್ ಕಾರ್ನ್ ಫ್ರೈ ಖಾದ್ಯ ರೆಡಿ.

ಹೊರ ಸಂಬಂಧಗಳ ಆಕರ್ಷಣೆ

- **ವಿವಾಹಿತ ಮಹಿಳೆ. ಮದುವೆಯಾಗಿ 5 ವರ್ಷ ಆಗಿದೆ. ಇಬ್ಬರು ಮಕ್ಕಳಿದ್ದಾರೆ. ಪತಿ ಮೊದಲು ಒಬ್ಬ ಮಹಿಳೆಯೊಂದಿಗೆ ಸಂಬಂಧವಿರಿಸಿಕೊಂಡಿದ್ದರು. ಅದನ್ನುತಿಳಿದು ಈ ರೀತಿ ಮಾಡುವುದು ಸರಿಯಲ್ಲ ಎಂದು ಅವರಿಗೆ ಬುದ್ಧಿ ಹೇಳಿದೆ. ಅದಕ್ಕೆ ಅವರು ತಪ್ಪಾಯಿತು ಎಂದು ಆ ಮಹಿಳೆಯಿಂದ ದೂರವಾದರು. ಇತ್ತೀಚೆಗೆ ಪರಿಚಿತ ಹುಡುಗಿಯೊಬ್ಬಳು 'ನಿಮ್ಮ ಪತಿ ತನ್ನೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ' ಎಂದು ಹೇಳುತ್ತಿದ್ದಾಳೆ. ಪತಿ, ತಾನು ಈ ರೀತಿ ನಡೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ. ಆ ಹುಡುಗಿ ತುಂಬಾ ಒಳ್ಳೆಯವಳು, ಈ ರೀತಿ ಏಕೆ ಆಪಾದನೆ ಮಾಡುತ್ತಿದ್ದಾಳೆ ಎಂದು ತಿಳಿಯುತ್ತಿಲ್ಲ. ಇವರಿಬ್ಬರಲ್ಲಿ ಯಾರು ಸುಳ್ಳು ಹೇಳುತ್ತಿದ್ದಾರೆ ಎಂದು ಅರ್ಥವಾಗುತ್ತಿಲ್ಲ. ಸಲಹೆ ನೀಡಿ.**

ಹೆಸರು ಊರು ತಿಳಿಸಿಲ್ಲ.

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

ಪತಿಯನ್ನು ಸರಿದಾರಿಗೆ ತಂದು ಕುಟುಂಬದ ನೆಮ್ಮದಿಯನ್ನು ಉಳಿಸಿಕೊಳ್ಳುವ ನಿಮ್ಮ ಪ್ರಯತ್ನ ಉತ್ತಮವಾದದ್ದೇ. ಆದರೆ ಇದಕ್ಕೆ ನಿಮ್ಮ ಪತಿಯ ಸಹಕಾರವೂ ಬೇಕಲ್ಲವೇ? ಅವರು ಜವಾಬ್ದಾರಿಯುತವಾಗಿ ವರ್ತಿಸುವುದನ್ನು ಕಲಿಯದಿದ್ದರೆ ನಿಮಗೆ ನಿರಾಸೆ ಕಾದಿರಬಹುದಲ್ಲವೇ? ಹಾಗಾಗಿ ಹುಡುಗಿ ಹೇಳುತ್ತಿರುವುದರ ಸತ್ಯಾಸತ್ಯತೆಯನ್ನು ಪರೀಕ್ಷಿಸುವ ಬದಲಾಗಿ ನಿಮ್ಮ ಕುಟುಂಬವನ್ನು ರಕ್ಷಿಸಿಕೊಳ್ಳುವುದರ ಕಡೆ ಹೆಚ್ಚಿನ ಗಮನ ನೀಡಿ.

ಪತಿಗೆ ಹಿಂದೊಮ್ಮೆ ಹೊರಸಂಬಂಧವಿತ್ತು ಎಂದ ಮೇಲೆ ಅಂತಹ ಆಕರ್ಷಣೆಗೆ ಒಳಗಾಗುವ ಪ್ರವೃತ್ತಿ ಅವರೊಳಗೆ ಇರಬೇಕಲ್ಲವೇ? ನಿಮ್ಮ ಬುದ್ಧಿವಾದದಿಂದ ಆಳವಾಗಿ ಬೇರೂರಿರುವ ಅಂತಹ ಪ್ರವೃತ್ತಿಗಳು ಮಾಯವಾಗಿರುವ ಸಾಧ್ಯತೆಗಳಿಲ್ಲ. ಹಾಗಾಗಿ ನಿಮ್ಮಿಬ್ಬರ ವೈವಾಹಿಕ ಸಂಬಂಧ ಮತ್ತು ಲೈಂಗಿಕ ಅಗತ್ಯಗಳ ಕುರಿತು ಪತಿಯ ಜೊತೆ ಮುಕ್ತವಾಗಿ ಚರ್ಚೆಮಾಡುವ ಅಗತ್ಯವಿದೆ. ಹೊರಸಂಬಂಧದಲ್ಲಿ ಪತಿಗೆ ದೊರಕುತ್ತಿದ್ದದುಏನು? ಅದನ್ನು ದಾಂಪತ್ಯದಲ್ಲಿ ಹುಡುಕಿಕೊಳ್ಳುವುದ ಏಕೆ ಸಾಧ್ಯವಾಗುತ್ತಿಲ್ಲ? ಇಬ್ಬರಿಗೂ ಮತ್ತೊಬ್ಬರ ಲೈಂಗಿಕ ಅಗತ್ಯಗಳು ಆಸಕ್ತಿಗಳು ಆಯ್ಕೆಗಳು, ಮಿಲನದ ರೀತಿ, ಸಮಯ-ಮುಂತಾದ ಎಲ್ಲಾ ವಿಷಯಗಳ ಪರಿಚಯ ವಿದೆಯೇ? ಈ ಎಲ್ಲಾ ವಿಚಾರಗಳನ್ನು ಆಗಾಗ ಚರ್ಚೆ ಮಾಡುತ್ತಿರಬೇಕು. ಒಬ್ಬರು ಮತ್ತೊಬ್ಬರ ಲೈಂಗಿಕ ಅಗತ್ಯವನ್ನು ಸಂಪೂರ್ಣವಾಗಿ ಪೂರೈಸಲೇಬೇಕೆಂದಿಲ್ಲ. ಆದರೆ ಲೈಂಗಿಕವಾಗಿ ಹೆಚ್ಚುಹೆಚ್ಚು ಪರಿಚಿತರಾದರೆ ಇಬ್ಬರಿಗೂ ಪೂರ್ಣ ತೃಪ್ತಿಯನ್ನು ಪಡೆಯುವ ದಾರಿಗಳನ್ನು ಸುಲಭವಾಗುತ್ತದೆ.

ಲೈಂಗಿಕ ಸಂಬಂಧದ ಹೊರತಾಗಿ ನಿಮ್ಮಿಬ್ಬರ ನಡುವಿನ ಆತ್ಮೀಯತೆ ಹೇಗಿದೆ? ಇಬ್ಬರೂ ಮತ್ತೊಬ್ಬರೊಡನೆ ಸುಮ್ಮನೆ ಸಮಯ ಕಳೆಯಲು ಇಷ್ಟಪಡುತ್ತೀರಾ? ಒಟ್ಟಾಗಿ ಎಷ್ಟು ಸಮಯ ಕಳೆಯುತ್ತೀರಿ? ಅಂತಹ ಸಮಯದಲ್ಲಿ ಮತ್ತೊಬ್ಬರಿಗೆ ಹೇಗೆ ಸ್ಪಂದಿಸುತ್ತೀರಿ? ಕುಟುಂಬಕ್ಕೆ ಸಂಬಂಧಿಸಿದ ಎಲ್ಲಾ ವಿಚಾರಗಳಲ್ಲಿ ಮುಕ್ತವಾಗಿ ಮಾತನಾಡುವುದು ಇಬ್ಬರಿಗೂ ಸಾಧ್ಯವಾಗುತ್ತಿದೆಯೇ? ಇಂತಹ ಹಲವಾರು ಪ್ರಶ್ನೆಗಳಿಗೆ ಉತ್ತರ ಹುಡುಕೊಳ್ಳಿ. ವಾರಕ್ಕೆ ಒಂದೆರೆಡು ಬಾರಿಯಾದರೂ ಮಕ್ಕಳ ಜವಾಬ್ದಾರಿಗಳಿಲ್ಲದೆ ನಿಮ್ಮ ಖಾಸಗಿ ಬದುಕಿಗೆ ಸಮಯ ಹೊಂದಿಸಿಕೊಳ್ಳಿ. ಇಲ್ಲದಿದ್ದರೆ ಒಟ್ಟಾಗಿ ಬದುಕುತ್ತಿರುವಾಗಲೂ ಮಾನಸಿಕವಾಗಿ ದೂರವಾಗುವ ಸಾಧ್ಯತೆಗಳಿರುತ್ತವೆ. ಕೊನೆಯದಾಗಿ ಇಂತಹ ಘಟನೆಗಳನ್ನು ಸಹಿಸಿಕೊಳ್ಳುವುದು ಸಾಧ್ಯವಿಲ್ಲ ಎನ್ನುವ ಸಂದೇಶವನ್ನು ಪತಿಗೆ ಸ್ಪಷ್ಟವಾಗಿ ತಲುಪಿಸಿ. ನೀವು ಎಲ್ಲಾ ಘಟನೆಗಳಲ್ಲಿ ಸತ್ಯವನ್ನು ಹುಡುಕಿ ಮಧ್ಯಸ್ಥಿಕೆ ನಡೆಸುವ ಅಗತ್ಯವಾದರೂ ಏನಿದೆ? ಅನುಚಿತವಾಗಿ ವರ್ತಿಸಿದರೆ ಪತಿ ಅದರ ಪರಿಣಾಮಗಳನ್ನು ಎದುರಿಸ ಬೇಕಲ್ಲವೇ? ನೀವು ಅವರ ಜೊತೆ ಬಾಳಲು ಒಪ್ಪಿಕೊಂಡಿದ್ದೀರಿ ಎಂದ ಮಾತ್ರಕ್ಕೆ ಅವರ ದುರ್ವರ್ತನೆಗಳನ್ನು ಸಹಿಸಿಕೊಳ್ಳಬೇಕೆಂದು ಅರ್ಥವೇ? ಸಂಬಂಧಗಳಿಗೆ ವಂಚನೆ ಮಾಡದಂತೆ ಬದುಕುವ ಜವಾಬ್ದಾರಿ ನಿಮ್ಮ ಪತಿಗೆ ಇರದಿದ್ದರೆ ನಿಮ್ಮ ಬುದ್ಧಿವಾದಗಳು ಕೆಲಸ ಮಾಡುವುದಿಲ್ಲ. ನಮ್ಮ ವರ್ತನೆಗಳಿಗೆ ತಾವೇ ಜವಾಬ್ದಾರಿ ಹೊರುವುದು ಅನಿವಾರ್ಯವಾದಾಗ ಮಾತ್ರ ನಮ್ಮ ಪ್ರವೃತ್ತಿಗಳು ಹಿಡಿತಕ್ಕೆ ಬರುವ ಸಾಧ್ಯತೆಗಳಿರುತ್ತವೆ. ನೀವು ಪತಿಗೆ ಬದಲಾಗಲು ಅವಕಾಶ ಕೊಟ್ಟು ಅವರಿಗೆ ಬೆಂಬಲ ನೀಡಲು ಸಿದ್ಧರಿದ್ದರೆ ಸಾಕು. ಕೊನೆಗೂ ಅವರ ವರ್ತನೆಗಳಿಗೆ ಅವರೇ ಜವಾಬ್ದಾರರು ಎನ್ನುವುದನ್ನು ಮರೆಯುವಂತಿಲ್ಲ.

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ವಿಧಾನಸಭಾ ಚುನಾವಣೆ: ಕಾಂಗ್ರೆಸ್ ಮುಖಂಡ ಬಿ.ಕೆ.ಹರಿಪ್ರಸಾದ್ ವ್ಯಾಖ್ಯಾನ

ಗಾಂಧಿ–ಗೋಡ್ಸೆ ಸಿದ್ಧಾಂತಗಳ ಹೋರಾಟ

ಪ್ರಜಾವಾಣಿ ವಾರ್ತೆ

ಪ್ರಜಾ ಮತ
ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬೆಂಗಳೂರು: ರಾಜ್ಯ ವಿಧಾನಸಭೆಗೆ ನಡೆಯಲಿರುವ ಚುನಾವಣೆ ಮಹಾತ್ಮ ಗಾಂಧಿ ಹಾಗೂ ನಾಥುರಾಮ್ ಗೋಡ್ಸೆ ಸಿದ್ಧಾಂತಗಳ ನಡುವಿನ ಹೋರಾಟ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ಬೆಂಗಳೂರು ಪ್ರೆಸ್‌ಕ್ಲಬ್ ಶುಕ್ರವಾರ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಿಜೆಪಿ ಅಭಿವೃದ್ಧಿ ಕೆಲಸ ಮಾಡಿಲ್ಲ. ಅವರಿಗೆ ಅದು ಬೇಕಾಗಿಯೂ ಇಲ್ಲ. ಆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅಭಿವೃದ್ಧಿ ಕುರಿತು ಮಾತನಾಡದಂತೆ, ಲವ್‌ಜಿಹಾದ್, ಹಿಜಾಬ್, ಕೋಮು ವಿಷಯಗಳನ್ನು ಜಪಿಸಲು ಕಾರ್ಯಕರ್ತರಿಗೆ ಸೂಚಿಸಿದ್ದಾರೆ. ಇಂತಹ ಅಜೆಂಡಾಗಳ ಫಲವಾಗಿಯೇ ರಾಜ್ಯದಲ್ಲಿ ಮೂರು ವಾರಕ್ಕೊಂದು ಕೋಮು ಗಲಭೆಗಳು ನಡೆಯುತ್ತಿವೆ. ಚುನಾವಣೆ ಹತ್ತಿರವಾದಂತೆ ಇಂತಹ ಪ್ರಕರಣಗಳು ಹೆಚ್ಚುತ್ತಿವೆ. ಮತದಾರರು ಎಲ್ಲವನ್ನೂ ಗಮನಿಸುತ್ತಾರೆ. ಪ್ರಜಾಪ್ರಭುತ್ವದ ಉಳಿವಿಗೆ ಉತ್ತಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿಯು ಸಾವಿನಲ್ಲೂ ಕೋಮು ರಾಜಕಾರಣ ಮಾಡುತ್ತಿದೆ. ರಾಜ್ಯದ ಚುಕ್ಕಾಣಿ ಹಿಡಿದಿರುವ ಮುಖ್ಯಮಂತ್ರಿ ಬೊಮ್ಮಾಯಿ ಸಮಾಜವಾದದಿಂದ ಕೋಮುವಾದಕ್ಕೆ ಮತಾಂತರವಾಗಿದ್ದಾರೆ. ಒಂದು ಜಾತಿ, ಧರ್ಮಕಷ್ಟೆ ಮುಖ್ಯಮಂತ್ರಿ ಎನ್ನುವ ರೀತಿ ವರ್ತಿಸುತ್ತಿದ್ದಾರೆ ಎಂದರು.

‘ನಾನು ಮೋದಿ, ಅಮಿತ್ ಶಾಗೂ ಮೊದಲೇ ಸಂಸತ್ ಸದಸ್ಯನಾಗಿದ್ದೆ. ತಪ್ಪುಗಳನ್ನು ಟೀಕಿಸುವ ಅಧಿಕಾರವಿದೆ. ಬಿಜೆಪಿ ಮುಖಂಡರು ಹೇಳಿದಂತೆ ಪ್ರಧಾನಿ ಟೀಕಿಸುವ ಯೋಗ್ಯತೆ ಇಲ್ಲ ಎನ್ನುವುದನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ಪ್ರತಿಕ್ರಿಯಿಸಿದರು.

ಆಮ್‌ಆದ್ಮಿ ಪಕ್ಷ ಬಿಜೆಪಿಯ ‘ಬಿ’ ಟೀಂ: ಮುಸ್ಲಿಮರನ್ನು ದ್ವೇಷಿಸಬೇಡಿ ಎನ್ನುವ ಪ್ರಧಾನಿ ಮಾತು ‘ಭೂತದ ಬಾಯಲ್ಲಿ ಭಗವದ್ಗೀತೆ’ಯಂತಿದೆ. ಹಿಂಸೆ ಅವರ ಸಿದ್ಧಾಂತ. ಸುಳ್ಳು ಅವರ ತಂತ್ರ, ಆಮ್‌ಆದ್ಮಿ ಪಕ್ಷ ಬಿಜೆಪಿಯ ‘ಬಿ ಟೀಂ’ ಎಂದು ಟೀಕಿಸಿದರು.

ಒಮ್ಮತದಿಂದಲೇ ಅಭ್ಯರ್ಥಿಗಳ ಪಟ್ಟಿ

ಆರ್.ವಿ.ದೇಶಪಾಂಡೆ ಅವರಿಂದ ಉತ್ತರ ಕನ್ನಡ ಭಾಗದಲ್ಲಿ ಕಾಂಗ್ರೆಸ್ ಪಕ್ಷ ಬೆಳೆದಿಲ್ಲ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಹರಿಪ್ರಸಾದ್, ಉತ್ತರ ಕನ್ನಡದಲ್ಲಿ ಕಾಂಗ್ರೆಸ್‌ಗೆ ಪೂರಕವಾದ ಜಾತಿ ಸಮೀಕರಣ ಇದೆ. ಚುನಾವಣಾ ಸಮಿತಿ, ಸ್ಕ್ರೀನಿಂಗ್ ಸಮಿತಿಗಳಲ್ಲಿ ಚರ್ಚಿಸಿಯೇ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲಾಗುತ್ತದೆ ಎಂದರು.

ಪಕ್ಷದ ನಾಯಕರಾದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಪ್ರತ್ಯೇಕ ಸರ್ವೆ ಮಾಡಿದ್ದಾರೆ. ಎಐಸಿಸಿ ಕೂಡ ಪ್ರತ್ಯೇಕ ಸರ್ವೆ ಇಟ್ಟುಕೊಂಡಿದೆ. ಅಭಿಪ್ರಾಯಗಳ ಮಧ್ಯೆ ವ್ಯತ್ಯಾಸವಿದೆ. ಅದು ಭಿನ್ನಮತವಲ್ಲ. ಎಲ್ಲರ ಅಭಿಪ್ರಾಯ ಸಂಗ್ರಹ ಮಾಡಿದ ನಂತರವೇ ನಿರ್ಧಾರಕ್ಕೆ ಬರಲಾಗುತ್ತದೆ. ಬಹುಮತಕ್ಕೆ ಅಗತ್ಯವಾದ ಸ್ಥಾನಗಳನ್ನು ಪಕ್ಷ ಪಡೆಯಲಿದೆ ಎಂದು ಹೇಳಿದರು.

‘ಭ್ರಷ್ಟರನ್ನು ಜೈಲಿಗೆ ಕಳುಹಿಸುತ್ತೇವೆ’

ಗೃಹ ಸಚಿವರು ಈಚೆಗೆ ಪರಪ್ಪನ ಅಗ್ರಹಾರ ಹೇಗಿದೆ ಅಂತ ಪರಿಶೀಲಿಸಿ ಬಂದಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಕೂಡಲೇ ಭ್ರಷ್ಟರನ್ನು ಜೈಲಿಗೆ ಕಳಿಸುತ್ತೇವೆ. ಬಿಜೆಪಿಯ ಬಹುತೇಕರು ಜೈಲು ಸೇರುವರು. ಈ ಸರ್ಕಾರಕ್ಕೆ 90 ದಿನಗಳ ಅವಕಾಶವಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತಿನಲ್ಲೇ ಹೇಳುವುದಾದರೆ, ತಾಕತ್ ಇದ್ರೆ, ದಮ್ ಇದ್ರೆ ನಮ್ಮನ್ನ ಜೈಲಿಗೆ ಕಳಿಸಿ ಎಂದು ಬಿ.ಕೆ ಹರಿಪ್ರಸಾದ್ ಬಿಜೆಪಿಗೆ ಸವಾಲು ಹಾಕಿದರು.

‘ಕಾಯ್ದೆಯಿಂದಲೇ ಮತಾಂತರ ತಪ್ಪಿಸಲಾಗದು’

ಪ್ರಜಾವಾಣಿ ವಾರ್ತೆ

ಸುತ್ತೂರು (ಮೈಸೂರು ಜಿಲ್ಲೆ): ‘ಮತಾಂತರ ನಿಷೇಧ ಕಾಯ್ದೆಯಿಂದಲೇ ಮತಾಂತರ ತಪ್ಪಿಸಲು ಆಗುವುದಿಲ್ಲ. ಆಮಿಷಕ್ಕೆ ಒಳಗಾಗಿ ಮತಾಂತರಗೊಂಡವರನ್ನು ಮರಳಿ ಹಿಂದೂ ಧರ್ಮಕ್ಕೆ ಕರೆತರುವ ಕೆಲಸವನ್ನು ಮಠಗಳು ಮಾಡಬೇಕು’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಪ್ರತಿಪಾದಿಸಿದರು.

ಇಲ್ಲಿ ಶುಕ್ರವಾರ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಪ್ರಯುಕ್ತ ನಡೆದ ಮಠದ ಕಟ್ಟಡಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ದಲಿತರು, ಅಶಕ್ತರು ಹಾಗೂ ನಿರಾಶ್ರಿತರನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನೂ ಮಠಗಳು ಮಾಡಬೇಕು. ಹೆಚ್ಚಾಗಿರುವ ಮತಾಂತರ ಪಿಡುಗನ್ನು ಕೊನೆಗಾಣಿಸಲು ಸಮಾಜ ಜಾಗೃತಗೊಳ್ಳಬೇಕು. ಮತಾಂತರದ ವಿರುದ್ಧ ಜಾಗೃತಿ ಮೂಡಿಸಬೇಕು’ ಎಂದರು.

‘ಬಿಜೆಪಿ–ಜೆಡಿಎಸ್ ಒಳಒಪ್ಪಂದ’

ಮೈಸೂರು: ‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಒಳ ಒಪ್ಪಂದ ಮಾಡಿಕೊಳ್ಳುವ ಸಾಧ್ಯತೆ ಇದೆ’ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ತಾಲ್ಲೂಕಿನ ಲಿಂಗದೇವರಕೊಪ್ಪಲು ಗ್ರಾಮದಲ್ಲಿ ಶುಕ್ರವಾರ ‘ಸ್ವಾಭಿಮಾನಿ ಪಡೆ ಕಾಂಗ್ರೆಸ್ ಸೇರ್ಪಡೆ’ ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಬಿಜೆಪಿ–ಜೆಡಿಎಸ್‌ನವರು ಏನೇ ಮಾಡಿದರೂ, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲಾಗದು. ರಾಜ್ಯದಾದ್ಯಂತ ಪಕ್ಷದ ಪರ ವಾತಾವರಣವಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಜೆಡಿಎಸ್‌ನಲ್ಲಿ 37 ಶಾಸಕರಷ್ಟೇ ಇದ್ದರೂ ಎಚ್.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಿದ್ದೆವು. ಅವರು, ನಮ್ಮನ್ನು ಕಸಕ್ಕಿಂತ ಕಡೆಯಾಗಿ ಕಂಡರು. ಯಾವ ನೇಮಕಾತಿ ಸಂದರ್ಭದಲ್ಲೂ ಕೇಳುತ್ತಿರಲಿಲ್ಲ. ಆಪರೇಷನ್ ಕಮಲ ನಡೆಯುತ್ತಿದ್ದರೂ ಅಮೆರಿಕಕ್ಕೆ ಹೋಗಿ ಕುಳಿತರು. ಇಲ್ಲಿಯೇ ಇದ್ದಿದ್ದರೆ, ಇನ್ನೊಂದು ವರ್ಷ ಮುಖ್ಯಮಂತ್ರಿ ಆಗಿರಬಹುದಾಗಿತ್ತು’ ಎಂದರು.

‘ಕಾರ್ಯಕರ್ತರಿಗೆ ನನ್ನ ಮೇಲೆ ಗೌರವವಿದ್ದರೆ ಜೆಡಿಎಸ್ ಪಕ್ಷದ ಜಿ.ಟಿ. ದೇವೇಗೌಡ ಅವರನ್ನು ಸೋಲಿಸಬೇಕು. ಇದು ಸೇಡಿನ ರಾಜಕಾರಣವೇನಲ್ಲ. ಮುಖಂಡರು ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಪಕ್ಷವನ್ನು ಗೆಲ್ಲಿಸಬೇಕು’ ಎಂದರು.

ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಜಿಟಿಡಿ ವಿರುದ್ಧ ತಿರುಗಿ ಬಿದ್ದಿರುವ ಅವರ ಬೆಂಬಲಿಗರಾದ ಮಾವಿನಹಳ್ಳಿ ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಸಿದ್ದೇಗೌಡ, ಕೆಂಪನಾಯಕ ಅವರು ಜೆಡಿಎಸ್ ಪಕ್ಷವನ್ನು ತೊರೆದು ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರ್ಪಡೆಯಾದರು.

ಕಾಂಗ್ರೆಸ್‌ಗೆ ಬೆಂಬಲ: ಎಚ್.ವಿಶ್ವನಾಥ್

ಬೆಂಗಳೂರು: ‘ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡುವೆ. ಕೋಲಾರದಲ್ಲಿ ಸಿದ್ದರಾಮಯ್ಯ ಪರ ಪ್ರಚಾರ ನಡೆಸುವೆ’ ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಶುಕ್ರವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಾನು ಯಾವುದೇ ಪಕ್ಷಕ್ಕೆ ಸೇರಿದವನಲ್ಲ. ಸ್ವತಂತ್ರ. ಈಗ ಕಾಂಗ್ರೆಸ್‌ಗೆ ಬೆಂಬಲ ನೀಡುತ್ತಿದ್ದೇನೆ. ನನ್ನ ಮನೆಗೆ ವಾಪಸ್ ಹೋಗುತ್ತಿರುವೆ. ಯಾವ ಷರತ್ತೂ ಹಾಕುವುದಿಲ್ಲ ಎಂದರು.

‘₹ 10 ಕೋಟಿ ಹೆಚ್ಚು ಖರ್ಚು ಮಾಡ್ತೀವಿ’

ಪ್ರಜಾವಾಣಿ ವಾರ್ತೆ

ಸುಳೇಬಾವಿ (ಬೆಳಗಾವಿ ತಾ.): ‘ಬೆಳಗಾವಿ ಗ್ರಾಮೀಣ ಕ್ಷೇತ್ರದ ಹಾಲಿ ಶಾಸಕರಿಗಿಂತ ನಾವು ₹10 ಕೋಟಿ ಜಾಸ್ತಿ ಖರ್ಚು ಮಾಡಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸುತ್ತೇವೆ. ಅವರು ಡಬ್ಬಿ, ಮಿಕ್ಸರ್ ಸೇರಿ ₹3,000 ಖರ್ಚು ಮಾಡುತ್ತಿದ್ದಾರೆ. ₹6,000 ಕಾಣಿಕೆ ಕೊಡುವ ತಾಕತ್ತು ನಮಗೂ ಇದೆ’ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಸುಳೇಬಾವಿ ಗ್ರಾಮದಲ್ಲಿ ರಮೇಶ ಜಾರಕಿಹೊಳಿ ಅಭಿಮಾನಿಗಳ ಬಳಗದಿಂದ ಶುಕ್ರವಾರ ಆಯೋಜಿಸಿದ್ದ ಕಾರ್ಯಕರ್ತರ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಪಕ್ಕದ ಮೋದಗಾ ಗ್ರಾಮದಲ್ಲಿ ಮಿಕ್ಸರ್ ಕೊಡುತ್ತಿದ್ದರು ನೀವು, ಈ ಕಾರ್ಯಕ್ರಮಕ್ಕೆ ಬಂದಿದ್ದೀರಿ. ಗ್ರಾಮೀಣ ಕ್ಷೇತ್ರದಲ್ಲಿ ಈ ಬಾರಿ ಬಿಜೆಪಿ ಧ್ವಜ ಹಾರಲಿದೆ. ಕೆಲ ದಿನಗಳ ಹಿಂದೆ ಬೆಂಗಳೂರಿನ ‘ಮಹಾನಾಯಕ’ ಬಂದಾಗ ಕಾಣಿಕೆ ಕೊಟ್ಟರೂ ಜನ ಸೇರಿರಲಿಲ್ಲ’ ಎಂದು ಅವರು ಡಿ.ಕೆ. ಶಿವಕುಮಾರ್ ಹೆಸರು ಹೇಳದೇ ಮೂದಲಿಸಿದರು.

‘ಈಗಿನ ಗ್ರಾಮೀಣ ಶಾಸಕರನ್ನು ನಾನೇ ಗೆಲ್ಲಿಸಿದ್ದೇನೆ. ಈಗ ನನಗೆ ತಿರುಗುಬಾಣವಾಗಿದೆ. ಅದು ಕೆಟ್ಟ ಹುಳ. ಅದನ್ನು ತೆಗೆದು ಹಾಕಲೇಬೇಕು. ಶಾಸಕರಾದ ಬಳಿಕ ಈ ಭಾಗದಲ್ಲಿ ಅಕ್ರಮ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತ ಬಂದಿದ್ದಾರೆ. ಈ ಶಾಸಕರನ್ನು ಕಿತ್ತೆಸೆಯಬೇಕಿದೆ’ ಎಂದು ಹೇಳಿದರು.

‘ಅಪ್ಪ–ಮಕ್ಕಳ ಪಕ್ಷದಲ್ಲಿ ಅಣ್ಣ–ತಮ್ಮನ ಕಿತ್ತಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪ್ಪ ಮಕ್ಕಳ ಪಕ್ಷದಲ್ಲಿ ಅಣ್ಣ ದೊಡ್ಡವನೋ ತಮ್ಮ ದೊಡ್ಡವನೋ ಎಂಬ ಕಿತ್ತಾಟ ಶುರುವಾಗಿದೆ. ಇನ್ನೊಂದು ರಾಷ್ಟ್ರೀಯ ಪಕ್ಷದಲ್ಲಿ ಮುಖ್ಯಮಂತ್ರಿ ಯಾರೆಂಬ ಕಿತ್ತಾಟ ಆರಂಭವಾಗಿದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ರೈತ ಮೋರ್ಚಾ ಸಭೆಯಲ್ಲಿ ಮಾತನಾಡಿದ ಅವರು, ‘ಈ ಚುನಾವಣೆಯಲ್ಲಿ ಬೇರೆ ಬೇರೆ ಪಕ್ಷದವರು ಶರ್ಟ್ ಹೊಲಿಸಿ ಕಾಯುತ್ತಿದ್ದಾರೆ. ಕೆಲವರು ಕೋಟ್ ಹೊಲಿಸಲು ಅಂಗಡಿಗೆ ಕೊಟ್ಟಿದ್ದಾರೆ. ಇನ್ನೂ ಕೆಲವರು ಹೊಸ ಪ್ಯಾಂಟ್, ಶರ್ಟ್ ಖರೀದಿಸಿದ್ದಾರೆ. ಇನ್ನೂ ಕೆಲವರು ಅವರೊಳಗೇ ಪ್ಯಾಂಟ್, ಶರ್ಟ್ ಹರಿಯಲು ಶುರು ಮಾಡಿದ್ದಾರೆ’ ಎಂದು ವ್ಯಂಗ್ಯವಾಡಿದ್ದಾರೆ.

‘ಮೂರು ಪಕ್ಷಗಳಲ್ಲಿ ಮೂರು ವಿಭಿನ್ನತೆ ಇದೆ. ರಾಷ್ಟ್ರೀಯ ಪಕ್ಷವೊಂದಿದೆ. ಅವರ ಸಭೆ ಆದಾಗ ಚಪ್ಪಲಿಗಳು ಕೈಯಲ್ಲಿ ಇರುತ್ತದೆ. ಇನ್ನೊಂದು ಕುಟುಂಬದ ಪಕ್ಷವಿದೆ; ಅದು ಅಪ್ಪ– ಮಕ್ಕಳ ಪಕ್ಷ. ಅವರ ಪಕ್ಷದ ಸಭೆ ಆದಾಗ ಒಬ್ಬನ ಚಪ್ಪಲಿ ಇನ್ನೊಬ್ಬನ ದೇಹದೊಳಗೆ ಇರುತ್ತದೆ. ಬಿಜೆಪಿಯಲ್ಲಿ ಮಾತ್ರ ಚಪ್ಪಲಿ ನಮ್ಮಲ್ಲೇ ಇರುತ್ತದೆ, ಶಾಂತವಾಗಿ ಸಭೆ ನಡೆಯುತ್ತದೆ’ ಎಂದು ಕಟೀಲ್ ಹೇಳಿದರು.

‘ಪ್ರತಿ ಜಿಲ್ಲೆಗೂ ಪ್ರತ್ಯೇಕ ಪ್ರಣಾಳಿಕೆ’

ಬೆಂಗಳೂರು: ಪ್ರತಿ ಜಿಲ್ಲೆಗಳಿಂದಲೂ ಮಾಹಿತಿ ತರಿಸಿಕೊಂಡು ಪಕ್ಷದ ಪ್ರಣಾಳಿಕೆ ಸಿದ್ಧಪಡಿಸಲಾಗುವುದು. ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ನಡೆದ ಪಕ್ಷದ ಪ್ರಮುಖ ನಾಯಕರ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದರು.

‘ಪ್ರಣಾಳಿಕೆ ಸಿದ್ಧಪಡಿಸುವುದು, ಬಜೆಟ್ ಅಧಿವೇಶನ, ಪಕ್ಷದ ಸಂಘಟನೆ, ಜನ ಸಂಕಲ್ಪ ಯಾತ್ರೆಯ ಮುಂದುವರಿಕೆ, ರಾಷ್ಟ್ರೀಯ ನಾಯಕರ ಕಾರ್ಯಕ್ರಮಗಳ ಆಯೋಜನೆ ಕುರಿತು ಚರ್ಚಿಸಲಾಗಿದೆ. ಶನಿವಾರದಿಂದ(ಜ.21) ಪ್ರಾರಂಭವಾಗುವ ಬೂತ್‌ಮಟ್ಟದ ವಿಜಯಸಂಕಲ್ಪ ಯಾತ್ರೆಯಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಡ್ಡಾ ಅವರು ಭಾಗವಹಿಸುವರು. ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕಾರ್ಯಕ್ರಮಗಳ ಪಟ್ಟಿಯನ್ನು ಮನೆ ಮನೆಗೆ ತಲುಪಿಸಲಾಗುವುದು. ತಾಲ್ಲೂಕು ಮಟ್ಟದ ಸಮ್ಮೇಳನ, ಹಲವು ಮೋರ್ಚಾಗಳ ಜಿಲ್ಲಾಮಟ್ಟದ ಸಮಾವೇಶ ಆಯೋಜಿಸಲು ತೀರ್ಮಾನಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಪ್ರಣಾಳಿಕೆ ಜೊತೆ ಆಡಳಿತ ನೀಲನಕ್ಷೆ- ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯ ಪ್ರಣಾಳಿಕೆಯಲ್ಲಿ ನೀಡುವ ಭರವಸೆಗಳನ್ನು ಪಕ್ಷ ಅಧಿಕಾರಕ್ಕೆ ಬಂದರೆ ಹೇಗೆ ಅನುಷ್ಠಾನಗೊಳಿಸಲಿದೆ ಎಂಬ ನೀಲನಕ್ಷೆಯನ್ನೂ ಮತದಾರರ ಮುಂದಿಡಲು ಕಾಂಗ್ರೆಸ್ ನಿರ್ಧರಿಸಿದೆ.

ಪ್ರತಿ ಮನೆಗೆ 200 ಯುನಿಟ್ ಉಚಿತ ವಿದ್ಯುತ್ ನೀಡುವ ‘ಗೃಹ ಜ್ಯೋತಿ’ ಯೋಜನೆ, ಮನೆಯ ಯಜಮಾನಿಗೆ ₹ 2,000 ಆರ್ಥಿಕ ನೆರವು ನೀಡುವ ‘ಗೃಹ ಲಕ್ಷ್ಮಿ’ ಯೋಜನೆ, ಬಿಪಿಎಲ್ ಪಡಿತರಚೀಟಿದಾರರಿಗೆ 10 ಕೆ.ಜಿ. ಅಕ್ಕಿ ನೀಡುವುದಾಗಿ ಕಾಂಗ್ರೆಸ್ ಈಗಾಗಲೇ ಘೋಷಿಸಿದೆ.

ಈ ಘೋಷಣೆಗಳ ಜಾರಿ ಕುರಿತಂತೆ ಬಿಜೆಪಿ ಎತ್ತಿರುವ ಅಪಸ್ವರಕ್ಕೆ, ಪ್ರಣಾಳಿಕೆಯ ಜೊತೆಗೇ, ಅದರಲ್ಲಿರುವ ಭರವಸೆಗಳನ್ನು ಜಾರಿಗೊಳಿಸಲು ಅಗತ್ಯವಾದ ಸಂಪನ್ಮೂಲ ಕ್ರೋಡೀಕರಣದ ಬಗ್ಗೆಯೂ ಮಾಹಿತಿ ನೀಡಲು ಕಾಂಗ್ರೆಸ್ ತೀರ್ಮಾನಿಸಿದೆ.

ಈ ಬಗ್ಗೆ ಮಾತನಾಡಿದ ಪ್ರಣಾಳಿಕೆ ಸಮಿತಿ ಉಪಾಧ್ಯಕ್ಷ ಕೆ.ಇ. ರಾಧಾಕೃಷ್ಣ, ‘ಪಕ್ಷದ ಹಿರಿಯ ನಾಯಕ ಜಿ. ಪರಮೇಶ್ವರ ನೇತೃತ್ವದಲ್ಲಿ ಪ್ರಣಾಳಿಕೆ ಸಿದ್ಧಪಡಿಸುವ ಕೆಲಸ ನಡೆಯುತ್ತಿದೆ. ಫೆಬ್ರುವರಿ ವೇಳೆಗೆ ಪ್ರಣಾಳಿಕೆಯನ್ನು ಬಿಡುಗಡೆ ಮಾಡಲಾಗುವುದು’ ಎಂದರು.

‘ರಾಜ್ಯದ ರೈತರು, ಮಹಿಳೆಯರು, ಯುವ ಸಮೂಹವನ್ನು ಗಮನದಲ್ಲಿಟ್ಟು, ಬೃಹತ್ ಸಮಾವೇಶಗಳನ್ನು ಆಯೋಜಿಸಿ ಅವರ ಅಭಿಪ್ರಾಯ ಸಂಗ್ರಹಿಸಿ ಈಡೇರಿಸಲು ಸಾಧ್ಯವಿರುವ ಭರವಸೆಗಳನ್ನಷ್ಟೆ ಪಕ್ಷ ನೀಡಲಿದೆ. ಆ ಭರವಸೆಗಳನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಆಡಳಿತ ನೀಲನಕ್ಷೆಯನ್ನು ನೀಡುತ್ತೇವೆ’ ಎಂದರು.

‘ಭಾನುವಾರದಿಂದ ಎರಡು ದಿನ ಪರಮೇಶ್ವರ ಅವರ ನೇತೃತ್ವದಲ್ಲಿ ಮಂಗಳೂರಿನಲ್ಲಿ ಸ್ಥಳೀಯ ಭಾಗಿದಾರರ ಜೊತೆ ಸಭೆ ನಡೆಯಲಿದೆ. ಮೀನುಗಾರರು, ಬೀಡಿ ಕಾರ್ಮಿಕರು, ಅಡಿಕೆ ಬೆಳೆಗಾರರು, ಬುದ್ಧಿಜೀವಿಗಳ ಜೊತೆ ಸಮಾಲೋಚನೆ ನಡೆಸುತ್ತೇವೆ. ಎಲ್ಲ ವರ್ಗದವರ ಒಲವು ಗಳಿಸಿ, ಚುನಾವಣೆ ಗೆಲ್ಲುವುದು ಪಕ್ಷದ ಗುರಿ. ಚುನಾವಣಾ ಪ್ರಣಾಳಿಕೆ ಕೂಡಾ ಅದಕ್ಕೆ ಪೂರಕವಾಗಿ ಇರಲಿದೆ’ ಎಂದರು.

ಇಂದು ಶಿವಕುಮಾರ ಸ್ವಾಮೀಜಿ ಪುಣ್ಯ ಸ್ಮರಣೆ

ತುಮಕೂರು: ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿಯ ನಾಲ್ಕನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವು ಜ. 21ರಂದು ಬೆಳಿಗ್ಗೆ 10.30ಗಂಟೆಗೆ ಸಿದ್ಧಗಂಗಾ ಮಠದಲ್ಲಿ ನಡೆಯಲಿದೆ.

ಸ್ವಾಮೀಜಿ ಪುಣ್ಯಸ್ಮರಣೆಯನ್ನು ರಾಜ್ಯದಾದ್ಯಂತ ‘ದಾಸೋಹ ದಿನ’ವಾಗಿ ಆಚರಿಸಲಾಗುತ್ತದೆ. ಕೋವಿಡ್ ಕಾರಣ ಕಳೆದ ವರ್ಷ ಸರಳವಾಗಿ ಆಚರಿಸಲಾಗಿತ್ತು. ಈ ಬಾರಿ ಸಿದ್ಧತೆಗಳು ಜೋರಾಗಿ ನಡೆದಿವೆ. ಸಿದ್ಧಲಿಂಗ ಸ್ವಾಮೀಜಿ ಕಾರ್ಯಕ್ರಮದ ನೇತೃತ್ವ ವಹಿಸಲಿದ್ದಾರೆ. ಬೆಂಗಳೂರಿನ ಬೇಲಿಮಠದ ಶಿವರುದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬಿಜೆಪಿ ಮುಖಂಡ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಲಿದ್ದಾರೆ. ಸಿಎಂ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆ ವಹಿಸಲಿದ್ದಾರೆ.

ಪಾತರಗಿತ್ತಿ... ಬಳ್ಳಾರಿ ಉತ್ಸವದ ಅಂಗವಾಗಿ ಶುಕ್ರವಾರ ಏರ್ಪಡಿಸಿದ್ದ ವಸಂತ ವೈಭವ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಪಾತರಗಿತ್ತಿ ವೇಷಧಾರಿಗಳ ಮೈಸೂರಿನ ಕಲಾತಂಡ
ಪ್ರಜಾವಾಣಿ ಚಿತ್ರ

‘ದೇವೇಗೌಡರ ಪಾದದ ದೂಳಿಗೂ ಕಟೀಲ್ ಸಮನಲ್ಲ’

ಪ್ರಜಾವಾಣಿ ವಾರ್ತೆ

ವಿಜಯಪುರ: ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ದೇವೇಗೌಡರ ಕುಟುಂಬದ ಬಗ್ಗೆ ಹಗುರವಾಗಿ ಮಾತನಾಡಿರುವುದು ಖಂಡನೀಯ. ದೇವೇಗೌಡರ ಪಾದದ ದೂಳಿಗೂ ಕಟೀಲ್ ಸಮನಲ್ಲ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಗುಡುಗಿದರು.

ಇಲ್ಲಿ ನಡೆದ ಪಂಚರತ್ನ ರಥಯಾತ್ರೆಯಲ್ಲಿ ಪ್ರತಿಕ್ರಿಯಿಸಿದ ಅವರು, ‘ದೇವೇಗೌಡರ ಕುಟುಂಬದ ಬಗ್ಗೆ ಮಾತನಾಡಲು ನಿಮಗೆ ಯೋಗ್ಯತೆ, ನೈತಿಕತೆ ಇಲ್ಲ, ದೇವೇಗೌಡರ ಬಗ್ಗೆ ಪ್ರಧಾನಿ ಮೋದಿ ಅವರಿಗೆ ಕೇಳಿ ತಿಳಿದುಕೊಳ್ಳಿ’ ಎಂದರು.

ಕ್ಷಮೆಗೆ ಆಗ್ರಹ: ಜೆಡಿಎಸ್ ರಾಜ್ಯ ಘಟಕ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಮಾತನಾಡಿ, ‘ನಳಿನ್ ಕುಮಾರ್ ಕಟೀಲ್ ಬೇಷರತ್ ಕ್ಷಮೆಯಾಚಿಸಬೇಕು, ಇಲ್ಲದಿದ್ದರೆ ಕಪ್ಪುಬಾವುಟ ಪ್ರದರ್ಶಿಸಲಾಗುವುದು’ ಎಂದು ಎಚ್ಚರಿಸಿದರು.

ಕೆಪಿಟಿಸಿಎಲ್ ಪರೀಕ್ಷಾ ಅಕ್ರಮ: ಮತ್ತೊಬ್ಬ ಅಭ್ಯರ್ಥಿ ಬಂಧನ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ, ಪೊಲೀಸರು ಶುಕ್ರವಾರ ಮತ್ತೊಬ್ಬ ಅಭ್ಯರ್ಥಿಯನ್ನು ಬಂಧಿಸಿದ್ದಾರೆ. ಬಂಧಿತರ ಸಂಖ್ಯೆ 52ಕ್ಕೆ ಏರಿದೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನ ಮುಗಳಖೋಡದ ಶಿವರಾಜ ಬಾಗಪ್ಪ ಕಾರಟಗಿ (25) ಬಂಧಿತ. ಈತ ಎಲೆಕ್ಟ್ರಾನಿಕ್ ಉಪಕರಣ ಹಾಗೂ ಮೈಕ್ರೊಚಿಪ್ ಬಳಸಿ ಪರೀಕ್ಷೆ ಬರೆದಿದ್ದ. ಕೃತ್ಯಕ್ಕೆ ಬಳಸಿದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು – 560 023

ನಂ.:ಡಿಹೆಚ್‌ಎಸ್/ರಿಟ್/02/2022–23 ದಿನಾಂಕ: 20.01.2023

ನೇಮಕಾತಿ ಪ್ರಕಟಣೆ

ಕಿರಿಯ ಕಾನೂನು ಸಲಹೆಗಾರರು ಬೇಕಾಗಿದ್ದಾರೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ ಬೆಂಗಳೂರು ಇಲ್ಲಿ ಒಬ್ಬರು ಕಿರಿಯ ಕಾನೂನು ಸಲಹೆಗಾರರನ್ನು ನೇಮಿಸಿಕೊಳ್ಳಲು ಈ ಕೆಳಕಂಡ ಷರತ್ತುಗೊಳಪಟ್ಟು ನೇಮಕಾತಿ ಮಾಡಿಕೊಳ್ಳಲು ನಿರ್ಣಯಿಸಿದ್ದು, ದಿನಾಂಕ: **31.01.2023** ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆರೋಗ್ಯ ಸೌಧ ಬೆಂಗಳೂರು–23, ಆರನೇ ಮಹಡಿ, ನಿರ್ದೇಶಕರ ಕಛೇರಿಯ ಸಭಾಂಗಣದಲ್ಲಿ **ಅಪರಾಹ್ನ 3.00 ರಿಂದ 5.00 ಗಂಟೆಗೆ** ಹಾಜರಾಗಲು ತಿಳಿಸಲಾಗಿದೆ. E-mail: direcroratewrit.1@gmail.com

ಷರತ್ತುಗಳು: 1) ಪ್ರತಿ ತಿಂಗಳು ಗೌರವಧನ ರೂ. 45,000/– ಪ್ರತಿ ವರ್ಷ 5% ರಂತೆ ಸಂಭಾವನೆ ಹೆಚ್ಚಿಸಲಾಗುವುದು. ನೇಮಕಗೊಂಡವರ ಕೆಲಸದ ಪ್ರಗತಿ ಆಧಾರದ ಮೇಲೆ ನವೀಕರಣ ಅವಲಂಬಿಸಿರುತ್ತದೆ. 2) 11 ತಿಂಗಳ ಅವಧಿಗೆ ನೇಮಕಾತಿ. 3) ಗರಿಷ್ಠ 40 ವರ್ಷ ವಯಸ್ಸಾಗಿರಬೇಕು. 4) ಎಲ್.ಎಲ್.ಬಿ ಯಲ್ಲಿ ಕನಿಷ್ಠ 55% ಅಂಕವನ್ನು ಗಳಿಸಿರಬೇಕು.

ದಾಖಲಾತಿಗಳು: 1) ನೋಂದಣಿ ಸಂಖ್ಯೆ ಹಾಗೂ ನೋಂದಣಿ ದಿನಾಂಕವುಳ್ಳ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ರವರು ನೀಡಿದ ಮೂಲ ಗುರುತಿನ ಕಾರ್ಡ್. 2) ವಕೀಲ ವೃತ್ತಿಯ 4 ವರ್ಷ ಅನುಭವದ ಬಗ್ಗೆ ಬಾರ್ ಅಸೋಸಿಯೇಷನ್‌ನಿನ ಅಧ್ಯಕ್ಷರ / ಕಾರ್ಯದರ್ಶಿಯ ವರಿಂದ ಮೂಲ ಪ್ರಮಾಣ ಪತ್ರ ಹೊಂದಿರಬೇಕು. 3) ಎಲ್.ಎಲ್.ಬಿ. ಯ ಪದವಿಯ ಪ್ರಮಾಣ ಪತ್ರ ಮತ್ತು ಎಲ್ಲಾ ವರ್ಷಗಳ ಮೂಲ ಅಂಕಪಟ್ಟಿ.

ಆದ್ಯತೆ: 1) ಕರ್ನಾಟಕ ರಾಜ್ಯ ಆಡಳಿತ ನ್ಯಾಯಾಧೀಕರಣದಲ್ಲಿ (ಕೆಎಸ್‌ಎಟಿ) ಹಾಗೂ ಉಚ್ಚ ನ್ಯಾಯಾಲಯದಲ್ಲಿ ಕರ್ನಾಟಕ ಸಿವಿಲ್ ಸೇವಾ ನಿಯಮಗಳ ವೃತ್ತಿಯಲ್ಲಿ ಅನುಭವವಿದ್ದವರಿಗೆ ಹಾಗೂ ಆಂಗ್ಲ ಭಾಷೆಯ ಕಂಪ್ಯೂಟರ್ ಹಾಗೂ ಬೆರಳಚ್ಚು ಅನುಭವವುಳ್ಳವರಿಗೆ ಆದ್ಯತೆ.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು

DIPR/CP/BCPL/4215/2022-23

ಎಸ್‌ಎಸ್‌ಸಿ ಪರೀಕ್ಷೆ: ಕನ್ನಡದಲ್ಲೂ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಬ್ಬಂದಿ ನೇಮಕಾತಿ ಆಯೋಗ (ಎಸ್‌ಎಸ್‌ಸಿ) ಇದೇ ಮೊದಲ ಬಾರಿ ಕನ್ನಡ, ಕೊಂಕಣಿ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಿದೆ.

ಎಸ್‌ಎಸ್‌ಸಿ 10,880 ಮಲ್ಟಿ ಟಾಸ್ಕಿಂಗ್ ಸ್ಟಾಫ್ (ಎಂಟಿಎಸ್) ಹಾಗೂ ಸುಂಕ ಮತ್ತು ಪರೋಕ್ಷ ತೆರಿಗೆಯ ಕೇಂದ್ರೀಯ ಮಂಡಳಿ, ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೊದಲ್ಲಿ ಖಾಲಿ ಇರುವ 529 ಹವಾಲ್ದಾರ್ ಸೇರಿ 11,409 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿದ್ದು, ಪರೀಕ್ಷೆ ತೆಗೆದುಕೊಳ್ಳುವ ರಾಜ್ಯದ ಅಭ್ಯರ್ಥಿಗಳು ಕನ್ನಡವನ್ನು ಆಯ್ಕೆ ಮಾಡಿಕೊಳ್ಳಲು 08 ಕೋಡ್ ಬಳಸಬಹುದು.

ಕಂಪ್ಯೂಟರ್ ಆಧಾರಿತ ಪರೀಕ್ಷೆಯು (ಪತ್ರಿಕೆ ಒಂದು) ವಸ್ತುನಿಷ್ಠ ಮಾದರಿಯ ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಈ ಪತ್ರಿಕೆಯನ್ನು ಅಭ್ಯರ್ಥಿಗಳು ತಮಗೆ ಅನುಕೂಲವಾಗುವ ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲೇ ಬರೆಯಬಹುದು. ಎರಡನೇ ಪತ್ರಿಕೆಯನ್ನು ಅಭ್ಯರ್ಥಿಗಳು ಹಿಂದಿ, ಇಂಗ್ಲಿಷ್ ಜತೆಗೆ ಕನ್ನಡ ಸೇರಿದಂತೆ 13 ಪ್ರಾದೇಶಿಕ ಭಾಷೆಗಳಲ್ಲಿ ಯಾವುದಾದರೂ ಒಂದರಲ್ಲಿ ಬರೆಯಬಹುದು. 50 ಅಂಕಗಳಿಗೆ ವಿವರಣಾತ್ಮಕ ಅಥವಾ ಪ್ರಬಂಧ ಮಾದರಿಯಲ್ಲಿ ಉತ್ತರಿಸಬೇಕಾಗುತ್ತದೆ (45 ನಿಮಿಷಗಳ ಅವಕಾಶ).

ಫೆ.17 ಅರ್ಜಿ ಸಲ್ಲಿಸಲು ಕೊನೆಯ ದಿನ. ಏಪ್ರಿಲ್‌ನಲ್ಲಿ ಪರೀಕ್ಷೆ ನಡೆಯಲಿದೆ. ಎಸ್ಸೆಸ್ಸೆಲ್ಸಿ ಉತ್ತೀರ್ಣರಾದವರು ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಸಹಾಯವಾಣಿ 9483862020, ವೆಬ್‌ಸೈಟ್ https://ssc.nic.in ಸಂಪರ್ಕಿಸಬಹುದು.

ಪ್ರಾದೇಶಿಕ ಮೀಸಲಾತಿಗೆ ಒತ್ತಾಯ

ಎಸ್‌ಎಸ್‌ಸಿ ಪರೀಕ್ಷೆಗಳನ್ನು ಇದುವರೆಗೂ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಬರೆಯಲು ಅವಕಾಶವಿತ್ತು. ಇದರಿಂದ ಹಿಂದಿ ಭಾಷಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗುತ್ತಿದ್ದರು. ಹಾಗಾಗಿ, ಇದುವರೆಗೂ ಕೇಂದ್ರ ಸರ್ಕಾರದ ಸಚಿವಾಲಯ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಹಿಂದಿ ಭಾಷಿಕರ ಪ್ರಾಬಲ್ಯವಿತ್ತು.

‘ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡಿರುವುದು ಸ್ವಾಗತಾರ್ಹ. ಹಾಗೆಯೇ, ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಕನ್ನಡಿಗರನ್ನೇ ಆಯ್ಕೆ ಮಾಡಬೇಕು. ಪ್ರಾದೇಶಿಕ ಮೀಸಲಾತಿ ಕಲ್ಪಿಸಬೇಕು. ಆಗ ಮಾತ್ರ ಅಧಿಕ ಸಂಖ್ಯೆಯ ಕನ್ನಡಿಗರಿಗೆ ರಾಜ್ಯದಲ್ಲೇ ಕೆಲಸ ಮಾಡಲು ಅನುಕೂಲವಾಗುತ್ತದೆ’ ಎನ್ನುವುದು ರಾಜ್ಯದ ಅಭ್ಯರ್ಥಿಗಳ ಒತ್ತಾಯ.

ರಾಜ್ಯದ ಪರೀಕ್ಷಾ ಕೇಂದ್ರಗಳು

ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ಉಡುಪಿ

ಮರುಮೌಲ್ಯಮಾಪನದಲ್ಲಿ ಅಂಕ ಏರಿಕೆ; ಸಮಿತಿ ಶಿಫಾರಸ್ಸಿನಂತೆ ಕವಿವಿ ಕ್ರಮ

ಮೌಲ್ಯಮಾಪಕರಿಗೆ ಭಾರಿ ದಂಡ

● ಇ.ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 2021ರ ಆಗಸ್ಟ್‌ನಲ್ಲಿ ನಡೆದಿದ್ದ ಬಿ.ಎಸ್ಸಿ 3ನೇ ಸೆಮಿಸ್ಟರ್ ಪರೀಕ್ಷೆ ಮೌಲ್ಯಮಾಪನದಲ್ಲಿ ಭಾರಿ ವ್ಯತ್ಯಾಸ ಕಂಡುಬಂದಿದ್ದರಿಂದ 17 ಜನ ಮೌಲ್ಯಮಾಪಕರಿಗೆ ಭಾರಿ ಮೊತ್ತದ ದಂಡ ವಿಧಿಸಿರುವುದು ಈಗ ಚರ್ಚೆಯಗೆ ವಿಷಯವಾಗಿದೆ.

ಕೋವಿಡ್–19 ಸಂದರ್ಭದಲ್ಲಿ ಬಿ.ಎಸ್ಸಿ 3ನೇ ಸೆಮಿಸ್ಟರ್‌ನ ರಾಸಾಯನ ವಿಜ್ಞಾನ ವಿಷಯದಲ್ಲಿ ಶೇ 30ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದರು. ವಿದ್ಯಾರ್ಥಿಗಳು ಮರುಮೌಲ್ಯಮಾಪನಕ್ಕೆ ಆಗ್ರಹಿಸಿದ್ದರು.

ವಿ.ವಿ ಎರಡನೇ ಬಾರಿ ಮೌಲ್ಯಮಾಪನ ನಡೆಸಿದಾಗ ಉತ್ತೀರ್ಣರಾದವರ ಪ್ರಮಾಣ ಶೇ 70ಕ್ಕೆ ಏರಿಕೆಯಾಗಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ವಿಶ್ವವಿದ್ಯಾಲಯ, ತನಿಖೆಗೆ ಸಮಿತಿ ರಚಿಸಿತ್ತು. ಸಮಿತಿ ಅಸಮರ್ಪಕ ಮೌಲ್ಯಮಾಪನ ಆಗಿರುವುದನ್ನು ಸಮಿತಿ ಖಾತ್ರಿಪಡಿಸಿ, ಮೌಲ್ಯಮಾಪಕರಿಗೆ ದಂಡ ವಿಧಿಸಲು ಸಿಂಡಿಕೇಟ್‌ಗೆ ಶಿಫಾರಸು ಮಾಡಿತು. ಅದರಂತೆ, ಪ್ರತಿ ಉತ್ತರ ಪತ್ರಿಕೆಗೆ ₹ 5 ಸಾವಿರದಂತೆ ದಂಡ ವಿಧಿಸಲಾಗಿದೆ.

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ

ಪರಿಣಾಮ, ಪ್ರತಿ ಮೌಲ್ಯಮಾಪಕರು ಕನಿಷ್ಠ ₹ 2 ಲಕ್ಷದಿಂದ ₹7 ಲಕ್ಷದವರೆಗೆ ದಂಡ ಭರಿಸಬೇಕಾಗಿದೆ. 10 ಮೌಲ್ಯಮಾಪಕರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಇವರಲ್ಲಿ ಹಲವರು ಅತಿಥಿ ಉಪನ್ಯಾಸಕರು. ಇದು, ಭಾರಿ ಚರ್ಚೆಗೆ ಕಾರಣವಾಗಿದೆ.

‘1, 3 ಹಾಗೂ 5ನೇ ಸೆಮಿಸ್ಟರ್ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಸಿದ್ದೇವೆ. 1 ಹಾಗೂ 5ನೇ ಸೆಮಿಸ್ಟರ್ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಸಮಸ್ಯೆ ಎದುರಾಗಿಲ್ಲ. ಮೌಲ್ಯಮಾಪನದ ನಂತರ ಮಾಡರೇಟರ್, ಮುಖ್ಯಸ್ಥರೂ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿ ಸಮ್ಮತಿಸಿದ್ದಾರೆ. ಈಗ ನಮ್ಮ ತಪ್ಪು ಹೇಗಾಗುತ್ತದೆ. ಮೌಲ್ಯಮಾಪನವನ್ನು ಮೇಲಧಿಕಾರಿಗಳ ಸೂಚನೆಯಂತೆಯೇ ನಡೆಸಲಾಗಿದೆ’ ಎಂದು ನೊಂದ ಪ್ರಾಧ್ಯಾಪಕರೊಬ್ಬರು ತಿಳಿಸಿದರು.

ಕರ್ನಾಟಕ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ.ಸಿ.ಕೃಷ್ಣಮೂರ್ತಿ, ‘ಇದು, ನಾನು ಅಧಿಕಾರ ವಹಿಸಿಕೊಳ್ಳುವ ಮೊದಲು ನಡೆದ ವಿಷಯವಾಗಿದೆ. ಇಲ್ಲಿ ಸಮಿತಿಯ ಶಿಫಾರಸಿನಂತೆ ಸಿಂಡಿಕೇಟ್ ನಿರ್ಣಯ ತೆಗೆದುಕೊಂಡಿದೆ. ಮರುಮೌಲ್ಯಮಾಪನದಲ್ಲಿ ಹಲವರು ಹೆಚ್ಚು ಅಂಕ ಗಳಿಸಿದ್ದರೆ, ಕೆಲವರು ಕಡಿಮೆ ಅಂಕ ಪಡೆದಿದ್ದಾರೆ. ವಿ.ವಿ ಇತಿಹಾಸದಲ್ಲೇ ಇಂಥ ಪ್ರಕರಣ ನಡೆದಿರುವುದು ಇದೇ ಮೊದಲು. ದಂಡ ವಿಧಿಸಿರುವುದನ್ನು ರದ್ದುಪಡಿಸುವಂತೆ ಮೌಲ್ಯಮಾಪಕರು, ಕುಲಪತಿ ಅವರಿಗೆ ಮನವಿ ಸಲ್ಲಿಸಿದ್ದಾರೆ’ ಎಂದು ತಿಳಿಸಿದರು.

ಮೈಸೂರು ಮಹಾನಗರ ಪಾಲಿಕೆ, ಮೈಸೂರು

ನಂ. ಸಿಇಎಸ್‌ಟಿ (4) : ಸಿಆರ್ : 60 : 2022–2023 ಆಯುಕ್ತರವರ ಕಚೇರಿ, ದಿನಾಂಕ : 19–01–2023.

ಅಧಿಸೂಚನೆ

ಕರ್ನಾಟಕ ಮಹಾನಗರ ಪಾಲಿಕೆಗಳು (ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಾಮಾನ್ಯ ನೇಮಕಾತಿ) ನಿಯಮಗಳು, 2011 ರಂತೆ ಮೈಸೂರು ಮಹಾನಗರ ಪಾಲಿಕೆಗೆ ಮಂಜೂರಾಗಿರುವ “ಪೌರಕಾರ್ಮಿಕರ ಹುದ್ದೆ” ಗಳ ಪೈಕಿ ನೇರ ನೇಮಕಾತಿಯಡಿ ಖಾಲಿ ಇರುವ 205 “ಪೌರಕಾರ್ಮಿಕರ” ಹುದ್ದೆಗಳಿಗೆ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ರಾಜ್ಯದ ಪಾಲಿಕೆಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2022 ರ ರೀತ್ಯಾ “ಪೌರಕಾರ್ಮಿಕರ” ಹುದ್ದೆಗಳನ್ನು ವಿಶೇಷ ನೇಮಕಾತಿ ಮೂಲಕ ಭರ್ತಿ ಮಾಡಲು ಮೈಸೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ನೇರಪಾವತಿ, ಕ್ಷೇಮಾಭಿವೃದ್ಧಿ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸಕ್ಕೆ ಸಮಾನ ವೇತನ ಅಥವಾ ಹೊರಗುತ್ತಿಗೆ ಪೌರಕಾರ್ಮಿಕರು, ಲೋಡರ್ ಅಥವಾ ಕ್ಲೀನರ್ ಹುದ್ದೆಗಳಲ್ಲಿ ಕನಿಷ್ಠ ಎರಡು(2) ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮಗಳು ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿವರ	ದಿನಾಂಕ	ಅರ್ಜಿ ನಮೂನೆ ಪಡೆಯುವ ವಿಳಾಸ
ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ	20–01–2023	ಮೈಸೂರು ಮಹಾನಗರ ಪಾಲಿಕೆ ಕೇಂದ್ರ ಕಚೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು–570004
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	20–02–2023	

ನಗರ ಸ್ಥಳೀಯ ಸಂಸ್ಥೆಯ ಹೆಸರು	ಹುದ್ದೆಯ ಹೆಸರು ಹಾಗೂ ವೇತನ ಶ್ರೇಣಿ	ಭರ್ತಿ ಮಾಡಲು ಒಟ್ಟು ಖಾಲಿ ಇರುವ ಹುದ್ದೆಗಳ ಸಂಖ್ಯೆ	ನಿಗಧಿಪಡಿಸಲಾದ ಕನಿಷ್ಠ ವಿದ್ಯಾರ್ಹತೆ/ ಅರ್ಹತೆಗಳು
ಮೈಸೂರು ಮಹಾನಗರ ಪಾಲಿಕೆ	ಪೌರಕಾರ್ಮಿಕ (ರೂ.17000–28950)	205	* ವಿದ್ಯಾರ್ಹತೆ ಅನ್ವಯಿಸುವುದಿಲ್ಲ. * ಕನ್ನಡ ಮಾತನಾಡಲು ಬಲ್ಲವರಾಗಿರಬೇಕು. * ಮೈಸೂರು ಮಹಾನಗರ ಪಾಲಿಕೆಯಲ್ಲಿ ಹಾಲಿ ನೇರಪಾವತಿ/ಕ್ಷೇಮಾಭಿವೃದ್ದಿ/ದಿನಗೂಲಿ/ಗುತ್ತಿಗೆ /ಸಮಾನ ಕೆಲಸಕ್ಕೆ ಸಮಾನ ವೇತನ/ ಹೊರಗುತ್ತಿಗೆ ಆಧಾರದಲ್ಲಿ ಪೌರಕಾರ್ಮಿಕ ಅಥವಾ ಲೋಡರ್ ಅಥವಾ ಕ್ಲೀನರ್ ಹುದ್ದೆಯಲ್ಲಿ ಕನಿಷ್ಠ ಎರಡು(2) ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ನಿರಂತರವಾಗಿ ಕೆಲಸ ನಿರ್ವಹಿಸುತ್ತಿರುವ ಹಾಗೂ ಈ ನಿಯಮಗಳು ಜಾರಿಗೆ ಬಂದ ದಿನಾಂಕದಲ್ಲಿಯೂ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಮಾತ್ರ ಅರ್ಹರಿರುತ್ತಾರೆ. * ಅರ್ಜಿ ಸಲ್ಲಸಲು ಸರ್ಕಾರ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ 18 ವರ್ಷ ಪೂರ್ಣಗೊಂಡಿದ್ದು, ಗರಿಷ್ಠ ವಯೋಮಿತಿ 55 ವರ್ಷ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಡಿ ಖಾಲಿ ಇರುವ 205 ಪೌರಕಾರ್ಮಿಕರ ಹುದ್ದೆಗಳಿಗೆ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಇಲಾಖೆಯು ಹೊರಡಿಸಿರುವ ಆದೇಶ ಸಂಖ್ಯೆ ಸಿಆಸುಇ : 01 : ಸೆಹಿಮ : 2022, ಬೆಂಗಳೂರು, ದಿನಾಂಕ : 28–12–2022 ರಂತೆ ರೋಸ್ಟರ್ ಬಿಂದುಗಳನ್ನು ವರ್ಗೀಕರಿಸಿಸುವ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಮೀಸಲಾತಿ	ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ	ಯೋ.ನಿ.	ಕ.ಮಾ.ಅ.	ಅಂ.ವಿ.	ತೃ..ಲಿಂ.	ಒಟ್ಟು
1	ಪ.ಜಾ.	05	12	09	03	01	02	02	01	35
2	ಪ.ಪಂ.	02	06	04	01	–	01	01	–	15
3	ಪ್ರ.–1	02	03	03	–	–	–	01	–	09
4	ಪ್ರ–2(ಎ)	04	10	08	03	01	01	02	01	30
5	ಪ್ರ–2(ಬಿ)	03	03	02	–	–	–	01	–	09
6	ಪ್ರ–3(ಎ)	02	03	02	–	–	–	01	–	08
7		ಪ್ರ–3(ಬಿ)	01	03	03	01	–	–	01	–
8		ಸಾ.ಅ.	15	29	23	09	04	04	05	01
	ಒಟ್ಟು	34	69	54	17	06	08	14	03	205

ಅರ್ಜಿ ಸಲ್ಲಿಸುವ ವಿಧಾನ :–
ಅಧಿಸೂಚನೆಯ ಪ್ರತಿಯನ್ನು ಹಾಗೂ ನಿಗಧಿತ ಅರ್ಜಿ ನಮೂನೆಯನ್ನು ಮೈಸೂರು ಮಹಾನಗರ ಪಾಲಿಕೆಯ ಕೇಂದ್ರ ಕಚೇರಿಯಿಂದ ಪಡೆದು, ತಮಗೆ ಅನ್ವಯಿಸುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡುವುದು. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಮೇಲೆ ಅಂಟಿಸಿ, ಅದರ ಮೇಲೆ ಸಹಿ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತು ಮಾಡುವುದು ಹಾಗೂ ಅರ್ಜಿಯ ನಮೂನೆಯ ಕೊನೆಯಲ್ಲಿ ಘೋಷಣೆಯ ನಂತರ ಸಹಿ/ಹೆಬ್ಬೆಟ್ಟಿನ ಗುರುತು ಮಾಡುವುದು. ಹುದ್ದೆಗೆ ಸಂಬಂಧಿಸಿದ ವಿದ್ಯಾರ್ಹತೆ, ವಯಸ್ಸು ಮತ್ತು ಕೋರಿರುವ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು, ಸಕ್ಷಮ ಪ್ರಾಧಿಕಾರಿಗಳಿಂದ ಪಡೆದು, ಅವುಗಳ ನಕಲು ಪ್ರತಿಗಳನ್ನು ಸಂಬಂಧಪಟ್ಟ ಶಾಖಾ ಮುಖ್ಯಸ್ಥರಿಂದ ಧೃಡೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಅರ್ಜಿಯನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಆಯುಕ್ತರು ಮೈಸೂರು ಮಹಾನಗರ ಪಾಲಿಕೆ ಮೈಸೂರು ಇವರಿಗೆ ದಿನಾಂಕ : 20–02–2023 ರ ಸಂಜೆ 5–30 ಗಂಟೆಯೊಳಗೆ ನೇರವಾಗಿ ಸಲ್ಲಿಸಿ ಸ್ವೀಕೃತಿ ಪಡೆಯತಕ್ಕದ್ದು. ಅಂಚೆ ಮೂಲಕ ಅಥವಾ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅವಧಿ/ಸಮಯ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸೂಚನೆ :– ನೇಮಕಾತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಪಾಲಿಕೆ ವೆಬ್‌ಸೈಟ್ http://www.mysurucity.mrc.gov.in ಅಥವಾ ಮೈಸೂರು ಮಹಾನಗರ ಪಾಲಿಕೆ ಕೇಂದ್ರ ಕಚೇರಿಯಿಂದ ಪಡೆಯಬಹುದಾಗಿದೆ.

ಸ್ಥಳ : ಮೈಸೂರು
ದಿನಾಂಕ: 19–01–2023

ಅಧ್ಯಕ್ಷರು
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಆಯುಕ್ತರು
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಇಎಸ್‌ಐ ಕಾಯ್ದೆ ವ್ಯಾಖ್ಯಾನಿಸುವಾಗ ಉದಾರತೆ ತೋರಿ: ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಕಾರ್ಮಿಕರ ರಾಜ್ಯ ವಿಮಾ ಕಾಯ್ದೆಯನ್ನು (ಇಎಸ್‌ಐ) ವ್ಯಾಖ್ಯಾನಿಸುವಾಗ ಉದಾರತೆ ತೋರಬೇಕು. ಆ ಮೂಲಕ ನೌಕರರಿಗೆ ಸಾಮಾಜಿಕ ಭದ್ರತಾ ಸೌಲಭ್ಯ ಒದಗಿಸಲು ಸಾಧ್ಯವಾಗಿಸಬೇಕು ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

ಅರ್ಜಿಯೊಂದರ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಸಿ.ಟಿ. ರವಿಕುಮಾರ್ ಅವರಿದ್ದ ನ್ಯಾಯಪೀಠ, 'ಸಮಾಜ ಕಲ್ಯಾಣ ಉದ್ದೇಶದಿಂದ ಜಾರಿಗೊಳಿಸಿರುವ ಶಾಸನ ಇದಾಗಿರುವ ಕಾರಣ, ಕಾಯ್ದೆಯ ವ್ಯಾಖ್ಯಾನ ವು ಫಲಾನುಭವಿಗಳ ಅನುಕೂಲವಾಗುವಂತೆ ಇರಬೇಕು' ಎಂದು ಹೇಳಿತು.

ತೆಲಂಗಾಣದ ಸಿನಿಮಾ ಮಂದಿರವೊಂದಕ್ಕೆ 'ಡಿಮ್ಯಾಂಡ್ ನೋಟಿಸ್' ನೀಡಿದ್ದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಕಾರ್ಮಿಕರ ವಿಮಾ ನ್ಯಾಯಾಲಯವು ವಜಾಗೊಳಿಸಿ ಆದೇಶಿಸಿತ್ತು. ಈ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್, ಕಾರ್ಮಿಕರ ವಿಮಾ ನ್ಯಾಯಾಲಯದ ಆದೇಶವನ್ನು ರದ್ದುಗೊಳಿಸಿ ಆದೇಶಿಸಿತ್ತು.

ಹೈಕೋರ್ಟ್‌ನ ಈ ಆದೇಶವನ್ನು ಪ್ರಶ್ನಿಸಿ ಇಎಸ್‌ಐ ನಿಗಮವು ಸುಪ್ರೀಂಕೋರ್ಟ್ ಮೊರೆ ಹೋಗಿತ್ತು. ವಿಚಾರಣೆ ನಡೆಸಿದ ನ್ಯಾಯಪೀಠ, ಹೈಕೋರ್ಟ್‌ನ ಆದೇಶವನ್ನು ರದ್ದುಗೊಳಿಸಿ ಆದೇಶಿಸಿತು.

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ವಿಡಿಯೊಗಳ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಅರ್ಜುನ್ ಹಾಲಪ್ಪ
ಹಾಕಿ ಪಟು
YOUTUBE PREMIER
Prajavani.net Prajavani
ಹಾಕಿ ಕಣದ ಸವ್ಯಸಾಚಿ
ಬೆಳಿಗ್ಗೆ 10 ಕ್ಕೆ
ಮಧ್ಯಾಹ್ನ 12ಕ್ಕೆ ಕನ್ನಡ ಧ್ವನಿ ಪಾಡ್‌ಕಾಸ್ಟ್‌ನಲ್ಲಿ

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಪುಲಮಾಚಿ ಗ್ರಾಮ ಸಮೀಪದ ಭೂತಪ್ಪ ದೇವಾಲಯದ ಬೆಟ್ಟದ ಪ್ರದೇಶದಲ್ಲಿ ಶುಕ್ರವಾರ ಬೆಳಿಗ್ಗೆ ಐದು ಕರಡಿಗಳು ಕಾಣಿಸಿಕೊಂಡಿದ್ದು, ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ.

ಇಂದು ಬೃಹತ್ ಲಸಿಕಾ ಮೇಳ

ಬೆಂಗಳೂರು: ಆರೋಗ್ಯ ಇಲಾಖೆಯು ಶನಿವಾರ ರಾಜ್ಯಾದ್ಯಂತ ಕೋವಿಡ್ ಲಸಿಕಾ ಮೇಳ ಹಮ್ಮಿಕೊಂಡಿದೆ.

ರಾಜ್ಯದಲ್ಲಿ 12 ಲಕ್ಷ ಡೋಸ್ ಲಸಿಕೆ ದಾಸ್ತಾನು ಇದೆ. ಎಲ್ಲ ಜಿಲ್ಲೆಗಳ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ಅಗತ್ಯ ಲಸಿಕೆ ಪೂರೈಸಲಾಗಿದೆ. ಸದ್ಯ 8 ಲಕ್ಷ ಡೋಸ್ ಕೋವಿಶೀಲ್ಡ್ ಮತ್ತು 4 ಲಕ್ಷ ಡೋಸ್ ಕೋವ್ಯಾಕ್ಸಿನ್ ಲಸಿಕೆ ದಾಸ್ತಾನು ಇದೆ. ಎರಡನೇ ಮತ್ತು ಮುನ್ನೆಚ್ಚರಿಕೆ ಡೋಸ್ ಪಡೆಯುವವರಿಗೆ ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ಲಸಿಕೆ ಒದಗಿಸಲಾಗುತ್ತದೆ ಎಂದು ಆರೋಗ್ಯ ಇಲಾಖೆ ಹೇಳಿದೆ.

ಈವರೆಗೆ ಒಟ್ಟು 12.1 ಕೋಟಿ ಡೋಸ್ ಲಸಿಕೆ ವಿತರಿಸಲಾಗಿದೆ. ಮೊದಲ ಹಾಗೂ ಎರಡನೇ ಡೋಸ್ ವಿತರಣೆಯಲ್ಲಿ ಶೇ 102 ರಷ್ಟು ಸಾಧನೆ ಮಾಡಲಾಗಿದೆ. ಮುನ್ನೆಚ್ಚರಿಕೆ ಡೋಸ್ ವಿತರಣೆಯಲ್ಲಿ ಶೇ 21 ರಷ್ಟು ಗುರಿ ಸಾಧಿಸಲಾಗಿದೆ. ಮೊದಲ ಡೋಸ್ 5.51 ಕೋಟಿ, ಎರಡನೇ ಡೋಸ್ 5.53 ಕೋಟಿ ಹಾಗೂ ಮುನ್ನೆಚ್ಚರಿಕೆಯ 1.08 ಕೋಟಿ ಡೋಸ್ ವಿತರಿಸಲಾಗಿದೆ.

ಪೊಲೀಸರ ಮೂಲಕ ಪ್ರತಿಭಟನೆ ಹತ್ತಿಕ್ಕಲು ಯತ್ನ • ಸಾರ್ವಜನಿಕರ ಸಂಚಾರಕ್ಕೆ ಅಡ್ಡಿ

ಅಂಗನವಾಡಿ ಕಾರ್ಯಕರ್ತೆಯರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ ಶಿಕ್ಷಕರ ಸ್ಥಾನಮಾನ ನೀಡಿ, ಸೇವಾ ಭದ್ರತೆ ಒದಗಿಸಬೇಕು' ಎಂದು ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ಪೊಲೀಸರು ಶುಕ್ರವಾರ ವಶಕ್ಕೆ ಪಡೆದಿದ್ದು, ಈ ಕ್ರಮಕ್ಕೆ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಜ. 18ರಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಲಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಮೂರನೇ ದಿನವಾದ ಶುಕ್ರವಾರವೂ ಪ್ರತಿಭಟನೆ ಮುಂದುವರಿದಿತ್ತು.

'ಹಲವು ಬಾರಿ ಪ್ರತಿಭಟನೆ ನಡೆಸಿದರೂ ರಾಜ್ಯ ಸರ್ಕಾರ ಬೇಡಿಕೆ ಈಡೇರಿಸುತ್ತಿಲ್ಲ. ಈ ಬಾರಿ ಮುಖ್ಯಮಂತ್ರಿಯವರು ಸ್ಥಳಕ್ಕೆ ಬಂದು ಬೇಡಿಕೆ ಈಡೇರಿಸುವ ಭರವಸೆ ನೀಡಬೇಕು. ಅಲ್ಲಿಯವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ' ಎಂದು ಪಟ್ಟು ಹಿಡಿದಿದ್ದ ಪ್ರತಿಭಟನಕಾರರು, 'ಮುಖ್ಯಮಂತ್ರಿ ಸ್ಥಳಕ್ಕೆ ಬರದಿದ್ದರೆ, ಉದ್ಯಾನ ಎದುರಿನ ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮುಂದುವರಿಸಲಾಗುವುದು' ಎಂದು ಎಚ್ಚರಿಸಿದ್ದರು.

'ರಸ್ತೆಯಲ್ಲಿ ಪ್ರತಿಭಟನೆ ನಡೆದರೆ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತದೆ' ಎಂದು ತಿಳಿದ ಪೊಲೀಸರು, ಪ್ರತಿಭಟನಕಾರರನ್ನು ಉದ್ಯಾನದಿಂದ ತೆರವು ಮಾಡಲು ಮುಂದಾದರು. ಮುಖಂಡರ ಜೊತೆ ಮಾತುಕತೆ ನಡೆಸಿದ ಮಹಿಳಾ ಪೊಲೀಸ್ ಅಧಿಕಾರಿಗಳು, ಪ್ರತಿಭಟನೆ ಕೈ ಬಿಡುವಂತೆ ಕೋರಿದರು. ಆದರೆ, ಮುಖಂಡರು ಒಪ್ಪಲಿಲ್ಲ.

ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ ಪೊಲೀಸರು, ರಸ್ತೆ ಸಂಚಾರ ತಡೆ ನಡೆಸಿ ಹೇಳಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ವಶಕ್ಕೆ ಪಡೆದರು. ಬಿಎಂಟಿಸಿ ಬಸ್‌ಗಳಲ್ಲಿ ನಗರದ ಹಲವು ಮೈದಾನಗಳಿಗೆ ಕರೆದೊಯ್ದು ರಾತ್ರಿಯವರೆಗೂ ಇರಿಸಿಕೊಂಡರು.

ಕಾರ್ಯಕರ್ತೆಯರು ಹಾಗೂ ಸಹಾಯಕಿಯರನ್ನು ವಶಕ್ಕೆ ಪಡೆಯುವ ವೇಳೆ, ಅವರ ಮಕ್ಕಳು ಕಣ್ಣೀರಿಟ್ಟು ಗೋಳಾಡಿದರು. ವಶಕ್ಕೆ ಪಡೆದ ಕ್ರಮದ ಬಗ್ಗೆ ಪ್ರತಿಕ್ರಿಯಿಸಲು ಪೊಲೀಸ್ ಅಧಿಕಾರಿಗಳು ನಿರಾಕರಿಸಿದರು.

ಪೊಲೀಸರ ಮೂಲಕ ಪ್ರತಿಭಟನೆಗೆ ಅಡ್ಡಿ: 'ರಸ್ತೆ ಸಂಚಾರಕ್ಕೆ ಅಡ್ಡಿಪಡಿಸುವ ಉದ್ದೇಶ ನಮಗಿರಲಿಲ್ಲ. ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದವು. ಪೊಲೀಸರು ಏಕಾಏಕಿ ಬಂದು ಎಲ್ಲರನ್ನೂ ವಶಕ್ಕೆ ಪಡೆದು ಮೈದಾನಕ್ಕೆ ತಂದು ಕೂರಿಸಿದ್ದಾರೆ. ಪ್ರತಿಭಟನೆ ಹತ್ತಿಕ್ಕುವ ಮೂಲಕ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಪ್ರೇಮಾ ದೂರಿದರು.

'ನಾವು ಯಾರೂ ರಸ್ತೆಗೆ ಹೋಗಿರಲಿಲ್ಲ. ಪೊಲೀಸರೇ ಬಿಎಂಟಿಸಿ ಬಸ್ ಹಾಗೂ ತಮ್ಮ ವಾಹನಗಳನ್ನು ರಸ್ತೆ ಮೇಲೆ ನಿಲ್ಲಿಸಿ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಪಡಿಸಿದರು. ನಮ್ಮ ಸಂಘದ ಪದಾಧಿಕಾರಿಗಳನ್ನು ಪ್ರತಿಭಟನೆಗೆ ಬಂದಿದ್ದ ಸ್ಥಳದಿಂದಲೇ ವಶಕ್ಕೆ ಪಡೆದಿದ್ದಾರೆ. ಇದು ಖಂಡನೀಯ. ರಾಜ್ಯ ಸರ್ಕಾರ ಪೊಲೀಸರ ಮೂಲಕ ನಮ್ಮ ಹೋರಾಟ ಹತ್ತಿಕ್ಕಲು ಯತ್ನಿಸಿದೆ' ಎಂದು ಅವರು ಆರೋಪಿಸಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಪೊಲೀಸರು ಶುಕ್ರವಾರ ವಶಕ್ಕೆ ಪಡೆದು ಕರೆದೊಯ್ದರು – ಪ್ರಜಾವಾಣಿ ಚಿತ್ರ

'ಶಾಸಕರ ವಿರುದ್ಧ ಲೋಕಾಯುಕ್ತಕ್ಕೆ ದೂರು'

ಚಿತ್ರದುರ್ಗ: ಬಿಜೆಪಿ ಶಾಸಕ ಜಿ.ಎಚ್. ತಿಪ್ಪಾರೆಡ್ಡಿ ಅವರು ₹ 90 ಲಕ್ಷ ಕಮಿಷನ್ ಪಡೆದಿದ್ದು, ಈ ಸಂಬಂಧ ಲೋಕಾಯುಕ್ತಕ್ಕೆ ದೂರು ನೀಡಲು ನಿರ್ಧರಿಸಲಾಗಿದೆ ಎಂದು ರಾಜ್ಯ ಗುತ್ತಿಗೆದಾರರ ಸಂಘದ ಕಾರ್ಯದರ್ಶಿ ಆರ್.ಮಂಜುನಾಥ್ ತಿಳಿಸಿದರು.

'ದೂರು ದಾಖಲಿಸುವ ಪ್ರಕ್ರಿಯೆ ಆರಂಭವಾಗಿದೆ. ಕಮಿಷನ್ ವಿಚಾರವಾಗಿ ಶಾಸಕರು ಮಾತನಾಡಿದ 50ಕ್ಕೂ ಹೆಚ್ಚು ಆಡಿಯೊ, ವಾಟ್ ಆ್ಯಪ್ ಸಂವಾದದ ದಾಖಲೆಗಳಿವೆ. ಆ ಎಲ್ಲ ದಾಖಲೆಗಳು, ಹೇಳಿಕೆಗಳು ಸೇರಿ ಹಲವು ಮಾಹಿತಿಯನ್ನು ದೂರಿನ ಜೊತೆ ಒದಗಿಸಲಾಗುವುದು. ಈ ಬಗ್ಗೆ ಲೋಕಾಯುಕ್ತ ಅಧಿಕಾರಿಗಳ ಗಮನಕ್ಕೂ ತರಲಾಗಿದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಲೋಕಾಯುಕ್ತ ತನಿಖೆಯ ಪ್ರಗತಿ ಗಮನಿಸಿ ಇತರ ಶಾಸಕರು ಹಾಗೂ ಸಚಿವರ ವಿರುದ್ಧ ದೂರು ನೀಡಲಾಗುವುದು. ಅಲ್ಲದೆ, ಶಾಸಕರು ಹಾಗೂ ಸಚಿವರ ಲಂಚಾವತಾರಕ್ಕೆ ಸಂಬಂಧಿಸಿ ಪ್ರಧಾನಿ ಮೋದಿ ಅವರಿಗೆ ದೂರು ನೀಡಿದ್ದೇವೆ. ಅವರ ಬಳಿಯೂ ನ್ಯಾಯ ಸಿಗದಿದ್ದರೆ ನ್ಯಾಯಾಲಯದ ಮೊರೆ ಹೋಗುತ್ತೇವೆ' ಎಂದರು.

'ಜಿಲ್ಲೆಯ ಇತರ ಕ್ಷೇತ್ರಗಳಲ್ಲೂ ಲಂಚ ಮತ್ತು ಕಮಿಷನ್ ಹಾವಳಿ ಇದೆ. ಸಚಿವ ಬಿ.ಶ್ರೀರಾಮುಲು ಸೇರಿದಂತೆ ಇತರರು ಕಮಿಷನ್ ವಿಚಾರದಲ್ಲಿ ಕೈಗೊಬ್ಬರ ಎಂದು ಮಂಜುನಾಥ್ ಆರೋಪಿಸಿದರು.

ಸಿಐಡಿ ಅಧಿಕಾರಿಗಳ ಎದುರೇ ಆರ್‌.ಡಿ. ಪಾಟೀಲ ಪರಾರಿ

ಕಲಬುರಗಿ: ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದಲ್ಲಿ ಜಾಮೀನು ಪಡೆದಿರುವ ಆರೋಪಿ ಆರ್.ಡಿ. ಪಾಟೀಲ ಇಲ್ಲಿನ ಅಕ್ಕಮಹಾದೇವಿ ಕಾಲೊನಿಯ ತಮ್ಮ ಮನೆಯಿಂದ ಗುರುವಾರ ರಾತ್ರಿ ಪರಾರಿಯಾಗಿದ್ದಾನೆ. ಸಿಐಡಿ ಅಧಿಕಾರಿಗಳು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಆರ್.ಡಿ.ಪಾಟೀಲ, ಅವನ ಸಹೋದರ ಮಹಾಂತೇಶ ಸೇರಿ ಐವರು ಆರೋಪಿಗಳ ಮನೆ ಮೇಲೆ ಶುಕ್ರವಾರ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದರು.

'ತುಮಕೂರು ಜಿಲ್ಲೆಯಲ್ಲಿ ದಾಖಲಾಗಿದ್ದ ಪಿಎಸ್‌ಐ ನೇಮಕಾತಿ ಅಕ್ರಮದ ಸಂಬಂಧದಲ್ಲಿ ಬಂಧಿಸಲು ಆರ್.ಡಿ.ಪಾಟೀಲ ಮನೆಗೆ ತೆರಳಿದ್ದೆವು. ಆಗ 'ಯಾವ ಕೇಸು, ನನಗೇನೂ ಗೊತ್ತಿಲ್ಲ. ಕಿರುಕುಳ ನೀಡುತ್ತಿದ್ದೀರಿ' ಎನ್ನುತ್ತ ಮನೆಯಿಂದ ಪರಾರಿಯಾದ' ಎಂದು ಸಿಐಡಿ ಡಿಟೆಕ್ಟಿವ್ ಸಬ್ ಇನ್‌ಸ್ಪೆಕ್ಟರ್ ಆನಂದ ದೂರಿನಲ್ಲಿ ತಿಳಿಸಿದ್ದಾರೆ.

'ಪಿಡಬ್ಲ್ಯುಡಿ ಎಇ ಹುದ್ದೆ: ಪಾರದರ್ಶಕ ಸಂದರ್ಶನ'

ವಿಕಾಸ್ ಕಿಶೋರ್ ಸುರಳ್ಕರ್

ಬೆಂಗಳೂರು: 'ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯುಡಿ) ಸಹಾಯಕ ಎಂಜಿನಿಯರ್ (ಎಇ) 660 ಹುದ್ದೆಗೆ 1:3 ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಸಂದರ್ಶನ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು ಪಾರದರ್ಶಕ ರೀತಿಯಲ್ಲಿ ನಡೆಸಲ್ಪಡುತ್ತಿದೆ. ಯಾವುದೇ ಅಭ್ಯರ್ಥಿಗಳ ಲಿಖಿತ ಪರೀಕ್ಷೆಯ ಅಂಕ ಅಥವಾ ಇತರ ವೈಯಕ್ತಿಕ ವಿವರಗಳನ್ನು ಸಂದರ್ಶನ ಪ್ರಕ್ರಿಯೆಯಲ್ಲಿ ಆಯೋಗದ ಸದಸ್ಯರು ಅಥವಾ ತಜ್ಞರಿಗೆ ಬಹಿರಂಗಪಡಿಸಿಲ್ಲ' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್ ತಿಳಿಸಿದ್ದಾರೆ.

ಲಿಖಿತ ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದವರಿಗೆ ಸಂದರ್ಶನದಲ್ಲಿ ಹೆಚ್ಚು ಅಂಕ, ಲಿಖಿತ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದವರಿಗೆ ಸಂದರ್ಶನದಲ್ಲಿ ಕಡಿಮೆ ಅಂಕ ಬಂದಿರುವ ಬಗ್ಗೆ ಹುದ್ದೆ ವಂಚಿತ ಅಭ್ಯರ್ಥಿಗಳ ಆರೋಪ ಬಗ್ಗೆ ಅವರು ಸ್ಪಷ್ಟನೆ ನೀಡಿದ್ದಾರೆ.

'ನೇಮಕಾತಿ ಪ್ರಕ್ರಿಯೆ ಎಲ್ಲ ಹಂತಗಳಲ್ಲಿ ನಿಗಾ ವಹಿಸಲು ಆಯೋಗ ಸಾಧ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದೆ. ಈ ಬಾರಿ ಅಭ್ಯರ್ಥಿಗಳ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) ನಿವೃತ್ತ ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳು, ಕುಲಪತಿಗಳು, ಮುಖ್ಯ ಎಂಜಿನಿಯರ್‌ಗಳು ಮತ್ತು ವಿಶ್ವವಿದ್ಯಾಲಯ ಪ್ರಾಧ್ಯಾಪಕರನ್ನು ವಿಷಯತಜ್ಞರನ್ನಾಗಿ ಆಹ್ವಾನಿಸಲಾಗಿತ್ತು' ಎಂದರು.

ಐಎಎಸ್ ಅಧಿಕಾರಿಗೆ ₹50 ಸಾವಿರ ದಂಡ ವಿಧಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶ ಪಾಲನೆಯಲ್ಲಿ ಉದ್ದೇಶಪೂರ್ವಕ ಅವಿಧೇಯತೆ ಪ್ರದರ್ಶಿಸಿದ ಕಾರಣಕ್ಕೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ.ರಶ್ಮಿ ಮಹೇಶ್ ಅವರಿಗೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ₹ 50 ಸಾವಿರ ದಂಡ ವಿಧಿಸಿದೆ.

'ದಯಾನಂದ ಸಾಗರ್ ಶೈಕ್ಷಣಿಕ ಸಂಸ್ಥೆಗಳ ನೌಕರರ ಮನವಿ ಪರಿಗಣಿಸಲು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ 2020ರ ಮಾರ್ಚ್ 11 ರಂದು ನೀಡಿದ ಆದೇಶ ಪಾಲಿಸಿಲ್ಲ' ಎಂದು ಆಕ್ಷೇಪಿಸಿ ದಯಾನಂದ ಸಾಗರ ಕಾಲೇಜ್ ಆಫ್ ಎಂಜಿನಿಯರಿಂಗ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಲ್.ಸಹಾಯರಾಜ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ, ವಿ.ರಶ್ಮಿ ಮಹೇಶ್ ಅವರಿಗೆ ₹ 50 ಸಾವಿರ ದಂಡ ವಿಧಿಸಿತು. 'ದಂಡದ ಮೊತ್ತವನ್ನು 15 ದಿನಗಳಲ್ಲಿ ಪಾವತಿಸಬೇಕು. ತಪ್ಪಿದಲ್ಲಿ ನ್ಯಾಯಾಂಗ ನಿಂದನೆ ಆರೋಪದಡಿ ಕ್ರಮ ಜರುಗಿಸಬೇಕಾಗುತ್ತದೆ' ಎಂದು ನ್ಯಾಯಪೀಠವು 2022ರ ನವೆಂಬರ್ 8 ರಂದು ಆದೇಶಿಸಿತ್ತು.

ಈ ಆದೇಶದ ಪಾಲನೆಯ ಹಿನ್ನೆಲೆಯಲ್ಲಿ ರಶ್ಮಿ ಮಹೇಶ್ ಸ್ವಂತ ಲೆಕ್ಕದಲ್ಲಿ ₹ 50 ಸಾವಿರ ಪಾವತಿ ಮಾಡಿದ್ದಾರೆ. ಇದನ್ನು ಪರಿಗಣಿಸಿದ ನ್ಯಾಯಪೀಠ, ರಶ್ಮಿ ಮಹೇಶ್ ಮತ್ತು ರಾಜ್ಯ ಉನ್ನತ ಶಿಕ್ಷಣ ಇಲಾಖೆ ಮೇಲಿನ ನ್ಯಾಯಾಂಗ ನಿಂದನೆ ಪ್ರಕ್ರಿಯೆಯನ್ನು ಕೈಬಿಟ್ಟಿದೆ.

ಗೌರವಧನ ಹಿಂದಿರುಗಿಸಿದ ರೂಪ ಹಾಸನ

ಪ್ರಜಾವಾಣಿ ವಾರ್ತೆ

ಹಾಸನ: ತಮ್ಮ ಪದ್ಯವನ್ನು ಪಠ್ಯದಲ್ಲಿ ಅಳವಡಿಸಿದ್ದಕ್ಕೆ ಕರ್ನಾಟಕ ಪಠ್ಯಪುಸ್ತಕ ಸಂಘವು ನೀಡಿದ ₹ 1,500 ಮೊತ್ತದ ಚೆಕ್ ಅನ್ನು ರೂಪ ಹಾಸನ ಹಿಂದಿರುಗಿಸಿದ್ದಾರೆ.

'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು– 2005ರ ನೀತಿ ನಿಯಮಗಳಿಗೆ ತದ್ವಿರುದ್ಧ ವಿರೋಧವಾಗಿ ಅನುಮತಿ ವಾಪಸು ಪಡೆದಿದ್ದ, ಶಿಕ್ಷಣ ಸಚಿವರಿಗೂ ಪತ್ರ ಬರೆದಿದ್ದೆ. ಆದರೂ ಪಠ್ಯದಲ್ಲಿ ಬಳಸಿರುವುದು ಸರ್ವಾಧಿಕಾರಿ ಧೋರಣೆ' ಎಂದು ತಿಳಿಸಿದ್ದಾರೆ.

ಕೇರಳ: ಉಚ್ಚಾಟಿತ ನಾಯಕ ಥಾಮಸ್‌ಗೆ ವಿಶೇಷ ಪ್ರತಿನಿಧಿ ಸ್ಥಾನ

ತಿರುವನಂತಪುರಂ (ಪಿಟಿಐ): ಕಾಂಗ್ರೆಸ್‌ನ ಉಚ್ಚಾಟಿತ ನಾಯಕ, ಕೇಂದ್ರದ ಮಾಜಿ ಸಚಿವ ಕೆ.ವಿ.ಥಾಮಸ್ ಅವರನ್ನು ಕೇರಳ ಸರ್ಕಾರವು ನವದೆಹಲಿಯಲ್ಲಿ ವಿಶೇಷ ಪ್ರತಿನಿಧಿಯಾಗಿ ನೇಮಿಸಿ, ಕ್ಯಾಬಿನೆಟ್ ದರ್ಜೆ ನೀಡಲು ನಿರ್ಧರಿಸಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ ಆರೋಪದ ಮೇಲೆ ಥಾಮಸ್ ಅವರನ್ನು ಕಾಂಗ್ರೆಸ್ ಪಕ್ಷದಿಂದ ಐದು ತಿಂಗಳ ಹಿಂದೆ ಉಚ್ಚಾಟಿಸಲಾಗಿತ್ತು.

2022ರ ಮೇ ತಿಂಗಳಲ್ಲಿ ಕೊಚ್ಚಿಯಲ್ಲಿ ನಡೆದ ಉಪಚುನಾವಣೆಯ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೊಂದಿಗೆ ವೇದಿಕೆ ಹಂಚಿಕೊಂಡ ಕಾರಣ ಕಾಂಗ್ರೆಸ್ ಥಾಮಸ್ ವಿರುದ್ಧ ತೀವ್ರ ಕ್ರಮಕೈಗೊಂಡಿತ್ತು.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www.eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810
ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯ ಅಧಿಸೂಚನೆ ದಿನಾಂಕ: 19.01.2023
... KW-1,KW-2,KW-3 & KW-4 ... ರೂ. 8.00 ಲಕ್ಷ ... ರೂ.150.00 ಲಕ್ಷ ... ರೂ.0.20 ... ರೂ.3.00 ... (http://eproc.karnataka.gov.in) ... ದಿ:02.02.2023 ... ದಿ:30.01.2023 ... 4.00 ... ದಿನಾಂಕ:25.01.2023 ... 11.30 ...
ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಮೈಸೂರು ವಿಭಾಗ, ಮೈಸೂರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ
ಸಂಖ್ಯೆ: ಕಾ.ನಿಅ/ಕ.ನೀ.ನಿ.ನಿ/ವಿಭಾಗ/ಭಾಲ್ಕಿ/ಟಿ.ಎಸ್–5/2022-23/1528 ದಿನಾಂಕ:16.01.2023
ಶೇಕಡಾವಾರು ಟೆಂಡರ ಅಧಿಸೂಚನೆ. (ಅಲ್ಪಾವಧಿ)
(ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ). (ಏಕ & ದ್ವಿ ಲಕೋಟೆಯಲ್ಲಿ)
... ಕಾಮಗಾರಿಯ ಇಂಡೆಂಟ್ ನಂ. 1) 35303, 2) 35489, 3) 34899, 4) 35453, 5) 35218, & 6)35219. ಇರುತ್ತದೆ. ಹಾಗೂ ಟೆಂಡರಗಿಟ್ಟ ಮೊತ್ತ (ಲಕ್ಷಗಳಲ್ಲಿ) 1) 295.97 LAKHS, 2) 124.67 LAKHS, 3) 42.36 LAKHS, 4) 11.99 LAKHS, 5) 2.35 LAKHS, & 6) 2.15 LAKHS ... ಇ–ಪೋರ್ಟಲ್‌ನಲ್ಲಿ ಟೆಂಡರ್ ಹಾಕುವ ದಿನಾಂಕ 18–01–2023, b) The Last date of Submission of completed tender documents 01-02-2023 @ 16.30Hrs c) Date of Opening of Technical Bid is 02-02-2023 @ 17.00 Hrs & Financial bid is 03-02-2023 @ 17.01 Hrs respectively.
Website www.eproc.karnataka.gov.in ನೋಡಬಹುದಾಗಿದೆ. ... ದೂರವಾಣಿ ಸಂಖ್ಯೆ08484–262257 ಸಂಪರ್ಕಿಸುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಕ.ನೀ.ನಿ.ನಿ., ಕಾರಂಜಾ ಯೋಜನೆ ನಿರ್ಮಾಣ ವಿಭಾಗ ನಂ–2 ಭಾಲ್ಕಿ
ವಾ.ಸಾ.ಸಂ.ಇ/ಜೀದರ/424/ಎಂಸಿಎ/2022–23

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಟೆಂಡರ್‌ಗಳಿಗಾಗಿ ಆಹ್ವಾನ – 2ನೇ ಕರೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಪ್ರಧಾನ ಮುಖ್ಯ ಅಭಿಯಂತರರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
ಟರ್ನ್‌ಕೀ ಗುತ್ತಿಗೆ ಆಧಾರದ ಮೇಲೆ 1 ವರ್ಷದ ಅವಧಿಗೆ ದಿನದ ಎಲ್ಲಾ ಸಮಯದಲ್ಲಿ ... (1) ... (ಫೇಸ್–II) ... 40 ಎಂಎಲ್‌ಡಿ ...	₹ 673.05 ಲಕ್ಷಗಳು
	₹ 11.92 ಲಕ್ಷಗಳು
ಟರ್ನ್‌ಕೀ ಗುತ್ತಿಗೆ ಆಧಾರದ ಮೇಲೆ 1 ವರ್ಷದ ಅವಧಿಗೆ ದಿನದ ಎಲ್ಲಾ ಸಮಯದಲ್ಲಿ ... (ಫೇಸ್–II) ... 20 ಎಂಎಲ್‌ಡಿ ...	₹ 430.61 ಲಕ್ಷಗಳು
	₹ 7.62 ಲಕ್ಷಗಳು

ಭರ್ತಿಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ 04.02.2023ರ ಸಂಜೆ 4:00 ಗಂಟೆಯವರೆಗೆ. ತಾಂತ್ರಿಕ ಟೆಂಡರ್‌ಗಳನ್ನು ದಿನಾಂಕ 07.02.2023ರ ಬೆಳಿಗ್ಗೆ 10:00 ಗಂಟೆಗೆ ತೆರೆಯಲಾಗುವುದು.
ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://eproc.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು.
ವಾ.ಸಾ.ಸಂ.ಇ/4218/2022–23 ಸಹಿ/– ಪ್ರಧಾನ ಮುಖ್ಯ ಅಭಿಯಂತರರು

ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY
ಯರಗೇರಾ–584 133, ರಾಯಚೂರು, ಕರ್ನಾಟಕ, ಭಾರತ
Email:- registrarur@gmail.com, +918532200972 https://raichuruniversity.ac.in
ಕ್ರ.ಸಂ. ರಾವಿರಾ/ಆಡಳಿತ/ಟಿ6/2022–23/ Date:19/01/2023
ಅಲ್ಪಾವಧಿಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)
... ದಿನಾಂಕ:04/02/2023 ... www.eproc.karnataka.gov ರಿಂದ ಪಡೆಯಬಹುದು.
ಸಹಿ/– ಕುಲಸಚಿವರು,
ವಾ.ಸಾ.ಸಂ.ಇ/ರಾಯಚೂರು/556/ಕೆ.ಎಸ್.ಎಂ.ಸಿ.&ಎ/2022–23 ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.
ಸಂ:ಸಿಐ/ಟೆಂಡರ್ ಪ್ರಕಟಣೆ/2022–23/ 2756 ದಿ:– 19–01–2023
ಅಲ್ಪಾವಧಿ ಇ–ಟೆಂಡರ್ ಆಹ್ವಾನ ಪ್ರಕಟಣೆ
... eepwdhosapete@gmail.com ... 08394–200231 ...

ಕ್ರ.ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	KPWD/2022-23/BD/WORK_INDENT159437/CALL-4	400.00
2	KPWD/2022-23/RD/WORK_INDENT152220/CALL-4	890.00
3	KPWD/2022-23/RD/WORK_INDENT152221/CALL-4	850.00
4	KPWD/2022-23/BD/WORK_INDENT162661/CALL-3	10.00

ಅ) ಗುತ್ತಿಗೆದಾರರ ಕ್ವಾರೀಸ್ ದಿನಾಂಕ E-procurement Portal ... 27/01/2023 (16.00 ಗಂಟೆಗೆ) ... 30/01/2023 (16.30 ಗಂಟೆಗೆ) ... E-procurement Portal ...
NOTE: ... E-procurement Portal ...
ಸಹಿ/–ಕಾರ್ಯನಿರ್ವಾಹಕ ಅಭಿಯಂತರ,
ಡಿಐಪಿಆರ್/ವಿಜಯನಗರ/345/ಎಂಸಿಎ/2022–23 ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

"ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಳ್ಳಾರಿ–583101"
ಸಂಖ್ಯೆ: ಜನಕೋ/ಮುಅನ/ಹಂತ–4/ಕಟ್ಟಡ & ಪಾರ್ಕ್/01/2022–23 ದಿನಾಂಕ : 19.01.2023
ಟೆಂಡರ್ ಪ್ರಕಟಣೆ
... Public Procurement Portal ...
ಪ್ಯಾಕೇಜ್ ಕಾಮಗಾರಿ ವಿವರ: Construction of BT Road and RCC Drain at 16 Ward Siruguppa CMC Limits Under Nagarothana Phase-4 DMA/2022-23/OW/WORK_INDENT145404. ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ): 200.00. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): 169.41. EMD (Rs): 2,54,120/–
For S.No 01
1.Last date & time for tender queries / clarifications: 01.02.2023 at 17.30 Hrs. 2.Pre Bid Meeting : 01.02.2023 at 11.00 hrs. 3.Last date and time for receipt of tender technical bids: 07.02.2023 at 16.30 hrs. 4.Date & time for opening of (Technical bids): 10.02.2023 at 11:00 Hrs. 5.Date & time for opening of (Financial bids): 17.02.2023 at 11:00 Hrs. 6.Auto extension of tender schedule : 03 days
ಪ್ಯಾಕೇಜ್ ಕಾಮಗಾರಿ ವಿವರ: 02.Construction of Library building and Parks at TMC Kampli limits of Ballari District under Chief Minister Amrut Nagarothana (Municipality) Phase-4 Project. (DMA/2022-23/OW/WORK_INDENT145277). ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ): 61.25. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): 55.51. EMD (Rs): 1,11,020/–
03.Construction of Building at TP Tekkalakote limits of Ballari District under Chief Minister Amrut Nagarothana (Municipality) Phase-4 Project.(DMA/2022-23/OW/WORK_INDENT145290). ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ): 70.17. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): 59.30. EMD (Rs): 1,18,600/–
04.Development & construction of New Vegetable Market Building at Kurugodu road and Community Training center for specially abled persons at Kuduthini Town limits Ballari District under Chief Minister Amrut Nagarothana (Municipality) Phase-4 Project. (DMA/2022-23/OW/WORK_INDENT145292). ಅಂದಾಜು ಮೊತ್ತ(ರೂ.ಲಕ್ಷಗಳಲ್ಲಿ): 171.72. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ): 145.23. EMD (Rs): 2,57,580/–
For S.No 02 to 04
1.Last date & time for tender queries / clarifications: 13.02.2023 at 17.30 Hrs. 2.Pre Bid Meeting : 13.02.2023 at 11.00 hrs. 3.Last date and time for receipt of tender technical bids: 20.02.2023 at 16.30 hrs. 4.Date & time for opening of (Technical bids): 22.02.2023 at 11:00 Hrs. 5.Date & time for opening of (Financial bids): 28.02.2023 at 11:00 Hrs. 6.Auto extension of tender schedule : 03 days
... https://eproc.karnataka.gov.in ... 7760848586, 7892198334 ...
ಡಿಐಪಿಆರ್/ಬಳ್ಳಾರಿ/833/ಎಂಸಿಎ/2022–23 ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.

ಬೇರೊಬ್ಬ ಮಹಿಳೆಗೂ ಹೀಗೇ ಕಿರುಕುಳ ನೀಡಿದ್ದ: ಸ್ವಾತಿ

ಸ್ವಾತಿ

ನವದೆಹಲಿ (ಪಿಟಿಐ): ಮಹಿಳಾ ಸುರಕ್ಷತೆ ಬಗ್ಗೆ ಪರಿಶೀಲಿಸುತ್ತಿದ್ದ ಸಂದರ್ಭದಲ್ಲಿ ಕಾರಿನಲ್ಲಿ ಎಳೆದೊಯ್ದು ತಮಗೆ ಕಿರುಕುಳ ನೀಡಿದ ವ್ಯಕ್ತಿ, ಈ ಹಿಂದೆಯೂ ಮಹಿಳೆಯೊಬ್ಬರಿಗೆ ಇದೇ ರೀತಿಯ ಕಿರುಕುಳ ನೀಡಿದ್ದ ಎಂದು ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ ಸ್ವಾತಿ ಮಲಿವಾಲ್ ಆರೋಪಿಸಿದ್ದಾರೆ.

'ಜ. 17ರಂದು ಈ ವ್ಯಕ್ತಿ ಲೋಧಿ ರಸ್ತೆಯಲ್ಲಿ ಮಹಿಳೆಯೊಬ್ಬರ ಸುತ್ತ ಕಾರು ಚಲಾಯಿಸುತ್ತಾ, ಕಾರಿನ ಒಳಗೆ ಕುಳಿತುಕೊಳ್ಳುವಂತೆ ಒತ್ತಾಯಿಸಿದ್ದ. 181 ಸಹಾಯವಾಣಿಯಲ್ಲಿ ಈ ಬಗ್ಗೆ ದೂರು ನೀಡಿದ್ದಾರೆ. ಭಯ ಪಡಬೇಡಿ, ಧ್ವನಿ ಎತ್ತಿ ಎಂದು ಎಲ್ಲರಲ್ಲಿ ಮನವಿ ಮಾಡಿಕೊಳ್ಳುತ್ತೇನೆ' ಎಂದು ಟ್ವೀಟ್ ಮಾಡಿದ್ದಾರೆ.

'ಕುಡಿದ ಮತ್ತಿನಲ್ಲಿದ್ದ ವ್ಯಕ್ತಿಯೊಬ್ಬ ನನ್ನೊಂದಿಗೆ ಕೆಟ್ಟದಾಗಿ ವರ್ತಿಸಿದ್ದಲ್ಲದೆ, ಕಾರನ್ನು ಚಲಾಯಿಸಿ ನನ್ನನ್ನು 15 ರಿಂದ 20ಮೀಟರ್ ದೂರ ಎಳೆದೊಯ್ದಿದ್ದ' ಎಂದು ಮಲಿವಾಲ್ ಆರೋಪಿಸಿದ್ದರು.

ರಾಜಭವನದ ಇಂದಿನ ಸಭೆಗೆ ಕೇಜ್ರಿವಾಲ್‌ಗೆ ಆಹ್ವಾನ

ದೆಹಲಿ ಸಿ.ಎಂ–ಲೆಫ್ಟಿನೆಂಟ್ ಗವರ್ನರ್ ಮಧ್ಯೆ ವಾಕ್ಸಮರ

ನವದೆಹಲಿ(ಪಿಟಿಐ): ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಮತ್ತು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನಡುವೆ ಶುಕ್ರವಾರ ಮತ್ತೊಂದು ಸುತ್ತಿನ ವಾಕ್ಸಮರ ನಡೆದಿದೆ.

'ಕೇಜ್ರಿವಾಲ್ ತಮ್ಮ ವಿರುದ್ಧ ಹಾದಿ ತಪ್ಪಿಸುವ ಮತ್ತು ಅವಹೇಳನಕಾರಿ ಟೀಕೆಗಳನ್ನು ಮಾಡಿದ್ದಾರೆ' ಎಂದು ಲೆಫ್ಟಿನೆಂಟ್ ಗವರ್ನರ್ ಆರೋಪಿಸಿದ್ದರೆ,ದೇಶದ ರಾಜಧಾನಿಯಲ್ಲಿ 'ಕಾಂಝಾವಾಲಾ'ದಂತಹ ಮತ್ತೊಂದು ಘಟನೆ ನಡೆಯದಿರಲು ಕಾನೂನು ಮತ್ತು ಸುವ್ಯವಸ್ಥೆ ಸುಧಾರಿಸುವತ್ತ ರಾಜ್ಯಪಾಲರು ಗಮನ ಕೊಡಲಿ ಎಂದು ಕೇಜ್ರಿವಾಲ್ ಮಾತಿನಲ್ಲೇ ಕುಟುಕಿದ್ದಾರೆ.

ಸೂರ್ಯ ಮತ್ತು ಚಂದ್ರರು ತಮ್ಮ ಸ್ಥಾನದಲ್ಲಿರುವುದರಿಂದ ಬ್ರಹ್ಮಾಂಡವು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸೂಚ್ಯವಾಗಿ ಹೇಳಿದ ಕೇಜ್ರಿವಾಲ್, ಸಕ್ಸೇನಾ ಅವರು ಕೆಲಸ ಮಾಡಲು ಅವಕಾಶ ನೀಡಬೇಕು. ಇದರಿಂದಾಗಿ ದೆಹಲಿಯ ವ್ಯವಸ್ಥೆಯು ಸುಗಮವಾಗಿ ಕಾರ್ಯನಿರ್ವಹಿಸುತ್ತದೆ ಎಂದರು.

ಜ.16ರಂದು ಕೇಜ್ರಿವಾಲ್ ಅವರು ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಮತ್ತು ಪಕ್ಷದ ಶಾಸಕರೊಡಗೂಡಿ ರಾಜಭವನಕ್ಕೆ ಮೆರವಣಿಗೆ ಹೊರಟಾಗ ತಮ್ಮ ವಿರುದ್ಧ ಮಾಡಿರುವ ಆರೋಪದ ಬಗ್ಗೆ ಕ್ಸೇನಾ ಅವರು ಆಕ್ಷೇಪಿಸಿ ಕೇಜ್ರಿವಾಲ್ ಅವರಿಗೆ ಪತ್ರ ಬರೆದಿದ್ದು, ಇದರ ನಂತರ ಇಬ್ಬರ ನಡುವೆ ಮತ್ತೆ ವಾಕ್ಸಮರ ಶುರುವಾಗಿದೆ.

'ಕಳೆದ ಕೆಲವು ದಿನಗಳಿಂದ ರಾಜ್ಯದ ವಿಧಾನಸಭೆಯಲ್ಲಿ ಮತ್ತು ಹೊರಗೆ ನನ್ನ ವಿರುದ್ಧ ಅನೇಕ ಹೇಳಿಕೆಗಳನ್ನು ನೀಡಿರುವುದು ಮಾಧ್ಯಮ ವರದಿಗಳ ಮೂಲಕ ನನ್ನ ಗಮನಕ್ಕೆ ಬಂದಿದೆ' ಎಂದು ಸಕ್ಸೇನಾ ಪತ್ರದಲ್ಲಿ ಕೇಜ್ರಿವಾಲ್‌ಗೆ ತಿಳಿಸಿದ್ದಾರೆ.

ಇದೇ ವೇಳೆ ಸಕ್ಸೇನಾ ಅವರು ರಾಜಭವನದಲ್ಲಿ ಶನಿವಾರ ನಡೆಸಲಿರುವ ಸಭೆಗೆ ಮುಖ್ಯಮಂತ್ರಿ ಕೇಜ್ರಿವಾಲ್ ಅವರಿಗೆ ಆಹ್ವಾನ ನೀಡಿದ್ದಾರೆ. ಇದನ್ನು ಸ್ವಾಗತಿಸಿರುವ ಕೇಜ್ರಿವಾಲ್, ತಮ್ಮ ಸಚಿವರು ಮತ್ತು ಶಾಸಕರೊಂದಿಗೆ ಹಾಜರಾಗುವುದಾಗಿ ಪ್ರತಿಕ್ರಿಯಿಸಿದ್ದಾರೆ.

'ಕಾಳಿ ಪೋಸ್ಟರ್ ವಿವಾದ: ಬಲವಂತದ ಕ್ರಮ ಬೇಡ'

ನವದೆಹಲಿ (ಪಿಟಿಐ): ಕಾಳಿ ಮಾತೆ ಕೈಯಲ್ಲಿ ಸಿಗರೇಟ್ ಹಿಡಿದಿರುವಂತೆ ಚಿತ್ರಿಸಿ ವಿವಾದಕ್ಕೀಡಾಗಿರುವ ಚಿತ್ರನಿರ್ದೇಶಕಿ ಲೀನಾ ಮಣಿಮೇಕಲೈ ಅವರಿಗೆ ಬಲವಂತದ ಕ್ರಮದಿಂದ ಮಧ್ಯಂತರ ರಕ್ಷಣೆ ನೀಡಿ ಸುಪ್ರೀಂ ಕೋರ್ಟ್ ಶುಕ್ರವಾರ ಆದೇಶ ಹೊರಡಿಸಿದೆ.

ಅಲ್ಲದೇ, ಕೇಂದ್ರ ಸರ್ಕಾರ, ದೆಹಲಿ, ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ಉತ್ತರಾಖಂಡ ಸರ್ಕಾರಗಳಿಗೆ ಈ ಸಂಬಂಧ ನೋಟಿಸ್ ನೀಡಿತು.

'ಅರ್ಜಿದಾರರ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳಿಗೆ ಸಂಬಂಧಿಸಿ ಯಾವುದೇ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳಬಾರದು. ಹಲವು ಮೊಕದ್ದಮೆಗಳಲ್ಲಿ ಅವರ ವಿರುದ್ಧ ಎಫ್‌ಐಆರ್‌ಗಳು ದಾಖಲಾಗಿರುವುದು ಗಂಭೀರವಾದ ಪಕ್ಷಪಾತ ನಿಲುವು ತೋರುತ್ತದೆ. ಕಾನೂನು ಪ್ರಕಾರ ಎಲ್ಲಾ ಎಫ್‌ಐಆರ್‌ಗಳನ್ನು ಒಂದೆಡೆ ಕ್ರೋಡೀಕರಿಸಬೇಕು' ಎಂದು ಪೀಠ ಹೇಳಿತು.

ಲೋಕಸಭಾ ಚುನಾವಣೆ: ಕಾಂಗ್ರೆಸ್‌ನಿಂದ 50 ಸಂಯೋಜಕರ ನೇಮಕ

ನವದೆಹಲಿ (ಪಿಟಿಐ): ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಗೆ ಸಿದ್ಧತೆ ಆರಂಭಿಸಿರುವ ಕಾಂಗ್ರೆಸ್, ಕರ್ನಾಟಕವೂ ಸೇರಿ ವಿವಿಧ ರಾಜ್ಯಗಳಲ್ಲಿನ ಮೀಸಲು ಕ್ಷೇತ್ರಗಳಿಗೆ 50 ಸಂಯೋಜಕರನ್ನು ನೇಮಕ ಮಾಡಿದೆ.

ಕರ್ನಾಟಕದ ರಾಯಚೂರು, ಬಳ್ಳಾರಿ ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರಗಳಿಗೂ ಸಂಯೋಜಕರನ್ನು ನೇಮಕ ಮಾಡಲಾಗಿದೆ.

'ಈ ಮೀಸಲು ಕ್ಷೇತ್ರಗಳಲ್ಲಿ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ. ಈ ಉದ್ದೇಶಕ್ಕಾಗಿ ಸಂಯೋಜಕರನ್ನು ನೇಮಕ ಮಾಡುವ ಪ್ರಸ್ತಾವಕ್ಕೆ ಪಕ್ಷವು ಅನುಮೋದನೆ ನೀಡಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

ಏರ್ ಇಂಡಿಯಾಗೆ ₹30 ಲಕ್ಷ ದಂಡ ವಿಧಿಸಿದ ಡಿಜಿಸಿಎ

ಒಂದನೇ ಪುಟದಿಂದ...

'ವಿಮಾನದಲ್ಲಿ ಕಂಡುಬರುವ ಪ್ರಯಾಣಿಕರ ಅನುಚಿತ ವರ್ತನೆಯಂತಹ ಸಂದರ್ಭಗಳನ್ನು ನಿಭಾಯಿಸುವುದು ಸೇರಿದಂತೆ ಚಾಲ್ತಿಯಲ್ಲಿರುವ ನೀತಿ–ನಿಯಮಗಳ ಪಾಲನೆ ಕುರಿತು ಸಿಬ್ಬಂದಿಯಲ್ಲಿ ಜಾಗೃತಿ ಮೂಡಿಸಲಾಗುವುದು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಪ್ರಕರಣದ ಆರೋಪಿ ಶಂಕರ್ ಮಿಶ್ರಾ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಸಂಸ್ಥೆಯ ವಿಮಾನದಲ್ಲಿ ಮಿಶ್ರಾ ಅವರು ಪ್ರಯಾಣಿಸದಂತೆ ಏರ್ ಇಂಡಿಯಾ ನಾಲ್ಕು ತಿಂಗಳ ಕಾಲ ನಿಷೇಧ ಹೇರಿದೆ.

ಡಿಜಿಸಿಎ ಕ್ರಮ: ಮಿಶ್ರ ಪ್ರತಿಕ್ರಿಯೆ

ಒಂದನೇ ಪುಟದಿಂದ...

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಮಾರ್ಟಿನ್ ಕನ್ಸಲ್ಟಿಂಗ್‌ನ ಸಿಇಒ ಮಾರ್ಕ್ ಡಿ ಮಾರ್ಟಿನ್, 'ಡಿಜಿಸಿಎ ಗಂಭೀರವಾಗಿ ನಡೆದುಕೊಳ್ಳಬೇಕು. ಇಎಎಸ್‌ಎ ಮತ್ತು ಎಫ್‌ಎಎ ರೀತಿಯಲ್ಲಿ ವಿಮಾನ ಯಾನ ಸುರಕ್ಷತೆಯನ್ನು ನಿಯಂತ್ರಿಸುವ ವಿಷಯದಲ್ಲಿ ಪ್ರಬುದ್ಧತೆ ಪ್ರದರ್ಶಿಸಬೇಕು' ಎಂದರು.

ಇಂಡಿಗೊದ ಮಾಜಿ ಉಪಾಧ್ಯಕ್ಷ ಕ್ಯಾಪ್ಟನ್ ಶಕ್ತಿ ಲಂಬಾ, 'ಏರ್ ಇಂಡಿಯಾದ ಪೈಲಟ್ ಇನ್ ಕಮಾಂಡ್, ನಿರ್ದೇಶಕಿ ಹಾಗೂ ವಿಮಾನ ಸಂಸ್ಥೆ ವಿರುದ್ಧ ಔಪಚಾರಿಕವಾಗಿ ಕ್ರಮ ಕೈಗೊಂಡಿದೆ. ಈ ಪ್ರಕರಣದಲ್ಲಿ 'ಅಕೌಂಟೆಬಲ್ ಮ್ಯಾನೇಜರ್' ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದರು. 'ಈ ಘಟನೆಯಿಂದ ಟಾಟಾ ಅವರ ಖ್ಯಾತಿ ಹಾಗೂ ವೃತ್ತಿಪರತೆಗೆ ಧಕ್ಕೆಯುಂಟಾಗಿದೆ. ಹೀಗಾಗಿ ಉನ್ನತ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮವಾಗಬೇಕು' ಎಂದು ಕ್ಯಾಪ್ಟನ್ ಲಂಬಾ ಪ್ರತಿಪಾದಿಸಿದರು.

ಬ್ರ್ಯಾಂಡ್ ತಂತ್ರಗಾರ ಹಾಗೂ ಹರೀಶ್ ಬಿಜೂರ್ ಕನ್ಸಲ್ಟ್ಸ್‌ನ ಸಂಸ್ಥಾಪಕ ಹರೀಶ್ ಬಿಜೂರ್, 'ದಂಡ ವಿಧಿಸಿದ್ದು ಸಂಸ್ಥೆಯ ಬ್ರ್ಯಾಂಡ್‌ಗೆ ಬಲವಾದ ಏಟು ನೀಡಿದಂತಾಗಿದೆ. ದಂಡದ ಮೊತ್ತವು ಘಟನೆಯ ಗಂಭೀರತೆಯನ್ನು ತೋರಿಸುತ್ತದೆ' ಎಂದು ಹೇಳಿದರು. 'ಈ ಪ್ರಕರಣದಲ್ಲಿ ಆರೋಪ ಸಾಬೀತಾಗಿ, ಮೂತ್ರ ವಿಸರ್ಜಿಸಿದ ವ್ಯಕ್ತಿಗೆ ಶಿಕ್ಷೆಯಾಗಬಹುದು. ಆದರೆ, ವಿಮಾನಯಾನ ಸಂಸ್ಥೆಯ ನಿಜವಾದ ಅಪರಾಧಿ. ಈ ವಿಷಯದಲ್ಲಿ ಡಿಜಿಸಿಎ ಕೈಗೊಂಡ ಕ್ರಮ ಸರಿಯಾಗಿದ್ದು, ಉತ್ತಮ ನಿದರ್ಶನವನ್ನು ತೋರಿಸಿಕೊಟ್ಟಿದೆ' ಎಂದು ಅಕ್ಯುಮೆನ್ ಏವಿಯೇಷನ್ ಚೇರಮನ್ ಹಾಗೂ ಸಿಇಒ ಅಲೋಕ್ ಆನಂದ್ ಪ್ರತಿಕ್ರಿಯಿಸಿದ್ದಾರೆ.

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಟೆಂಡರ್ ಪ್ರಕಟಣೆ ಸಂಖ್ಯೆ : 3–5th, 4-6th, 8-3rd, 9-4th Call Dtd : 17.01.2023

ಟೆಂಡರ್ ಆಹ್ವಾನ ಪ್ರಕಟಣೆ

ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು ಚಿಕ್ಕಮಗಳೂರು ಜಿಲ್ಲೆಯ ಚಿಕ್ಕಮಗಳೂರು, ಕಡೂರು, ಎನ್.ಆರ್.ಪುರ, , ಕೊಪ್ಪ, ಶೃಂಗೇರಿ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್, ಮುಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಕನಿಷ್ಠ ಮೊತ್ತ ರೂ 11.35 ಹಾಗೂ ಗರಿಷ್ಠ ಮೊತ್ತ ರೂ. 104.56 ಲಕ್ಷಗಳು ಒಟ್ಟು 16 ಕಾಮಗಾರಿಗಳನ್ನು (ಪ್ಯಾಕೇಜ್ ಒಳಗೊಂಡಂತೆ) ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document-KW-1,2&4 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಗುತ್ತಿಗೆದಾರರಿಗೆ ಅಧಿನಿಯಮ 1 ರಲ್ಲಿ ನಮೂದಿಸಿರುವ ಕನಿಷ್ಠ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ. ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ: 17.01.2023 ರಿಂದ 30.01.2023 ರವರೆಗೆ ಸಂಜೆ 5.30 ಗಂಟೆಯೊಳಗೆಸಲ್ಲಿಸಬೇಕು, ಟೆಂಡರನ್ನು ದಿನಾಂಕ 31.01.2023 ರಂದು ಸಂಜೆ 05:30ಕ್ಕೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು www.eproc.karnataka.gov.inನಲ್ಲಿ ಓದಿಕೊಳ್ಳುವುದು ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ..

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು

ಮಂಗಳೂರು ಮಹಾನಗರಪಾಲಿಕೆ

ಮ.ನ.ಪಾ/ಇಎಸ್‌ಟಿ.(1)/ಸಿ.ಆರ್/28/2022-23 ದಿನಾಂಕ: 20-01-2023

ನೇಮಕಾತಿ ಪ್ರಕಟಣೆ

ಮಾನ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 171 ಎಂಎನ್‌ಇ 2022(ಇ) ದಿನಾಂಕ: 23-11-2022ರಂತೆ ಮಂಗಳೂರು ಮಹಾನಗರಪಾಲಿಕೆಯಲ್ಲಿ ಘನತ್ಯಾಜ್ಯ ನಿರ್ವಹಣೆ ಹಾಗೂ ವಿವಿಧ ಸ್ವಚ್ಛತಾ ಕಾರ್ಯಗಳ ನಿರ್ವಹಣೆಗಾಗಿ ಗ್ರೂಪ್-ಡಿ ವೃಂದದಲ್ಲಿ ಖಾಲಿ ಇರುವ ನೇರ ನೇಮಕಾತಿಯ 95 ಪೌರಕಾರ್ಮಿಕರ ಹುದ್ದೆಗಳನ್ನು ವಿಶೇಷ ನೇಮಕಾತಿ ನಿಯಮಗಳ ರೀತ್ಯಾ ಸರಕಾರದ ಮೀಸಲಾತಿ ನಿಯಮದಂತೆ ವರ್ಗೀಕರಣಗೊಳಿಸಿ ಭರ್ತಿ ಮಾಡಲು ಮಂಗಳೂರು ಮಹಾನಗರಪಾಲಿಕೆಯಲ್ಲಿ ಕನಿಷ್ಠ 2 ವರ್ಷಗಳಿಗಿಂತ ಕಡಿಮೆ ಇಲ್ಲದೆ ಹಾಗೂ ಸದ್ರಿ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ನೇರಪಾವತಿ/ ಕ್ಷೇಮಾಭಿವೃದ್ಧಿ/ ದಿನಗೂಲಿ/ ಗುತ್ತಿಗೆ/ ಹೊರಗುತ್ತಿಗೆ/ ಸಮಾನ ಕೆಲಸಕ್ಕೆ ಸಮಾನ ವೇತನದ ಮೇಲೆ ಪೌರಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಬಗ್ಗೆ ಅಧಿಸೂಚನೆ ಸಂಖ್ಯೆ: ಮ.ನ.ಪಾ/ಇಎಸ್‌ಟಿ(1)/ಸಿ.ಆರ್/28/2022-23 ದಿನಾಂಕ: 20-01-2023 ನ್ನು ಹೊರಡಿಸಲಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಸದ್ರಿ ಅಧಿಸೂಚನೆಯಂತೆ ಅರ್ಜಿ ಸಲ್ಲಿಸುವ ವೇಳೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಮತ್ತು ಶುಲ್ಕ ಪಾವತಿಸುವ ಚಲನ್‌ಗಳನ್ನು ಕಡ್ಡಾಯವಾಗಿ ಸ್ಕ್ಯಾನ್ ಮಾಡಿ ದಿನಾಂಕ:23-01-2023 ರಿಂದ 13-02-2023 ರಂದು ಸಂಜೆ 5-30 ಗಂಟೆಯೊಳಗೆ ಈ ಕಛೇರಿಯ ಇ–ಮೇಲ್ http://mangalurucity.mrc.gov.in ಗೆ ಕಳುಹಿಸುವುದು. ಸದ್ರಿ ನೇಮಕಾತಿ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಸಹಾಯವಾಣಿ ಕೇಂದ್ರವನ್ನು ಪಾಲಿಕೆಯ ಕಟ್ಟಡದಲ್ಲಿ ತೆರೆಯಲಾಗಿದೆ. ಸಹಾಯವಾಣಿ ಸಂಖ್ಯೆ: 0824-2220313.

ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ.

DIPR / MNG / 1194/ MPL / 22-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯಲಹಂಕ ವಿಭಾಗ, ಬೆಂಗಳೂರು–560 064

ಸಂಖ್ಯೆ:ಬೃಬೆಂಮಪಾ/ಕಾಪಾಅ/ಯ.ವಿ/ಇ–ಪ್ರೊಕ್/16/2022–23 ದಿನಾಂಕ: 20.01.2023

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಾಗಿ ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–1 &3)

ಕ್ರ ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ	ಅಂದಾಜು ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
1.	ವಾರ್ಡ್ ಸಂಖ್ಯೆ–05, ಯಲಹಂಕ ಉಪನಗರದ ಅಂಬೇಡ್ಕರ್‌ನಗರದಲ್ಲಿ ಶಾಲೆ ಕಟ್ಟಡ ನಿರ್ಮಾಣ ಮಾಡುವುದು.	100.00	1.50
	2ನೇ ಕರೆ		
2.	ಯಲಹಂಕ ಉಪವಿಭಾಗ, ಕೆಂಪೇಗೌಡ ವಾರ್ಡ್ ಸಂಖ್ಯೆ–01ರ ಕೆಹೆಚ್‌ಬಿ ಕಾಲೋನಿ, ನೆಹರೂ ನಗರ, ಗಾಂಧಿನಗರದಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಸಾಮಾನ್ಯರಿಗೆ)	16.00	40000/-
3.	ಯಲಹಂಕ ಉಪವಿಭಾಗ, ಕೆಂಪೇಗೌಡ ವಾರ್ಡ್ ಸಂಖ್ಯೆ–01, ಬೀದಿ ನಾಮಫಲಕಗಳನ್ನು ಒದಗಿಸುವುದು ಮತ್ತು ಅಳವಡಿಸುವುದು. (ಸಾಮಾನ್ಯರಿಗೆ)	20.00	50000/-
4.	ಯಲಹಂಕ ಉಪವಿಭಾಗ, ಕೆಂಪೇಗೌಡ ವಾರ್ಡ್ ಸಂಖ್ಯೆ–01, ವೆಂಕಟಾಲದಲ್ಲಿ ಆರ್‌ಓ ಘಟಕ ನಿರ್ಮಾಣ ಮಾಡುವುದು (ಪ.ಜಾತಿ)	18.00	22500/-
5.	ಯಲಹಂಕ ಉಪವಿಭಾಗ, ಚೌಡೇಶ್ವರಿ ವಾರ್ಡ್ ಸಂಖ್ಯೆ–02, ಹಾರೋಹಳ್ಳಿ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ ಮಾಡುವುದು (ಸಾಮಾನ್ಯರಿಗೆ)	25.00	50000/-
6.	ಯಲಹಂಕ ಉಪವಿಭಾಗ, ಸೋಮೇಶ್ವರ ವಾರ್ಡ್ ಸಂಖ್ಯೆ–03, ವಿನಾಯಕ ಬಡಾವಣೆಯಲ್ಲಿ ಡಾಂಬರೀಕರಣ ಒದಗಿಸುವುದು. (ಪ.ಜಾತಿ)	20.00	25000/-
7.	ಯಲಹಂಕ ಸ್ಯಾಟಲೈಟ್ ಟೌನ್ ಉಪವಿಭಾಗ, ಸೋಮೇಶ್ವರ ವಾರ್ಡ್ ಸಂಖ್ಯೆ–03, ಯಲಹಂಕ 4ನೇ ಹಂತದ ಗ್ರಂಥಾಲಯ ಕಟ್ಟಡಕ್ಕೆ ದುರಸ್ಥಿ ಮತ್ತು ಸುಧಾರಣೆಗಳನ್ನು ಮಾಡುವುದು. (ಸಾಮಾನ್ಯರಿಗೆ)	10.00	25000/-
8.	ಯಲಹಂಕ ಸ್ಯಾಟಲೈಟ್ ಟೌನ್ ಉಪವಿಭಾಗ, ಸೋಮೇಶ್ವರ ವಾರ್ಡ್ ಸಂಖ್ಯೆ–03, ಪುಟ್ಟೇನಹಳ್ಳಿ ಸರ್ಕಾರಿ ಶಾಲೆಗೆ ಹೆಚ್ಚುವರಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು. (ಸಾಮಾನ್ಯರಿಗೆ)	40.00	80000/-
9.	ಯಲಹಂಕ ಸ್ಯಾಟಲೈಟ್ ಟೌನ್ ಉಪವಿಭಾಗ, ವಾರ್ಡ್ ಸಂಖ್ಯೆ–04, ಅಟ್ಟೂರಿನಲ್ಲಿ ಎಸ್‌ಎಸ್ ನಾಮಫಲಕಗಳನ್ನು ಒದಗಿಸುವುದು ಮತ್ತು ಅಳವಡಿಸುವುದು. (ಸಾಮಾನ್ಯರಿಗೆ)	30.00	60000/-
10.	ಯಲಹಂಕ ಸ್ಯಾಟಲೈಟ್ ಟೌನ್ ಉಪವಿಭಾಗ, ವಾರ್ಡ್ ಸಂಖ್ಯೆ–04, ಅಟ್ಟೂರಿನಲ್ಲಿ ಸಿಸಿ ರಸ್ತೆಗಳನ್ನು ನಿರ್ಮಾಣ ಮಾಡುವುದು. (ಸಾಮಾನ್ಯರಿಗೆ)	20.00	50000/-
11.	ಯಲಹಂಕ ಸ್ಯಾಟಲೈಟ್ ಟೌನ್ ಉಪವಿಭಾಗ, ವಾರ್ಡ್ ಸಂಖ್ಯೆ–04, ಅಟ್ಟೂರಿನ ಮುನೇಶ್ವರ ಬಡಾವಣೆಯಲ್ಲಿ ರಸ್ತೆ ಬದಿಯ ಚರಂಡಿಗಳಿಗೆ ಸುಧಾರಣೆ ಮತ್ತು ರಿಗಾರ್ಡಿಂಗ್ ಮಾಡುವುದು. (ಸಾಮಾನ್ಯರಿಗೆ)	25.00	50000/-
12.	ಯಲಹಂಕ ನ್ಯೂ ಟೌನ್ ಉಪವಿಭಾಗ, ವಾರ್ಡ್ ಸಂಖ್ಯೆ–05ರಲ್ಲಿ ವೈಟ್ ಟಾಪ್ಪಿಂಗ್ ರಸ್ತೆಗೆ ಬೊಲ್ಲಾರ್ಡ್ಸ್ ಒದಗಿಸುವುದು. (ಪ.ಜಾತಿ)	30.00	30000/-
13.	ಯಲಹಂಕ ನ್ಯೂ ಟೌನ್ ಉಪವಿಭಾಗ, ವಾರ್ಡ್ ಸಂಖ್ಯೆ–05ರ ಅಡ್ಡರಸ್ತೆ ಮತ್ತು ಮುಖ್ಯರಸ್ತೆಗಳಿಗೆ ಎಸ್‌ಎಸ್ ನಾಮಫಲಕಗಳನ್ನು ಒದಗಿಸುವುದು. (ಸಾಮಾನ್ಯರಿಗೆ)	25.00	50000/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 01.02.2023ರ ಸಂಜೆ 4:00 ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 25.01.2023ರ ಸಂಜೆ 4:00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಚೇರಿ (ಯಲಹಂಕ ವಿಭಾಗ) ಇಲ್ಲಿ ನಡೆಸಲಾಗುವುದು. (4) ಬಿಡ್‌ಗಳನ್ನು ದಿನಾಂಕ 02.02.2023ರ ಸಂಜೆ 4:00 ಗಂಟೆಯ ನಂತರ ತೆರೆಯಲಾಗುವುದು. (5) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ

ಕರ್ನಾಟಕ ಸರ್ಕಾರ

ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.

ಸಂ:ಕಾಪಾಇಂ/ಪಂರಾಇಂ/ವಿ/ದಾ/ಸ.ಇಂ/ಟೆಂ/2022–23/2737 ದಿ:– 18.01.2023

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಈ ವಿಭಾಗ ವ್ಯಾಪ್ತಿಯ ದಾವಣಗೆರೆ ಜಿಲ್ಲೆ, 2021–22 ಸಾಲಿನ ರಾಜ್ಯವಲಯ ಮುಂದುವರೆದ ಯೋಜನೆ ಮತ್ತು 2021–22ನೇ ಸಾಲಿನ 5054 ಮುಖ್ಯಮಂತ್ರಿಗಳ ವಿಶೇಷ ಅನುದಾನ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಕೆಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗಳನ್ನು ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ:27/01/2023 ಸಂಜೆ 5.00 ಗಂಟೆಯವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–250156 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯ ಬಹುದಾಗಿರುತ್ತದೆ.

ವಾಸಾಇ/ಡಿವಿಜಿ/825/ ಕೆಎಸ್‌ಎಂಸಿಎ/2022–23

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ದಾವಣಗೆರೆ.

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ ಕೊಪ್ಪಳ. ಕಛೇರಿ ದೂರವಾಣಿ : 08539–221895

ಫ್ಯಾಕ್ಸ್ ನಂ.:08539–221235 e-mail : itstaff_dudc_koppal@yahoo.com

ಕಂ.ಸಂ: 83179/(KOP-DC-11/57/2022-PD(DUDC)_KOPDC-KOPPAL DC) ದಿನಾಂಕ :19–01–2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4ರ ಯೋಜನೆಯಡಿ ಕೊಪ್ಪಳ ಜಿಲ್ಲೆಯ ನಗರಸಭೆ ಕೊಪ್ಪಳ ಮತ್ತು ಗಂಗಾವತಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಕಾಮಗಾರಿಗಳ ಕುರಿತು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ಟ್ಯಾಂಡರ್ಡ್ ಟೆಂಡರ್ ಡಾಕುಮೆಂಟ್ ಅನ್ವಯ ಟೆಂಡರ್‌ಗಳನ್ನು ಕರೆಯಲಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ತಮ್ಮ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆನ್‌ಲೈನ್ ಮೂಲಕ ವೆಬ್‌ಸೈಟ್ www.eproc.karnataka.gov.in ನಲ್ಲಿ ಸಂಪರ್ಕಿಸಬಹುದಾಗಿದೆ.

Brief Description: 1.CMC Koppal Indent No: DMA/2022-23/BD/WORK_INDENT139964/Call-2. **Approximate value of work (Rs. In Lakhs):** 279.80. **EMD (in Lakhs):** 4.96. **Period of Completion (Months):** 09
2.CMC Gangavati Indent No: DMA/2022-23/RD/WORK_INDENT145530. **Approximate value of work (Rs. In Lakhs):** 100.00. **EMD (in Lakhs):** 1.99. **Period of Completion (Months):** 06

ಟೆಂಡರ್ ಫಾರಂ ಪಡೆಯುವ ದಿನಾಂಕ (ಆನ್‌ಲೈನ್ ಮೂಲಕ) 21–01–2023 ಬೆಳಿಗ್ಗೆ 10:00 ಗಂಟೆಗೆ. ಪ್ರಶ್ನೆಗಳಿಗಾಗಿ ಹಾಗೂ ಪ್ರೀ ಬಿಡ್ ಸಭೆ ದಿನಾಂಕ 30–01–2023 ಬೆಳಿಗ್ಗೆ 11:00 ಗಂಟೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 04–02–2023 ಸಂಜೆ 5:30 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ 06–02–2023 ಬೆಳಿಗ್ಗೆ 10.30 ಗಂಟೆಗೆ

ಸಹಿ/–ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೊಪ್ಪಳ ಜಿಲ್ಲೆ.
ಡಿಐಪಿಆರ್/ಕೊಪ್ಪಳ/583/ಎಂಸಿಎ/2022–23

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

ಮಾನಿಮಂ/205/ಹಿಪಅ/ಗಣಿ/ಪಸಾಸ/2022–23/7097 ದಿನಾಂಕ: 20.01.2023

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ. ಟಾನಿಷ್ ರಿಸೋರ್ಸಸ್ ಪ್ರೈವೆಟ್ ಲಿಮಿಟೆಡ್, ರವರು "ಮಿನರಲ್ ಬೆನಿಫಿಶಿಯೇಷನ್ ಘಟಕ" (ಉತ್ಪಾದನಾ ಸಾಮರ್ಥ್ಯ: 1.25 MTPA ಕಬ್ಬಿಣದ ಅದಿರು ಮತ್ತು 0.15 MTPA ಮ್ಯಾಂಗನೀಸ್ ಅದಿರು) ಯೋಜನೆಯನ್ನು ಒಟ್ಟು 26.34 ಎಕರೆ (ಕೈಗಾರಿಕಾ ಪರಿವರ್ತಿತ ಕೃಷಿಯೇತರ ಭೂಮಿ) ಪ್ರದೇಶದ ಸರ್ವೆ ನಂ. 28/4 & 29/C, ಎಮ್ಮಿಹಟ್ಟಿ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ : F. No. IA-J-11011/84/2022-IA-II(IND-I) ದಿನಾಂಕ: 03.06.2022, ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ದಿನಾಂಕ:17.11.2022 ರ ಪ್ರಕಾರ ಹಾಗೂ ಪ್ರಾದೇಶಿಕ ಅಧಿಕಾರಿ, ಬಳ್ಳಾರಿ, ಇವರ ಪತ್ರ ದಿನಾಂಕ: 11.01.2023 ದಲ್ಲಿ ಸೂಚಿಸಿದ ದಿನಾಂಕದಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

1. ಕಂಪನಿಯ ಹೆಸರು ಮತ್ತು ವಿಳಾಸ.: ಮೆ. ಟಾನಿಷ್ ರಿಸೋರ್ಸಸ್ ಪ್ರೈವೆಟ್ ಲಿಮಿಟೆಡ್, ಎಮ್ಮಿಹಟ್ಟಿ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಕರ್ನಾಟಕ– 583201. ನೋಂದಾಯಿತಕಛೇರಿ: ಡೋರ್ ನಂ. 498/ಎ, ಶ್ರೀ. ವೆಂಕಟೇಶ್ವರ ಕಾಂಪ್ಲೆಕ್ಸ್, ಸರ್ದಾರ್ ಪಟೇಲ್ ಶಾಲೆ ಪಕ್ಕ, ಬಳ್ಳಾರಿ ರಸ್ತೆ, ಹೊಸಪೇಟೆ– 583201.
2. ಉದ್ದೇಶಿತ ಯೋಜನೆಯ ಸ್ಥಳ: ಸರ್ವೆ ನಂ. 28/4 & 29/ಅ, ಎಮ್ಮಿಹಟ್ಟಿ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಕರ್ನಾಟಕ.
ಉದ್ದೇಶಿತ ಯೋಜನೆಯ ವಿವರ.: "ಮಿನರಲ್ ಬೆನಿಫಿಶಿಯೇಷನ್ ಘಟಕ" (ಉತ್ಪಾದನಾ ಸಾಮರ್ಥ್ಯ: 1.25 MTPA ಕಬ್ಬಿಣದ ಅದಿರು ಮತ್ತು 0.15 MTPA ಮ್ಯಾಂಗನೀಸ್ ಅದಿರು) ಸ್ಥಾಪಿಸಲು ಉದ್ದೇಶಿಸಿರುತ್ತಾರೆ.
4. ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ : 21.02.2023 (ಮಂಗಳವಾರ) ಸಮಯ : ಬೆಳಿಗ್ಗೆ 11.00 ಗಂಟೆ ಸ್ಥಳ: ಎಮ್ಮಿಹಟ್ಟಿ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ, ಕರ್ನಾಟಕ.
5. ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ: ಅ. ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಇ. ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಈ. ತಹಶೀಲ್ದಾರರ ಕಾರ್ಯಾಲಯ, ಸಂಡೂರು ಉ. ಗ್ರಾಮ ಪಂಚಾಯತ್ ಕಾರ್ಯಾಲಯ, ಎಮ್ಮಿಹಟ್ಟಿ. ಊ. ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ. ಋ. ಕೇಂದ್ರ ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034. ಎ. ಸಹಾಯಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರುತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : kspcb.gov.in ನಲ್ಲಿ ಪಡೆಯಬಹುದು.

ಸಹಿ/– ಸದಸ್ಯ ಕಾರ್ಯದರ್ಶಿ

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.

ಸಂ:ಕಾಇಂ:ಗ್ರಾ.ಕು.ನೀ&ನೈವಿ/ದಾ/ಸ.ಇಂ–2/ಕಿ.ಇಂ–2/4215/ಟೆಂಡರ್/1303 ದಿ:16/01/2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

2022–23 ನೇ ಸಾಲಿನ 4215 MVS (O&M) ಯೋಜನೆಯಡಿ ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕಿನ ಒಟ್ಟು 02 ಗ್ರಾಮಕ್ಕೆ 02 ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯು ರೂ.170.87 ಲಕ್ಷಕ್ಕೆ, ಅನುಮೋದನೆಯಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಅನ್ವಯ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ–2 ರ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 01/02/2023 ರ ಸಂಜೆ 5.00ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ: 08192–262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/830/ ಕೆಎಸ್‌ಎಂಸಿಎ/2022–23

ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್

(Formerly Known as Mysore Minerals Limited)
(A Government of Karnataka Undertaking)
Regd. ಕಚೇರಿ: ಟಿಟಿಎಂಸಿ, 'ಎ' ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಎಚ್. ರಸ್ತೆ, ಶಾಂತಿನಗರ, ಬೆಂಗಳೂರು–560 027.
ಫ್ಯಾಕ್ಸ್: 080–2221 3172 ದೂರವಾಣಿ: 080–22278813 / 14 / 15 / 16
Website: www.ksmc.karnataka.gov.in

ಸಂಖ್ಯೆ:ಕೆಎಸ್‌ಎಂಸಿಎಲ್/ಉತ್ಪಾದನೆ/ತಿಕಅಗ/257/ಟೆಂಡರ್/ಸಿ&ಎಸ್/2022-23/2909 ದಿನಾಂಕ: 20.01.2023

ಇ–ಟೆಂಡರ್ ಆಹ್ವಾನ

ಕೆಎಸ್‌ಎಂಸಿಎಲ್ ಸಂಸ್ಥೆಯ ತಿಮ್ಮಪ್ಪನಗುಡಿ ಕಬ್ಬಿಣದ ಅದಿರು ಗಣಿಯಲ್ಲಿ ಡ್ರಿಲ್ಲಿಂಗ್, ಆರ್.ಓ.ಎಂ ಉತ್ಪಾದನೆ ಹಾಗೂ ಗಾತ್ರೀಕರಣ ಕೆಲಸವನ್ನು ಕೈಗೊಳ್ಳಲು ಈ ಕೆಳಗಿನ ವೇಳಾಪಟ್ಟಿಯಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ವೇಳಾಪಟ್ಟಿ

ಟೆಂಡರ್ ಉಲ್ಲೇಖ ಸಂಖ್ಯೆ:	ಕೆಎಸ್‌ಎಂಸಿಎಲ್/ಉತ್ಪಾದನೆ/ತಿಕಅಗ/257/ಟೆಂಡರ್/ಸಿ&ಎಸ್/2022-23/2904
http://eproc.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ	20/01/2023
ಪೂರ್ವ ಬಿಡ್ ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ	ದಿನಾಂಕ 30/01/2023 ಸಂಜೆ 5:00 ಗಂಟೆ
KSMCL ನ ಪ್ರಧಾನ ಕಛೇರಿಯಲ್ಲಿ ಪೂರ್ವ-ಬಿಡ್ ಸಭೆ	01/02/2023 ಮುಂಜಾನೆ 11:30 ಗಂಟೆ
ಇ-ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ಮತ್ತು ಸಮಯ	ದಿನಾಂಕ 20/02/2023 ಸಂಜೆ 5.00 ಗಂಟೆಯವರೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	22/02/2023 ಮುಂಜಾನೆ 11.00 ಗಂಟೆಗೆ
ಇಎಂಡಿ	ರೂ.28,92,500
ಸಂವಹನದ ವಿಳಾಸ	ಕಾರ್ಯನಿರ್ವಾಹಕ ನಿರ್ದೇಶಕರು. ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್, ಟಿಟಿಎಂಸಿ 'ಎ' ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ. ಹೆಚ್. ರೋಡ್, ಶಾಂತಿನಗರ, ಬೆಂಗಳೂರು–560027.

DIPR/CP/AAPL/RO4198/22-23 ಸಹಿ/– ಪ್ರಧಾನ ವ್ಯವಸ್ಥಾಪಕರು (ಆ&ಜಾ).

ಕರ್ನಾಟಕ ಸರ್ಕಾರದ ಸಚಿವಾಲಯ
ಆರ್ಥಿಕ ಇಲಾಖೆ ವಿಧಾನಸೌಧ, ಬೆಂಗಳೂರು

ಸಂಖ್ಯೆ: ಆಇ 03 ಬಿಎಂಬಿ 2022 ಬೆಂಗಳೂರು, 20ನೇ ಜನವರಿ 2023

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್.ಡಿ. 01 ಬಿಎಂಬಿ 2012, ದಿನಾಂಕ: 14ನೇ ಫೆಬ್ರುವರಿ 2013 ನಿಬಂಧನೆಯ ಮೇರೆಗೆ ಹೊರಡಿಸಲಾದ 8.62% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2023, (Karnataka SDL 2023) ದಿನಾಕ: 19ನೇ ಫೆಬ್ರುವರಿ 2023 ದಿನಾಂಕವೂ ಸೇರಿ ಆವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: 20ನೇ ಫೆಬ್ರುವರಿ 2023ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೊಷಿಯೇಬಲ್ ಇನಸ್ಟ್ರುಮೆಂಟ್ಸ್ ಆಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ, ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. 20ನೇ ಫೆಬ್ರುವರಿ 2023ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.

2. ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ–ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ/ನೋಂದಾಯಿತವಾಗಿವೆಯೋ ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3. ಆದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ/ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, 8.62% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2023, (Karnataka SDL 2023) ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು. ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

"ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ."

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು, ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು. ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು. ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/– ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ

DIPR/CP/VCPL/4208/2022-23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001. ಫೋನ್ ಸಂ. 080–22265383
ವೆಬ್‌ಸೈಟ್: www.kiadb.in

ನಂ.ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–46/02/2022–23 ದಿನಾಂಕ: 19.01.2023

ಟೆಂಡರ್ ಆಹ್ವಾನ ಪ್ರಕಟಣೆ

(ಜಿ.ಓ.ಕೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕ್ಕೆ ಸೇರಿದ ಕೆಪಿಡಬ್ಲ್ಯೂಡಿ ನೋಂದಾಯಿತ ಅರ್ಹ ದರ್ಜೆ–III ಹಾಗೂ ಮೇಲ್ಪಟ್ಟ (ಸಿವಿಲ್) ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಟೆಂಡರ್‌ಗಳನ್ನು ಏಕ ಲಕೋಟೆ ಪದ್ಧತಿಯಡಿಯಲ್ಲಿ ಆಹ್ವಾನಿಸಲಾಗಿದೆ.

1) ಮೈಸೂರು ತಾಲ್ಲೂಕು & ಜಿಲ್ಲೆಯ ಕೂರಗಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ ಜೊತೆಗೆ ಡಾಂಬರೀಕರಣ ರಸ್ತೆ ನಿರ್ಮಾಣ ಮಾಡುವ ಕಾಮಗಾರಿ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ವೇಳಾ ಪಟ್ಟಿ ವಿವರಗಳು

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.02.2023 ಸಂಜೆ 4.30 ಗಂಟೆವರೆಗೆ.

ಸಹಿ/– ಮುಖ್ಯ ಅಭಿಯಂತರರು–2 ಕೆ.ಐ.ಎ.ಡಿ.ಬಿ, ಬೆಂಗಳೂರು.

ವಾ.ಸಾ.ಸಂ.ಇ/ವಾಪ್ರ/4188/ಆಕಾರ್/22–23

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಳಗಾವಿ

ಕ್ರಸಂ:ಬಿಜಿಎಂ:ಡಿಯುಡಿಸಿ:5:ಸಿಆರ್–25/2021–23 ದಿನಾಂಕ: 19–01–2023

ಟೆಂಡರ್ ಅಧಿಸೂಚನೆ

ಬೆಳಗಾವಿ ಜಿಲ್ಲೆಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಹಂತ–4 ಯೋಜನೆಯ (24.10%, 7.25% ಮತ್ತು 5%) ಕಾಮಗಾರಿಗಳಿಗಾಗಿ KW–2 & 4 ಡಾಕುಮೆಂಟ್ ಉಪಯೋಗಿಸಿ ಅರ್ಹ ಗುತ್ತಿಗೆದಾರರಿಂದ ಕ್ರ.ಸಂ.01 ಮತ್ತು 02 ಕ್ಕೆ ದ್ವಿ–ಲಕೋಟೆ ಹಾಗೂ ಕ್ರ.ಸಂ.03ಕ್ಕೆ ಏಕ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. (ರೂ. ಲಕ್ಷಗಳಲ್ಲಿ)

ಕ್ರ. ಸಂ	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (GST ಹೊರತುಪಡಿಸಿ)	ಇ.ಎಂ.ಡಿ ಮೊತ್ತ
1	ಘಟಪ್ರಭಾ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ ಮತ್ತು ಶೌಚಾಲಯ ನಿರ್ಮಿಸುವುದು (Tender No.DMA/2022-23 / OW/WORK_INDENT145487).	131.87	1.98
2	ಕೊಣ್ಣೂರ ಪುರಸಭೆ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ. ತಡೆಗೋಡೆ, ವಾಣಿಜ್ಯ ಮಳಿಗೆ ಮತ್ತು ಶೌಚಾಲಯ ನಿರ್ಮಿಸುವುದು (Tender No. DMA/2022-23/ OW/WORK_INDENT145488).	132.64	1.99
3	ಕಾಗವಾಡ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಸಮುದಾಯ ಭವನ ಮತ್ತು ಶೌಚಾಲಯ ನಿರ್ಮಿಸುವುದು (Tender No. DMA/2022-23/BD/ WORK_INDENT145498).	38.55	0.77

ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www. eproc.karnataka.gov.in ಮೂಲಕ ಟೆಂಡರ್ ಡೌನ್‌ಲೋಡ್ ಹಾಗೂ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ ಹಾಗೂ ಟೆಂಡರ್ ಪ್ರೋಸೆಸಿಂಗ್ ಫೀ ಯನ್ನು ಸಹ ವಿದ್ಯುನ್ಮಾನ ಮೂಲಕ ಸಲ್ಲಿಸುವುದು. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	04–02–2023ರಂದು 17–00 ಘಂಟೆವರೆಗೆ
ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	06–02–2023ರಂದು 10–00 ಘಂಟೆ ನಂತರ

ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಳಗಾವಿ

DIPR/BGM/RO-NO-1586/MCA/2022-23

ಜೈಪುರ ಸಾಹಿತ್ಯೋತ್ಸವ: ದೇಶದ ಭಯ, ಆತಂಕದ ಹಲವು ಬಗೆಗಳನ್ನು ಬಿಚ್ಚಿಟ್ಟ ಪತ್ರಕರ್ತ ರವೀಶ್‌ಕುಮಾರ್

ಮುಖ್ಯ ನ್ಯಾಯಮೂರ್ತಿಗೇ ಭಯ ಇರುವ ದೇಶ

• ವಿಶಾಖ ಎನ್.

ಜೈಪುರ: 'ಈ ದೇಶದಲ್ಲಿ ಜಾಮೀನು ನೀಡಲು ನ್ಯಾಯಾಧೀಶರಿಗೆ ಭಯವಿದೆ ಎಂದು ಮುಖ್ಯ ನ್ಯಾಯಮೂರ್ತಿಯೇ ಮುಕ್ತವಾಗಿ ಹೇಳಿಕೊಂಡಿದ್ದಾರೆ. ಭಯದ ಸ್ವರೂಪ ಇಲ್ಲಿ ಹೇಗಿದೆ ಎನ್ನುವುದಕ್ಕೆ ಇದೇ ಸಾಕ್ಷಿ' ಎಂದು ಪತ್ರಕರ್ತ ರವೀಶ್‌ಕುಮಾರ್ ವಿಷಾದ ಬೆರೆತ ದನಿಯಲ್ಲಿ ಹೇಳಿದರು.

ಜೈಪುರ ಸಾಹಿತ್ಯೋತ್ಸವದಲ್ಲಿ ಶುಕ್ರವಾರ 'ಭಯದ ಸ್ವರೂಪ' ಎನ್ನುವ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಭಾರತ ಕುಸ್ತಿ ಫೆಡರೇಷನ್‌ನ ಅಧ್ಯಕ್ಷರೂ ಆಗಿರುವ ಸಂಸದ ಬ್ರಿಜ್ ಭೂಷಣ್ ಸಿಂಗ್ ಅವರಿಂದ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಮಹಿಳಾ ಕುಸ್ತಿಪಟುಗಳು ದೆಹಲಿಯಲ್ಲಿ ಪ್ರತಿಭಟನೆ ಕುಳಿತಿದ್ದಾರೆ. ಕನಿಷ್ಠ ಬಿಜೆಪಿಯ ಹೆಣ್ಣುಮಗಳೇ ಆದ ಸ್ಮೃತಿ ಇರಾನಿ ಅವರಾದರೂ ಅಲ್ಲಿಗೆ ಹೋಗಿ, ವಿಷಯ ಅವಲೋಕಿಸಬೇಕಲ್ಲ. ಘಟಾನುಘಟಿಗಳನ್ನೂ ಕೆಡವಿಹಾಕಬಲ್ಲ ಕುಸ್ತಿಪಟುಗಳಿಗೇ ಭಯ ಇರುವ ಈ ಪರಿಸ್ಥಿತಿಯನ್ನು ಏನನ್ನೋಣ' ಎಂದು ಪ್ರಶ್ನಿಸಿದರು.

'ಸರ್ಕಾರವೇ ಇಲ್ಲಿ ಕೆಲವರು ತಪ್ಪು ಮಾಡಲಿ ಎಂದು ಹೊಂಚು ಹಾಕಿ ಕೂತಿದೆ. ಯಾವ ರೀತಿಯ ತಪ್ಪು ಮಾಡಬಹುದು ಎನ್ನುವ ಪರಿಸ್ಥಿತಿಯನ್ನು ಕೂಡ ಸೃಷ್ಟಿಸಿದೆ. ಸಿದ್ದಿಕ್ ಕಪ್ಪನ್, ಉಮರ್ ಖಾಲಿದ್ ಮೊದಲಾದವರು ಅದಕ್ಕೆ ಉದಾಹರಣೆ. ಬೆಂಗಳೂರಿನಲ್ಲಿ ಅಮೂಲ್ಯಾ ಎಂಬ ಹೆಣ್ಣುಮಗಳು ಎರಡು ದೇಶಗಳ ಪರವಾಗಿ ಘೋಷಣೆ ಕೂಗಿದ್ದೇ, ನೂರು ದಿನ ಅವಳನ್ನು ಜೈಲಿನಲ್ಲಿ ಇರಿಸಿದರು. ಆರೋಪಪಟ್ಟಿಯನ್ನೂ ದಾಖಲಿಸಲಿಲ್ಲ. ಆಮೇಲೆ ಸುಮ್ಮನೆ ಬಿಟ್ಟು ಕಳಿಸಿದರು. ತಮಗೂ ಅವಳ ವರ್ತನೆಗೂ ಸಂಬಂಧವಿಲ್ಲ ಎಂದು ಅವರ ತಂದೆಯೇ ಹೇಳಿದ ದೇಶವಿದು' ಎಂದು ಅವರು ವ್ಯಂಗ್ಯವಾಡಿದರು.

'ಕರ್ನಾಟಕದಲ್ಲಿ ಬಿಜೆಪಿಯ ಇಂತಹ ರಾಜಕಾರಣಿ ಭ್ರಷ್ಟಾಚಾರ ಮಾಡಿದ್ದಾರೆ ಎಂದು ಹೆಸರು ತೆಗೆದುಕೊಂಡು ಆರೋಪಿಸಿದರೂ ಇ.ಡಿ ಅವರ ಮೇಲೆ ದಾಳಿ ಮಾಡಲಿಲ್ಲ. ಅದಕ್ಕೂ ಭಯವಿದೆ' ಎಂದು ತರಾಟೆಗೆ ತೆಗೆದುಕೊಂಡರು.

'ಸರ್ಕಾರ ಬದಲಾದ ಮಾತ್ರಕ್ಕೆ ಭಯ-ಆತಂಕ ನಿವಾರಣೆಯಾದೀತು ಎಂದರ್ಥವಲ್ಲ. ವಿರೋಧದ ದನಿ ಇರುವುದೇ ಜನರಲ್ಲಿ. ನಾಗರಿಕ ಪ್ರಜ್ಞೆಯು ಮತ್ತೆ ಒಳ್ಳೆಯ ಪ್ರಮಾಣದಲ್ಲಿ ಮೂಡಿದಾಗಲಷ್ಟೇ ನಿರ್ಭಿಡೆಯಿಂದ ಪ್ರಶ್ನಿಸುವುದು ಸಾಧ್ಯ' ಎಂದರು.

'ಸಣ್ಣಗಾಳಿಗೆ ಸಿಲುಕಿ ಉದುರುವ ತರಗೆಲೆಗಳಂತೆ ಆಗದೆ ಹಲ್ಲು ಬಿಗಿಹಿಡಿದು ಹೋರಾಡುವ ವ್ಯಕ್ತಿಯಾಗಿಯೇ ಉಳಿಯುವಂತೆ ಹೊಸ ವರ್ಷಕ್ಕೆ ನನ್ನ ಮಾವ ಹಾರೈಕೆಯ ಸಂದೇಶ ಕಳುಹಿಸಿದ್ದರು. ನನಗೂ ಎಲ್ಲರಂತೆ ಭಯವಿದೆ. ಆದರೆ, ನೇರವಾದ ಪೆನ್ನು, ಸ್ವಚ್ಛ ನಾಲಗೆ ಇದ್ದರೆ ಸಾಕು ಎಂದು ಭಾವಿಸಿರುವೆ' ಎಂದು ಭಾವುಕರಾದರು.

ಪ್ರಕಾಶಕ ರವಿ ಸಿಂಗ್ ಹಾಗೂ ಪತ್ರಕರ್ತ ಸತ್ಯಾನಂದ ನಿರೂಪಮ್ ಗೋಷ್ಠಿ ನಿರ್ವಹಿಸಿದರು.

ಸತ್ಯಾನಂದ ನಿರುಪಮ್, ರವೀಶ್ ಕುಮಾರ್, ರವಿ ಸಿಂಗ್

ಸುಧಾಮೂರ್ತಿ ಗೋಷ್ಠಿಗೆ ಕಿಕ್ಕಿರಿದ ಜನ

ಜೈಪುರ: 'ನಾಯಿ ಇರುವವರು ಅದೃಷ್ಟವಂತರು. ಹೆಣ್ಣುಮಕ್ಕಳು ಇರುವವರೂ ಪುಣ್ಯವಂತರು. ಪ್ರೀತಿ, ವಿಧೇಯತೆ ಕೊಡುವುದು ನಾಯಿಗಷ್ಟೆ ಸಾಧ್ಯ. ಮಗಳ ಮಾತನ್ನು ಕೇಳಿಸಿಕೊಂಡು ನಾನು ಸಮಾಜಸೇವೆ ಮಾಡಿದೆ' ಎಂದು ಸಾಹಿತಿ ಸುಧಾಮೂರ್ತಿ ಶುಕ್ರವಾರ ಸಾಹಿತ್ಯೋತ್ಸವದ ಬೆಳಗಿನ ಗೋಷ್ಠಿಯಲ್ಲಿ ತಮ್ಮ ನಂಬಿಕೆ ಹಾಗೂ ಸಾಹಿತ್ಯದ ಕುರಿತು ಮಾತನಾಡಿದರು.

ತಮ್ಮನ್ನು 'ನ್ಯಾಷನಲ್ ನಾನಿ' ಎಂದು ಸುಧಾಮೂರ್ತಿ ಕರೆದುಕೊಂಡರು. ಆಗ ಗೋಷ್ಠಿ ನಿರ್ವಹಿಸಿದ ಮಂದಿರಾ ನಾಯರ್, 'ನೀವು ಇಂಟರ್‌ನ್ಯಾಷನಲ್ ನಾನಿ' ಎಂದದ್ದೇ, ಪ್ರೇಕ್ಷಕರಿಂದ ಚಪ್ಪಾಳೆ.

ತಾವು ಎಂಜಿನಿಯರಿಂಗ್ ಓದುವಾಗಲೇ ಸಾಧಿಸಿ ತೋರಿಸಿದ್ದನ್ನು ಅವರು ಸ್ಮರಿಸಿದರು. ಅರ್ಥಶಾಸ್ತ್ರಜ್ಞೆ ಅಲ್ಲದೇ ಇದ್ದರೂ ಬಂಡವಾಳ ಹೂಡಿಕೆಯಲ್ಲಿ ತಮ್ಮದೇ ಎತ್ತಿದ ಕೈ ಎಂದರು. ಇನ್ಫೊಸಿಸ್ ಬೆಳವಣಿಗೆಯನ್ನು ಅದಕ್ಕೆ ಉದಾಹರಣೆಯಾಗಿ ನೀಡಿದರು.

ಐವತ್ತೆರಡನೇ ವಯಸ್ಸಿನಲ್ಲಿ ಇಂಗ್ಲಿಷ್‌ನಲ್ಲಿ ಬರೆಯಲು ಆರಂಭಿಸಿದ ಸಂದರ್ಭವನ್ನು ಸ್ಮರಿಸಿದ ಅವರು, ತಮ್ಮ ಬಾಲ್ಯದ ಘಟನೆಗಳನ್ನೂ ಮೆಲುಕು ಹಾಕಿದರು. ತಾವು ಹೆಚ್ಚು ಉಪದೇಶ ಮಾಡುವ ಪೈಕಿ ಎಂದು ಗೇಲಿ ಕೂಡ ಮಾಡಿಕೊಂಡರು.

ಸುಧಾಮೂರ್ತಿ ಆಗಿದ್ದು ಹೇಗೆ ಎಂಬ ಪ್ರಶ್ನೆಗೆ, 'ನಾರಾಯಣ ಮೂರ್ತಿಯನ್ನು ಮದುವೆ ಆಗಿದ್ದರಿಂದ ಸುಧಾಮೂರ್ತಿಯಾದೆ' ಎಂದು ಉತ್ತರಿಸಿ ಚಪ್ಪಾಳೆ ಗಿಟ್ಟಿಸಿಕೊಂಡರು.

ಗೋಷ್ಠಿಗೆ ಕಿಕ್ಕಿರಿದು ಜನರು ಸೇರಿದ್ದರು.

ಕವಿ ಸಮಯ

ಶಬಾನಾ ತಂದೆ ಕೈಫಿ ಆಜ್ಮಿ ಹಾಗೂ ಜಾವೆದ್ ಅಖ್ತರ್ ತಂದೆ ಜಾನ್ ನಿಸಾರ್ ಅಖ್ತರ್ ಇಬ್ಬರೂ ಬರೆದ ಆಯ್ದ ಕವನಗಳನ್ನು ಸಾಹಿತ್ಯೋ ಕಾವ್ಯಸಂಬಂಧಿ ಗೋಷ್ಠಿಯಲ್ಲಿ ಪ್ರಸ್ತುತಪಡಿಸಲಾಯಿತು.

ಕವನಗಳ ರಸಾನುಭವದ ಜತೆಗೆ ತಮ್ಮ ಬದುಕಿನ ಹಲವು ಸಂಗತಿಗಳನ್ನು ಶಬಾನಾ ಹಾಗೂ ಜಾವೆದ್ ಅಖ್ತರ್ ಮೆಲುಕುಹಾಕಿದರು. ಇನ್ನೊಂದು ಗೋಷ್ಠಿಯಲ್ಲಿ ತಮ್ಮ 'ಟಾಕಿಂಗ್ ಲೈಫ್' ಎಂಬ ಕೃತಿಯಲ್ಲಿನ ಸಾರವನ್ನೂ ಜಾವೆದ್ ಮೆಲುಕು ಹಾಕಿದರು.

25 ವರ್ಷ ಚಿತ್ರೋದ್ಯಮದಲ್ಲಿ ಸೈಕಲ್ ಹೊಡೆದ ನಂತರ ಸಿಕ್ಕ ಯಶಸ್ಸನ್ನು ನೆನಪಿಸಿಕೊಂಡರು. ನೂರು ರೂಪಾಯಿ ತಿಂಗಳ ಸಂಬಳಕ್ಕೆ ಕೆಲಸ ಮಾಡಿದ ಸಂದರ್ಭವನ್ನು ಚಿತ್ರಸಾಹಿತಿಯಿಂದ ಕೇಳಿದ ಪ್ರೇಕ್ಷಕರಿಂದ ಕರತಾಡನ ಬಂತು.

ಕೆಎಸ್‌ಎಫ್‌ಸಿ: ಒಟಿಎಸ್ ಜಾರಿಗೆ ನಿರ್ಧಾರ

ಬೆಂಗಳೂರು: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಲ್ಲಿ (ಕೆಎಸ್‌ಎಫ್‌ಸಿ) ಅನುತ್ಪಾದಕ ಆಸ್ತಿಯ ಪಟ್ಟಿಯಲ್ಲಿರುವ ₹ 345 ಕೋಟಿ ಸಾಲದ ವಸೂಲಾತಿಗಾಗಿ ಒಂದು ಬಾರಿ ತೀರುವಳಿ (ಒಟಿಎಸ್) ಯೋಜನೆ ಜಾರಿಗೊಳಿಸುವ ಪ್ರಸ್ತಾವಕ್ಕೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.

'2003ರ ಅಕ್ಟೋಬರ್ 31ರ ಬಳಿಕ ಮಂಜೂರಾತಿಯಾಗಿದ್ದು, ವಸೂಲಾಗದೇ ಇರುವ ₹ 127 ಕೋಟಿ ಅಸಲು ಹಾಗೂ ₹ 217.6 ಕೋಟಿ ಬಡ್ಡಿ ವಸೂಲಿಗೆ ಒಟಿಎಸ್ ಜಾರಿಗೊಳಿಸಲು ನಿರ್ಧರಿಸಲಾಗಿದೆ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಶುಕ್ರವಾರ ಸಂಪುಟ ಸಭೆಯ ಬಳಿಕ ತಿಳಿಸಿದರು.

ಕೆಎಸ್‌ಎಫ್‌ಸಿಗೆ ರಾಜ್ಯ ಸರ್ಕಾರದಿಂದ ₹ 54.60 ಕೋಟಿ ಷೇರು ಬಂಡವಾಳ ಬಿಡುಗಡೆ ಮಾಡುವ ಪ್ರಸ್ತಾವಕ್ಕೂ ಒಪ್ಪಿಗೆ ನೀಡಲಾಗಿದೆ ಎಂದರು.

ಸೈನಿಕರ ಪತ್ನಿಯರಿಗೂ ನಿವೇಶನ: ನಗರಾಭಿವೃದ್ಧಿ ಪ್ರಾಧಿಕಾರಗಳು ನಿರ್ಮಿಸುವ ಬಡಾವಣೆಗಳಲ್ಲಿ ಮಾಜಿ ಸೈನಿಕರ ಕೋಟಾದ ಅಡಿಯಲ್ಲಿ ಮೃತ ಸೈನಿಕರ ಪತ್ನಿ ಅಥವಾ ಅವರ ಅವಲಂಬಿತರಿಗೆ ನಿವೇಶನ ಹಂಚಿಕೆ ಮಾಡುವುದಕ್ಕೆ ಅವಕಾಶ ಕಲ್ಪಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳಿಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೂ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

'ಮಾಜಿ ಸೈನಿಕರು ಅಥವಾ ಮೃತ ಸೈನಿಕರ ಕುಟುಂಬಗಳ ಸದಸ್ಯರು ಅರ್ಜಿ ಸಲ್ಲಿಸಬಹುದು' ಎಂದು ನಿಯಮಗಳಲ್ಲಿದೆ. ಅದರ ಜತೆಗೆ 'ಮಾಜಿ ಸೈನಿಕರು ಮತ್ತು ಮೃತ ಸೈನಿಕರ ಪತ್ನಿ ಅಥವಾ ಅವಲಂಬಿತರು' ಎಂಬ ಪದಗಳನ್ನು ಸೇರಿಸಲು ನಿರ್ಧರಿಸಲಾಗಿದೆ ಎಂದರು.

ಸೀಟ್ ಬೆಲ್ಟ್ ತೆಗೆದಿದ್ದಕ್ಕಾಗಿ ಕ್ಷಮೆ ಕೇಳಿದ ಸುನಕ್

ಲಂಡನ್ (ಪಿಟಿಐ): ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಕಾರಿನಲ್ಲಿ ಪ್ರಯಾಣಿಸುವಾಗ ಕೆಲ ಕಾಲ ಸೀಟ್‌ಬೆಲ್ಟ್ ಅನ್ನು ತೆಗೆದಿರುವುದು ವಿವಾದಕ್ಕೆ ಕಾರಣವಾಗಿದೆ. ಈ ಪ್ರಮಾದಕ್ಕಾಗಿ ಅವರು ಕ್ಷಮೆ ಕೇಳಿದ್ದಾರೆ.

'ಕಾರು ಚಲಾಯಿಸುವ ಸಂದರ್ಭದಲ್ಲಿ ಸಾಮಾಜಿಕ ಮಾಧ್ಯಮಕ್ಕಾಗಿ ವಿಡಿಯೊ ಚಿತ್ರೀಕರಣ ಮಾಡಲು ಸೀಟ್ ಬೆಲ್ಟ್ ತೆಗೆದಿದ್ದೆ. ಇದು ನಾನು ಕೈಗೊಂಡ ತಪ್ಪು ನಿರ್ಧಾರವಾಗಿತ್ತು' ಎಂದು ಸುನಕ್ ಹೇಳಿದ್ದಾರೆ.

'ಬ್ರಿಟನ್‌ನ ವಾಯವ್ಯ ಭಾಗದಲ್ಲಿ ಪ್ರಯಾಣಿಸುವಾಗ ರಿಷಿ ಸುನಕ್ ಅವರು ಕೆಲವೇ ಕ್ಷಣಗಳ ಅವಧಿಗಾಗಿ ಸೀಟ್ ಬೆಲ್ಟ್ ತೆಗೆದಿದ್ದರು. ತಮ್ಮಿಂದ ತಪ್ಪು ಆಗಿದೆ ಎಂದು ಅವರು ಒಪ್ಪಿಕೊಂಡಿದ್ದು, ಕ್ಷಮೆಯನ್ನೂ ಕೇಳಿದ್ದಾರೆ' ಎಂದು ಅವರ ಕಚೇರಿಯ ವಕ್ತಾರ ತಿಳಿಸಿದ್ದಾರೆ.

'ಸುರಕ್ಷತೆ ದೃಷ್ಟಿಯಿಂದ ಪ್ರತಿಯೊಬ್ಬರು ಸೀಟ್ ಬೆಲ್ಟ್ ಧರಿಸಬೇಕು ಎಂಬುದು ಪ್ರಧಾನಿಯವರ ದೃಢವಾದ ನಂಬಿಕೆ' ಎಂದೂ ಅವರು ಹೇಳಿದ್ದಾರೆ.

ಸುನಕ್ ಅವರು ದೇಶದಾದ್ಯಂತ ಜಾರಿಗೊಳಿಸಲು ಉದ್ದೇಶಿಸಿರುವ 100ಕ್ಕೂ ಅಧಿಕ ಕಾರ್ಯಕ್ರಮಗಳ ಕುರಿತ ಪ್ರಚಾರಕ್ಕಾಗಿ ವಿಡಿಯೊವೊಂದರ ಚಿತ್ರೀಕರಣದಲ್ಲಿ ಭಾಗಿಯಾಗಿದ್ದರು. ಕಾರಿನಲ್ಲಿಯೇ ಕುಳಿತು ಅವರು ಕ್ಯಾಮೆರಾ ಮುಂದೆ ಮಾತನಾಡುತ್ತಿದ್ದರು. ಈ ವೇಳೆ, ಪೊಲೀಸರು ಬೈಕ್‌ಗಳಲ್ಲಿ ಅವರ ಕಾರನ್ನು ಹಿಂಬಾಲಿಸುತ್ತಿದ್ದರು.

'ಪರಿಶೀಲನೆ': ಈ ಕುರಿತು ಪ್ರತಿಕ್ರಿಯಿಸಿರುವ ಲಂಕಾಶೈರ್ ಪೊಲೀಸರು, 'ಘಟನೆಗೆ ಸಂಬಂಧಿಸಿ ಪರಿಶೀಲನೆ ನಡೆಸಲಾಗುತ್ತಿದೆ' ಎಂದಿದ್ದಾರೆ.

ಕಾನೂನು ಉಲ್ಲಂಘನೆಯಾಗಿರುವುದನ್ನು ಪೊಲೀಸರು ದೃಢಪಡಿಸಿದರೆ, ಸುನಕ್ ಅವರು ₹ 10 ಸಾವಿರ (100 ಪೌಂಡ್) ದಂಡ ತೆರಬೇಕಾಗುತ್ತದೆ. ಒಂದು ವೇಳೆ ಇಂಥ ಪ್ರಕರಣಗಳು ಕೋರ್ಟ್ ಮೆಟ್ಟಿಲೇರಿದಲ್ಲಿ, ದಂಡದ ಮೊತ್ತ ₹ 50 ಸಾವಿರ (500 ಪೌಂಡ್) ಆಗುತ್ತದೆ.

₹ 1.29 ಕೋಟಿಯ ಖೋಟಾ ನೋಟು ವಶ

ಚಿಂತಾಮಣಿ: ಖೋಟಾನೋಟು ತಯಾರಿಸುತ್ತಿದ್ದ ಮನೆ ಮೇಲೆ ದಾಳಿ ನಡೆಸಿರುವ ಪೊಲೀಸರು ₹ 1.29 ಕೋಟಿ ಮುಖಬೆಲೆಯ ಖೋಟಾ ನೋಟು ವಶಕ್ಕೆ ಪಡೆದಿದ್ದು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಬೆಂಗಳೂರಿನ ರಾಮಕೃಷ್ಣಹೆಗಡೆ ನಗರದ ಶೇಖ್ ಹಿದಾಯತ್, ದಾವೂದ್ ವಸೀಂ ಮತ್ತು ಚಿಂತಾಮಣಿ ತಾಲ್ಲೂಕಿನ ಗಾಜಲಹಳ್ಳಿಯ ಜಿ.ಕೆ.ಶಿವ ಬಂಧಿತರು. ಗುರುವಾರ ದಾಳಿ ನಡೆದಿದ್ದು, ಪೂರ್ಣ ಮತ್ತ ಭಾಗಶಃ ಸಿದ್ಧವಾಗಿದ್ದ ₹ 2 ಸಾವಿರ ಮುಖಬೆಲೆಯ 6,450 ನೋಟುಗಳನ್ನು ವಶಕ್ಕೆ ಪಡೆಯಲಾಗಿದೆ.

ಶ್ರೀನಿವಾಸಪುರ ತಾಲ್ಲೂಕಿನ ಕಶೆಟ್ಟಿಹಳ್ಳಿಯ ಶಂಕರಪ್ಪ, ಚಿಂತಾಮಣಿ ತಾಲ್ಲೂಕಿನ ಗಾಜಲಹಳ್ಳಿ ರಾಜಣ್ಣ, ಹೊಸಕೋಟೆ ಇಂತಿಯಾಜ್, ಬೆಂಗಳೂರಿನ ಅಬ್ದುಲ್ ವಿರುದ್ಧವೂ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ವೆಬ್‌ಸೈಟ್‌ನಿಂದ ₹ 2 ಸಾವಿರ ಮುಖಬೆಲೆ ನೋಟಿನ ಮಾದರಿ ಡೌನ್‌ಲೋಡ್ ಮಾಡಿಕೊಂಡು, ಖೋಟಾ ನೋಟು ತಯಾರಿಸುತ್ತಿದ್ದರು.

ಉಪ ಖನಿಜ ನಿಯಮಗಳ ತಿದ್ದುಪಡಿ ಪ್ರಸ್ತಾವಕ್ಕೆ ಸಂಪುಟದ ಅನುಮೋದನೆ

ಸಾಂಪ್ರದಾಯಿಕ ಕಲ್ಲು ಗಣಿಗಳ ಒತ್ತುವರಿಗೆ ರಿಯಾಯ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಪ್ರದಾಯಿಕ ಕಲ್ಲು ಗಣಿಗಾರಿಕೆ ಪ್ರದೇಶಗಳಲ್ಲಿ ಆಕಸ್ಮಿಕವಾಗಿ ಗುತ್ತಿಗೆ ಹೊರಭಾಗದಲ್ಲಿ ನಡೆದ ಗಣಿಗಾರಿಕೆಯನ್ನು ಮೂಲ ಗುತ್ತಿಗೆ ಪ್ರದೇಶಕ್ಕೆ ಹೊಂದಾಣಿಕೆ ಮಾಡಲು ಅವಕಾಶ ಕಲ್ಪಿಸುವುದಕ್ಕೆ ಪೂರಕವಾಗಿ ಕರ್ನಾಟಕ ಉಪ ಖನಿಜ ರಿಯಾಯ್ತಿ ನಿಯಮಗಳಿಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಶುಕ್ರವಾರ ನಡೆದ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಿದೆ.

ಸಭೆಯ ಬಳಿಕ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಸಾಂಪ್ರದಾಯಿಕ ಕಲ್ಲು ಗಣಿಗಾರಿಕೆ ನಡೆಸುವವರು ಕೆಲವು ಸಂದರ್ಭಗಳಲ್ಲಿ ಅರಿವಿಲ್ಲದೆ ಅಥವಾ ಆಕಸ್ಮಿಕವಾಗಿ ಗುತ್ತಿಗೆ ಪ್ರದೇಶದ ಬದಲಿಗೆ ಇನ್ನೊಂದು ಸ್ಥಳದಲ್ಲಿ ಗಣಿಗಾರಿಕೆ ನಡೆಸಿರುತ್ತಾರೆ. ಅಂತಹ ಪ್ರಕರಣಗಳಲ್ಲಿ ವಾಸ್ತವಿಕ ಸ್ಥಿತಿಯ ವರದಿ ಆಧರಿಸಿ, ಗಣಿಗಾರಿಕೆ ನಡೆಸಿದ ವಿಸ್ತೀರ್ಣವನ್ನು ಗುತ್ತಿಗೆ ಪ್ರದೇಶದ ಜತೆ ಹೊಂದಾಣಿಕೆ ಮಾಡಲು ತಿದ್ದುಪಡಿ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗುವುದು' ಎಂದರು.

ಅಕ್ರಮ ಗಣಿಗಾರಿಕೆಗೆ ಅವಕಾಶ ನೀಡುವುದಿಲ್ಲ. ಆದರೆ, ಸಣ್ಣ ಪುಟ್ಟ ಲೋಪಗಳಿಂದ ಕಾನೂನು ಇಕ್ಕಟ್ಟಿನಲ್ಲಿ ಸಿಲುಕಿರುವ ಸಾಂಪ್ರದಾಯಿಕ ಕಲ್ಲು ಗಣಿಗಾರಿಕೆ ನಡೆಸುವವರಿಗೆ ನೆರವಾಗುವ ದೃಷ್ಟಿಯಿಂದ ಈ ತಿದ್ದುಪಡಿ ತರಲಾಗುತ್ತಿದೆ ಎಂದು ತಿಳಿಸಿದರು.

ಸೆಸ್ ಹೆಚ್ಚಳಕ್ಕೆ ಒಪ್ಪಿಗೆ: ಎಸ್. ನಿಜಲಿಂಗಪ್ಪ ಸಕ್ಕರೆ ಸಂಶೋಧನಾ ಸಂಸ್ಥೆಯ ನಿರ್ವಹಣೆಗಾಗಿ ಸಕ್ಕರೆ ಕಾರ್ಖಾನೆಗಳಿಂದ ಸಂಗ್ರಹಿಸುವ ಸೆಸ್ ಮೊತ್ತ ಹೆಚ್ಚಿಸಲು 'ಕರ್ನಾಟಕ ಸಕ್ಕರೆ (ಉತ್ಪಾದನಾ ನಿಯಂತ್ರಣ) ಆದೇಶ 2022'ಕ್ಕೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ದಿನವೊಂದಕ್ಕೆ 2,500 ಟನ್‌ಗಳಿಗಿಂತ ಕಡಿಮೆ ಕಬ್ಬು ಅರೆಯುವ ಸಕ್ಕರೆ ಕಾರ್ಖಾನೆಗೆ ವಿಧಿಸುತ್ತಿದ್ದ ಸೆಸ್ ಮೊತ್ತವನ್ನು ₹ 10,000 ದಿಂದ ₹ 50,000ಕ್ಕೆ, ದಿನವೊಂದಕ್ಕೆ 2,500 ದಿಂದ 5,000 ಟನ್ ಕಬ್ಬು ಅರೆಯುವ ಕಾರ್ಖಾನೆಗಳಿಗೆ ವಿಧಿಸುವ ಸೆಸ್ ಮೊತ್ತವನ್ನು ₹ 15,000ದಿಂದ ₹ 1 ಲಕ್ಷಕ್ಕೆ, 5,000 ಟನ್‌ಗಳಿಗಿಂತ ಹೆಚ್ಚು ಕಬ್ಬು ಅರೆಯುವ ಕಾರ್ಖಾನೆಗಳ ಸೆಸ್ ಮೊತ್ತವನ್ನು ₹25,000 ದಿಂದ ₹ 1.5 ಲಕ್ಷಕ್ಕೆ ಹಾಗೂ 15,000 ಟನ್‌ಗಳಿಗಿಂತ ಹೆಚ್ಚು ಕಬ್ಬು ಅರೆಯುವ ಕಾರ್ಖಾನೆಗಳಿಗೆ ವಿಧಿಸುವ ಸೆಸ್ ಮೊತ್ತವನ್ನು ₹ 1 ಲಕ್ಷದಿಂದ ₹ 2 ಲಕ್ಷಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.

ನಮ್ಮ ಕ್ಲಿನಿಕ್: ಪ್ರಧಾನಮಂತ್ರಿ-ಅಭೀಮ್ ಯೋಜನೆಯಡಿ 114 ನಗರ ಆರೋಗ್ಯ ಕ್ಷೇಮ ಕೇಂದ್ರಗಳಲ್ಲಿ ನಮ್ಮ ಕ್ಲಿನಿಕ್ ಆರಂಭಿಸುವ ಪ್ರಸ್ತಾವಕ್ಕೆ ಒಪ್ಪಿಗೆ ನೀಡಲಾಗಿದೆ. ಕೇಂದ್ರ ಸರ್ಕಾರ ಈ ಕ್ಲಿನಿಕ್‌ಗಳ ಆರಂಭಕ್ಕೆ ₹ 100 ಕೋಟಿ ಅನುದಾನ ಒದಗಿಸಿದೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶದಲ್ಲಿರುವ 847 ಆರೋಗ್ಯ ಉಪ ಕೇಂದ್ರಗಳನ್ನು ₹ 71.56 ಕೋಟಿ ವೆಚ್ಚದಲ್ಲಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವಕ್ಕೂ ಒಪ್ಪಿಗೆ ದೊರಕಿದೆ ಎಂದು ಅವರು ಹೇಳಿದರು.

ವಸತಿ ಶಾಲೆ, ವಿದ್ಯಾರ್ಥಿನಿಲಯಕ್ಕೆ ಒಪ್ಪಿಗೆ

2022ರ ಬಜೆಟ್‌ನಲ್ಲಿ ಘೋಷಿಸಿದ್ದಂತೆ ರಾಜ್ಯದಾದ್ಯಂತ 100 ಡಾ.ಬಿ.ಆರ್. ಅಂಬೇಡ್ಕರ್ ವಸತಿ ನಿಲಯ ಆರಂಭಿಸುವ ಪ್ರಸ್ತಾವಕ್ಕೆ ಸಂಪುಟ ಸಭೆ ಒಪ್ಪಿಗೆ ನೀಡಿದೆ. ₹ 600 ಕೋಟಿ ವೆಚ್ಚ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆ ಮೂಲಕ ಅನುಷ್ಠಾನಕ್ಕೆ ತರಲು ನಿರ್ಧರಿಸಲಾಗಿದೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಪುಂಜಾಲಕಟ್ಟೆ, ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ವಡ್ಡರ್ಸೆ, ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಜಾಲಿ ಗ್ರಾಮ ಹಾಗೂ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಹಿರೇಶಕುನ ಗ್ರಾಮಗಳಲ್ಲಿ ಒಟ್ಟು ₹ 72 ಕೋಟಿ ವೆಚ್ಚದಲ್ಲಿ ಶ್ರೀ ನಾರಾಯಣ ಗುರು ವಸತಿ ಶಾಲೆ ಆರಂಭಿಸುವ ಪ್ರಸ್ತಾವಕ್ಕೂ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಯೋಜನೆಯನ್ನೂ 2022ರ ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು.

ಉಚಿತ ನೇತ್ರ ಚಿಕಿತ್ಸೆ ಯೋಜನೆ ಪರಿಷ್ಕರಣೆಗೆ ಸೂಚನೆ: ಚಿಕ್ಕಬಳ್ಳಾಪುರ, ಕಲಬುರಗಿ, ಹಾವೇರಿ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಎಲ್ಲ ವಯೋಮಾನ ಹಾಗೂ ಎಲ್ಲ ವರ್ಗದ ಜನರಿಗೆ ಉಚಿತವಾಗಿ ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸೆ ನಡೆಸಿ, ಕನ್ನಡಕ ವಿತರಿಸುವ ₹ 31.10 ಕೋಟಿ ವೆಚ್ಚದ ಯೋಜನೆ ಅನುಷ್ಠಾನಕ್ಕೆ ಒಪ್ಪಿಗೆ ಕೋರಿದ್ದ ಪ್ರಸ್ತಾವವನ್ನು ಸಂಪುಟ ಸಭೆಯಲ್ಲಿ ತಡೆಹಿಡಿಯಲಾಗಿದೆ.

ಕಾರ್ಮಿಕ ವಿರೋಧಿ ಕಾನೂನು ವಾಪಸ್‌ಗೆ ಸಿಐಟಿಯು ಆಗ್ರಹ

ಬೆಂಗಳೂರು: ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನದಲ್ಲಿ ಕೇಂದ್ರದ ಬಿಜೆಪಿ ಸರ್ಕಾರ ಕಾರ್ಮಿಕ ವಿರೋಧಿ ಕಾನೂನುಗಳನ್ನು ಕೂಡಲೇ ವಾಪಸ್ ಪಡೆಯಬೇಕು. ಕಾರ್ಮಿಕ ಹಕ್ಕುಗಳ ರಕ್ಷಣೆಗೆ ಸರ್ಕಾರಗಳು ಮುಂದಾಗಬೇಕು. ವಿದ್ಯುತ್ ಕ್ಷೇತ್ರದಲ್ಲಿ ಖಾಸಗಿಯವರ ಪ್ರವೇಶ ಬೇಡ ಎಂಬ ನಿರ್ಣಯ ಅಂಗೀಕರಿಸಲಾಗಿದೆ.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಅಖಿಲ ಭಾರತ ಅಧ್ಯಕ್ಷೆ ಕೆ. ಹೇಮಲತಾ ಅವರು ಶುಕ್ರವಾರ ಕೈಗೊಂಡ ನಿರ್ಣಯಗಳ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು. 'ದೆಹಲಿಯಲ್ಲಿ 2023ರ ಏಪ್ರಿಲ್ 5 ರಂದು ರೈತ-ಕಾರ್ಮಿಕರ ಬೇಡಿಕೆ ಈಡೇರಿಸಬೇಕೆಂದು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಯಲಿದೆ. ರೈತ-ಕಾರ್ಮಿಕರು, ಮಹಿಳೆಯರು ಭಾಗವಹಿಸುವರು ಎಂದರು.

ಹೈಕೋರ್ಟ್ ಒಳಗೆ ಅನಗತ್ಯ ಪ್ರವೇಶ ಸಲ್ಲ: ಕಠಿಣ ಕ್ರಮದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿನಾಕಾರಣ ಮತ್ತು ಸಂಬಂಧವಿಲ್ಲದ ವ್ಯಕ್ತಿಗಳು ಹೈಕೋರ್ಟ್‌ನಲ್ಲಿನ ಕೋರ್ಟ್ ಹಾಲ್‌ಗಳಿಗೆ ಪ್ರವೇಶಿಸಿದರೆ ಅಂತಹವರನ್ನು ಬಂಧಿಸಿ ನೇರವಾಗಿ ಜೈಲಿಗೆ ಕಳುಹಿಸಲಾಗುವುದು' ಎಂದು ಹೈಕೋರ್ಟ್ ಕಠಿಣವಾದ ಮೌಖಿಕ ಎಚ್ಚರಿಕೆ ನೀಡಿದೆ.

'ವಕೀಲರು, ಕಾನೂನು ವಿದ್ಯಾರ್ಥಿಗಳು, ಕೇಸಿಗೆ ಸಂಬಂಧಿಸಿದ ಕಕ್ಷಿದಾರರು, ಅಧಿಕಾರಿಗಳು ಹಾಗೂ ಸಕಾರಣ ಹೊಂದಿದ ವ್ಯಕ್ತಿಗಳಿಗೆ ಮಾತ್ರವೇ ಕೋರ್ಟ್ ಹಾಲ್ ಪ್ರವೇಶ ಇರುತ್ತದೆ' ಎಂದು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಹೇಳಿದೆ.

ಸಚಿವ ಮುನಿರತ್ನ ವಿರುದ್ಧ ವಿಧಾನಪರಿಷತ್ ಸದಸ್ಯ ತುಳಸಿ ಮುನಿರಾಜುಗೌಡ ದಾಖಲಿಸಿರುವ ಚುನಾವಣಾ ಅಕ್ರಮ ಆರೋಪದ ತಕರಾರು ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಮಧ್ಯಾಹ್ನದ ಕಲಾಪದಲ್ಲಿ ವಿಚಾರಣೆ ಮುಂದುವರಿಸಿತು. ಈ ವೇಳೆ ಮುನಿರತ್ನ ಪರ ಹಿರಿಯ ವಕೀಲ ಜಿ.ಕೃಷ್ಣಮೂರ್ತಿ ಅವರು ತುಳಸಿ ಮುನಿರಾಜುಗೌಡ ಅವರನ್ನು ಪಾಟಿ ಸವಾಲಿಗೆ ಒಳಪಡಿಸಿದರು.

ಸುದೀರ್ಘ ಕಲಾಪದ ಅವಧಿಯುದ್ದಕ್ಕೂ ಹಾಜರಿದ್ದ ಕೆಲವು ವ್ಯಕ್ತಿಗಳನ್ನು ಗಮನಿಸಿದ ನ್ಯಾಯಪೀಠವು, ಕಲಾಪ ಪೂರ್ಣಗೊಳ್ಳುತ್ತಿದ್ದಂತೆಯೇ ಕಳವಳ ವ್ಯಕ್ತಪಡಿಸಿತು. 'ಹೈಕೋರ್ಟ್ ಎಂದರೆ ಸಾಮಾನ್ಯವಲ್ಲ. ಈ ಕೋರ್ಟ್ ಹಾಲ್‌ನಲ್ಲಿ ಸಂಬಂಧವಿಲ್ಲದ ಅನೇಕ ಮುಖಗಳು ಕಾಣುತ್ತಿವೆ. ಇದು 'ವೈ' ಕೆಟಗರಿಯ ಭದ್ರತೆ ಹೊಂದಿರುವ ಕೋರ್ಟ್ ಹಾಲ್. ಕಲಾಪದಲ್ಲಿ ಸಂಬಂಧವಿಲ್ಲದ ವ್ಯಕ್ತಿಗಳು ಏಕೆ ಹಾಜರಿದ್ದಾರೆ' ಎಂದು ಪ್ರಕರಣದ ಪರ ವಕೀಲರನ್ನು ಪ್ರಶ್ನಿಸಿತು. ಅಂತೆಯೇ, 'ಇವತ್ತು ಹಾಜರಿದ್ದ ಸಂಬಂಧವಿಲ್ಲದ ವ್ಯಕ್ತಿಗಳ ಇತ್ಯೋಪರಿಗಳನ್ನು ಸಂಗ್ರಹಿಸಿ' ಎಂದು ಕೋರ್ಟ್ ಅಧಿಕಾರಿ ರಾಘವೇಂದ್ರ ಅವರಿಗೆ ಸೂಚಿಸಿತು.

ಕೊರೊನಾ ಭೀತಿಯ ಹಿನ್ನೆಲೆಯಲ್ಲಿ ಜನಸಾಮಾನ್ಯರು ಹೈಕೋರ್ಟ್ ಪ್ರವೇಶಿಸುವುದಕ್ಕೆ ಹೇರಲಾಗಿದ್ದ ನಿರ್ಬಂಧಗಳನ್ನು ಸದ್ಯ ಕೊಂಚ ಪ್ರಮಾಣದಲ್ಲಿ ಮಾತ್ರವೇ ಸಡಿಲಿಕೆ ಮಾಡಲಾಗಿದೆ. ಆದರೂ, ಎಲ್ಲ ಪ್ರವೇಶ ದ್ವಾರಗಳಲ್ಲಿ ರಾಜ್ಯ ಪೊಲೀಸ್, ಕೈಗಾರಿಕಾ ಭದ್ರತಾ ಪಡೆ ಹಾಗೂ ಎ.ಕೆ–47 ರೈಫಲ್‌ಗಳನ್ನು ಹೊಂದಿದ ಕಮಾಂಡೊಗಳ ಸಹಿತದ ಬಿಗಿ ಭದ್ರತೆಯನ್ನು ಮುಂದುವರಿಸಲಾಗಿದೆ.

ಹಿಜಾಬ್ ಪ್ರಕರಣದ ತೀರ್ಪು ನೀಡಿದ ತ್ರಿಸದಸ್ಯ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಹಾಗೂ ಖಾಜಿ ಜೈಬುನ್ನಿಸಾ ಮೊಹಿದ್ದೀನ್ ಅವರುಗಳಿಗೆ 'ವೈ' ಕೆಟಗರಿಯ ಭದ್ರತೆ ಒದಗಿಸಲಾಗಿದೆ.

ಪ್ರಮುಖ ಪ್ರಕರಣ: ಹಾಸನ ಕ್ಷೇತ್ರದ ಸಂಸದ ಜೆಡಿಎಸ್‌ನ ಪ್ರಜ್ವಲ್ ರೇವಣ್ಣ, ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಶಾಸಕ ಡಿ.ಸಿ.ಗೌರಿಶಂಕರ್ ಹಾಗೂ ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರದ ಹಾಲಿ ಶಾಸಕ ಹಾಗೂ ಸಚಿವ ಮುನಿರತ್ನ ಅವರ ವಿರುದ್ಧದ ಚುನಾವಣಾ ತಕರಾರು ಅರ್ಜಿಗಳ ವಿಚಾರಣೆಗಳು ಸದ್ಯ ಕೊನೆಯ ಹಂತದಲ್ಲಿವೆ.

ಲೋಪವಿಲ್ಲ: ಈ ಕುರಿತಂತೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿಗಳು, 'ಹೈಕೋರ್ಟ್ ಸೂಕ್ಷ್ಮ ಸ್ಥಳ ಎಂದೇ ಪರಿಗಣಿಸಲಾಗಿದ್ದು, ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಇದೇ 26ರಂದು ಗಣರಾಜ್ಯೋತ್ಸವ ಹಾಗೂ ರಾಜ್ಯ ವಿಧಾನಸಭೆ ಚುನಾವಣೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿಯೂ ಭದ್ರತೆಯಲ್ಲಿ ಯಾವುದೇ ಲೋಪವಾಗದಂತೆ ಕಾಯ್ದುಕೊಂಡು ಹೋಗಲಾಗುತ್ತಿದೆ' ಎಂದರು.

ಸಂಕ್ಷಿಪ್ತ ಸುದ್ದಿ

ದೇವಾಲಯದಲ್ಲಿ ಕಳವು

ಹ್ಯೂಸ್ಟನ್ (ಪಿಟಿಐ): ಅಮೆರಿಕದ ಟೆಕ್ಸಾಸ್‌ನ ಬ್ರಾಸಸ್ ವ್ಯಾಲಿಯಲ್ಲಿಯ ಹಿಂದೂ ದೇವಸ್ಥಾನದಲ್ಲಿ ಕಳ್ಳತನ ನಡೆದಿದೆ. ಕೆಲ ಬೆಲೆಬಾಳುವ ವಸ್ತುಗಳನ್ನು ಕಳ್ಳರು ದೋಚಿದ್ದಾ ರೆ. ಈ ಘಟನೆಯು ಅಮೆರಿಕದ ಭಾರತೀಯ ಸಮುದಾಯಕ್ಕೆ ಆಘಾತ ಉಂಟುಮಾಡಿದೆ ಎಂದು ಇಲ್ಲಿಯ ಮಾಧ್ಯಮವೊಂದು ಶುಕ್ರವಾರ ವರದಿ ಮಾಡಿದೆ.

ಇಲ್ಲಿಯ ಶ್ರೀ ಓಂಕಾರನಾಥ ದೇವಾಲಯದಲ್ಲಿ ಜನವರಿ 11ರಂದು ಕಳವು ನಡೆದಿದೆ. ದೇವಸ್ಥಾನದ ಕಿಟಕಿಯನ್ನು ಮುರಿಯಲಾಗಿದೆ. ಹುಂಡಿ ಮತ್ತು ಬೆಲೆಬಾಳುವ ವಸ್ತುಗಳನ್ನಿಡುವ ಪೆಟ್ಟಿಗೆ ಕಳುವಾಗಿದೆ ಎಂದು ತಕ್ಷಣಕ್ಕೆ ತಿಳಿದುಬಂದಿದೆ. ದೇವಸ್ಥಾನದ ಹಿಂಬದಿಯಿರುವ ಅಪಾರ್ಟ್‌ಮೆಂಟ್‌ನಲ್ಲಿ ಅರ್ಚಕರು ವಾಸಿಸುತ್ತಾರೆ. ಅವರು ಕ್ಷೇಮದಿಂದಿದ್ದಾರೆ ಎಂದು ದೇವಾಲಯ ಮಂಡಳಿ ಸದಸ್ಯ ಶ್ರೀನಿವಾಸ ಸುಂಕಾರಿ ಹೇಳಿದ್ದಾರೆ.

ಈ ರೀತಿಯ ಘಟನೆಗಳು ನಡೆದಾಗ, ಯಾರೋ ಅತಿಕ್ರಮಣ ಮಾಡಿದಂತೆ ಮತ್ತು ಯಾರಿಂದಲೂ ಗೌಪ್ಯತೆಗೆ ಭಂಗವಾದಂತೆ ಅನುಭವಾಗುತ್ತದೆ ಎಂದು ಸುಂಕಾರಿ ಹೇಳಿದ್ದಾರೆ. ಕಳ್ಳತನದ ದೃಶ್ಯಗಳು ದೇವಸ್ಥಾನದಲ್ಲಿರುವ ಸಿ.ಸಿ. ಟಿ.ವಿ. ಕ್ಯಾಮರಾದಲ್ಲಿ ಸೆರೆಯಾಗಿದೆ. ಈ ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಬ್ರಾಸಸ್ ವ್ಯಾಲಿಯ ಅಧಿಕಾರಿಗಳು ತಿಳಿಸಿದ್ದಾರೆ.

ವಂಚನೆ ಪ್ರಕರಣ: ಬಂಧನ

ನ್ಯೂಯಾರ್ಕ್ (ಪಿಟಿಐ): ರಿಯಲ್ ಎಸ್ಟೇಟ್ ಮೇಲೆ ಹೂಡಿಕೆ ಮಾಡುವುದಾಗಿ ಹೇಳಿ ಭಾರತೀಯ ಸಮುದಾಯದ ಕೆಲವರನ್ನು ವಂಚಿಸಿದ್ದ ಆರೋಪದ ಮೇಲೆ ಭಾರತೀಯ ಅಮೆರಿಕನ್ ವ್ಯಕ್ತಿಯನ್ನು ಅಮೆರಿಕದ ಉತ್ತರ ಕರೋಲಿನಾದಲ್ಲಿ ಮಂಗಳವಾರ ಬಂಧಿಸಲಾಗಿದೆ.

ಕ್ಯಾರಿ ನಿವಾಸಿ ಕುಮಾರ್ ಅರುಣ್ ನೆಪ್ಪಳ್ಳಿ (56) ಬಂಧಿತ ವ್ಯಕ್ತಿ. ಅವರ ವಿರುದ್ಧ 23 ಅಂಶಗಳ ಆರೋಪ ಹೊರಿಸಲಾಗಿದೆ. ಉತ್ತರ ಕರೊಲಿನಾದ ಭಾರತೀಯ ಸಮುದಾಯವನ್ನು ಗುರಿಯಾಗಿಸಿಕೊಂಡು ಅವರು ಸುಮಾರು 12 ಜನರನ್ನು ವಂಚಿಸಿದ್ದಾರೆ. ಈ ಸಮುದಾಯದ ಜೊತೆಗೆ ಹೊಂದಿದ್ದ ಉತ್ತಮ ಹೆಸರನ್ನೇ ಅವರು ವಂಚನೆಗೆ ಬಳಸಿಕೊಂಡಿದ್ದಾರೆ ಎಂದು ಅಲ್ಲಿಯ ಯುಎಸ್ ಅಟಾರ್ನಿ ಕಚೇರಿಯು ತಿಳಿಸಿದೆ.

ನ್ಯಾಯಬದ್ಧವಾಗಿ ನಡೆಯುತ್ತಿರುವ ರಿಯಲ್ ಎಸ್ಟೇಟ್ ಉದ್ಯಮವೊಂದರಲ್ಲಿ ಅವರ ಹಣ ಹೂಡುವುದಾಗಿ ಮತ್ತು ಅದರಿಂದ ಅವರಿಗೆ ಲಾಭ ದೊರಕಿಸಿಕೊಡುವುದಾಗಿ ನಂಬಿಸಿದ್ದಾರೆ. ತಕ್ಷಣ ಹಣ ನೀಡಿದರೆ ಹೂಡಿಕೆಯ ಬಹುಪಾಲು ಮತ್ತು ಲಾಭವನ್ನು ಕೆಲವೇ ತಿಂಗಳಲ್ಲಿ ಹಿಂದಿರುಗಿಸುವುದಾಗಿ ಹೇಳಿ ಅವರನ್ನು ವಂಚಿಸಿದ್ದಾರೆ ಎಂದು ಅಲ್ಲಿಯ ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಿನ ಕಾಳಗ– 100ಕ್ಕೂ ಹೆಚ್ಚು ಮಂದಿ ಸಾವು

ಮೊಗದಿಶು, ಸೊಮಾಲಿಯಾ (ಎಪಿ): ಸೇನೆ ಹಾಗೂ ಅಲ್ ಕೈದಾ ಬೆಂಬಲಿತ ಉಗ್ರರ ನಡುವಿನ ಭೀಕರ ಕಾಳಗದಲ್ಲಿ ಶುಕ್ರವಾರ 100ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ.

ಈ ಕುರಿತು ಸೊಮಾಲಿಯಾ ಸರ್ಕಾರ ಹಾಗೂ ಉಗ್ರ ಸಂಘಟನೆ ಅಲ್ ಶಬಾಬ್ ಹೇಳಿಕೆಗಳನ್ನು ಬಿಡುಗಡೆ ಮಾಡಿವೆ.

'ಉಗ್ರ ಸಂಘಟನೆ ಅಲ್ ಶಬಾಬ್‌ಗೆ ಸೇರಿದ 100ಕ್ಕೂ ಅಧಿಕ ಉಗ್ರರು ಗುಂಡಿನ ಕಾಳಗದಲ್ಲಿ ಹತರಾಗಿದ್ದಾರೆ. ಅಮೆರಿಕದಿಂದ ತರಬೇತಿ ಪಡೆದಿರುವ ದಾನಾಬ್ ಬ್ರಿಗೇಡ್‌ನ ಒಬ್ಬ ಅಧಿಕಾರಿ ಸೇರಿದಂತೆ ಏಳು ಜನ ಯೋಧರು ಮೃತಪಟ್ಟಿದ್ದಾರೆ' ಎಂದು ಸರ್ಕಾರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸೋಲ್‌ನ ಗುರಿಯೋಂಗ್ ಗ್ರಾಮದಲ್ಲಿ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿದರು. ಚಿತ್ರ–ಎಪಿ / ಪಿಟಿಐ

ಸೋಲ್‌ನಲ್ಲಿ ಬೆಂಕಿ: 60 ಮನೆ ನಾಶ

ಸೋಲ್ (ಎಪಿ): ದಕ್ಷಿಣ ಕೊರಿಯಾ ರಾಜಧಾನಿ ಸೋಲ್‌ನ ಜನನಿಬಿಡ ವಸತಿ ಪ್ರದೇಶದಲ್ಲಿ ಶುಕ್ರವಾರ ಮುಂಜಾನೆ ಸಂಭವಿಸಿದ ಅಗ್ನಿ ದುರಂತದಲ್ಲಿ 60 ಮನೆಗಳು ನಾಶವಾಗಿದ್ದು, ಸುಮಾರು 500 ನಿವಾಸಿಗಳು ಮನೆಗಳನ್ನು ತೊರೆದಿದ್ದಾರೆ.

ಇಲ್ಲಿನ ಗುರಿಯೋಂಗ್ ಗ್ರಾಮದಲ್ಲಿ ಕಾಣಿಸಿಕೊಂಡ ಬೆಂಕಿಯನ್ನು ಅಗ್ನಿಶಾಮಕ ಸಿಬ್ಬಂದಿ ಐದು ತಾಸಿನಲ್ಲಿ ನಂದಿಸಿದ್ದಾರೆ. ಶುಕ್ರವಾರ ಮಧ್ಯಾಹ್ನದವರೆಗೆ ಯಾವುದೇ ಸಾವು, ನೋವು ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಗ್ನಿಶಾಮಕ ಅಧಿಕಾರಿ ಶಿನ್ ಯಾಂಗ್-ಹೋ, ರಕ್ಷಣಾ ಕಾರ್ಯಕರ್ತರು ಬೆಂಕಿಯಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಶೋಧ ಮುಂದುವರಿಸಿದ್ದಾರೆ. ನಿವಾಸಿಗಳು ಸುರಕ್ಷಿತವಾಗಿ ಸ್ಥಳಾಂತರಗೊಂಡಿದ್ದಾರೆ ಎಂದು ಹೇಳಿದ್ದಾರೆ.

ಅಸಭ್ಯ ಶೀರ್ಷಿಕೆ : ಬಿಬಿಸಿ ಕ್ಷಮೆಯಾಚನೆ

ಲಂಡನ್ (ಎಎಫ್‌ಪಿ): ನ್ಯೂಜಿಲೆಂಡ್ ಪ್ರಧಾನಿ ಜಸಿಂಡ ಆರ್ಡರ್ನ್ ಅವರ ದಿಢೀರ್ ರಾಜೀನಾಮೆ ನಿರ್ಧಾರದ ಸುದ್ದಿಗೆ 'ಅಸಭ್ಯ' ಶೀರ್ಷಿಕೆ ನೀಡಿದ್ದ 'ಬಿಬಿಸಿ'ಯನ್ನು 'ಸ್ತ್ರೀದ್ವೇಷಿ' ಎಂದು ಸಾಮಾಜಿಕ ಜಾಲತಾಣಿಗರು ತರಾಟೆಗೆ ತೆಗೆದುಕೊಂಡ ಬೆನ್ನಲ್ಲೇ, ಬಿಬಿಸಿ ಸುದ್ದಿ ಮಾಧ್ಯಮ ತನ್ನ ತಪ್ಪಿನ ಅರಿವಾಗಿ ಶುಕ್ರವಾರ ಕ್ಷಮೆಯಾಚಿಸಿದೆ.

ಬಿಬಿಸಿಯ ಜಾಗತಿಕ ನ್ಯೂಸ್ ರೂಮ್‌ನ ಬಿಬಿಸಿ ವರ್ಲ್ಡ್, ಚಿಕ್ಕ ಮಗುವಿನ ತಾಯಿ ಆಗಿರುವ ಪ್ರಧಾನಿ ಜಸಿಂಡ ಅವರು ರಾಜೀನಾಮೆ ನೀಡುವ ನಿರ್ಧಾರ ಪ್ರಕಟಿಸಿದಾಗ ಆ ಕುರಿತ ವರದಿಗೆ 'ಮಹಿಳೆ ಎಲ್ಲವನ್ನು ಹೊಂದಲು ಸಾಧ್ಯವೆ?' ಎಂಬ ಅರ್ಥದ ಶೀರ್ಷಿಕೆ ನೀಡಿ, ಪೂರ್ಣ ವರದಿಯ ಲಿಂಕ್ ಅನ್ನು ಶೀರ್ಷಿಕೆಯೊಂದಿಗೆ ಗುರುವಾರ ಟ್ವಿಟರ್‌ನಲ್ಲಿ ಪ್ರಕಟಿಸಿತ್ತು.

'ಶೀರ್ಷಿಕೆ ಸೂಕ್ತಲ್ಲವೆನ್ನುವುದು ಗಮನಕ್ಕೆ ಬಂದ ತಕ್ಷಣ ಶೀರ್ಷಿಕೆ ಬದಲಿಸಲಾಗಿದೆ. ಟ್ವೀಟ್ ಅನ್ನು ಅಳಿಸಲಾಗಿದೆ' ಎಂದು ಬಿಬಿಸಿ ಹೇಳಿದೆ

4 ಕಿ.ಮೀ ಕಾರು ಚಲಾಯಿಸಿ ಕೊಲೆಗೆ ಯತ್ನ

ಒಂದನೇ ಪುಟದಿಂದ...

' ಭಯವಾಗಿ ಕಿರುಚಾಡಿದೆ. ಕಾರು ನಿಲ್ಲಿಸಿ, ಇಲ್ಲದಿದ್ದರೆ ನಾನು ಸಾಯುತ್ತೇನೆಂದು ಗೋಳಾಡಿದೆ. ಕಾರು ನಿಲ್ಲಿಸದ ಅವರು ಅದೇಸ್ಥಿತಿಯಲ್ಲಿ 4 ಕಿ.ಮೀ.ವರೆಗೆ ಚಲಾಯಿಸಿದರು. ನನ್ನ ಸ್ಥಿತಿ ನೋಡಿದ ಕೆಲ ಯುವಕರು, ದ್ವಿಚಕ್ರ ವಾಹನದಲ್ಲಿ ಬೆನ್ನಟ್ಟಿ ಕಾರು ಅಡ್ಡಗಟ್ಟಿ ನನ್ನನ್ನು ರಕ್ಷಿಸಿದರು' ಎಂದು ದರ್ಶನ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪತ್ನಿ ಬಟ್ಟೆ ಹಿಡಿದು ಎಳೆದಾಡಿದರು: ಪ್ರತಿ ದೂರು ನೀಡಿರುವ ಪ್ರಿಯಾಂಕಾ ಪತಿ ಪ್ರಮೋದ್, 'ವೈದ್ಯಕೀಯ ಪರೀಕ್ಷೆಗೆಂದು ಆಸ್ಪತ್ರೆಗೆ ಹೋಗಿ ವಾಪಸ್ ಮನೆಯತ್ತ ತೆರಳುತ್ತಿದ್ದೆವು. ಪತ್ನಿ ಕಾರು ಚಲಾಯಿಸುತ್ತಿದ್ದರು. ಉಲ್ಲಾಳ ಮುಖ್ಯರಸ್ತೆಯಲ್ಲಿ ಆರೋಪಿ ದರ್ಶನ್ ತಮ್ಮ ಕಾರು ಅಡ್ಡ ನಿಲ್ಲಿಸಿದ್ದರು. ಅದರ ಪಕ್ಕದ ಸ್ವಲ್ಪ ಜಾಗದಲ್ಲಿ ಪತ್ನಿ ಕಾರು ಚಲಾಯಿಸಿಕೊಂಡು ಮುಂದಕ್ಕೆ ಹೊರಟಿದ್ದರು. ದರ್ಶನ್, ಪತ್ನಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ. ಗಾಬರಿಗೊಂಡು ನಾವೇ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ, ಸ್ಥಳದಿಂದ ಹೊರಟೆವು' ಎಂದಿದ್ದಾರೆ.

'ಹಿಂಬಾಲಿಸಿಕೊಂಡು ಬಂದಿದ್ದ ದರ್ಶನ್ ಹಾಗೂ ಇತರರು, ಕಾರು ಅಡ್ಡಗಟ್ಟಿ ಹಲ್ಲೆ ಮಾಡಿದರು. ಪತ್ನಿಯ ಬಟ್ಟೆ ಹಿಡಿದು ಎಳೆದಾಡಿದರು. ಕಾರಿನ ಗಾಜು ಒಡೆದರು. ಅಷ್ಟರಲ್ಲೇ ಪೊಲೀಸರು ಸ್ಥಳಕ್ಕೆ ಬಂದರು. ನಂತರ, ಕಾರು ಚಲಾಯಿಸಿಕೊಂಡು ಠಾಣೆಗೆ ಹೊರಟಿದ್ದೆವು.

ಕಾರು ತಡೆದ ದರ್ಶನ್, ಬಾನೆಟ್ ಮೇಲೆ ಮಲಗಿದ್ದ. ಪಕ್ಕಕ್ಕೆ ಸರಿಯುವಂತೆ ಹೇಳಿದರೂ ಸರಿಯಲಿಲ್ಲ. ಭಯದಿಂದ ಪತ್ನಿ ಕಾರು ಚಲಾಯಿಸಿಕೊಂಡು ಠಾಣೆಯತ್ತ ಹೊರಟಿದ್ದರು. ಹಲವರು ನಮ್ಮನ್ನು ಹಿಂಬಾಲಿಸಿಕೊಂಡು ಬಂದು ಪುನಃ ಅಡ್ಡಗಟ್ಟಿ ಕಿರುಕುಳ ನೀಡಿದರು' ಎಂದೂ ದೂರಿನಲ್ಲಿ ಪ್ರಮೋದ್ ಹೇಳಿದ್ದಾರೆ.

ಎರಡು ದಿನಗಳ ಶ್ರೀಲಂಕಾ ಪ್ರವಾಸದಲ್ಲಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್

ಸಂವಿಧಾನದ 13ನೇ ತಿದ್ದುಪಡಿ ಅನುಷ್ಠಾನಕ್ಕೆ ಆಗ್ರಹ

ಕೊಲಂಬೊ (ಪಿಟಿಐ): 'ಶ್ರೀಲಂಕಾದಲ್ಲಿನ ತಮಿಳು ಭಾಷಿಕರಿಗೂ ಅಧಿಕಾರ ನೀಡುವ, ಸಂವಿಧಾನದ 13ನೇ ತಿದ್ದುಪಡಿಯನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗುತ್ತದೆ ಎಂಬ ವಿಶ್ವಾಸವನ್ನು ಭಾರತ ಹೊಂದಿದೆ' ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಶುಕ್ರವಾರ ಹೇಳಿದರು.

'ಈ ಕ್ರಮವು ದೇಶದಲ್ಲಿನ ಅಲ್ಪಸಂಖ್ಯಾತ ತಮಿಳು ಜನರೊಂದಿಗಿನ ಸಾಮರಸ್ಯವನ್ನು ಬಲಪಡಿಸುತ್ತದೆ' ಎಂದೂ ಅವರು ಆಶಯ ವ್ಯಕ್ತಪಡಿಸಿದ್ದಾರೆ.

ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಹಾಗೂ ವಿದೇಶಾಂಗ ಸಚಿವ ಅಲಿ ಸಬ್ರಿ ಅವರೊಂದಿಗೆ ಮಾತುಕತೆ ಬಳಿಕ ಬಿಡುಗಡೆ ಮಾಡಿರುವ ಪತ್ರಿಕಾ ಪ್ರಕಟಣೆಯಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ. ಜೈಶಂಕರ್ ಅವರು ಎರಡು ದಿನಗಳ ಶ್ರೀಲಂಕಾ ಪ್ರವಾಸದಲ್ಲಿದ್ದಾರೆ.

'ದ್ವೀಪರಾಷ್ಟ್ರದಲ್ಲಿ ರಾಜಕೀಯ ಹಾಗೂ ಆರ್ಥಿಕ ಸ್ಥಿರತೆ ನೆಲೆಗೊಳ್ಳಬೇಕು. ಈ ನಿಟ್ಟಿನಲ್ಲಿನ ಪ್ರಯತ್ನಗಳಿಗೆ ಭಾರತ ಸದಾ ಬೆಂಬಲ ನೀಡುತ್ತದೆ. ಈ ಉದ್ದೇಶ ಈಡೇರಿಕೆಗಾಗಿ ಶೀಘ್ರವೇ ಪ್ರಾಂತೀಯ ಚುನಾವಣೆಗಳು ನಡೆಯಬೇಕು ಎಂಬ ಭಾರತದ ನಿಲುವನ್ನು ಅಧ್ಯಕ್ಷ ವಿಕ್ರಮಸಿಂಘೆ ಅವರೊಂದಿಗೆ ಹಂಚಿಕೊಳ್ಳಲಾಯಿತು ' ಎಂದು ಅವರು ಹೇಳಿದ್ದಾರೆ.

ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಕೊಲಂಬೊದಲ್ಲಿ ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರನ್ನು ಶುಕ್ರವಾರ ಭೇಟಿ ಮಾಡಿ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ದೇಶದ ಉತ್ತರ ಹಾಗೂ ಪೂರ್ವ ಭಾಗದಲ್ಲಿ ತಮಿಳು ಭಾಷಿಕರು ಅಧಿಕ ಸಂಖ್ಯೆಯಲ್ಲಿದ್ದಾರೆ. ಆದರೆ, ಅವರಿಗೆ ರಾಜಕೀಯ ಪ್ರಾತಿನಿಧ್ಯ ನೀಡಿಲ್ಲ ಎಂಬ ದೂರುಗಳಿದ್ದವು. ಇದು ಸಂಘರ್ಷಕ್ಕೂ ಕಾರಣವಾಗಿತ್ತು. ಇದಕ್ಕೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ, ಉಭಯ ದೇಶಗಳು 1987ರಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ್ದವು.

ಈ ಒಪ್ಪಂದದ ಆಶಯದಂತೆ, ಶ್ರೀಲಂಕಾ ಸಂವಿಧಾನಕ್ಕೆ 13ನೇ ತಿದ್ದುಪಡಿ ತರಲಾಯಿತು. ಈ ತಿದ್ದುಪಡಿಯ 13ಎ ವಿಧಿಯು, ಎಲ್ಲ ಸಮುದಾಯಗಳು ಒಗ್ಗಟ್ಟಿನಿಂದ ಬಾಳಬೇಕು ಎಂದು ಪ್ರತಿಪಾದಿಸುವ ಜೊತೆಗೆ, ತಮಿಳು ಸಮುದಾಯಕ್ಕೆ ಅಧಿಕಾರವನ್ನೂ ನೀಡುತ್ತದೆ.

'ಹೂಡಿಕೆಗೆ ಪ್ರೋತ್ಸಾಹ': ಶ್ರೀಲಂಕಾ ಆರ್ಥಿಕತೆಯ ಪುನಶ್ಚೇತನಕ್ಕಾಗಿ ದೇಶದಲ್ಲಿ ಅಧಿಕ ಪ್ರಮಾಣದ ಹೂಡಿಕೆಗೆ ಭಾರತ ಉತ್ತೇಜನ ನೀಡುತ್ತದೆ ಎಂದು ಜೈಶಂಕರ್ ಹೇಳಿದರು.

'ದೇಶವು ಆರ್ಥಿಕ ಸಂಕಷ್ಟದಿಂದ ಹೊರಬರಲು ಹಣಕಾಸು ನೆರವು ನೀಡುವ ಸಂಸ್ಥೆಗಳು ತ್ವರಿತವಾಗಿ ನೆರವಿನ ಹಸ್ತ ಚಾಚಬೇಕು ಎಂಬುದು ಭಾರತ ಒತ್ತಾಯವಾಗಿದೆ' ಎಂದೂ ಅವರು ಹೇಳಿದರು.

ಐಎಂಎಫ್ ನೆರವು: ಬೆಂಬಲ ಸೂಚಿಸಿದ ಭಾರತ

ದೇಶವನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ₹ 23 ಸಾವಿರ ಕೋಟಿ (290 ಕೋಟಿ ಡಾಲರ್) ನೆರವು ಪಡೆಯುವ ಶ್ರೀಲಂಕಾ ಪ್ರಯತ್ನಕ್ಕೆ ಭಾರತ ಶುಕ್ರವಾರ ಬೆಂಬಲ ಘೋಷಿಸಿದೆ.

ಭಾರತವು, ಈ ವಿಷಯದಲ್ಲಿ ಶ್ರೀಲಂಕಾಕ್ಕೆ ಬಹಿರಂಗವಾಗಿ ಬೆಂಬಲ ವ್ಯಕ್ತಪಡಿಸಿದ ಮೊದಲ ರಾಷ್ಟ್ರವಾಗಿದೆ.

ಅಧ್ಯಕ್ಷ ವಿಕ್ರಮಸಿಂಘೆ ಅವರನ್ನು ಭೇಟಿ ಮಾಡಿದ ನಂತರ ಮಾತನಾಡಿದ ವಿದೇಶಾಂಗ ಸಚಿವ ಜೈಶಂಕರ್, 'ಈ ಸಂಕಷ್ಟದ ಸಮಯದಲ್ಲಿ ಭಾರತವು ದ್ವೀಪರಾಷ್ಟ್ರದ ಜೊತೆ ನಿಲ್ಲುತ್ತದೆ' ಎಂದರು.



❦ ಸುಭಾಷಿತ ❦

ಪ್ರತಿಯೊಬ್ಬರೂ ತಿನ್ನುತ್ತಾರೆ ಮತ್ತು ಕುಡಿಯುತ್ತಾರೆ. ಆದರೆ ಕೆಲವರು ಮಾತ್ರ ಆಹಾರದ ಸ್ವಾದವನ್ನು ಪ್ರಶಂಸಿಸುತ್ತಾರೆ.

–ಕನ್‌ಫ್ಯೂಷಿಯಸ್

ಮಕ್ಕಿ 'ಜಾಗತಿಕ ಭಯೋತ್ಪಾದಕ' ಭಾರತಕ್ಕೆ ರಾಜತಾಂತ್ರಿಕ ಜಯ

ಲಷ್ಕರ್‌–ಎ–ತಯಬಾ ಉಗ್ರಗಾಮಿ ಸಂಘಟನೆಯ ಉಪನಾಯಕ ಅಬ್ದುಲ್ ರೆಹಮಾನ್ ಮಕ್ಕಿ 'ಜಾಗತಿಕ ಭಯೋತ್ಪಾದಕ' ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು (ಯುಎನ್‌ಎಸ್‌ಸಿ) ಘೋಷಿಸುವಂತೆ ಮಾಡಿ ಭಾರತವು ಬಹುಮುಖ್ಯವಾದ ರಾಜತಾಂತ್ರಿಕ ವಿಜಯವೊಂದನ್ನು ಸಾಧಿಸಿದೆ. 2008ರಲ್ಲಿ ಮುಂಬೈ ಮೇಲೆ ನಡೆದ ದಾಳಿಯಲ್ಲಿ ಮಕ್ಕಿಯ ಕೈವಾಡ ಇತ್ತು. ಅಲ್ಲದೆ, ಭಾರತದ ಮೇಲೆ ನಡೆದ ಇತರ ಹಲವು ಭಯೋತ್ಪಾದಕ ದಾಳಿಗಳಲ್ಲಿಯೂ ಈತನ ಕೈವಾಡ ಇತ್ತು. ಹೀಗಾಗಿ ಈತನನ್ನು ಜಾಗತಿಕ ಭಯೋತ್ಪಾದಕ ಎಂದು ಘೋಷಿಸುವಂತೆ ಭಾರತವು ಹಲವು ವರ್ಷಗಳಿಂದ ಒತ್ತಾಯಿಸುತ್ತಿತ್ತು. ಈತನನ್ನು ಭಾರತದಲ್ಲಿ ಭಯೋತ್ಪಾದಕ ಎಂದು ಘೋಷಿಸಲಾಗಿದೆ. ಅಮೆರಿಕದಲ್ಲಿ ಕೂಡ ಈತನನ್ನು ಭಯೋತ್ಪಾದಕ ಎಂದು ಘೋಷಿಸಲಾಗಿದ್ದು, ಆತನ ಪತ್ತೆ ಹಾಗೂ ಆತನಿಗೆ ಶಿಕ್ಷೆ ವಿಧಿಸಲು ನೆರವಾಗುವಂತಹ ಮಾಹಿತಿ ನೀಡಿದವರಿಗೆ 20 ಲಕ್ಷ ಡಾಲರ್ (ಸರಿಸುಮಾರು ₹ 16.23 ಕೋಟಿ) ಬಹುಮಾನವನ್ನು ಘೋಷಿಸಲಾಗಿದೆ. ಪಾಕಿಸ್ತಾನದ ಹಲವು ಪ್ರಜೆಗಳು ನಡೆಸುತ್ತಿರುವ ಭಯೋತ್ಪಾದಕ ಚಟುವಟಿಕೆಗಳ ಕುರಿತು ಭಾರತವು ವಿಶ್ವ ಸಮುದಾಯಕ್ಕೆ ಬಲವಾದ ಪುರಾವೆಗಳನ್ನು ಒದಗಿಸುತ್ತ ಬಂದಿದೆ, ಅವರನ್ನು ಜಾಗತಿಕ ಭಯೋತ್ಪಾದಕರು ಎಂದು ಘೋಷಿಸಬೇಕು ಎಂಬ ಒತ್ತಾಯವನ್ನು ತರುತ್ತ ಬಂದಿದೆ. ಹೀಗಿದ್ದರೂ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತದ ಪ್ರಯತ್ನಗಳಿಗೆ ಚೀನಾ ಅಡ್ಡಗಾಲು ಹಾಕುತ್ತಿದೆ. ಈ ಕಾರಣದಿಂದಾಗಿ ಭಯೋತ್ಪಾದನಾ ಚಟುವಟಿಕೆಯಲ್ಲಿ ಭಾಗಿಯಾದ ಹಲವರ ಮೇಲೆ ನಿರ್ಬಂಧಗಳನ್ನು ಹೇರುವುದು ಭಾರತಕ್ಕೆ ಸವಾಲಾಗಿ ಪರಿಣಮಿಸಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಚೀನಾದ ನಡೆಗಳ ಹಿಂದೆ ಹಲವು ರಾಜಕೀಯ ಲೆಕ್ಕಾಚಾರಗಳು ಕೆಲಸ ಮಾಡುತ್ತಿವೆ. ಚೀನಾ ಹಾಗೂ ಪಾಕಿಸ್ತಾನದ ನಡುವೆ ನಿಕಟ ಬಾಂಧವ್ಯವಿದೆ. ಅಲ್ಲದೆ, ಎರಡೂ ದೇಶಗಳಿಗೆ ಭಾರತವೆಂದರೆ ಅಷ್ಟಕ್ಕಷ್ಟೇ. ಹೀಗಾಗಿ, ಭಯೋತ್ಪಾದನಾ ಚಟುವಟಿಕೆಗಳನ್ನು ದುರ್ಬಲಗೊಳಿಸುವ ಅಂತರರಾಷ್ಟ್ರೀಯ ಸಮುದಾಯದ ಪ್ರಯತ್ನಗಳಿಗೆ ಕೈಜೋಡಿಸುವ ಬದಲು, ಭಾರತ ವಿರೋಧಿ ಭಯೋತ್ಪಾದನಾ ಕೃತ್ಯಗಳನ್ನು ಎಸಗುವವರಿಗೆ ನೆರವು ಒದಗಿಸುವ ಪಾಕಿಸ್ತಾನಕ್ಕೆ ಬೆಂಬಲ ನೀಡುವುದನ್ನು ಚೀನಾ ಆಯ್ಕೆ ಮಾಡಿಕೊಂಡಿದೆ. ಕಳೆದ ಆರು ತಿಂಗಳ ಅವಧಿಯಲ್ಲಿ ಮಕ್ಕಿ ಸೇರಿದಂತೆ ಪಾಕಿಸ್ತಾನದಲ್ಲಿ ನೆಲೆಯಾಗಿರುವ ಐವರು ಭಯೋತ್ಪಾದಕರನ್ನು ಕಪ್ಪುಪಟ್ಟಿಗೆ ಸೇರಿಸುವ ಭಾರತದ ಪ್ರಸ್ತಾವಗಳಿಗೆ ಚೀನಾ ಅಡೆತಡೆ ಸೃಷ್ಟಿಸಿದೆ.

ಮಕ್ಕಿಯ ಮೇಲೆ ಜಾರಿಯಾಗಿರುವ ನಿರ್ಬಂಧವನ್ನು ಭಾರತ ಇನ್ನಷ್ಟು ಮುಂದಕ್ಕೆ ಒಯ್ಯಬೇಕು

ಜೈಷ್‌–ಎ–ಮಹಮ್ಮದ್ ಸಂಘಟನೆಯ ಮುಖ್ಯಸ್ಥ ಮಸೂದ್ ಅಜರ್‌ನನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಭಾರತ ನಡೆಸುತ್ತಿದ್ದ ಪ್ರಯತ್ನಗಳಿಗೆ ವರ್ಷಗಳಿಂದ ಅಡ್ಡಿ ಉಂಟುಮಾಡುತ್ತಿದ್ದ ಚೀನಾ, 2019ರಲ್ಲಿ ಈ ಪ್ರಯತ್ನಕ್ಕೆ ಬೆಂಬಲ ನೀಡಿತು. ಅಜರ್‌ನನ್ನು ಕಪ್ಪುಪಟ್ಟಿಗೆ ಸೇರಿಸುವುದಕ್ಕೆ ತಾನು ಬೆಂಬಲ ನೀಡುವುದಕ್ಕೆ ಪ್ರತಿಯಾಗಿ, ಬಲೂಚ್ ಲಿಬರೇಷನ್ ಆರ್ಮಿಯನ್ನು ಭಯೋತ್ಪಾದಕ ಸಂಘಟನೆ ಎಂದು ಘೋಷಿಸುವ ತನ್ನ ಯತ್ನಕ್ಕೆ ಅಮೆರಿಕದ ಬೆಂಬಲ ಪಡೆಯಲು ಚೀನಾ ಹೀಗೆ ಮಾಡಿತ್ತು ಎನ್ನಲಾಗಿದೆ. ಈಗ ಮಕ್ಕಿಯನ್ನು ಕಪ್ಪುಪಟ್ಟಿಗೆ ಸೇರಿಸಲು ಕೂಡ ಇಂಥದ್ದೇ ಹೊಂದಾಣಿಕೆಯ ಹೆಜ್ಜೆ ಇರಿಸಿರುವ ಸಾಧ್ಯತೆ ಇದೆ. ಆದರೆ, ಭಯೋತ್ಪಾದನೆಯ ವಿರುದ್ಧದ ಹೋರಾಟದ ವಿಚಾರವಾಗಿ ವಿಶ್ವಸಂಸ್ಥೆಯಲ್ಲಿ ಚೀನಾ ತಾಳುತ್ತಿರುವ ನಿಲುವುಗಳು ಯಾವುದೇ ತಾತ್ವಿಕತೆಯನ್ನು ಆಧರಿಸಿಲ್ಲದಿರುವುದು ದುರದೃಷ್ಟಕರ. ಚೀನಾದ ನಡೆಯ ಹಿಂದೆ ಇರುವುದು ದ್ವಂದ್ವ ನಿಲುವು. ಉಯ್ಘುರ್ ಹಾಗೂ ಟಿಬೆಟ್ ಪ್ರಾಂತ್ಯದಲ್ಲಿನ ಜನರ ಪ್ರತಿರೋಧವನ್ನು ತಾನು ಕಠಿಣವಾಗಿ ಹತ್ತಿಕ್ಕುತ್ತಿರುವ ರೀತಿಯನ್ನು ಬೆಂಬಲಿಸಬೇಕು ಎಂದು ಇತರರ ಮೇಲೆ ಒತ್ತಡ ತರುವ ಚೀನಾ, ಭಯೋತ್ಪಾದನೆಯ ವಿರುದ್ಧ ಹೋರಾಟ ನಡೆಸುತ್ತಿರುವ ಇತರ ದೇಶಗಳಿಗೆ ತೃಣಮಾತ್ರದ ನೆರವು ನೀಡುತ್ತದೆ. ವಿಶ್ವದ ದೊಡ್ಡ ಶಕ್ತಿಯೊಂದು ಹೀಗೆ ನಡೆದುಕೊಳ್ಳಬಾರದು. ಇದು ಬೇಜವಾಬ್ದಾರಿಯ ನಡೆ.

ಈಗ ಮಕ್ಕಿಯನ್ನು ಜಾಗತಿಕ ಭಯೋತ್ಪಾದಕ ಎಂದು ಘೋಷಿಸಿರುವ ಕಾರಣ ಆತನ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಆತನಿಗೆ ವಿದೇಶ ಪ್ರಯಾಣಕ್ಕೆ ಅವಕಾಶ ಇರುವುದಿಲ್ಲ. ಆತ ಶಸ್ತ್ರಾಸ್ತ್ರಗಳನ್ನು ಬಳಸುವುದರ ಮೇಲೆ ನಿರ್ಬಂಧಗಳು ಜಾರಿಯಾಗುತ್ತವೆ. ಲಷ್ಕರ್‌–ಎ–ತಯಬಾ ಸಂಘಟನೆಯ ಪರವಾಗಿ ನಿಧಿ ಸಂಗ್ರಹಿಸುತ್ತಿದ್ದವ ಮಕ್ಕಿ. ಈತ ಆ ಸಂಘಟನೆಯ 'ಅಂತರರಾಷ್ಟ್ರೀಯ ಸಂಬಂಧ'ಗಳ ವಿಭಾಗದ ಮುಖ್ಯಸ್ಥನೂ ಹೌದು. ತಾತ್ವಿಕವಾಗಿ ಈಗ ಲಷ್ಕರ್‌–ಎ–ತಯಬಾ ಸಂಘಟನೆಗೆ ನಿಧಿ ಸಂಗ್ರಹಿಸುವುದಕ್ಕೆ ತೊಂದರೆ ಆಗಲಿದೆ. ಆದರೆ, ವಾಸ್ತವದಲ್ಲಿ ಇದರಿಂದ ಸಂಘಟನೆಗೆ ಹೆಚ್ಚಿನ ಸಮಸ್ಯೆ ಆಗದೆಯೂ ಇರಬಹುದು. ಏಕೆಂದರೆ ಈ ಸಂಘಟನೆಯು ಇಂತಹ ವ್ಯಕ್ತಿಗಳು ಸಂಗ್ರಹಿಸುವ ನಿಧಿಯನ್ನು ನೆಚ್ಚಿಕೊಳ್ಳುವುದಕ್ಕಿಂತ ಹೆಚ್ಚಾಗಿ, ಭಾರತ ವಿರೋಧಿ ಕೃತ್ಯಗಳನ್ನು ನಡೆಸಲು ಪಾಕಿಸ್ತಾನದ ಗೂಢಚರ ಸಂಸ್ಥೆ ಐಎಸ್‌ಐ ನೀಡುವ ನೆರವನ್ನು ನೆಚ್ಚಿಕೊಂಡಿದೆ. ಹೀಗಾಗಿ, ಇತರ ಭಯೋತ್ಪಾದಕರನ್ನು ಕಪ್ಪುಪಟ್ಟಿಗೆ ಸೇರಿಸಲು ಯತ್ನ ನಡೆಸುವುದರ ಜೊತೆಯಲ್ಲಿಯೇ ಪಾಕಿಸ್ತಾನ ಇಂತಹ ಸಂಘಟನೆಗಳಿಗೆ ಬೆಂಬಲ ನೀಡುವುದನ್ನು ನಿಲ್ಲಿಸುವಂತೆ ಒತ್ತಡ ತರಲು ಭಾರತವು ಅಂತರರಾಷ್ಟ್ರೀಯ ಸಮುದಾಯದ ಮನವೊಲಿಸಬೇಕು. ಮಕ್ಕಿಯ ಮೇಲೆ ಈಗ ಜಾರಿಯಾಗಿರುವ ನಿರ್ಬಂಧವು ಸರಿಯಾದ ಕ್ರಮ. ಈ ಕ್ರಮವನ್ನು ಭಾರತ ಇನ್ನಷ್ಟು ಮುಂದಕ್ಕೆ ಒಯ್ಯಬೇಕು.

ದಿನದ ಟ್ವೀಟ್

ಬೇಕಾದ್ದನ್ನು ಮಾಡಬಹುದೇ?

ತೇಜಸ್ವಿ ಸೂರ್ಯ ಅವರು ವಿಮಾನದ ತುರ್ತು ನಿರ್ಗಮನ ದ್ವಾರವನ್ನು ತೆರೆದದ್ದು ಮೋಜಿಗಾಗಿಯೋ ಅಲ್ಲವೋ ಎಂಬುದು ಇಲ್ಲಿ ಮುಖ್ಯವಲ್ಲ. ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದ (ಡಿಜಿಸಿಎ) ನಿಯಮಗಳ ಅಡಿಯಲ್ಲಿ ಬರುವ, ಮೂರನೇ ಹಂತದ ನಿಯಮ ಉಲ್ಲಂಘನೆಯನ್ನು 48 ದಿನಗಳವರೆಗೆ ಡಿಜಿಸಿಎ ಗಮನಕ್ಕೆ ಬರದಿದ್ದುದು ಇಲ್ಲಿ ಮುಖ್ಯ. ಈ ದೇಶದಲ್ಲಿ ಅಧಿಕಾರಸ್ಥರು ತಮಗೆ ಬೇಕಾದ್ದನ್ನು ಮಾಡಬಹುದೇ? ವಿಮಾನಯಾನದಲ್ಲಿ ಕ್ರಮಯಾನಕಗಳು ಎಸ್‌ಒಪಿಯ (ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್) ಭಾಗವೇ?

ಸಸಿಕಾಂತ್ ಸೆಂಥಿಲ್, ಮಾಜಿ ಐಎಎಸ್ ಅಧಿಕಾರಿ

ಕಿಡಿನುಡಿ

ಇದೊಂದು ನೋಡುವುದು ಬಾಕಿಯಿತ್ತು... 7 ಲಕ್ಷ ವಾಹನಗಳ ಧಾರಣಾಶಕ್ತಿಯ ಬೆಂಗಳೂರಿನ ರಸ್ತೆಗಳಲ್ಲಿ ಸರಿಸುಮಾರು ಒಂದು ಕೋಟಿ ವಾಹನಗಳು ಇವೆ. ಹೀಗಾಗಿ ಸವಾರರ ನಡುವಿನ ಜಗಳ ಇಲ್ಲಿ ನಿಜಕ್ಕೂ ಸಮಸ್ಯೆಯಾಗಿದೆ. ಚಾಲಕರ ವಿರುದ್ಧ ಪೊಲೀಸರು ಕಠಿಣ ಕ್ರಮ ಜರುಗಿಸುವರೆಂದು ಭಾವಿಸುತ್ತೇನೆ.

(ಅಪಘಾತ ಮಾಡಿ ಪ್ರಶ್ನಿಸಿದ ವಾಹನಸವಾರನನ್ನು ವೃದ್ಧ ಚಾಲಕ ಯುವತಿ, ತಮ್ಮನ್ನು ತಡೆದು ಬಂದ ಯುವಕನನ್ನು ಕಾರಿನ ಬಾನೆಟ್ ಮೇಲೆಯೇ ಕೊಂಡೊಯ್ದ ಘಟನೆಗೆ ಪ್ರತಿಕ್ರಿಯೆ)

ವಸಂತ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಬುಧವಾರ, 21-1-1998

• ಮೂವರು ಸಚಿವರ ರಾಜೀನಾಮೆ ಬಿಕ್ಕಟ್ಟಿನಲ್ಲಿ ಪಟೇಲ್ ಸರ್ಕಾರ

ಬೆಂಗಳೂರು, ಜ. 20– ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಸಂಪುಟದ ಮೂವರು ಸಚಿವರು ಇಂದು ರಾಜೀನಾಮೆ ನೀಡಿ, ಮಾಜಿ ಮುಖ್ಯಮಂತ್ರಿ ಹಾಗೂ ಲೋಕಶಕ್ತಿ ಮುಖಂಡ ರಾಮಕೃಷ್ಣ ಹೆಗಡೆ ನೇತೃತ್ವದ ರಾಷ್ಟ್ರೀಯ ನವ ನಿರ್ಮಾಣ ವೇದಿಕೆ ಸೇರಿರುವುದರಿಂದ ಮೂರು ವರ್ಷದ ಜನತಾದಳ ಸರ್ಕಾರ ತೀವ್ರ ಬಿಕ್ಕಟ್ಟಿಗೆ ಸಿಲುಕಿದೆ.

ಕೈಗಾರಿಕಾ ಸಚಿವ ಆರ್.ವಿ.ದೇಶಪಾಂಡೆ, ಕಂದಾಯ ಸಚಿವ ರಮೇಶ್ ಜಿಗಜಿಣಗಿ ಹಾಗೂ ಕ್ರೀಡಾ ಸಚಿವ ಅಜಯ್ ಕುಮಾರ್ ಸರ್ನಾಯಕ್ ಅವರು ಬೆಳಿಗ್ಗೆ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 21-1-1973

• ಹಾವನೂರ್ ಆಯೋಗದ ಕಾರ್ಯ ಸಾಕು: ದೇವೇಗೌಡರ ಸಲಹೆ

ಬೆಂಗಳೂರು, ಜ. 20– 'ರಾಜ್ಯದಲ್ಲಿ ಕೋಮು ಸೌಹಾರ್ದ ಪಾಲನೆಯ ದೃಷ್ಟಿಯಿಂದ ಹಿಂದುಳಿದ ವರ್ಗಗಳ ಆಯೋಗದ ಕಾರ್ಯ ಕಾಲ ಗೊಂದಲ ಒಳಿತು' ಎಂದು ವಿರೋಧ ಪಕ್ಷದ ನಾಯಕ ಶ್ರೀ ಎಚ್.ಡಿ.ದೇವೇಗೌಡ ಅವರು 'ಅತ್ಯಂತ ಸಂಕಟದಿಂದ' ಸಲಹೆ ನೀಡಿದ್ದಾರೆ.

ಅವರು ಹೇಳಿಕೆಯೊಂದನ್ನು ನೀಡಿ, 'ತಾವೇನು ವರದಿಯನ್ನು ಕೊಡಲಿದ್ದೇವೆ ಎಂಬುದನ್ನು ಅವರು ಈಗಾಗಲೇ ಮೇಲಿಂದ ಮೇಲೆ ಹೇಳುತ್ತಿದ್ದಾರೆ. ಈ ವರದಿಗಾಗಿ ಕಾದು ಕುಳಿತೂ ಆಗುವುದಿಲ್ಲ. ವರದಿ ಹೊರಬಂದಾಗ ಅದು ಪೂರ್ವ ಗ್ರಹಿತವಾಗಿರುವುದರಿಂದ ಅದು ಉತ್ತಮ ದಾಖಲೆಯೂ ಆಗಲು ಸಾಧ್ಯವಿಲ್ಲ. ಆದ್ದರಿಂದ ನಾನು ಪೂರ್ವಾಭಿಪ್ರಾಯದಿಂದ ಅದನ್ನು ತಿರಸ್ಕರಿಸುತ್ತೇನೆ' ಎಂದು ಹೇಳಿದ್ದಾರೆ.

• ಸ್ವಾವಲಂಬನೆ, ದಾರಿದ್ರ್ಯ ನಿವಾರಣೆಗೆ 51 ಸಾವಿರ ಕೋಟಿ ರೂ. ವೆಚ್ಚ

ನವದೆಹಲಿ, ಜ. 20– ಐದನೆಯ ಪಂಚವಾರ್ಷಿಕ ಯೋಜನೆಯ ಗಾತ್ರವನ್ನು 51,166 ಕೋಟಿ ರೂ. ಗಳಷ್ಟಕ್ಕೆ ನಿಗದಿಗೊಳಿಸಿದ್ದು, ಸಮಗ್ರವಾಗಿ ಪ್ರತಿವರ್ಷ ಶೇ 5.5ರಷ್ಟು ಪ್ರಗತಿ ಸಾಧಿಸಲು ಯೋಜನೆಯಲ್ಲಿ ಉದ್ದೇಶಿಸಲಾಗಿದೆ ಎಂದು 1974–79ರ 5ನೇ ಯೋಜನೆಯ ಧೋರಣೆ ಪತ್ರದಲ್ಲಿ ಯೋಜನಾ ಆಯೋಗ ತಿಳಿಸಿದೆ. ಬಡತನ ನಿವಾರಣೆ, ಆರ್ಥಿಕ ಸ್ವಾವಲಂಬನೆ ಸಾಧನೆಯೇ ಈ ಯೋಜನೆಯ ಮೂಲ ಗುರಿ ಎಂದು ಪತ್ರ ಸೂಚಿಸುತ್ತದೆ.

ವಸಾಹತುಶಾಹಿಯ ಲೂಟಿಯಿಂದ ಸೊರಗಿಹೋಗಿದ್ದ ದೇಶ ಈಗ ಮತ್ತಷ್ಟು ನಜ್ಜುಗುಜ್ಜಾಗಲು ಕಾರಣವೇನು?

ಹೈಟಿ ಬವಣೆ ಮತ್ತು 'ಗ್ಯಾಂಗ್' ಅಟ್ಟಹಾಸ

ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

ಹೈಟಿ, ಪುಟ್ಟದಾದ ಕೆರಿಬಿಯನ್ ದೇಶ. ತುಂಬಾ ಬಡದೇಶ. ಹೈಟಿಯ ಶೇಕಡ 60ರಷ್ಟು ಜನ ದಟ್ಟ ದಾರಿದ್ರ್ಯದಲ್ಲಿ ಬದುಕುತ್ತಿದ್ದಾರೆ. 1.2 ಕೋಟಿಗೂ ಹೆಚ್ಚು ಜನ ತೀವ್ರ ಹಸಿವೆಯಲ್ಲಿ ನರಳುತ್ತಿದ್ದಾರೆ. ವಿದ್ಯುತ್, ಚರಂಡಿ ಯಾವುದೂ ಸರಿಯಾಗಿಲ್ಲ. ಇನ್ನು ಆಸ್ಪತ್ರೆ, ಶಾಲೆಗಳನ್ನು ಸರ್ಕಾರೇತರ ಸಂಸ್ಥೆಗಳು ನಡೆಸುತ್ತಿವೆ. ಅಲ್ಲಿ ಸರ್ಕಾರ ಅನ್ನುವುದು ನಿಜವಾಗಿ ಇದೆಯೇ ಎನ್ನುವುದೇ ಅನುಮಾನ.

ದೇಶದ ಹಿಂದಿನ ಅಧ್ಯಕ್ಷ ಜೊವೆನೆಲ್ ಮೋಯ್ಸ್ ಮನೆಗೆ ಕೆಲವು ಬಂದೂಕುಧಾರಿಗಳು ನುಗ್ಗಿ ಸಲೀಸಾಗಿ ಅವರನ್ನು ಕೊಂದರು. ಯಾರೂ ಅವರನ್ನು ತಡೆಯಲಿಲ್ಲ. ಯಾರು ಕೊಂದರು? ಯಾಕೆ ಕೊಂದರು? ಸ್ಪಷ್ಟವಿಲ್ಲ. ನಂತರ ಏರಿಯಲ್ ಹೆನ್ರಿ ಅಧ್ಯಕ್ಷರಾದರು. ಜೊವೆನೆಲ್ ಕೊಲೆಯಲ್ಲಿ ಈತನ ಕೈವಾಡ ಇದೆ ಎಂಬ ಗುಮಾನಿ ಇದೆ.

ಒಂದರ್ಥದಲ್ಲಿ ಅಲ್ಲಿ ನಿಜವಾಗಿ ಆಳ್ವಿಕೆ ನಡೆಸುತ್ತಿರುವುದು ವಿಭಿನ್ನ ಗ್ಯಾಂಗುಗಳು. ಅವುಗಳನ್ನು ಸಾಕಿ ಬೆಳೆಸಿದ್ದು ಈ ರಾಜಕೀಯ ಪಕ್ಷಗಳು. ಆ ಗ್ಯಾಂಗುಗಳು ಈಗ ಪ್ರಬಲವಾಗಿ ಬೆಳೆದಿವೆ. ಸರ್ಕಾರ ಉದ್ಯೋಗ ಕೊಡುತ್ತಿಲ್ಲ. ಸದ್ಯಕ್ಕೆ ಯುವಕರಿಗೆ ಕೆಲಸ ಕೊಡುತ್ತಿರುವುದು ಈ ಗ್ಯಾಂಗುಗಳು. ಬಡತನದ ಒತ್ತಡದಿಂದ ಯುವಕರು ಒಂದಲ್ಲ ಒಂದು ಗ್ಯಾಂಗಿಗೆ ಸೇರುತ್ತಾರೆ. ದಿನಬೆಳಗಾದರೆ ನಡೆಯುವ ಲೂಟಿಯ ಪಾಲಿನಲ್ಲಿ ಹೊಟ್ಟೆ ಹೊರೆಯುತ್ತಿದ್ದಾರೆ.

ಈ ಗ್ಯಾಂಗ್ ಹಿಂಸೆಯಲ್ಲಿ ಹೈಟಿ ಪ್ರತಿವರ್ಷ ಸುಮಾರು 400 ಕೋಟಿ ಡಾಲರ್ ಅಂದರೆ ದೇಶದ ಜಿಡಿಪಿಯ ಶೇಕಡ 30ರಷ್ಟು ನಷ್ಟ ಅನುಭವಿಸುತ್ತಿದೆ. ಸಾವಿರಾರು ಜನ ನೆಲೆ ಕಳೆದುಕೊಳ್ಳುತ್ತಿದ್ದಾರೆ. ಸರ್ಕಾರ ಈಗ ಲೂಟಿಕೋರರನ್ನು ನಿಯಂತ್ರಿಸಲು ಸೈನ್ಯವನ್ನು ಕಳುಹಿಸಲು ಬೇರೆ ದೇಶಗಳನ್ನು ಕೇಳಿಕೊಳ್ಳುತ್ತಿದೆ. ಅದು ಸಮಸ್ಯೆಗೆ ನಿಜವಾದ ಪರಿಹಾರವಾಗದೇ ಇರಬಹುದು. ಜನರಿಗೆ ಒಳ್ಳೆಯ ಕೆಲಸ ಸಿಕ್ಕರೆ, ಜೀವನಮಟ್ಟ ಸುಧಾರಿಸಿದರೆ ಅವರು ಈ ಗ್ಯಾಂಗುಗಳನ್ನು ಸೇರುವುದಿಲ್ಲ. ಗ್ಯಾಂಗುಗಳನ್ನು ದುರ್ಬಲಗೊಳಿಸಲು ಇರುವ ಸೂಕ್ತ ಮಾರ್ಗ ಅದೇ. ಆದರೆ ಸದ್ಯಕ್ಕೆ ಹೈಟಿಯ ಆರ್ಥಿಕತೆ ಆ ಸ್ಥಿತಿಯಲ್ಲಿಲ್ಲ.

ಹೈಟಿಯಂತಹ ದೇಶಗಳು ಏಕೆ ಈ ಸ್ಥಿತಿಯಲ್ಲಿವೆ? ಯುರೋಪ್ ಹಾಗೂ ಅಮೆರಿಕದ ಸಂಪತ್ತಿನ ಕೇಂದ್ರೀಕರಣಕ್ಕೂ ಈ ದೇಶಗಳ ದಾರಿದ್ರ್ಯಕ್ಕೂ ಕಾರಣ ಒಂದೇ- ಗುಲಾಮಗಿರಿ ಹಾಗೂ ವಸಾಹತುಶಾಹಿ ಆಳ್ವಿಕೆ. ಇದನ್ನು ಹಲವು ಅಧ್ಯಯನಗಳು ತಿಳಿಸಿವೆ.

ಅರ್ಥಶಾಸ್ತ್ರಜ್ಞ ಥಾಮಸ್ ಪಿಕೆಟ್ಟಿ ಅವರು ಗುರುತಿಸುವಂತೆ, 18ನೇ ಶತಮಾನದ ಕೊನೆಯ ವೇಳೆಗೆ ಯುರೋಪ್ ತನ್ನ ಎಲ್ಲಾ ಸಂಪನ್ಮೂಲಗಳನ್ನು ಹಾಳುಮಾಡಿಕೊಂಡಿತ್ತು. ಕಾಡುಗಳು ಕಣ್ಮರೆಯಾಗಿದ್ದವು. 1500ರಲ್ಲಿ ಶೇಕಡ 40ರಷ್ಟಿದ್ದ ಅರಣ್ಯ ಪ್ರದೇಶವು 1800ರ ವೇಳೆಗೆ ಶೇಕಡ 10ಕ್ಕೆ ಇಳಿದಿತ್ತು. ಆದರೆ ಅದರ ಮಿಲಿಟರಿ ಸಾಮರ್ಥ್ಯ ಅಪಾರವಾಗಿ ಬೆಳೆದಿತ್ತು. ಫ್ರಾನ್ಸ್ ಹಾಗೂ ಬ್ರಿಟನ್ ಈ ಎರಡೂ ದೇಶಗಳ ಒಟ್ಟು ಯೋಧರ ಸಂಖ್ಯೆ 1550ರಲ್ಲಿ 1.40 ಲಕ್ಷ ಇದ್ದುದು, 1780ರ ವೇಳೆಗೆ 4.50 ಲಕ್ಷ ದಾಟಿತ್ತು. ಉಳಿದ ದೇಶಗಳಿಗಿಂತ ಅಲ್ಲಿ ಏಳೆಂಟು ಪಟ್ಟು ಹೆಚ್ಚು ತೆರಿಗೆ ಸಂಗ್ರಹವಾಗುತ್ತಿತ್ತು. ಹಾಗಾಗಿ ಹೆಚ್ಚಿನ ಸೈನಿಕರನ್ನು ನೇಮಿಸಿಕೊಳ್ಳುವುದಕ್ಕೆ ಸಾಧ್ಯವಾಗಿತ್ತು. ಪ್ರಬಲವಾದ ಮಿಲಿಟರಿ ನೆರವಿನಿಂದ ವಸಾಹತುಗಳನ್ನು ನಿಯಂತ್ರಿಸುವುದು ಸುಲಭವಾಗಿತ್ತು. ಹೆಚ್ಚೆಚ್ಚು ಗುಲಾಮರನ್ನು ಬಳಸಿಕೊಂಡು ಜಗತ್ತಿನ ವಿವಿಧ ಕಡೆಗಳಿಂದ ನೈಸರ್ಗಿಕ ಸಂಪನ್ಮೂಲಗಳನ್ನು ಸಂಗ್ರಹಿಸತೊಡಗಿದವು. ಹಾಗಾಗಿಯೇ 1750 ಹಾಗೂ 1860ರ ಅವಧಿಯಲ್ಲಿ ಬಟ್ಟೆ ಉತ್ಪಾದನೆಯಲ್ಲಿ ಜಾಗತಿಕ ಮಟ್ಟದಲ್ಲಿ ಪ್ರಾಬಲ್ಯ ಗಳಿಸುವುದಕ್ಕೆ ಫ್ರಾನ್ಸಿಗೆ ಸಾಧ್ಯವಾಗಿದ್ದು.

ಸುಮಾರಿಗೆ ಆ ಸಮಯದಲ್ಲಿ ಹೈಟಿಯು ಸಕ್ಕರೆ, ಕಾಫಿ ಹಾಗೂ ಹತ್ತಿಯ ಉತ್ಪಾದನೆಯಿಂದಾಗಿ ಅತ್ಯಂತ ಸಮೃದ್ಧವಾದ ಹಾಗೂ ಲಾಭದಾಯಕವಾದ ವಸಾಹತು ಆಗಿತ್ತು. ಅದೇ ಕಾರಣಕ್ಕೆ ಹೈಟಿಯು ಫ್ರೆಂಚ್ ವಸಾಹತು ರತ್ನ ಎನಿಸಿಕೊಂಡಿತ್ತು. ಹೈಟಿಯ ಒಟ್ಟು ಜನಸಂಖ್ಯೆಯ ಶೇಕಡ 90ರಿಂದ 95ರಷ್ಟು ಗುಲಾಮರಿದ್ದರು. ಎಲ್ಲಾ ಒಂದೇ ಕಡೆ ಇದ್ದುದರಿಂದ, ಹೆಚ್ಚು ಸಂಖ್ಯೆಯಲ್ಲಿ ಇದ್ದುದರಿಂದ ಸಂಘಟಿತರಾದರು. 1971ರಲ್ಲಿ ದಂಗೆ ಎದ್ದರು. ಇದೊಂದು ಮಹತ್ವದ ಹೋರಾಟ. ಫ್ರಾನ್ಸಿನಿಂದ ಬಂದ ಮಿಲಿಟರಿಯಿಂದಲೂ ಇದನ್ನು ಹತ್ತಿಕ್ಕಲು ಆಗಲಿಲ್ಲ. ಹೋರಾಟಗಾರರು ಪ್ಲಾಂಟೇಷನ್ನುಗಳನ್ನು ವಶಕ್ಕೆ ತೆಗೆದುಕೊಂಡರು.

1804ರಲ್ಲಿ ಹೈಟಿ ಸ್ವತಂತ್ರ ರಾಷ್ಟ್ರ ಎಂದು ಘೋಷಿಸಿಕೊಂಡು ತನ್ನದೇ ಸರ್ಕಾರ ನಡೆಸತೊಡಗಿದರೂ ಫ್ರಾನ್ಸ್ ಅದನ್ನು ಮಾನ್ಯ ಮಾಡಲಿಲ್ಲ. ಅದನ್ನು ಸದೆಬಡಿಯಲು ಪ್ರಯತ್ನಿಸುತ್ತಲೇ ಇತ್ತು. ಕೊನೆಗೆ 1825ರಲ್ಲಿ ಅದರ ಸ್ವಾತಂತ್ರ್ಯವನ್ನು ಮಾನ್ಯ ಮಾಡಿ, ಇನ್ನು ದಾಳಿ ಮಾಡುವುದಿಲ್ಲವೆಂದು ಒಪ್ಪಿಕೊಂಡಿತು. ಆದರೆ ಗುಲಾಮರ ಒಡೆಯರಿಗೆ ಆದ ನಷ್ಟವನ್ನು ಹೈಟಿ ಸರ್ಕಾರ ತುಂಬಿಕೊಡಬೇಕೆಂಬ ಷರತ್ತನ್ನು ವಿಧಿಸಿತು. ಬೇರೆ ದಾರಿಯಿಲ್ಲದೆ, ಗುಲಾಮರ ಒಡೆಯರಿಗೆ ಆದ ಆಸ್ತಿಯ (ಗುಲಾಮರ) ನಷ್ಟಕ್ಕೆ ಬದಲಾಗಿ 1,500 ಲಕ್ಷ ಚಿನ್ನದ ಫ್ರಾಂಕುಗಳನ್ನು ಕೊಡಲು ಹೈಟಿ ಸರ್ಕಾರ ಒಪ್ಪಿಕೊಂಡಿತು. ಫ್ರಾನ್ಸಿನ ಮಿಲಿಟರಿ ಬಲ ಅಷ್ಟಿತ್ತು. ಅದು ಕೊಡಲು ಒಪ್ಪಿಕೊಂಡ ಹಣ ಹೈಟಿಯ ರಾಷ್ಟ್ರೀಯ ವರಮಾನದ ಶೇಕಡ 300ರಷ್ಟು. ಅದನ್ನು ಒಮ್ಮೆಲೇ ಕೊಡುವುದು ಸಾಧ್ಯವೇ ಇರಲಿಲ್ಲ. ಹಾಗಾಗಿ ಒಂದು ಬ್ಯಾಂಕ್ ವ್ಯವಸ್ಥೆಯ ಮೂಲಕ ಪ್ರತಿವರ್ಷ ಕಂತಿನಲ್ಲಿ ಕಟ್ಟುವುದಾಗಿ ಒಪ್ಪಂದ ಮಾಡಿಕೊಳ್ಳಲಾಯಿತು. ಅದಕ್ಕೆ ಹೈಟಿ ಸರ್ಕಾರ ಬ್ಯಾಂಕಿಗೆ ಬಡ್ಡಿ ತೆರುತ್ತಿತ್ತು. 1840ರಿಂದ 75 ವರ್ಷಗಳ ಕಾಲ ಹೈಟಿ ನಿರಂತರವಾಗಿ ಫ್ರಾನ್ಸಿಗೆ ಈ ಹಣವನ್ನು ಕಟ್ಟುತ್ತಾ ಹೋಯಿತು. ಅಮೆರಿಕ ಕೂಡ ಹೈಟಿಯನ್ನು ಆಳಿತ್ತು. ಹಾಗಾಗಿ ಅಮೆರಿಕಕ್ಕೂ ಹಲವು ವರ್ಷ ನಷ್ಟ ತುಂಬಿಕೊಟ್ಟಿದೆ. ಗುಲಾಮರ ಬಿಡುಗಡೆಗಾಗಿ ಹೈಟಿ ಸುಮಾರು 100 ವರ್ಷಗಳ ಕಾಲ ಹಣ ಕಟ್ಟಿದೆ. ನಿಜವಾಗಿ ನೋಡಿದರೆ ಪುಕ್ಕಟೆ ದುಡಿಸಿಕೊಂಡಿದ್ದಕ್ಕೆ ಗುಲಾಮರಿಗೇ ಹಣ ಕೊಡಬೇಕಿತ್ತು.

ಮೊದಲೇ ವಸಾಹತುಶಾಹಿಯ ಲೂಟಿಯಿಂದ ಸೊರಗಿಹೋಗಿದ್ದ ಹೈಟಿ ಆರ್ಥಿಕವಾಗಿ ಚೇತರಿಸಿಕೊಳ್ಳಲೇ ಇಲ್ಲ. ಇತ್ತೀಚಿನ ಕಾಲರಾ, ಭೂಕಂಪ, ಗ್ಯಾಂಗ್ ಹಾವಳಿಗಳು ಅದನ್ನು ನಜ್ಜುಗುಜ್ಜು ಮಾಡಿವೆ. ಫ್ರಾನ್ಸ್‌ನಂತಹ ಸರ್ಕಾರಗಳಿಗೆ ಈಗ ಈ ದೇಶಕ್ಕೆ ನೆರವಾಗಬೇಕಾದ ನೈತಿಕ ಹೊಣೆಗಾರಿಕೆಯಿದೆ. ಅವರಿಂದ ಬಲವಂತವಾಗಿ ಪಡೆದುಕೊಂಡಿರುವ ಹಣವನ್ನು ಮರುಪಾವತಿಸಬೇಕು. ಹೈಟಿ ಸರ್ಕಾರವೂ ಇದಕ್ಕೆ ಒತ್ತಾಯಿಸುತ್ತಿದೆ. ಈ ನ್ಯಾಯಯುತ ಬೇಡಿಕೆಯನ್ನು ಫ್ರಾನ್ಸ್ ಒಪ್ಪಿಕೊಳ್ಳಬೇಕು.

ಇದಕ್ಕೆ ಒಪ್ಪಿಕೊಂಡರೆ ಫ್ರಾನ್ಸ್ ಎಷ್ಟು ಹಣ ಕೊಡಬೇಕು ಅನ್ನುವುದು ಪ್ರಶ್ನೆ. ಪಿಕೆಟ್ಟಿಯ ಸಲಹೆಯೆಂದರೆ, ಕನಿಷ್ಠ ಹೈಟಿಯ 2020ರ ರಾಷ್ಟ್ರೀಯ ವರಮಾನದ ಶೇಕಡ 300ರಷ್ಟನ್ನಾದರೂ ಕೊಡಬೇಕು. ಅದು ಫ್ರಾನ್ಸಿನ ಒಟ್ಟು ಸಾಲದ ಕೇವಲ ಶೇಕಡ 1ರಷ್ಟು. ಅದು ಫ್ರಾನ್ಸಿಗೆ ಏನೂ ಅಲ್ಲ. ಆದರೆ ಹೈಟಿಗೆ ದೊಡ್ಡ ಮೊತ್ತವಾಗಬಲ್ಲದು. ಹೂಡಿಕೆ ಹಾಗೂ ಮೂಲ ಸೌಕರ್ಯ ನಿರ್ಮಾಣದ ದೃಷ್ಟಿಯಿಂದ ದೊಡ್ಡ ವ್ಯತ್ಯಾಸ ಉಂಟುಮಾಡುತ್ತದೆ.

ಇದು ಹೈಟಿಯ ವಿಷಯದಲ್ಲಿ ಮಾತ್ರವಲ್ಲ, ಗುಲಾಮಗಿರಿಯ ಪಾಡನ್ನು ಅನುಭವಿಸಿದ ಎಲ್ಲಾ ದೇಶಗಳ ವಿಷಯದಲ್ಲೂ ಆಗಬೇಕು. ಈ ಬಗ್ಗೆ ಚರ್ಚೆ ನಡೆಯಬೇಕು. ಆದರೆ ಹೀಗೆ ಹಣದ ಮರುಪಾವತಿಯಿಂದ ಅವರ ಸಮಸ್ಯೆಗಳೆಲ್ಲಾ ತೀರಿಹೋಗಿಬಿಡುತ್ತವೆಯೇ ಅಂದರೆ ಖಂಡಿತಾ ಇಲ್ಲ. ಇದು ಹೆಚ್ಚು ವ್ಯಾಪಕವಾದ ಪ್ರಶ್ನೆ. ದೇಶಗಳ ನಡುವಿನ ಅಸಮಾನತೆಯನ್ನು ಕಡಿಮೆ ಮಾಡುವುದಕ್ಕೆ ನಾವು ಜಾಗತಿಕ ಮಟ್ಟದಲ್ಲಿ ವ್ಯವಸ್ಥೆಯನ್ನು ಬದಲಿಸುವ ದಿಸೆಯಲ್ಲಿ ಚಿಂತಿಸಬೇಕು.

ಪಿಕೆಟ್ಟಿ ಒಂದು ಹೆಜ್ಜೆ ಮುಂದೆ ಹೋಗಿ, 'ಪ್ರತಿಯೊಂದು ದೇಶಕ್ಕೂ ಈ ಭೂಮಿಯ ಪ್ರತಿಯೊಬ್ಬ ನಾಗರಿಕನಿಗೂ ಬಹುರಾಷ್ಟ್ರೀಯ ಕಂಪನಿಗಳಿಂದ ಹಾಗೂ ಜಗತ್ತಿನ ಬಿಲಿಯನೇರುಗಳಿಂದ ಸಂಗ್ರಹಿಸಿದ ತೆರಿಗೆಯಲ್ಲಿ ಒಂದು ಪಾಲು ಸಿಗಬೇಕು. ಯಾಕೆಂದರೆ ಪ್ರತಿಯೊಬ್ಬ ಮಾನವನಿಗೂ ಕನಿಷ್ಠ ಆರೋಗ್ಯ, ಶಿಕ್ಷಣ ಹಾಗೂ ಬೆಳವಣಿಗೆಯ ಹಕ್ಕು ಇರಬೇಕು. ಎರಡನೆಯದಾಗಿ, ಬಡದೇಶಗಳು ಇಲ್ಲದೇ ಹೋಗಿದ್ದರೆ ಶ್ರೀಮಂತ ದೇಶಗಳಿಗೆ ಸಂಪತ್ತನ್ನು ಪೇರಿಸಿಕೊಳ್ಳಲು ಸಾಧ್ಯವೇ ಆಗುತ್ತಿರಲಿಲ್ಲ. ಅದು ಸಾಧ್ಯವಾಗಿದ್ದೇ ಅಂತರರಾಷ್ಟ್ರೀಯ ಶ್ರಮ ವಿಭಜನೆ ಹಾಗೂ ಜಾಗತಿಕವಾಗಿ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲದ ಲೂಟಿಯಿಂದ. ಜಗತ್ತಿನಲ್ಲಿ ಸಂಪತ್ತಿನ ಕ್ರೋಡೀಕರಣ ಸಾಧ್ಯವಾಗಿದ್ದು ಒಂದು ಅಂತರರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಿಂದ. ಹಾಗಾಗಿ ನ್ಯಾಯದ ಪ್ರಶ್ನೆಯೂ ಅಂತರರಾಷ್ಟ್ರೀಯ ಮಟ್ಟದಲ್ಲೇ ನಿರ್ಧಾರವಾಗಬೇಕು'.

ಚುರುಮುರಿ

ರೋಣಗಲ್ ರಾಜಕೀಯ!

• ತುರುವೇಕೆರೆ ಪ್ರಸಾದ್

ಮಹಾನ್ ನೇತಾರ ಗುಳಕಯ್ಯನವರ ಕಟ್ಟಾ ಅನುಯಾಯಿ ಗುಂಡ್ಲಿಂಗ ಧಣಿಗಳ ಮುಂದೆ ಕುಕ್ಕರಿಸಿದ್ದ: 'ಅಣ್ಣ, ಲೋಕಣ್ಣ ಹಟ್ಟಿ ಹಟ್ಟಿಗೋಗಿ ರೊಟ್ಟಿ ತಿನ್ಕಂಡು ವಾಸ್ತವ್ಯದ ಮೇಲೆ ವಾಸ್ತವ್ಯ ಮಾಡ್ತಾವ್ರೆ'.

'ಮಾಡ್ಲಿ ಬುಡ್ಲಾ, ಮನ್ಯಾಗೆ ಎಂಡ್ರು, ಮಕ್ಕಳ ಜೊತೆ ಏನೋ ಸಮಸ್ಯೆ ಇರ್ಬೇಕು. ಅದಕ್ಕೇ ಮನೆ, ಬಿಟ್ಟು ಊರೂರು ಅಲೀತಾವ್ನೆ'.

'ಅಂಗಲ್ಲಣ್ಣ, ಓದ್ ಓದ್ ಕಡೆ ಎಲ್ಲಾ ಜನ್ರಿಗೆ ಮನೆ ಕಟ್ಕಳಕ್ಕೆ ಅಕ್ಕುಪತ್ರ ಕೊಡುಸ್ತಾವ್ರೆ'.

'ಕೊಡುಸ್ಲಿ ಬುಡ್ಲಾ, ಅವನು ಅಕ್ಕುಪತ್ರ ಕೊಡ್ಲಿ... ನಾವು ಮನೆ ಕಟ್ಟುಸ್‌ಕೊಟ್ರಾಯ್ತು'.

'ಕೆಲವರಿಗೆ ಮನೆನೂ ಕಟ್ಟಿಕೊಟ್ಟವ್ರಂತೆ'.

'ಹೌದೇನ್ಲಾ? ಅದ್ನ ಅಡ ಇಡ್ಸಿ ಸಾಲ ಕೊಡ್ಸಣ. ನಮ್ ಸರ್ಕಾರ ಬಂದಾಗ ಮನ್ನಾ ಮಾಡ್ಸಣ'.

'ಓದ್ ಕಡೆಲೆಲ್ಲಾ ಮೈಲಿಗಟ್ಲೆ ರಸ್ತೆ ಮಾಡುಸ್ತಾವ್ರಂತೆ ಕಣಣ್ಣೋ'.

'ಮಾಡುಸ್ಲಿ ಬುಡ್ಲಾ? ಅದೇನ್ ಹೈವೇನೇನ್ಲಾ? ಮುಂದಿನ ಮಳೆಗಾಲಕ್ಕೆ ಕಿತ್ ಬತ್ತದೆ. ಆಗ್ ಓಗಿ ನಾವು ಗುಂಡಿ ತುಂಬ್ಸಿ ರಿಪೇರಿ ಮಾಡ್ಸುದ್ರಾಯ್ತು. ಕೆಲಸನೂ ಆಯ್ತುದೆ, ಕಮಿಷನ್ನೂ ಬತ್ತದೆ'.

'ಅದ್ಯಾವುದೋ ಕಾಡಲ್ಲಿದ್ ಜನಕ್ಕೆ ಬಗರ್‌ಹುಕುಂ ಜಮೀನ್ನ ಅವರ ಹೆಸರಿಗೇ ಮಾಡಿಸಿಕೊಟ್ಟವ್ರಂತೆ'.

'ಒಳ್ಳೇದೇ ಆಯ್ತಲ್ಲೋ... ಅದನ್ನ ನಾವು ಆರಕ್ಕೆ ಮೂರರಂಗೆ ದುಡ್ ಕೊಟ್ಟು ತಗಂಡು ಲೇಔಟೋ ರೆಸಾರ್ಟೋ ಮಾಡ್ಬಹುದಲ್ಲೋ...'

'ಏನಣ್ಣ ನೀನು? ನಾನು ಈಟೆಲ್ಲಾ ಯೋಳುದ್ರೂ ನೀ ತಲೆನೇ ಕೆಡಿಸ್ಕಳ್ದಂಗೆ ಕುಂತಿದೀರಿ. ಎಲೆಕ್ಷನ್ ಕತ್ತಿ ತಲೆ ಮ್ಯಾಗೆ ತೂಗಾಡ್ತೈತೆ. ಇಂತ ಟೈಮಲ್ಲೂ ಆಕ್ಸಾಲನಾ? ಇಂಗಾದ್ರೆ ನೀವು ಬಾಯಿಗೆ ಮಣ್ಣಾಕ್ಕಂಡಂಗೇಯ!'

'ಅಯ್ಯೋ ಗುಲ್ಡು ನನ್ ಮಗನೇ, ಹಟ್ಟಿಲಿ ರೊಟ್ಟಿ ಕಡುದ್‌ಬಿಟ್ರೆ ವೋಟ್ ಆಯ್ತುದೇನ್ಲಾ? ಏನ್ ಕೊಟ್ರೇನ್ಲಾ? ಜನ ಎಲಕ್ಷನ್ ಹಿಂದಿನ ದಿನ ಕೊಡೋ ಪ್ಯಾಕೆಟ್ಟು, ಗಿಫ್ಟು ಮಾತ್ರನೇ ಕಣ್ಲಾ ನೆನಪಿಟ್ಕಳಾದು. ಅವನು ಅಲ್ಲಿ ಓಗಿ ಕುಂತವ್ನೆ... ನಾನು ಕ್ಷೇತ್ರದಲ್ಲೇ ಗೂಟ ಒಡ್ಕಂಡು ಕುಂತಿವ್ನಿ. ತಿರುಗೋ ರೋಣಗಲ್ಲಿಗೆ ಏನೂ ಮೆತ್ಕಳಕಿಲ್ಲ ಕಣ್ಲಾ? ಅದು ತಿರುಗಿ ಕಾಳು ಉದುರುಸ್ತದೆ. ನಾವು ಗುಡ್ಡೆ ಮಾಡ್ಕಂಡು ತಿಂತೀವಿ, ಎಂಗೆ?' ಗುಳಕಯ್ಯನವರು ನಕ್ಕರು.

ಸಂಗತ

ಕಲಿಕೆಯಲ್ಲಿ ಚೇತರಿಕೆ ಎಂದು?

ನಿರ್ದಿಷ್ಟ ಕಲಿಕಾ ಸಾಮರ್ಥ್ಯದ ಕೊರತೆ ಇರುವ ಮಕ್ಕಳಲ್ಲಿ ಬೇರೆ ಯಾವ ಬಗೆಯ ಸಾಮರ್ಥ್ಯಗಳಿವೆ ಎನ್ನುವುದನ್ನು ಸಕಾರಾತ್ಮಕವಾಗಿ ಅರಿಯಲು ಪ್ರಯತ್ನಿಸಬೇಕು

• ಡಾ. ಕೆ.ಎಸ್.ಶುಭ್ರತಾ

'ಕರ್ನಾಟಕದಲ್ಲಿ ಮೂರನೇ ತರಗತಿಯ ಶೇಕಡ 9ರಷ್ಟು ಮಕ್ಕಳು ಮಾತ್ರ ಎರಡನೇ ತರಗತಿಯ ಪುಸ್ತಕಗಳನ್ನು ಓದಬಲ್ಲರು!' ಈ ಆಘಾತಕಾರಿ ವಿಷಯವನ್ನು ಬಯಲು ಮಾಡಿರುವುದು, ಪ್ರಥಮ್ ಸಂಸ್ಥೆಯ ಎಎಸ್‌ಇಆರ್ ಕೇಂದ್ರ ನಡೆಸುವ ರಾಷ್ಟ್ರ ಮಟ್ಟದ ಶಿಕ್ಷಣ ಸಮೀಕ್ಷೆಯ ವರದಿ. ಕೋವಿಡ್‌ನಿಂದಾಗಿ ಕೆಲವು ವರ್ಷಗಳಿಂದ ಸ್ಥಗಿತಗೊಂಡಿದ್ದ ಈ ಸಮೀಕ್ಷೆಯನ್ನು ಈಗ ಮತ್ತೆ ಕೈಗೊಳ್ಳಲಾಗಿದೆ.

2018ರಲ್ಲಿ ನಡೆದ ಸಮೀಕ್ಷೆಯಲ್ಲಿ, ಈ ಸಂಖ್ಯೆ ಶೇ 19 ಇದ್ದರೆ, ಈ ವರ್ಷ ಇದು ಶೇ 9ಕ್ಕೆ ಇಳಿದಿರುವುದು ನಮ್ಮೆಲ್ಲರನ್ನೂ ಚಿಂತೆಗೆ ಹಚ್ಚಬೇಕು. ಶಿಕ್ಷಣ ಇಲಾಖೆಯೇನೋ ತಾನು 'ಕಲಿಕಾ ಚೇತರಿಕೆ' ಕಾರ್ಯಕ್ರಮ ಜಾರಿಗೆ ತಂದಿಲ್ಲದಿದ್ದರೆ ಇಂತಹ ಸ್ಥಿತಿ ಮತ್ತಷ್ಟು ಚಿಂತಾಜನಕವಾಗುತ್ತಿತ್ತು ಎಂದು ಸಮರ್ಥಿಸಿಕೊಳ್ಳುತ್ತಿದೆ. ಆದರೂ ಮಕ್ಕಳೊಂದಿಗೆ ಕೆಲಸ ಮಾಡುವ ಮನೋವೈದ್ಯೆಯಾಗಿ, ನನ್ನ ಅಭಿಪ್ರಾಯದಲ್ಲಿ, ಇದು ಮಕ್ಕಳ ಕಲಿಕಾ ಸಮಸ್ಯೆಗಳ ಬಗ್ಗೆ ಮತ್ತಷ್ಟು ಗಮನಹರಿಸಲು ಮತ್ತು ಪರಿಹಾರ ಹುಡುಕಲು ಒದಗಿರುವ ಸದವಕಾಶ.

ದೃಷ್ಟಿದೋಷ, ಅತೀ ಚಟುವಟಿಕೆ, ನಿರ್ದಿಷ್ಟ ಕಲಿಕಾ ಸಾಮರ್ಥ್ಯದ ಕೊರತೆ... ಹೀಗೆ ಬೇರೆ ಬೇರೆ ಕಾರಣಗಳಿಗೆ ಕಲಿಕಾ ಸಮಸ್ಯೆಗಳು ಉಂಟಾಗಬಹುದು. ಅವುಗಳನ್ನು ಗುರುತಿಸುವುದು ಮುಖ್ಯ. ಚಿಕಿತ್ಸೆಯ ಅಗತ್ಯವಿದ್ದರೆ ಪಡೆಯಬೇಕು. ನಿಯಮಿತವಾದ ಕಣ್ಣಿನ ಪರೀಕ್ಷೆಯಿಂದ ದೃಷ್ಟಿದೋಷ ಪತ್ತೆ ಹಚ್ಚಬಹುದು. ಅತೀ ಚಟುವಟಿಕೆ ಇರುವ ಮಕ್ಕಳಿಗೆ ಏಕಾಗ್ರತೆ ಇಲ್ಲದಿರುವುದರಿಂದ, ಕಲಿಕೆಯಲ್ಲಿ ತೊಂದರೆ ಉಂಟಾಗುತ್ತದೆ. ಇದನ್ನು ಗುರುತಿಸಿ ಅಂತಹ ಮಕ್ಕಳನ್ನು ಶಿಕ್ಷಕರು ತಮ್ಮ ಬಳಿ ಕೂರಿಸಿಕೊಳ್ಳಬೇಕು. ಅವರ ಗಮನವನ್ನು ಬೇರೆಡೆ ಸೆಳೆಯುವ ಯಾವುದೇ ವಸ್ತುಗಳನ್ನು ಇರಿಸಬಾರದು. ಪಾಠಗಳನ್ನು ಪುಟ್ಟ ಪುಟ್ಟ ಭಾಗಗಳಾಗಿ ವಿಂಗಡಿಸಿ ಹೇಳಿಕೊಡಬೇಕು.

ಇನ್ನು 'ನಿರ್ದಿಷ್ಟ ಕಲಿಕಾ ಸಾಮರ್ಥ್ಯದ ಕೊರತೆ'ಯ ಬಗ್ಗೆ ಅರಿವು ಬಹಳ ಕಡಿಮೆ. ಡಿಸ್‌ಲೆಕ್ಸಿಯ ಅಥವಾ ನಿರ್ದಿಷ್ಟ ಕಲಿಕಾ ಅಸಾಮರ್ಥ್ಯ ಎಂದು ಕರೆಯುವ ಈ ಮಿದುಳಿನ ಬೆಳವಣಿಗೆಯ ಸಮಸ್ಯೆಯಲ್ಲಿ ಮಕ್ಕಳಿಗೆ ಓದಲು ಬಾರದಿರಬಹುದು. ಅದರಿಂದಾಗಿ ಕಲಿಕೆಯಲ್ಲಿ ಬಹಳ ಹಿಂದಿರುತ್ತಾರೆ. ಅಕ್ಷರಗಳನ್ನು ಸರಿಯಾಗಿ ಗುರುತಿಸಲಾಗದು. ಓದಲಿಕ್ಕೇ ಬಾರದಿದ್ದ ಮೇಲೆ ಅರ್ಥ ಮಾಡಿಕೊಳ್ಳುವುದು, ನೆನಪಿಡುವುದು, ಪರೀಕ್ಷೆಯಲ್ಲಿ ಉತ್ತರಿಸುವುದು, ಅಂಕ ಗಳಿಸುವುದು ಸಾಧ್ಯವೇ? ಆತ್ಮವಿಶ್ವಾಸ ಕುಗ್ಗಿ, ಮಂಕಾಗಿರುವ ಈ ಮಕ್ಕಳನ್ನು ಹೆಚ್ಚಿನವರು ಮತ್ತಷ್ಟು ಬೈದು, ಅವರು ಅಂತರ್ಮುಖಿಗಳಾಗುವಂತೆ ಮಾಡುತ್ತಾರೆ. ಓದುವುದೇ ಹೀಗಾದರೆ, ಬರೆಯುವುದರಲ್ಲಂತೂ ಹೆಚ್ಚಿನ ಸಮಸ್ಯೆಗಳಿರಬಹುದು. ಕೆಲವರಿಗೆ ಓದುವುದಕ್ಕೆ ಚೆನ್ನಾಗಿ ಬಂದರೂ ಬರೆಯುವುದಕ್ಕೆ ಬರುವುದಿಲ್ಲ.

ಪೋಷಕರು, ಶಿಕ್ಷಕರು ಈ ಸಮಸ್ಯೆಯನ್ನು ಬೇಗ ಗುರುತಿಸಿದಷ್ಟೂ ಒಳ್ಳೆಯದು. ಒಬ್ಬ ಸಹೃದಯಿ ವ್ಯಕ್ತಿ, ಈ ಮಗುವಿನೊಂದಿಗೆ ಕುಳಿತು ಪ್ರತಿದಿನ ಒಂದೆರಡು ಗಂಟೆಗಳ ಕಾಲ ಪ್ರೀತಿಯಿಂದ ಅರ್ಥವಾಗುವ ರೀತಿ ಕಲಿಸಬೇಕಾದ ಅವಶ್ಯಕತೆ ಇದೆ. ಆ ವ್ಯಕ್ತಿ ಪೋಷಕರೇ ಆಗಬಹುದು ಅಥವಾ ಶಿಕ್ಷಕರು ಅಥವಾ ಮನೆಯ ಬಳಿಯಲ್ಲಿ ಇರುವ, ಈ ಮಗುವಿಗಿಂತ ದೊಡ್ಡವರಾದ ವಿದ್ಯಾರ್ಥಿಗಳೂ ಆಗಬಹುದು. ಮಗುವಿನ ಮಟ್ಟಕ್ಕೇ ಇಳಿದು, ಕಲಿಸಬೇಕಾದ ಅಗತ್ಯವಿದೆ. ವಾಕ್ಯಗಳನ್ನು ಓದುವುದಕ್ಕೆ ಶ್ರಮಪಡುವ ಮಗುವಿಗೆ, ಅಕ್ಷರಗಳನ್ನು ಕೂಡಿಸಿ ಓದಲು ಹೇಳಿಕೊಡಬೇಕು. ಈ ತರಬೇತಿಗೆ ಒಂದೆರಡು ವರ್ಷಗಳೇ ಹಿಡಿಯಬಹುದು. ಕಲಿಸುವ ರೀತಿಯಲ್ಲಿ ಸೃಜನಾತ್ಮಕವಾದ, ಕುತೂಹಲ ಹುಟ್ಟಿಸುವ ತಂತ್ರಗಳನ್ನು ತರಬೇಕು. ಮನೋವೈದ್ಯರು ಅಥವಾ ಮನಃಶಾಸ್ತ್ರಜ್ಞರ ಸಲಹೆ ಪಡೆಯಬೇಕು.

ವಿದ್ಯಾವಂತ ಪೋಷಕರಾದರೆ, ಈ ನಿರ್ದಿಷ್ಟ ಕಲಿಕಾ ತೊಂದರೆಯ ವಿಶೇಷ ತರಬೇತಿಯ ಶಿಕ್ಷಣವನ್ನು ಅಲ್ಪಾವಧಿ ಕೋರ್ಸ್‌ಗಳ ಮೂಲಕ ಪಡೆಯಬಹುದು. ಬೆಂಗಳೂರಿನ ಸ್ಪ್ಯಾಸ್ಟಿಕ್ ಸೊಸೈಟಿ ಆಫ್ ಇಂಡಿಯಾದಂತಹ ಸಂಸ್ಥೆಗಳು ಇಂತಹ ಕೋರ್ಸ್‌ಗಳನ್ನು ನಡೆಸುತ್ತವೆ.

ಈಗಾಗಲೇ ಪ್ರೌಢಶಾಲೆಗಳಲ್ಲಿದ್ದರೆ ಕೆಲವು ಬಾರಿ ಮಕ್ಕಳು ಎಂಟು, ಒಂಬತ್ತನೆಯ ತರಗತಿಗೆ ಬಂದ ಮೇಲೆ ಈ ಸಮಸ್ಯೆಯು ಅರಿವಿಗೆ ಬರುತ್ತದೆ. ಆಗ ಈ ವಿಶೇಷ ತರಬೇತಿಯೊಂದಿಗೆ, ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆ, ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಂತಹ ಕಡೆಗಳಿಂದ ಡಿಸ್ಲೆಕ್ಸಿಯಾ ಕುರಿತು ಪ್ರಮಾಣಪತ್ರ ಪಡೆದು, ಸರ್ಕಾರ ಈ ಮಕ್ಕಳಿಗೆ ನೀಡಿರುವ ವಿಶೇಷ ಸವಲತ್ತುಗಳನ್ನು 10ನೇ ತರಗತಿ ಪರೀಕ್ಷೆಯಲ್ಲಿ ಉಪಯೋಗಿಸಿಕೊಳ್ಳಬಹುದು.

ಒಂದು ಮಗುವಿಗೆ ನಿರ್ದಿಷ್ಟ ಕಲಿಕಾ ಸಾಮರ್ಥ್ಯದ ಕೊರತೆ ಇದೆ ಅಂದುಕೊಳ್ಳೋಣ. ಆ ಮಗುವಿಗೆ ಈ ನ್ಯೂನತೆ ಬಿಟ್ಟರೆ ಬೇರೆ ಯಾವ ಬಗೆಯ ಸಾಮರ್ಥ್ಯಗಳಿವೆ ಎನ್ನುವುದನ್ನು ಸಕಾರಾತ್ಮಕವಾಗಿ ಅರಿಯಲು ಪ್ರಯತ್ನಿಸಬೇಕು. ಮಗುವಿಗೆ ಕಲೆಗಳಲ್ಲಿ ಆಸಕ್ತಿ ಮತ್ತು ಹೆಚ್ಚಿನ ಸಾಮರ್ಥ್ಯ ಇರಬಹುದೇ? ಅಥವಾ ಪರಸ್ಪರ ಸಂವಹಿಸುವ ಕೌಶಲ ಇದೆಯೇ? ನಿರ್ವಹಣಾ ಸಾಮರ್ಥ್ಯ ಚೆನ್ನಾಗಿದೆಯೇ ಎಂದು ನಾವು ಪ್ರಶ್ನಿಸಿಕೊಳ್ಳಬೇಕು.

ಶಾಲೆಯ ಪಾಠದ ಅಭ್ಯಾಸವನ್ನು ಹತ್ತನೇ ತರಗತಿಯ ತನಕವಾದರೂ ಮಾಡಲೇಬೇಕಾದ ಅಗತ್ಯವಿದೆ ನಿಜ, ಆದರೆ ಅದರ ನಂತರವಾದರೂ ಈ ಮಕ್ಕಳಿಗೆ ಅವರ ಸಾಮರ್ಥ್ಯದ ಮೇರೆಗೆ, ಬೇರೆ ಬೇರೆ ಕಾರ್ಯಕ್ಷೇತ್ರಗಳನ್ನು ಆರಿಸಿಕೊಳ್ಳುವ ಆಯ್ಕೆಗಳನ್ನು ಕೊಡಬೇಕು. ಆಗ ಅವರು ಜೀವನದಲ್ಲಿ ಯಶಸ್ಸು ಗಳಿಸುವುದು ಖಂಡಿತ.

ವಾಚಕರ ವಾಣಿ

ಕೈದಿಗಳ ವಿಜೃಂಭಣೆ ನಿಲ್ಲಲಿ

ರಾಮನಗರ ಜೈಲಿನಲ್ಲಿ ಕೈದಿಗಳು ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿಕೊಂಡಿರುವ ವಿಷಯವನ್ನು ಮಾಧ್ಯಮಗಳಿಂದ ತಿಳಿದು ದಿಗ್ಭ್ರಮೆ ಹಾಗೂ ವಿಸ್ಮಯವಾಯಿತು. 70ರ ದಶಕದಲ್ಲಿ ರೌಡಿಗಳ ವಿಜೃಂಭಣೆಯನ್ನು ನೋಡಿದ್ದೇವೆ ಹಾಗೂ ಕೇಳಿದ್ದೇವೆ. ಅದು ಮರುಕಳಿಸುವ ಸೂಚನೆ ಇದರಿಂದ ಸಿಗುತ್ತಿದೆ. ಇದರಿಂದಾಗಿ ಜೈಲುಗಳು ಎತ್ತ ಸಾಗುತ್ತಿವೆ ಎಂಬ ಪ್ರಶ್ನೆ ಮೂಡುತ್ತದೆ.

ಡಾ. ಗೋವಿಂದಸ್ವಾಮಿ ನಾಯಕ್, ಅಮ್ಮನಪುರ

'ಉದ್ಯೋಗ ಲಕ್ಷ್ಮಿ' ಭರವಸೆ ನೀಡಬಾರದೇ?

ಮುಂಬರುವ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ರಾಜಕೀಯ ಪಕ್ಷಗಳು ಮಹಿಳೆಯರ ಮನವೊಲಿಸುವ ಕೆಲಸದಲ್ಲಿ ತೊಡಗಿವೆ. ಅವರಿಗೆ ಕೊಡುಗೆಗಳನ್ನು ನೀಡಲು ಮುಂದಾಗಿವೆ. ಇದಕ್ಕೆ ಬದಲಾಗಿ ಪ್ರತೀ ಕುಟುಂಬಕ್ಕೆ ಒಬ್ಬ ಉದ್ಯೋಗ ಲಕ್ಷ್ಮಿ ಅಥವಾ ಉದ್ಯೋಗ ಪುರುಷನನ್ನು ಹುಟ್ಟುಹಾಕುವಂಥ ಭರವಸೆಗಳನ್ನು ಪಕ್ಷಗಳು ನೀಡಬೇಕು. ಗೃಹಲಕ್ಷ್ಮಿಗೆ ಕೊಟ್ಟ ಹಣ ಖರ್ಚಾಗಬಹುದು, ಅದೇ ಉದ್ಯೋಗ ಕೊಟ್ಟಿದ್ದು ವರವಾಗಬಹುದು. ಈ ದಿಸೆಯಲ್ಲಿ ಪಕ್ಷಗಳು ಯೋಚಿಸುವಂತಾಗಲಿ.

ರವಿ ಹೊಟ್ಟೂರ, ಹಾನಗಲ್

ಕಡತಗಳಲ್ಲಿ 'ಬಂದಿ'ಯಾದ ಕನಕ

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮೂಲಕ ಕನಕದಾಸರ ಸಮಗ್ರ ಸಾಹಿತ್ಯವನ್ನು ದೇಶದ 14 ಭಾಷೆಗಳಿಗೆ ಅನುವಾದ ಮಾಡುವ ಯೋಜನೆಯನ್ನು 2014ರಲ್ಲಿ ರಾಜ್ಯ ಸರ್ಕಾರ ಕೈಗೊಂಡಿತ್ತು. ಆ ಯೋಜನೆಯ ಪ್ರಕಾರ, 14 ಭಾಷೆಗಳಲ್ಲಿರುವ ಅನುವಾದಕರನ್ನು ಒಟ್ಟು ಸೇರಿಸಿ, ಒಂದೊಂದು ಭಾಷೆಗೆ ಒಬ್ಬರು ಪ್ರಧಾನ ಸಂಪಾದಕರನ್ನು ನೇಮಿಸಲಾಯಿತು. ಆದಷ್ಟು ಬೇಗ ಅನುವಾದ ಕಾರ್ಯ ಪೂರ್ಣಗೊಳಿಸುವಂತೆ ಸರ್ಕಾರ ಒತ್ತಾಯಪಡಿಸಿತು. ಈ ಮಧ್ಯೆ ಮಂಗಳೂರು, ಬೆಂಗಳೂರಿನಲ್ಲಿ ಅನುವಾದಕರಿಗೆ ಕಮ್ಮಟಗಳನ್ನು ನಡೆಸಲಾಯಿತು. ನಾನು ತುಳು ಭಾಷೆಯ ಅನುವಾದಕನಾಗಿ ಕೆಲಸ ಮಾಡಿದ್ದೇನೆ. ಬಹಳ ಶ್ರದ್ಧೆ ಮತ್ತು ಪ್ರಾಮಾಣಿಕವಾಗಿ ದುಡಿದ ಅನುವಾದಕರ ತಂಡ, 2018ರಲ್ಲಿ ಎಲ್ಲಾ ಭಾಷೆಗಳ ಅನುವಾದವನ್ನು ಪೂರ್ಣಗೊಳಿಸಿ, ಅದನ್ನು ಸರ್ಕಾರಕ್ಕೆ ಸಲ್ಲಿಸಿತು. ಅದೇ ವರ್ಷ ಅದನ್ನು ಟೆಂಡರ್ ಕರೆದು ಮುದ್ರಣಕ್ಕೆ ನೀಡಲಾಯಿತು ಎಂಬ ವಿವರಗಳು ಬಂದವು.

ಈ ಮಧ್ಯೆ, ಆಡಳಿತದ ಚುಕ್ಕಾಣಿ ಹಿಡಿದ ಪಕ್ಷ ಬದಲಾಯಿತು. ಹೊಸ ಮುಖ್ಯಮಂತ್ರಿ, ಸಂಸ್ಕೃತಿ ಸಚಿವರು, ಕಾರ್ಯದರ್ಶಿಗಳು ಬಂದರು. ಅನುವಾದಕರ ನಾಲ್ಕು ವರ್ಷಗಳ ಶ್ರಮ ವ್ಯರ್ಥವಾಗಿ ಬಿದ್ದಿದೆ. ಆಮೇಲೆ ಬೇರೆ ಬೇರೆ ಮಂತ್ರಿಗಳಿಗೆ ಬೇಕಾದಂತೆ ಅದರ ಪ್ರಸ್ತಾವನೆಯ ಭಾಗವನ್ನು ನಾಲ್ಕು ಬಾರಿ ಪರಿಷ್ಕರಣೆ ಮಾಡಲಾಗಿದೆ. ಇಷ್ಟೆಲ್ಲ ಆದರೂ ಕನಕನ ಸಮಗ್ರ ಸಾಹಿತ್ಯದ ಅನುವಾದ ಯೋಜನೆಗೆ ಮುಕ್ತಿ ದೊರೆತಿಲ್ಲ. ಎಲ್ಲ ಅನುವಾದಕರಿಗೂ ಡಿಟಿಪಿ ಮಾಡಿದವರಿಗೂ ಹಣ ಪೂರ್ಣವಾಗಿ ಸಂದಾಯವಾಗಿಲ್ಲ. ಸರ್ಕಾರದ ಹಣ ಮತ್ತು ಸುಮಾರು ಎಂಬತ್ತು ಅನುವಾದಕರ ನಾಲ್ಕು ವರ್ಷಗಳ ಶ್ರಮ ವ್ಯರ್ಥವಾಗದಂತೆ ಸರ್ಕಾರ ಮನಸ್ಸು ಮಾಡಬೇಕಾಗಿದೆ. ಈ ಯೋಜನೆಯನ್ನು ರಾಜಕೀಯಗೊಳಿಸದೆ, ಕನ್ನಡನಾಡಿನ ಶ್ರೇಷ್ಠ ಸಂತಕವಿಯ ಸಾಧನೆಯನ್ನು 14 ಭಾಷೆಗಳಿಗೆ ವಿಸ್ತರಿಸಬೇಕಾಗಿದೆ. ಈ ಸಾಂಸ್ಕೃತಿಕ ಜವಾಬ್ದಾರಿಯನ್ನು ಕಡೆಗಣಿಸಿದರೆ ಅದು ಕನಕನಿಗೆ ತೋರುವ ಅಗೌರವವಾಗುತ್ತದೆ.

ಟಿ.ಎ.ಎನ್. ಖಂಡಿಗೆ, ಮೂಡುಬಿದಿರೆ

ಡಿಜಿಟಲ್ ವ್ಯವಹಾರಕ್ಕೂ ಶುಲ್ಕ!

ನಾಗರಿಕರು ಕರೆನ್ಸಿ ನೋಟುಗಳ ಬಳಕೆಯನ್ನು ಕಡಿಮೆ ಮಾಡಲು ಹಾಗೂ ರೂಪೆ ಡೆಬಿಟ್ ಕಾರ್ಡ್, ಯುಪಿಐ ವಹಿವಾಟಿಗೆ ಉತ್ತೇಜನ ನೀಡಲು ಕೇಂದ್ರ ಸರ್ಕಾರವು ₹ 2,600 ಕೋಟಿ ವಿನಿಯೋಗಿಸುತ್ತಿರುವ ಮಾಹಿತಿ ಮಾಧ್ಯಮಗಳಲ್ಲಿ ವರದಿಯಾಗಿದೆ. ಡಿಜಿಟಲ್ ರೂಪದಲ್ಲಿ ವ್ಯವಹರಿಸುವುದಕ್ಕೆ ಪ್ರೋತ್ಸಾಹ ನೀಡುವ ಉದ್ದೇಶವು ಇದರ ಹಿಂದೆ ಇದೆ. ಈ ಮೊದಲು ಕ್ರೆಡಿಟ್ ಕಾರ್ಡ್‌ಗಳ ಮೂಲಕ ಇಂಧನ ವೆಚ್ಚವನ್ನು ಭರಿಸಿದಾಗ ಗ್ರಾಹಕರಿಗೆ ಲಾಭವಾಗುತ್ತಿತ್ತು. ನಂತರದಲ್ಲಿ ಕ್ರೆಡಿಟ್ ಕಾರ್ಡ್‌ಗಳ ಮೂಲಕ ಪಾವತಿಸಿದಲ್ಲಿ, ಗ್ರಾಹಕರು ಹೆಚ್ಚುವರಿ ಶುಲ್ಕ ಭರಿಸುವ ಪ್ರಕ್ರಿಯೆ ಆರಂಭಿಸಲಾಯಿತು. ಕ್ರೆಡಿಟ್ ಕಾರ್ಡ್‌ಗಳ ವ್ಯವಹಾರಕ್ಕೆ ಶುಲ್ಕ ವಿಧಿಸುವುದು ಸ್ವಲ್ಪಮಟ್ಟಿಗೆ ಸಮರ್ಥನೀಯವೆನಿಸಿದರೂ, ಇತ್ತೀಚೆಗೆ ಡೆಬಿಟ್ ಕಾರ್ಡ್ ಮೂಲಕ ನಮ್ಮದೇ ದುಡ್ಡನ್ನು ಇಂಧನ ಭರ್ತಿಗೆ ಬಳಸಿದರೂ ಬ್ಯಾಂಕ್‌ವೊಂದು ಶುಲ್ಕ ವಿಧಿಸುತ್ತಿದೆ. ಇಂಧನ ವೆಚ್ಚವಾಗಿ ₹4,000 ಪಾವತಿಸಿದ್ದಕ್ಕೆ ₹ 37.40 ಶುಲ್ಕ ಆಕರಿಸಲಾಗಿದೆ. ಬ್ಯಾಂಕ್‌ನಲ್ಲಿ ಕೇಳಿದರೆ, ಇಂಧನ ಕಂಪನಿಯವರ ಕಡೆ ಕೈತೋರಿಸುತ್ತಾರೆ. ಕನಿಷ್ಠಪಕ್ಷ ಡೆಬಿಟ್ ಕಾರ್ಡ್ ಪಾವತಿಗಳನ್ನಾದರೂ ಶುಲ್ಕರಹಿತವಾಗಿಸಲು ಎಲ್ಲ ಬ್ಯಾಂಕ್‌ಗಳಿಗೆ ಆರ್‌ಬಿಐ ಸೂಚನೆ ನೀಡಲಿ.

ಡಾ. ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಅಪ್ರಾಮಾಣಿಕತೆಯ ಆಗರ, ಪ್ರಾಮಾಣಿಕ ನುಡಿ!

'ನಾನು ನನ್ನ ಜೀವನದಲ್ಲಿ 99 ಪರ್ಸೆಂಟ್ ಅಲ್ಲ, ಒಂದು ಪರ್ಸೆಂಟ್ ಪ್ರಾಮಾಣಿಕನಾಗಿದ್ದೇನೆ' ಎಂದು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಜ. 19). ಒಂದು ಪರ್ಸೆಂಟ್ ಮಾತ್ರ ಪ್ರಾಮಾಣಿಕ ಎಂಬ ಮಾತನ್ನು ಸಚಿವರು ಪ್ರಾಮಾಣಿಕವಾಗಿ ಹೇಳಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆ. ಅಂದರೆ ಅದರ ಮತ್ತೊಂದು ಅರ್ಥ ತಾನು ಶೇ 99ರಷ್ಟು ಅಪ್ರಾಮಾಣಿಕ ಎಂದೇ ಆಗುತ್ತದೆ. ಪ್ರಾಮಾಣಿಕತನದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬೇಕೇ ವಿನಾ ಹೇಳಿಕೆ ನೀಡುವುದಕ್ಕೆ ಸೀಮಿತಗೊಳ್ಳಬಾರದು.

ಶೇ 99ರಷ್ಟು ಅಪ್ರಾಮಾಣಿಕತೆ ಇರುವವರನ್ನು ಜನರು ತಮ್ಮ ಸೇವೆಗಾಗಿ ಆರಿಸಿದ ಅಥವಾ ಆರಿಸುವ ದುರ್ದೈವ ಒದಗಿರುವುದು ದುರಂತವೇ ಹೌದು. ಪ್ರಾಮಾಣಿಕತನದ ಪ್ರಮಾಣಕ್ಕೆ ಒಂದು ಪರ್ಸೆಂಟ್ ಅಪ್ರಾಮಾಣಿಕತೆ ಸೇರಿದರೆ ಎಲ್ಲವೂ ಕೆಟ್ಟಂತೆ. ಕುಡಿವ ಹಾಲಿಗೆ ತೊಟ್ಟು ವಿಷ ಬೆರೆತರೂ ಸೇವಿಸಲು ಆಗದು. ಅಂತೆಯೇ ಇದು ಸಹ. ಸಚಿವರು ತಮ್ಮ ಪ್ರಾಮಾಣಿಕತೆಯನ್ನು ನೂರಕ್ಕೆ ನೂರರಷ್ಟು ಏರಿಸಿಕೊಳ್ಳಲಿ ಎಂಬುದಷ್ಟೇ ನಮ್ಮ ನಿರೀಕ್ಷೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಲ್ಲಿ ಕಾರ್ಯಾಂಗದ ಪ್ರಾತಿನಿಧ್ಯ ಇರಬೇಕೇ?

ನ್ಯಾಯಮೂರ್ತಿ ನೇಮಕಕ್ಕೆ ನ್ಯಾಯಮೂರ್ತಿಗಳೇ ಸೂಕ್ತ

ಹೈಕೋರ್ಟ್‌ನ ವಕೀಲರ ಪೈಕಿ ಯಾರಲ್ಲಿ ನ್ಯಾಯಮೂರ್ತಿಯಾಗುವ ಗುಣಗಳು ಇವೆ ಎಂಬುದನ್ನು ನಿರ್ಧರಿಸಲು ಆ ಹೈಕೋರ್ಟ್‌ನ ನ್ಯಾಯಮೂರ್ತಿಯೇ ಅತ್ಯಂತ ಸೂಕ್ತ ವ್ಯಕ್ತಿ. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಕೆಲವೇ ನಿಮಿಷಗಳಲ್ಲಿ ಅಥವಾ ತಾಸುಗಳಲ್ಲಿ ತಿಳಿದುಕೊಳ್ಳುವುದಕ್ಕೂ ಸಾಧ್ಯವಿಲ್ಲ. ಆ ವಕೀಲರ ಜೊತೆಗೆ ಕೆಲವು ಕಾಲದಿಂದ ನೇರವಾಗಿ ಸಂವಹನ ಇರುವ ವ್ಯಕ್ತಿಗಳೇ ವಕೀಲರ ಸಾಮರ್ಥ್ಯವನ್ನು ಅಳೆಯಬಲ್ಲರು. ಹಾಗಾಗಿ, ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡಲು ವಕೀಲರು ಕೆಲಸ ಮಾಡುವ ಹೈಕೋರ್ಟ್‌ನ ನ್ಯಾಯಮೂರ್ತಿಗಳಿಗಿಂತ ಅರ್ಹರಾದವರು ಯಾರೂ ಇಲ್ಲ

• ಉದಯ ಹೊಳ್ಳ

ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗೆ ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡುವುದಕ್ಕೆ ಇರುವ ಕೊಲಿಜಿಯಂ ವ್ಯವಸ್ಥೆಯನ್ನು ರದ್ದು ಮಾಡಬೇಕೇ ಮತ್ತು ರಾಷ್ಟ್ರೀಯ ನ್ಯಾಯಾಂಗ ನೇಮಕ ಆಯೋಗವನ್ನು ಅನುಷ್ಠಾನಕ್ಕೆ ತರುವ ಅಗತ್ಯ ಇದೆಯೇ ಎಂಬ ಕುರಿತು ಮುದ್ರಣ ಮಾಧ್ಯಮ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಇತ್ತೀಚೆಗೆ ಜೋರಾಗಿ ಚರ್ಚೆ ನಡೆಯುತ್ತಿದೆ. ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಇರುವ ರಾಜಕೀಯ ವಿಚಾರಗಳ ಕುರಿತು ಚರ್ಚೆ ನಡೆಸಿದರೆ ಅದು ಮುಗಿಯದೆಯೇ ಇರಬಹುದಾದಷ್ಟು ದೀರ್ಘವಾಗಬಹುದು. ಕಾರ್ಯಾಂಗದ ಪಾರಮ್ಯ ಮತ್ತು ನ್ಯಾಯಮೂರ್ತಿಗಳ ಕೊಲಿಜಿಯಂನ ಪಾರಮ್ಯವನ್ನು ತುಲನೆ ಮಾಡಿದರೆ, ಕೊಲಿಜಿಯಂ ಅನ್ನೇ ಎತ್ತಿ ಹಿಡಿಯಬೇಕಾಗುತ್ತದೆ. ವಾಸ್ತವಿಕ ನೆಲೆಗಟ್ಟಿನಿಂದ ನೋಡಿದರೆ ಈಗ ಇರುವ ವ್ಯವಸ್ಥೆಯು ಹೆಚ್ಚು ಸಮಂಜಸವಾದುದು.

ಜೀವನ ಎಷ್ಟು ವೈವಿಧ್ಯಪೂರ್ಣವಾಗಿದೆಯೋ ದಾವೆಗಳು ಕೂಡ ಅಷ್ಟೇ ವೈವಿಧ್ಯಮಯವಾಗಿವೆ. ಹಾಗಾಗಿಯೇ ವಿಶೇಷವಾಗಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನೀಡುವ ತೀರ್ಪುಗಳು ಮತ್ತು ಆದೇಶಗಳು ಸಾಮಾನ್ಯ ಜನರ ಜೀವನದ ಮೇಲೆ ಅಪಾರವಾದ ಪರಿಣಾಮವನ್ನು ಬೀರುತ್ತವೆ. ವೈವಿಧ್ಯಮಯ ಮತ್ತು ಜಟಿಲ ಸ್ವರೂಪದ ವಿವಾದಗಳ ಕುರಿತು ನ್ಯಾಯಮೂರ್ತಿಗಳು ತೀರ್ಪು ನೀಡುತ್ತಾರೆ. ಆದ್ದರಿಂದಲೇ ಪ್ರಾಮಾಣಿಕ, ಬದ್ಧತೆ ಇರುವ ಮತ್ತು ದಕ್ಷ ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡುವುದು ಅಗತ್ಯವಾಗಿದೆ. ನ್ಯಾಯಾಮೂರ್ತಿಗಳಾಗಿ ಯಾರನ್ನು ಆಯ್ಕೆ ಮಾಡಬೇಕು ಎಂಬುದನ್ನು ದಕ್ಷವಾಗಿರುವ ಜನರು ನಿರ್ಧರಿಸಿದಾಗ ಮಾತ್ರ ಇದು ಸಾಧ್ಯ.

1. ಹೈಕೋರ್ಟ್‌ನಲ್ಲಿ ಕನಿಷ್ಠ ಐದು ವರ್ಷ ನ್ಯಾಯಮೂರ್ತಿಯಾಗಿರಬೇಕು ಅಥವಾ ಹೈಕೋರ್ಟ್‌ನಲ್ಲಿ ಕನಿಷ್ಠ 10 ವರ್ಷ ವಕೀಲರಾಗಿರಬೇಕು ಎಂಬುದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕವಾಗಲು ಬೇಕಾದ ಅರ್ಹತೆ. ಹೈಕೋರ್ಟ್‌ನಲ್ಲಿ ಕನಿಷ್ಠ 10 ವರ್ಷ ವಕೀಲರಾಗಿರಬೇಕು ಎಂಬುದು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕವಾಗಲು ಇರಬೇಕಾದ ಅರ್ಹತೆ.

2. ಹಾಗಾಗಿ, ವಕೀಲರು ಅಥವಾ ಈ ಹಿಂದೆ ವಕೀಲರಾಗಿ ಕೆಲಸ ಮಾಡಿದ್ದ ನ್ಯಾಯಮೂರ್ತಿಗಳನ್ನು ಮಾತ್ರ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಕ ಮಾಡಲು ಸಾಧ್ಯವಿದೆ. ಪ್ರಾಮಾಣಿಕತೆ, ಬದ್ಧತೆ ಮತ್ತು ನ್ಯಾಯಮೂರ್ತಿಯಾಗಲು ಬೇಕಾದ ಇತರ ಗುಣಗಳನ್ನು ಹೊಂದಿರುವ ದಕ್ಷ ವಕೀಲರು ಮಾತ್ರ ನ್ಯಾಯಮೂರ್ತಿಯಾಗಿ ನೇಮಕವಾಗಲು ಸೂಕ್ತ ವ್ಯಕ್ತಿಗಳಾಗಿದ್ದಾರೆ.

ವಕೀಲರು ಮತ್ತು ಅವರ ದಕ್ಷತೆಯ ಕುರಿತು ಸಾಮಾನ್ಯ ಜನರಲ್ಲಿ ತಪ್ಪು ಗ್ರಹಿಕೆ ಇದೆ. ಅದೆಂದರೆ, ಹೆಚ್ಚು ಕೂಗಾಡಲು ಗೊತ್ತಿರುವವರೇ ಅತ್ಯುತ್ತಮ ವಕೀಲರು ಎಂಬುದೇ ಆ ಗ್ರಹಿಕೆ. ಸಿನಿಮಾದಲ್ಲಿ ಇರುವ ವಕೀಲರ ಪಾತ್ರಗಳ ರೀತಿಯಲ್ಲಿ ವಾಸ್ತವದ ವಕೀಲರ ಸಾಮರ್ಥ್ಯ ಮತ್ತು ದಕ್ಷತೆ ನಿರ್ಧಾರ ಆಗುವುದಿಲ್ಲ.

ನ್ಯಾಯಮೂರ್ತಿಯಾಗಲು ಇರಬೇಕಾದ ಗುಣಗಳು ಹೀಗಿವೆ: ಪ್ರಾಮಾಣಿಕತೆ ಮತ್ತು ಬದ್ಧತೆ, ಪಾಂಡಿತ್ಯ, ಜ್ಞಾನ, ಸಮಾಧಾನ ಚಿತ್ತ, ಸಂಯಮ, ವಿಶ್ಲೇಷಣೆ ಮತ್ತು ಸಂಶೋಧನಾ ಕೌಶಲ, ತಾರ್ಕಿಕ ಚಿಂತನೆ, ಸೃಜನಶೀಲತೆ, ಬರವಣಿಗೆ ಕೌಶಲ, ಪ್ರೌಢ ವ್ಯಕ್ತಿತ್ವ ಇತ್ಯಾದಿ. ವಕೀಲರಲ್ಲಿ ನ್ಯಾಯಮೂರ್ತಿ ಹುದ್ದೆಗೇರಬಹುದಾದ ಸಾಮರ್ಥ್ಯಗಳೇನು ಇವೆ ಎಂಬುದನ್ನು ನ್ಯಾಯಮೂರ್ತಿಗಳು ಪ್ರತಿ ದಿನವೂ ಗಮನಿಸುತ್ತಿರುತ್ತಾರೆ. ಹಾಗಾಗಿಯೇ ವಕೀಲರ ದಕ್ಷತೆ ಮತ್ತು ಸಮಂಜಸತೆಯನ್ನು ನಿರ್ಧರಿಸಲು ನ್ಯಾಯಮೂರ್ತಿಗಳೇ ಸೂಕ್ತ.

ಭಾರತದ ಕ್ರಿಕೆಟ್ ತಂಡಕ್ಕೆ ಆಟಗಾರರನ್ನು ಆಯ್ಕೆ ಮಾಡಲು ಕ್ರಿಕೆಟ್‌ನಲ್ಲಿ ಪರಿಣತರಾದ ವ್ಯಕ್ತಿಗಳೇ ಸೂಕ್ತ ಅಲ್ಲವೇ? ಹವ್ಯಾಸಿ ಕ್ರಿಕೆಟಿಗರನ್ನು ಆಯ್ಕೆಗಾರರನ್ನಾಗಿ ಮಾಡುವುದಕ್ಕಿಂತ ಪರಿಣತ ಕ್ರಿಕೆಟಿಗರನ್ನೇ ಆಯ್ಕೆಗಾರರನ್ನಾಗಿ ಮಾಡುವುದು ಉತ್ತಮವಲ್ಲವೇ? ಭಾರತದ ಕ್ರಿಕೆಟ್ ತಂಡಕ್ಕೆ ಕ್ರಿಕೆಟಿಗರನ್ನು ಆಯ್ಕೆ ಮಾಡುವುದಕ್ಕಿಂತ ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡುವುದು ಹೆಚ್ಚು ಕಷ್ಟಕರವಾದ ಮತ್ತು ಹೆಚ್ಚು ಹೊಣೆಗಾರಿಕೆಯ ಕೆಲಸ.

ನ್ಯಾಯಮೂರ್ತಿಗಳ ಆಯ್ಕೆಯು ಸಂದರ್ಶನದ ಆಧಾರದಲ್ಲಿ ಆಗಬಾರದು. ಏಕೆಂದರೆ, ನ್ಯಾಯಮೂರ್ತಿಯಾಗಲು ಬೇಕಾದ ಗುಣಗಳು ವ್ಯಕ್ತಿಯಲ್ಲಿ ಇವೆಯೇ ಎಂಬುದನ್ನು ಸಂದರ್ಶನವು ತಿಳಿಸಲು ಸಾಧ್ಯವಿಲ್ಲ. ವಿವಿಧ ರಾಜ್ಯಗಳಲ್ಲಿ ನ್ಯಾಯಮೂರ್ತಿಗಳಾಗಿ ನೇಮಕ ಆಗಬೇಕಾದ ವಕೀಲರಲ್ಲಿ ನ್ಯಾಯಮೂರ್ತಿಗೆ ಬೇಕಾದ ಗುಣಗಳು ಇವೆಯೇ ಎಂಬುದು ದೆಹಲಿಯಲ್ಲಿ ಅಥವಾ ದೂರದ ಇನ್ನೊಂದು ಸ್ಥಳದಲ್ಲಿ ಕುಳಿತಿರುವ ನ್ಯಾಯಾಂಗ ನೇಮಕ ಆಯೋಗಕ್ಕೆ ತಿಳಿಯುವುದು ಸಾಧ್ಯವಿಲ್ಲ. ಹೈಕೋರ್ಟ್‌ನ ವಕೀಲರ ಪೈಕಿ ಯಾರಲ್ಲಿ ನ್ಯಾಯಮೂರ್ತಿಯಾಗುವ ಗುಣಗಳು ಇವೆ ಎಂಬುದನ್ನು ನಿರ್ಧರಿಸಲು ಆ ಹೈಕೋರ್ಟ್‌ನ ನ್ಯಾಯಮೂರ್ತಿಯೇ ಅತ್ಯಂತ ಸೂಕ್ತ ವ್ಯಕ್ತಿ. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಕೆಲವೇ ನಿಮಿಷಗಳಲ್ಲಿ ಅಥವಾ ತಾಸುಗಳಲ್ಲಿ ತಿಳಿದುಕೊಳ್ಳುವುದಕ್ಕೂ ಸಾಧ್ಯವಿಲ್ಲ. ಆ ವಕೀಲರ ಜೊತೆಗೆ ಕೆಲವು ಕಾಲದಿಂದ ನೇರವಾಗಿ ಸಂವಹನ ಇರುವ ವ್ಯಕ್ತಿಗಳೇ ವಕೀಲರ ಸಾಮರ್ಥ್ಯವನ್ನು ಅಳೆಯಬಲ್ಲರು. ಹಾಗಾಗಿ, ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡಲು ವಕೀಲರು ಕೆಲಸ ಮಾಡುವ ಹೈಕೋರ್ಟ್‌ನ ನ್ಯಾಯಮೂರ್ತಿಗಳಿಗಿಂತ ಅರ್ಹರಾದವರು ಯಾರೂ ಇಲ್ಲ.

ನ್ಯಾಯಾಂಗ ವ್ಯವಸ್ಥೆಯ ಕುರಿತು, ಕಾನೂನು ಪ್ರಕಾರ ನಿರ್ಧಾರ ಕೈಗೊಳ್ಳುವಿಕೆಯ ಸೂಕ್ಷ್ಮಗಳ ಕುರಿತು, ನ್ಯಾಯಮೂರ್ತಿಯಾಗಲು ಬೇಕಾದ ಸಾಮರ್ಥ್ಯಗಳೇನು ಎಂಬುದೆಲ್ಲ ತಿಳಿದಿಲ್ಲದವರಿಗೆ ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡುವ ಅರ್ಹತೆ ಇರುವುದಿಲ್ಲ. ಹಾಗಾಗಿಯೇ ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡಲು ಕೊಲಿಜಿಯಂ ಎಂಬ ವ್ಯವಸ್ಥೆ ಇರಬೇಕು ಎಂಬ ನಿರ್ಧಾರಕ್ಕೆ ಸುಪ್ರೀಂ ಕೋರ್ಟ್ ಬಂತು (ಸೆಕೆಂಡ್ ಜಡ್ಜ್ ಕೇಸ್). ಈ ನಿರ್ಧಾರದ ಹಿಂದಿನ ತರ್ಕ ಮತ್ತು ಕಾರಣವನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಸಾಂವಿಧಾನಿಕ ವಿಚಾರಗಳು ಮಾತ್ರವಲ್ಲದೆ ರಾಜಕೀಯಕ್ಕೆ ಸಂಬಂಧಿಸಿದ ವಿವಾದಗಳನ್ನು ಕುರಿತು ಕೂಡ ನ್ಯಾಯಮೂರ್ತಿಗಳು ತೀರ್ಪು ನೀಡುತ್ತಾರೆ ಎಂಬುದು ವಾಸ್ತವ ಸತ್ಯ. ನ್ಯಾಯಮೂರ್ತಿಗಳ ರಾಜಕೀಯ ಸಿದ್ಧಾಂತಗಳು ಕೂಡ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯೊಳಗೆ ಪಸರಿಸಿಕೊಳ್ಳುತ್ತವೆ. ಇದರಿಂದಾಗಿಯೇ ಸಾಮಾಜಿಕ ಬದ್ಧತೆ ಇರುವಂತಹವರನ್ನೇ ನ್ಯಾಯಮೂರ್ತಿಗಳಾಗಿ ನೇಮಿಸಬೇಕು ಎಂಬ ಒತ್ತಾಯ ಇದೆ. ಹಾಗೆಯೇ, ವ್ಯಕ್ತಿಯ ಸಾಮಾಜಿಕ ಗ್ರಹಿಕೆ, ಒಲವು ಮತ್ತು ನಂಬಿಕೆಯ ಆಧಾರದಲ್ಲಿ ನೇಮಕ ನಡೆಯಬೇಕು ಎಂದೂ ಹೇಳಲಾಗುತ್ತಿದೆ. ಆದ್ದರಿಂದ, ಸುಪ್ರೀಂ ಕೋರ್ಟ್ ಕೊಲಿಜಿಯಂನಲ್ಲಿ ಸರ್ಕಾರದ ಒಬ್ಬರು ಪ್ರತಿನಿಧಿಗೆ ಸ್ಥಾನ ಇರಬೇಕು ಎಂದು ಕೇಂದ್ರ ಕಾನೂನು ಸಚಿವರು ಹೇಳಿದ್ದನ್ನೂ ಸುಲಭವಾಗಿ ಅಲ್ಲಗಳೆಯಲಾಗದು.

ನ್ಯಾಯಮೂರ್ತಿಗಳು ಹೊಂದಿರುವ ರಾಜಕೀಯ ಮತ್ತು ವೈಯಕ್ತಿಕ ಗ್ರಹಿಕೆಯು ಅವರು ನೀಡುವ ತೀರ್ಪಿನಲ್ಲಿ ಸ್ವಲ್ಪ ಮಟ್ಟಿನ ಪ್ರಭಾವ ಬೀರುತ್ತದೆ ಎಂಬುದು ನಿಜ. ಆದರೆ, ನ್ಯಾಯಮೂರ್ತಿಗಳು ರಾಜಕೀಯವಾಗಿ ತಟಸ್ಥರಾಗಿರಬೇಕು ಮತ್ತು ಅವರ ನಿಷ್ಠೆಯು ಸಂವಿಧಾನಕ್ಕೆ ಮಾತ್ರ ಇರಬೇಕು. ಕಾನೂನು ಮತ್ತು ದೇಶದ ಜನರಿಗಷ್ಟೇ ಅವರು ನಿಷ್ಠೆ ಹೊಂದಿರಬೇಕು. ಈ ತುಡಿತ ಮತ್ತು ತಮ್ಮ ಮೇಲೆ ಇರುವ ಬಹುದೊಡ್ಡ ಹೊಣೆಗಾರಿಕೆ ಹಾಗೂ ಸಹವರ್ತಿ ನ್ಯಾಯಮೂರ್ತಿಗಳ ಒತ್ತಡದಿಂದಾಗಿ ಇಂತಹ ಗುಣಗಳು ತನ್ನಿಂತಾನಾಗೇ ನ್ಯಾಯಮೂರ್ತಿಗಳಲ್ಲಿ ಮೂಡುತ್ತವೆ.

ಲೇಖಕ: ಮಾಜಿ ಅಡ್ವೊಕೇಟ್ ಜನರಲ್ ಮತ್ತು ಕರ್ನಾಟಕ ಹೈಕೋರ್ಟ್‌ನ ಹಿರಿಯ ವಕೀಲ

ಪ್ರಜಾವಾಣಿ ಚರ್ಚೆ

ಕೊಲಿಜಿಯಂ: ಮಾದರಿ ವ್ಯವಸ್ಥೆಯೇನೂ ಅಲ್ಲ

• ಲಿಯಾ ವರ್ಗೀಸ್,
• ಅನಿಂದಿತಾ ಪಟ್ಟನಾಯಕ್

ಲಿಯಾ ವರ್ಗೀಸ್

ಒಂದು ಮಾದರಿಯಾದ ವ್ಯವಸ್ಥೆಯಾಗಿದ್ದಲ್ಲಿ, ನ್ಯಾಯಮೂರ್ತಿಗಳ ನೇಮಕಾತಿಯ ಅಧಿಕಾರವು ಸಂಪೂರ್ಣವಾಗಿ ನ್ಯಾಯಮೂರ್ತಿಗಳ ಕೈಯಲ್ಲೇ ಇರಬಾರದು. ಇಲ್ಲಿ ನ್ಯಾಯಮೂರ್ತಿಗಳ ಉತ್ತರದಾಯಿತ್ವದ ಪ್ರಶ್ನೆಯೂ ಇದೆ. ನ್ಯಾಯಮೂರ್ತಿಗಳು ತಮ್ಮ ಆಸ್ತಿಯ ವಿವರಗಳನ್ನು ಬಹಿರಂಗಪಡಿಸಲು ದೀರ್ಘಕಾಲದವರೆಗೆ ಹಿಂದೇಟು ಹಾಕಿದ್ದರಿಂದ ಹಿಡಿದು, ಕೊಲಿಜಿಯಂನ ಭಾಗವೇ ಆಗಿದ್ದ ನ್ಯಾಯಮೂರ್ತಿ ಖೇಹರ್ ಅವರು ಎನ್‌ಜೆಎಸಿ ಪ್ರಕರಣವನ್ನು ನಿರ್ಧರಿಸಿದ್ದು – ಹೀಗೆ ನ್ಯಾಯಾಂಗವು ಅಸಾಧಾರಣವಾದುದು ಎಂಬ ಮನಸ್ಥಿತಿ ಇದೆ

ಅನಿಂದಿತಾ ಪಟ್ಟನಾಯಕ್

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಕೊಲಿಜಿಯಂ ಪ್ರಕ್ರಿಯೆಯನ್ನು ಹೆಚ್ಚು ಪಾರದರ್ಶಕ ಮತ್ತು ವಸ್ತುನಿಷ್ಠವಾಗಿಸುವ ಸಲುವಾಗಿ ಶೋಧ ಮತ್ತು ಮೌಲ್ಯಮಾಪನ ಸಮಿತಿ ರಚಿಸಬೇಕು ಎಂದು ಕೇಂದ್ರ ಕಾನೂನು ಸಚಿವರು, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಧನಂಜಯ ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದಿರುವುದು ವರದಿಯಾಗಿದೆ. ಕೇಂದ್ರ ಸರ್ಕಾರದ ಪ್ರತಿನಿಧಿಯೊಬ್ಬರು ಈ ಶೋಧ ಮತ್ತು ಮೌಲ್ಯಮಾಪನ ಸಮಿತಿಯಲ್ಲಿ ಸದಸ್ಯರಾಗಿರಬೇಕು ಎಂದು ಪತ್ರದಲ್ಲಿ ಹೇಳಲಾಗಿದೆ. ಕೆಲವು ಮಾಧ್ಯಮಗಳಲ್ಲಿ ವರದಿಯಾಗಿರುವಂತೆ, ಕೊಲಿಜಿಯಂನಲ್ಲಿ ನಮಗೆ ಪ್ರಾತಿನಿಧ್ಯ ಇರಬೇಕು ಎಂದು ಸರ್ಕಾರವು ಈ ಪತ್ರದಲ್ಲಿ ಕೇಳಿಲ್ಲ.

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಾತಿ ಪ್ರಕ್ರಿಯೆಯನ್ನು ನಮ್ಮ ಸಂವಿಧಾನ ನಿಗದಿ ಮಾಡಿಲ್ಲ. ನ್ಯಾಯಾಂಗದ ಉನ್ನತ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವಣ ಜಟಾಪಟಿಗೆ ಇದು ಕಾರಣವಾಗಿದೆ. ಸಂವಿಧಾನದ 124(2)ನೇ ವಿಧಿಯು, ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಮಾಲೋಚನೆಯ ಆಧಾರದಲ್ಲಿ ನ್ಯಾಯಾಂಗದ ನೇಮಕಾತಿಗಳನ್ನು ನಡೆಸುವ ಅಧಿಕಾರವನ್ನು ರಾಷ್ಟ್ರಪತಿಗೆ ನೀಡುತ್ತದೆ (ಅವರು ಕಾರ್ಯಾಂಗದ ಭಾಗ). ಅದೂ ಅಗತ್ಯವಿದೆ ಎಂದು ರಾಷ್ಟ್ರಪತಿಯು ಭಾವಿಸಿದರೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ನ ನ್ಯಾಯಮೂರ್ತಿಗಳ ನೇಮಕಾತಿ ಮತ್ತು ವರ್ಗಾವಣೆಯ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ತನ್ನ ವಿಶೇಷ ಉಲ್ಲೇಖ ಸಂಖ್ಯೆ 1(1998)7ಎಸ್‌ಸಿಸಿ739ರಲ್ಲಿ ವಿವರಿಸಿದೆ (ಈ ಉಲ್ಲೇಖವನ್ನು ಥರ್ಡ್ ಜಡ್ಜ್ ಕೇಸ್ ಎಂದು ಕರೆಯಲಾಗುತ್ತದೆ). ಈ ಉಲ್ಲೇಖದ ಮೂಲಕ ವಿವರಿಸಲಾದ ವ್ಯವಸ್ಥೆಯೇ ಕೊಲಿಜಿಯಂ. ಕೊಲಿಜಿಯಂನಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಮತ್ತು ನಾಲ್ವರು ಹಿರಿಯ ನ್ಯಾಯಮೂರ್ತಿಗಳು ಇರುತ್ತಾರೆ. ಕಾರ್ಯಾಂಗದ ಪ್ರಾಬಲ್ಯದಿಂದ ನ್ಯಾಯಾಂಗವನ್ನು ರಕ್ಷಿಸುವ ಮತ್ತು ನ್ಯಾಯಾಂಗದ ಸ್ವಾತಂತ್ರ್ಯವನ್ನು ರಕ್ಷಿಸುವ ಅಗತ್ಯವನ್ನು ಪರಿಗಣಿಸಿ, ಈ ವ್ಯವಸ್ಥೆಯನ್ನು ರೂಪಿಸಲಾಗಿದೆ.

ನ್ಯಾಯಾಂಗದ ಮೇಲೆ ಕಾರ್ಯಾಂಗದ ಪ್ರಾಬಲ್ಯವು, ನ್ಯಾಯಾಂಗದ ಸ್ವಾತಂತ್ರ್ಯವನ್ನು ಬಾಧಿಸುತ್ತದೆ ಎಂಬ ಕಳವಳವು ಸಮಂಜಸವಾದದ್ದೇ. ತೀರಾ ಹಿಂದಿನದ್ದೇನೂ ಅಲ್ಲ, ಇಂದಿರಾ ಗಾಂಧಿ ಸರ್ಕಾರವು ನ್ಯಾಯಾಂಗದ ಮೇಲೆ ಪ್ರಭಾವ ಬೀರಲು ಮತ್ತು ತನ್ನ ವಿರುದ್ಧ ತೀರ್ಪು ಬರುವುದನ್ನು ತಡೆಯಲು ನ್ಯಾಯಾಂಗದ ನೇಮಕಾತಿ ಹಾಗೂ ವರ್ಗಾವಣೆಯನ್ನು ಬಳಸಿಕೊಳ್ಳುತ್ತಿತ್ತು. ನ್ಯಾಯಾಂಗದ ನೇಮಕಾತಿಯಲ್ಲಿನ ಕಾರ್ಯಾಂಗದ ಪ್ರಾಬಲ್ಯವು, ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಬಹುದೊಡ್ಡ ಅಪಾಯ.

ಕಾರ್ಯಾಂಗದ ಪಾಲ್ಗೊಳ್ಳುವಿಕೆಯು, ಕಾರ್ಯಾಂಗದ ಪ್ರಾಬಲ್ಯಕ್ಕಿಂತ ಭಿನ್ನವಾದುದು. ಈಗಿನ ಸ್ವರೂಪದಲ್ಲಿರುವ ಕೊಲಿಜಿಯಂ ವ್ಯವಸ್ಥೆಯು ಮಾದರಿಯಾಗೇನೂ ಇಲ್ಲ. ಕೊಲಿಜಿಯಂ, ನೇಮಕಾತಿಗಳನ್ನು ಹೇಗೆ ನಡೆಸಬೇಕು ಎಂಬ ಸ್ಪಷ್ಟ ಮಾರ್ಗಸೂಚಿಗಳು ಇಲ್ಲ. ಇಡೀ ಪ್ರಕ್ರಿಯೆಯು ಗೋಪ್ಯವಾಗಿ ನಡೆಯುತ್ತದೆ.2017ರಿಂದ ಈಚೆಗೆ ಕೊಲಿಜಿಯಂನ ನಿರ್ಣಯಗಳನ್ನು ಸುಪ್ರೀಂ ಕೋರ್ಟ್‌ನ ಜಾಲತಾಣದಲ್ಲಿ ಪ್ರಕಟಿಸಲಾಗುತ್ತಿದೆ. 2017 ಮತ್ತು 2019ರ ನಡುವಣ ನ್ಯಾಯಮೂರ್ತಿಗಳ ನೇಮಕಾತಿಗೆ ಕಾರಣಗಳನ್ನು ನೀಡಲಾಗಿದೆ. ಉದಾಹರಣೆಗೆ, 3ನೇ ಅಕ್ಟೋಬರ್ 2017ರಲ್ಲಿ ಕೇರಳ ಹೈಕೋರ್ಟ್‌ಗೆ ನ್ಯಾಯಮೂರ್ತಿಗಳಾಗಿ ನೇಮಕವಾದ ಪ್ರತಿಯೊಬ್ಬ ನ್ಯಾಯಾಂಗದ ಅಧಿಕಾರಿಯ ವಿವರ ಮತ್ತು ನೇಮಕಾತಿ ಪ್ರಕ್ರಿಯೆಯನ್ನು ನಿರ್ಣಯದಲ್ಲಿ ವಿವರಿಸಲಾಗಿತ್ತು. ಆದರೆ, ನ್ಯಾಯಮೂರ್ತಿಗಳಾಗಿ ನೇಮಕವಾದವರ ಆಯ್ಕೆಗೆ ಕಾರಣಗಳು ಮತ್ತು ಆಯ್ಕೆಯಾಗದೇ ಇರುವವರನ್ನು ತಿರಸ್ಕರಿಸಲು ಕಾರಣಗಳನ್ನು ಆ ನಿರ್ಣಯದಲ್ಲಿ ಉಲ್ಲೇಖಿಸಿಲ್ಲ.

2019ರ ನಂತರ ಪ್ರಕಟಿಸಲಾಗುತ್ತಿರುವ ನಿರ್ಣಯಗಳಲ್ಲಿ ಇಂತಹ ಕನಿಷ್ಠ ವಿವರಗಳೂ ಇಲ್ಲ. ಜಾಲತಾಣದಲ್ಲಿ ನಿರ್ಣಯಗಳನ್ನು ಪ್ರಕಟಿಸುವುದು ಸಾಮಾನ್ಯ ಎಂಬಂತಾಗಿದ್ದು, ಅದಕ್ಕೆ ಅರ್ಥವೇ ಇಲ್ಲ. 2022ರ ಸೆಪ್ಟೆಂಬರ್ 28ರಂದು ಕೊಲಿಜಿಯಂನ ನಿರ್ಣಯವನ್ನು ಪ್ರಕಟಿಸಲಾಗಿದೆ. ಅದರಲ್ಲಿ ನ್ಯಾಯಮೂರ್ತಿ ಜಸ್ವಂತ್ ಸಿಂಗ್, ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಅಲಿ ಮೊಹಮ್ಮದ್ ಮಾಗ್ರೆ ಅವರನ್ನು ಕ್ರಮವಾಗಿ ಒಡಿಶಾ, ಕರ್ನಾಟಕ ಮತ್ತು ಜಮ್ಮು–ಕಾಶ್ಮೀರ ಹೈಕೋರ್ಟ್‌ಗಳ ಮುಖ್ಯನ್ಯಾಯಮೂರ್ತಿಗಳಾಗಿ ನೇಮಕ ಮಾಡಲಾಗಿದೆ ಎಂದಷ್ಟೇ ಹೇಳಲಾಗಿದೆ. ಬೇರೆ ಯಾವುದೇ ಮಾಹಿತಿ ಅದರಲ್ಲಿ ಇಲ್ಲ. ಇದರ ಪರಿಣಾಮವಾಗಿ, ನೇಮಕಾತಿ ಮತ್ತು ವರ್ಗಾವಣೆಗೆ ನ್ಯಾಯಮೂರ್ತಿಗಳನ್ನು ಹೇಗೆ ಆಯ್ಕೆ ಮಾಡಲಾಯಿತು ಎಂಬುದು ನಾಗರಿಕರಿಗೆ ಗೊತ್ತಾಗುವುದೇ ಇಲ್ಲ. ಸೌರವ್ ಕೃಪಾಲ್ ಅವರನ್ನು ನ್ಯಾಯಮೂರ್ತಿಯಾಗಿ ಆಯ್ಕೆ ಮಾಡದಿರಲು ಸರ್ಕಾರವು ಮುಂದಿಟ್ಟಿರುವ ಪೂರ್ವಗ್ರಹಪೀಡಿತ ಆಕ್ಷೇಪಗಳನ್ನು ಸುಪ್ರೀಂ ಕೋರ್ಟ್ ಈಚೆಗೆ ಬಹಿರಂಗಪಡಿಸಿದೆ. ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ನ್ಯಾಯಾಂಗ ಮತ್ತು ಸರ್ಕಾರ ಎರಡರ ಕಾರಣಗಳೂ ಮುಕ್ತ ಹಾಗೂ ಪಾರದರ್ಶಕವಾಗಿ ಇರಬೇಕಾದ ಅಗತ್ಯವಿದೆ ಎಂಬುದನ್ನು ಇದು ಸೂಚಿಸುತ್ತದೆ.

ಹೈಕೋರ್ಟ್‌ಗಳ ಸ್ವಾತಂತ್ರ್ಯದ ಮೇಲಿನ ಪ್ರಭಾವವು, ಕೊಲಿಜಿಯಂ ವ್ಯವಸ್ಥೆಯಲ್ಲಿನ ಮತ್ತೊಂದು ಕೊರತೆ. ಸಂವಿಧಾನದ ಪ್ರಕಾರ ನಮ್ಮ ಹೈಕೋರ್ಟ್‌ಗಳು ಸುಪ್ರೀಂ ಕೋರ್ಟ್‌ನ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿ ಬರುವುದಿಲ್ಲ. ಆದರೆ, ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಾತಿಗೆ ಸಂಬಂಧಿಸಿದ ನಿರ್ಧಾರವನ್ನು ತೆಗೆದುಕೊಳ್ಳುವ ಅತಿ ವಿವೇಚನೆಯನ್ನು ಸುಪ್ರೀಂ ಕೋರ್ಟ್‌ನ ಕೆಲವೇ ನ್ಯಾಯಮೂರ್ತಿಗಳ ಕೈಗೆ ಕೊಲಿಜಿಯಂ ವ್ಯವಸ್ಥೆ ನೀಡಿದೆ. ಈ ಮೂಲಕ ಹೈಕೋರ್ಟ್‌ಗಳ ಸ್ವಾತಂತ್ರ್ಯವನ್ನು ಕೊಲಿಜಿಯಂ ಇಲ್ಲವಾಗಿಸಿದೆ. ಈಗಿನ ಸ್ವರೂಪದಲ್ಲಿರುವ ಕೊಲಿಜಿಯಂ ವ್ಯವಸ್ಥೆಯು, ವೈವಿಧ್ಯಮಯ ನ್ಯಾಯಾಂಗವನ್ನು ರೂಪಿಸುವಲ್ಲಿ ವಿಫಲವಾಗಿದೆ. 2018ರಿಂದ 2022ರವರೆಗೆ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳಾಗಿ ನೇಮಕವಾದವರಲ್ಲಿ ಶೇ 79ರಷ್ಟು ಜನರು ಪ್ರಭಾವಿ ಜಾತಿಗಳಿಗೆ ಸೇರಿದವರು ಎಂದು ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ, ಕಾನೂನು ಮತ್ತು ಸುವ್ಯವಸ್ಥೆಯ ಸಂಸದೀಯ ಸಮಿತಿಗೆ ಕಾನೂನು ಸಚಿವರು ಮಾಹಿತಿ ನೀಡಿದ್ದಾರೆ. 25 ವರ್ಷಗಳಲ್ಲಿ ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಗಳಾದವರಲ್ಲಿ ಮಹಿಳೆಯರ ಪ್ರಮಾಣ ಶೇ 8ಕ್ಕಿಂತಲೂ ಕಡಿಮೆ.

ಒಂದುಮಾದರಿಯಾದವ್ಯವಸ್ಥೆಯಾಗಿದ್ದಲ್ಲಿ, ನ್ಯಾಯಮೂರ್ತಿಗಳ ನೇಮಕಾತಿಯ ಅಧಿಕಾರವು ಸಂಪೂರ್ಣವಾಗಿ ನ್ಯಾಯಮೂರ್ತಿಗಳ ಕೈಯಲ್ಲೇ ಇರಬಾರದು. ಇಲ್ಲಿ ನ್ಯಾಯಮೂರ್ತಿಗಳ ಉತ್ತರದಾಯಿತ್ವದ ಪ್ರಶ್ನೆಯೂ ಇದೆ. ನ್ಯಾಯಮೂರ್ತಿಗಳು ತಮ್ಮ ಆಸ್ತಿಯ ವಿವರಗಳನ್ನು ಬಹಿರಂಗಪಡಿಸಲು ದೀರ್ಘಕಾಲದವರೆಗೆ ಹಿಂದೇಟು ಹಾಕಿದ್ದರಿಂದ ಹಿಡಿದು, ಕೊಲಿಜಿಯಂನ ಭಾಗವೇ ಆಗಿದ್ದ ನ್ಯಾಯಮೂರ್ತಿ ಖೇಹರ್ ಅವರು ಎನ್‌ಜೆಎಸಿ ಪ್ರಕರಣವನ್ನು ನಿರ್ಧರಿಸಿದ್ದು– ಹೀಗೆ ನ್ಯಾಯಾಂಗವು ಅಸಾಧಾರಣವಾದುದು ಎಂಬ ಮನಸ್ಥಿತಿ ಇದೆ. ಈ ಮನಸ್ಥಿತಿಯು ಕಳವಳಕಾರಿಯಾದುದು. ಜೊತೆಗೆ, ಉತ್ತರದಾಯಿಯಾಗಿರಲು ನ್ಯಾಯಮೂರ್ತಿಗಳು ಹಿಂದೇಟು ಹಾಕುತ್ತಿದ್ದಾರೆ.

ಎಲ್ಲಾ ಅಧಿಕಾರವೂ ತಮ್ಮಲ್ಲೇ ಇರಬೇಕು ಎಂಬ ಮನಸ್ಥಿತಿಯು ಉನ್ನತ ನ್ಯಾಯಾಂಗದ ಹಲವರಲ್ಲಿ ಇದೆ. ನ್ಯಾಯಮೂರ್ತಿಗಳಲ್ಲಿ ವೈವಿಧ್ಯದ ಕೊರತೆ ಇದೆ ಎಂಬುದನ್ನೂ ನಿರ್ಲಕ್ಷಿಸಲಾಗದು. ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ಪಾರದರ್ಶಕತೆಯ ಮಧ್ಯೆ ಸಮತೋಲನ ಸಾಧಿಸುವುದು ಹೇಗೆ ಎಂದು ಕೇಳಬೇಕಾದ ಸಮಯವಿದು. ಜತೆಗೆ ನೇಮಕಾತಿಗೆ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳನ್ನು ಪರಿಗಣಿಸಬೇಕು ಎಂದೂ ಕೇಳಬೇಕಾಗಿದೆ.

ಕೊಲಿಜಿಯಂ ವ್ಯವಸ್ಥೆಯ ಬಗ್ಗೆ ಅಸಮಾಧಾನ ಹೆಚ್ಚಾಗುತ್ತಿದೆ ಎಂದು ಕಾನೂನು ಸಚಿವರು ಹೇಳಿದ್ದು ಸರಿಯಾಗಿದೆ. ಸಾರ್ವಜನಿಕವಾಗಿ ಒಪ್ಪಿತವಾಗಿರುವ ಅರ್ಹತೆ ಮತ್ತು ವೈವಿಧ್ಯದಂತಹ ಮಾನದಂಡಗಳು ನ್ಯಾಯಮೂರ್ತಿಗಳ ನೇಮಕಾತಿ ಪ್ರಕ್ರಿಯೆಯಲ್ಲಿರಬೇಕು. ನ್ಯಾಯಾಂಗ ನೇಮಕಾತಿ ಸಂಸ್ಥೆಯ ಎಲ್ಲಾ ಪ್ರಕ್ರಿಯೆಗಳನ್ನು ಮತ್ತು ಪ್ರತಿಯೊಬ್ಬ ಸದಸ್ಯನ ಅಭಿಪ್ರಾಯಗಳನ್ನು ದಾಖಲಿಸಬೇಕು. ಇವು ಸಾರ್ವಜನಿಕರಿಗೆ ಲಭ್ಯವಿರಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿ, ಮುಖ್ಯವಾಗಿ ಶೋಧ ಮತ್ತು ಮೌಲ್ಯಮಾಪನ ಸಮಿತಿಯ ರೂಪದಲ್ಲಿ ಕಾರ್ಯಾಂಗದ ಪಾಲ್ಗೊಳ್ಳುವಿಕೆಯನ್ನು ಒಪ್ಪಬಹುದು. ನೇಮಕಾತಿಗೆ ಪರಿಗಣಿಸುವ ಅಭ್ಯರ್ಥಿಗಳ ವ್ಯಾಪ್ತಿಯನ್ನು ಹೆಚ್ಚಿಸಲು ಮತ್ತು ಆ ಮೂಲಕ ಉನ್ನತ ನ್ಯಾಯಾಂಗದಲ್ಲಿ ಪ್ರಾತಿನಿಧ್ಯವನ್ನು ಹೆಚ್ಚಿಸಲು ಈ ಸಮಿತಿಯು ನೆರವಾಗಬಹುದು. ಕಾರ್ಯಾಂಗದ ಪ್ರಾಬಲ್ಯ ಎಂಬುದು ಕಳವಳಕಾರಿ ವಿಷಯವಾಗಿರುವ ಕಾರಣ, ಅಂತಹ ಸಮಿತಿಯಲ್ಲಿ ನ್ಯಾಯಾಂಗದ ಸದಸ್ಯರ ಸಂಖ್ಯೆ ಹೆಚ್ಚು ಇರಬೇಕು. ಕಾರ್ಯಾಂಗದ ಪಾಲ್ಗೊಳ್ಳುವಿಕೆಯ ಪಕ್ಷಪಾತಿಯಾಗುವುದನ್ನು ತಪ್ಪಿಸಲು, ಕಾರ್ಯಾಂಗದ ಪ್ರಾತಿನಿಧ್ಯವು ವಿರೋಧ ಪಕ್ಷದ ನಾಯಕನನ್ನೂ ಒಳಗೊಳ್ಳುವಂತಾಗಬೇಕು. ಆದರೆ, ಇಂತಹ ಪ್ರಕ್ರಿಯೆಯಲ್ಲಿ ನ್ಯಾಯಾಂಗದ ಭಾಗವಾಗದೇ ಇರುವವರನ್ನು ಹೊರಗಿಡುವುದು ಅನಪೇಕ್ಷಿತ.

ಲಿಯಾ ಅವರು ಸಂಶೋಧನಾ ನಿರ್ವಾಹಕಿ, ಅನಿಂದಿತಾ ಅವರು ಸಂಶೋಧಕಿ, ದಕ್ಷ್ ಸಂಸ್ಥೆ, ಬೆಂಗಳೂರು

ಪದಬಂಧ 5206

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬೇರೆಯ ದೇಹ (4)
3.ಕಾಡಿನ ಪುಷ್ಪವಿದು (4)
5.ಹೊಟ್ಟೆ ಕಿಚ್ಚು ಈ ರೀತಿ ವ್ಯಕ್ತವಾಗಿದೆ (3)
6.ಈತ ತಿರುಪೆ ಬೇಡುವವನು (3)
8.ನೀರಿನ ಅಧಿದೇವತೆ (3)
9.ಅಂಗುಳಿನ ಒಳಭಾಗವಿಲ್ಲಿ ತಿರುವುಮುರುವಾಗಿದೆ (3)
10.ಉದ್ದವಾಗಿ ಬಾಗಿರುವ ತುತ್ತೂರಿ (3)
11.ವನದ ಕೊನೆಗೆ ಮಾಡಿದ ಹೋಮ (3)
12.ದುಮ್ಮಾನ ಬೇಡ! ಹಿಗ್ಗು ಹೀಗೆ ಬಂದಿದೆ! (3)
14.ಕಂಬದ ಹತ್ತಿರ ಸುರಿಸಿದ ಕಣ್ಣೀರು (3)
16.ಆನಾಂದಾನುಭವಕ್ಕೆ ಉಂಟಾದ ಅಡ್ಡಿ (4)
17.ನಡುವಿರುವ ಮಾವನಿಂದಾದ ಶೇಖರಣೆ! (4)

ಮೇಲಿಂದ ಕೆಳಕ್ಕೆ
1.ಪತಿಯೊಡನೆ ಬಂದ ಕಾಲಾಳು (3)
2.ಈತ ನರಕಾಧಿಪತಿ (2)
3.ವರಾರದಲ್ಲಿರುವ ಮದುವೆ ಗಂಡು (2)
4.ವೃಕ್ಷದ ಹತ್ತಿರ ಸಂಭವಿಸಿದ ಸಾವು (3)
7.ಚಪ್ಪಾಳೆಯನ್ನು ಹೀಗೆನ್ನಿ (5)
8.ಈ ರೀತಿ ಗುಂಪುಗಳಾಗಿ ವಿಂಗಡಿಸು (5)
11.ಹರನನ್ನು ಸ್ತುತಿಸುತ್ತಿರುವ ಶೂರ (3)
13.ಹೊಸದಾಗಿ ಕಾಣುತ್ತಿರುವ ಧಾನ್ಯ (3)
14.ಶ್ರೀ ಕೃಷ್ಣನ ಸೋದರ ಮಾವ (2)
15.ಯಜಮಾನಿ ನುಡಿದಿರುವ ಸತ್ಯ (2)



5205ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿಕರ 3.ಮೋಸಗಾರ
5.ಸಮಕ್ಷ 7.ರಾಣಿ
8.ತಡ 11.ಷರಾ
13.ಪಾತಿ 14.ಗಡಸು
6.ರಣವೈದ್ಯ 17.ಮಧುಕರಿ

ಮೇಲಿಂದ ಕೆಳಕ್ಕೆ:
1.ಪರಾಜಿತ 2.ರಸ
3.ಮೋಕ್ಷ
4.ರಮಣಿ 6.ಮಸೀದಿ
7.ರಾಜಾರೋಷ 9.ಡಕಾಯಿತಿ
10.ಬಗ್ಗಡ 12.ರಾಯಭಾರಿ
13.ಪಾಮರ 14.ಗದ್ಯ
15.ಸುಮ

ಸುಡೊಕು 5592

2		9			7	1		4
				3				
5		7	4		6	2		3
					5			1
	5	1		8			2	7
3			9					
		2		1			9	
9			7		8		1	2
	8	3		2		4		

5591 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜನವರಿ 21, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಅಮಾವಾಸ್ಯೆ ಗಂ. 26-23 ನಕ್ಷತ್ರ: ಪೂರ್ವಾಷಾಢ ಗಂ. 09-40, ಉತ್ತರಾಷಾಢ ಗಂ.30-30 ಯೋಗ: ಹರ್ಷಣ ಗಂ. 14-34, ಕರಣ: ಚತುಷ್ಪಾದ್ ಗಂ. 16-21, ಮಕರ ಮಾಸದ 07 ನೇ ದಿನ. ರಾಹುಕಾಲ : ಬೆಳಿಗ್ಗೆ 09-00 – 10-30 ಸೂರ್ಯೋದಯ : 07-01 ಸೂರ್ಯಾಸ್ತ : 06-22 ಮುಸ್ಲಿಂ ದಿನಾಂಕ : 28 ಜುಮಾದುಸ್ಸಾನಿ, ದಿನ ವಿಶೇಷ : ಮೌನಿ ಅಮಾವಾಸ್ಯೆ, ತೈ ಅಮಾವಾಸ್ಯೆ, ಮಕರ , ವಾವು (ಕೇರಳ), ಹುತಾತ್ಮ ಹೇಮು ಕಲನಿಯವರ ಸ್ಮರಣಾರ್ಥ ದಿನ (ಸಿಂಧಿ), ಅದೃಷ್ಟ ಸಂಖ್ಯೆ : 2, 9

ಮೇಷ: ಹಣಕಾಸಿನ ಸ್ಥಿತಿ ಸುಧಾರಿಸಿಕೊಳ್ಳಲು ಈ ದಿನ ಸೂಕ್ತ ಕಾಲ. ಷೇರು ವ್ಯವಹಾರಗಳು ಕೂಡಿ ಬರುತ್ತವೆ. ನೀವು ತೆಗೆದುಕೊಳ್ಳುವ ಒಳ್ಳೆಯ ನಿರ್ಧಾರಗಳಿಂದ ಸಹೋದ್ಯೋಗಿಗಳು ಸಂತಸ ಹೊಂದುವರು.

ವೃಷಭ: ಮಗನ ಮುಂದಿನ ಓದಿನ ವಿಷಯ ಮನೆಯಲ್ಲಿ ಚರ್ಚೆಗೆ ಬರುವುದು. ಕಲಾವಿದರ ಆಸಕ್ತಿಯಿಂದ ಹೆಚ್ಚು ಅವಕಾಶಗಳು ಲಭ್ಯವಾಗಲಿದೆ. ಉದಯೋನ್ಮುಖ ತಾರೆಯರಿಗೆ ಹೆಚ್ಚಿನ ಅವಕಾಶಗಳಿಂದ ಲಾಭ

ಮಿಥುನ: ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳು ನಿವಾರಣೆಯಾಗುವುದು. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗಲಿದೆ. ಆದಾಯ ವೆಚ್ಚಗಳು ಎರಡೂ ಸರಿ ಸಮವಾಗಿರುವುದು.

ಕರ್ಕಾಟಕ: ಯೋಜನೆಯ ಬೆಳವಣಿಗೆಯಲ್ಲಿ ಸಂಬಂಧಿಸಿದವರೊಂದಿಗೆ ಚರ್ಚೆ ನಡೆಸದೇ ತೀರ್ಮಾನಗಳಿಗೂ ಬರುವುದು ಸರಿಯಲ್ಲ. ಕಾರ್ಯ ಒತ್ತಡದಿಂದ ತೀವ್ರವಾದ ಶಿರೋವೇದನೆ ಕಾಡಲಿದೆ. ಆರೋಗ್ಯದಲ್ಲಿ ಉದಾಸೀನತೆ ಬೇಡ.

ಸಿಂಹ: ವಿವಿಧ ಧಾರ್ಮಿಕ ಕಾರ್ಯಕ್ರಮ ಮಾಡುವುದರಿಂದ ಅಥವಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಹೊಸ ಬದುಕನ್ನು ಆರಂಭಿಸಲು ಅವಕಾಶದ ಬಾಗಿಲು ತೆರೆಯುವುದು.

ಕನ್ಯಾ: ರಾಜಕೀಯ ವಲಯದಲ್ಲಿ ವರಿಷ್ಠರೊಂದಿಗೆ ಮುಖ್ಯ ಮಾತುಕತೆ ಇರುವುದು. ಕೆಲಸದಲ್ಲಿ ಹಲವು ವಿಘ್ನಗಳು ಕಾಣುವುದರಿಂದ ಬೇಸರಗೊಳ್ಳು-ವಂತಿಲ್ಲ, ಪ್ರಯತ್ನವು ಅಧಿಕವಾಗಿರಬೇಕೆಂಬುವುದು ಅದರ ಸಂಕೇತ.

ತುಲಾ: ಹೊಸ ಜವಾಬ್ದಾರಿಗಳನ್ನು ಪೂರೈಸುವತ್ತ ಗಮನಾರ್ಹ ಹೆಜ್ಜೆಯಿಡುವ ಮೂಲಕ ಅಚ್ಚರಿಯ ಫಲಿತಾಂಶಗಳನ್ನು ಕಾಣುವಿರಿ. ವಾದವಿವಾದಗಳಿಗೆ ಎಡೆ ಮಾಡಿಕೊಡಬೇಡಿ. ಲೇವಾದೇವಿ ವ್ಯವಹಾರಗಳು ಮುಂದುವರಿಸಬಹುದು.

ವೃಶ್ಚಿಕ: ರಾಜಕೀಯ ವ್ಯಕ್ತಿಗಳಿಗೆ ಇದ್ದಕ್ಕಿದ್ದಂತೆ ಜನಪ್ರಿಯತೆ ಉತ್ತುಂಗಕ್ಕೆ ಏರಬಹುದು, ಕಬ್ಬಿಣ ಮತ್ತು ಸಿಮೆಂಟ್ ವ್ಯಾಪಾರದಲ್ಲಿ ಮಹತ್ತರವಾದ ಅಭಿವೃದ್ಧಿಯನ್ನು ಕಾಣುವಿರಿ.

ಧನು: ಗುಂಪು ಚಟುವಟಿಕೆಗಳಿಗೆ ಈ ದಿನ ನಿಮ್ಮ ಮುಂದಾಳತ್ವ ಅಗತ್ಯವಾ-ಗಿರುವುದು. ಅನೇಕ ಸಾಮಾಜಿಕ ಚಟುವಟಿಕೆಗಳಿಂದಾಗಿ ಎಲ್ಲರ ಪ್ರಶಂಸೆಗೆ ಪಾತ್ರರಾಗುತ್ತೀರಿ. ಇದು ನಿಮ್ಮ ಆನಂದವನ್ನು ಹೆಚ್ಚಿಸುತ್ತದೆ.

ಮಕರ: ಹೊರದೇಶದಲ್ಲಿನ ಉದ್ಯೋಗದ ಅನ್ವೇಷಣೆಗೆ ಒಳ್ಳೆಯ ದಿನ. ಮುಕ್ತ ಮನೋಭಾವ ಇಂದು ನೀವಾಡುವ ಮಾತುಗಳಿಂದ ಬಹಿರಂಗಗೊಳ್ಳಲಿದೆ. ಪ್ರಯಾಣ ನೀವು ಅಂದುಕೊಂಡಂತೆ ಸುಗಮವಾಗಿರುತ್ತದೆ.

ಕುಂಭ: ಅಪೇಕ್ಷಿಸಿದ ಪ್ರಗತಿಯನ್ನು ಇಂದು ಸಾಧಿಸುವಿರಿ. ಯಶಸ್ಸಿನ ಹೊಸ ಮಾರ್ಗಗಳು ಅರಿವಾಗುವುದು. ಹಣ್ಣು ತರಕಾರಿ ವ್ಯಾಪಾರದಿಂದ ಬಹಳಷ್ಟು ಲಾಭ ಬರುವುದು. ಹೊಸದಾಗಿ ಹಣ ಹೂಡಬೇಕಾದರೆ ಪರಿಶೀಲನೆ ಅಗತ್ಯ.

ಮೀನ: ವಿಶೇಷವಾಗಿ ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆಯಿಂದ ಇರಿ. ಮನೆಯ ರಿಪೇರಿ ಕೆಲಸಗಳಿಗೆ ಅಧಿಕ ಹಣ ವ್ಯಯವಾಗಲಿದೆ. ಉದ್ಯಮಿ, ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣಕ್ಕೆ ಸಿಗುವುದರಿಂದ ನೆಮ್ಮದಿ.

ಆರ್ಥಿಕ ವೇದಿಕೆ ಮುಖ್ಯಸ್ಥರಿಂದ ಭಾರತಕ್ಕೆ ಮೆಚ್ಚುಗೆ

ದಾವೋಸ್ (ಪಿಟಿಐ): ವಿಶ್ವ ಆರ್ಥಿಕ ವೇದಿಕೆಯ ಮುಖ್ಯಸ್ಥ ಕ್ಲಾಸ್ ಶ್ವೂಬ್ ಅವರು 'ಜಾಗತಿಕ ಸ್ಥಿತಿ ದುರ್ಬಲವಾಗಿರುವ ಹೊತ್ತಿನಲ್ಲಿ ಭಾರತ ಮಾತ್ರ ಹೊಳೆಯುವ ಬಿಂದುವಿನಂತೆ' ಕಾಣುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ವೇದಿಕೆಯ ಐದು ದಿನಗಳ ಶೃಂಗಸಭೆಗೆ ಶುಕ್ರವಾರ ತೆರೆಬಿದ್ದಿದೆ.

'ಹವಾಮಾನ ಬದಲಾವಣೆ ಹಾಗೂ ನವೀಕರಿಸಬಹುದಾದ ಇಂಧನಗಳ ವಿಚಾರದಲ್ಲಿ ಭಾರತದ ದಿಟ್ಟ ಕ್ರಮಗಳನ್ನು, ಜಾಗತಿಕ ಆರೋಗ್ಯಸೇವಾ ವ್ಯವಸ್ಥೆಗೆ ಭಾರತದ ಕೊಡುಗೆಯನ್ನು, ಮಹಿಳೆಯ ನೇತೃತ್ವದಲ್ಲಿ ಅಭಿವೃದ್ಧಿ ಸಾಧಿಸುವ ಆರ್ಥಿಕ ಮಾದರಿಗೆ ಗಮನ ನೀಡುವುದನ್ನು ಹಾಗೂ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಕಲ್ಪಿಸುವಲ್ಲಿ ದೇಶದ ನಾಯಕತ್ವವನ್ನು ನಾನು ಶ್ಲಾಘಿಸುತ್ತಿದ್ದೇನೆ' ಎಂದು ಶ್ವೂಬ್ ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನಾಯಕತ್ವವನ್ನು ಕೂಡ ಶ್ವೂಬ್ ಹೊಗಳಿದ್ದಾರೆ. ಭಾರತವು ಜಿ-20 ಗುಂಪಿನ ಅಧ್ಯಕ್ಷತೆಯ ಅವಧಿಯಲ್ಲಿ ಜಗತ್ತಿನ ಎಲ್ಲೆಡೆ ನ್ಯಾಯಸಮ್ಮತ ಹಾಗೂ ಸಮಾನ ಬೆಳವಣಿಗೆಗೆ ಉತ್ತೇಜನ ನೀಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಮಹತ್ವದ ಸಂದರ್ಭವೊಂದರಲ್ಲಿ ಭಾರತಕ್ಕೆ ಜಿ20ರ ಅಧ್ಯಕ್ಷತೆ ಸಿಕ್ಕಿದೆ. ಒಡೆದುಹೋಗಿರುವ ಜಗತ್ತಿನಲ್ಲಿ ಮೋದಿ ನಾಯಕತ್ವವು ಮಹತ್ವದ್ದು' ಎಂದು ಹೇಳಿದ್ದಾರೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹138
ಆರ್‌ಎಸ್‌ಎಸ್-5	₹133
ಗುಡ್ ಲಾಟ್	₹128

(ಪ್ರತಿ ಕೆ.ಜಿಗೆ)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,108
ಇಂದಿನ ಅಂತ್ಯ	18,028
▼	80
ದಿನದ ಕನಿಷ್ಠ	18,016

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹550
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹555

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1615)
ಸೋಯಾ (ರಿಫೈನ್ಡ್)	₹1220 (1220)
ಸೂರ್ಯಕಾಂತಿ (ರಿಫೈನ್ಡ್)	₹1220 (1220)
ಪಾಮೋಲಿನ್	₹917 (918)

ಡಿಸೆಂಬರ್ ತ್ರೈಮಾಸಿಕ: ಕಂಪನಿಯ ವರಮಾನ ಶೇಕಡ 15ರಷ್ಟು ಜಿಗಿತ

ರಿಲಯನ್ಸ್ ಲಾಭ ಶೇ 15 ಇಳಿಕೆ

ನವದೆಹಲಿ (ಪಿಟಿಐ): ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್) ಕಂಪನಿಯ ಡಿಸೆಂಬರ್ ತ್ರೈಮಾಸಿಕದ ನಿವ್ವಳ ಲಾಭವು ಶೇಕಡ 15ರಷ್ಟು ಕಡಿಮೆ ಆಗಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹ 15,792 ಕೋಟಿ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 18,549 ಕೋಟಿ ಲಾಭ ದಾಖಲಿಸಿತ್ತು.

ಕಂಪನಿಯು ಸಾಲಗಳ ಮರುಪಾವತಿಗೆ ಮಾಡುವ ವೆಚ್ಚವು ಶೇಕಡ 36.4ರಷ್ಟು ಹೆಚ್ಚಾಗಿದ್ದು, ₹ 5,201 ಕೋಟಿಗೆ ತಲುಪಿದೆ. ಕಂಪನಿಯು ಸಾಲವಾಗಿ ಪಡೆದ ಹಣವನ್ನು ಪರಿಸರಪೂರಕ ಇಂಧನ ವಲಯದಲ್ಲಿ ವಹಿವಾಟು ವಿಸ್ತರಿಸಲು ಹಾಗೂ ದೂರಸಂಪರ್ಕ ಮತ್ತು ರಿಟೇಲ್ ವಹಿವಾಟು ವಿಸ್ತರಣೆ ಮಾಡಲು ಬಳಸಿಕೊಳ್ಳುತ್ತಿದೆ. ಕಂಪನಿಯ ಸಾಲದ ಮೊತ್ತವು ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ, ಈ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹ 59 ಸಾವಿರ ಕೋಟಿಯಷ್ಟು ಹೆಚ್ಚಾಗಿದ್ದು, ₹ 3.03 ಲಕ್ಷ ಕೋಟಿಗೆ ತಲುಪಿದೆ.

ವರಮಾನವು ಶೇ 15ರಷ್ಟು ಹೆಚ್ಚಾಗಿದ್ದು, ₹ 2.40 ಲಕ್ಷ ಕೋಟಿಗೆ ತಲುಪಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ. ಪ್ರಸಕ್ತ ಹಣಕಾಸು ವರ್ಷದ ಜುಲೈ–ಸೆಪ್ಟೆಂಬರ್ ತ್ರೈಮಾಸಿಕಕ್ಕೆ ಹೋಲಿಸಿದರೆ ಡಿಸೆಂಬರ್ ತ್ರೈಮಾಸಿಕದ ಲಾಭವು ಶೇ 15ರಷ್ಟು ಜಾಸ್ತಿ ಆಗಿದೆ.

ಆರ್‌ಐಎಲ್‌ನ ಅಂಗಸಂಸ್ಥೆಯಾದ ಜಿಯೊ ಗ್ರಾಹಕರ ಸಂಖ್ಯೆಯು 43.3 ಕೋಟಿಗೆ ಏರಿಕೆಯಾಗಿದ್ದು, ಅದರ ನಿವ್ವಳ ಲಾಭ ₹ 4,881 ಕೋಟಿಗೆ ತಲುಪಿದೆ. ಪ್ರತಿ ಗ್ರಾಹಕನಿಂದ ಬರುವ ವರಮಾನದಲ್ಲಿ ಶೇ 17.5ರಷ್ಟು ಹೆಚ್ಚಳ ಆಗಿದೆ. ದೇಶದ 134 ಪಟ್ಟಣ ಹಾಗೂ ನಗರಗಳಲ್ಲಿ ಜಿಯೊ 5ಜಿ ಸೇವೆಗಳನ್ನು ನೀಡುತ್ತಿದೆ. ರಿಟೇಲ್ ವಹಿವಾಟಿನ ನಿವ್ವಳ ಲಾಭ ₹ 2,400 ಕೋಟಿ ಆಗಿದೆ.

ಮುಖ್ಯಾಂಶಗಳು

- ಜಿಯೊ ಗ್ರಾಹಕರ ಸಂಖ್ಯೆ ಏರಿಕೆ
- ಗ್ರಾಹಕರಿಂದ ಬರುವ ಆದಾಯದಲ್ಲಿ ಹೆಚ್ಚಳ
- ಕಂಪನಿಯ ಸಾಲ ₹ 59 ಸಾವಿರ ಕೋಟಿಯಷ್ಟು ಏರಿಕೆ

Reliance Industries Limited

ಕಂಪನಿಗೆ ಹೊಸ ರೂಪ ಕೊಡುವ ಪ್ರಕ್ರಿಯೆಯ ಭಾಗವಾಗಿ ನಿರ್ಧಾರ

380 ಸಿಬ್ಬಂದಿ ವಜಾ ಮಾಡಿದ ಸ್ವಿಗ್ಗಿ

ನವದೆಹಲಿ (ಪಿಟಿಐ): ರೆಸ್ಟೋರೆಂಟ್‌ಗಳಿಂದ ಆಹಾರವನ್ನು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಸ್ವಿಗ್ಗಿ ಕಂಪನಿಯು ಶುಕ್ರವಾರ 380 ನೌಕರರನ್ನು ವಜಾ ಮಾಡಿದೆ.

ಆರ್ಥಿಕ ಪರಿಸ್ಥಿತಿಯು ಸವಾಲಿನಿಂದ ಕೂಡಿರುವ ಕಾರಣ, ಕಂಪನಿಗೆ ಹೊಸ ರೂಪ ಕೊಡುವ ಪ್ರಕ್ರಿಯೆಯ ಭಾಗವಾಗಿ ಈ ನಿರ್ಧಾರಕ್ಕೆ ಬಂದಿರುವುದಾಗಿ ಅದು ತಿಳಿಸಿದೆ.

ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ನೇಮಕ ಮಾಡಿಕೊಂಡಿದ್ದು ಅತ್ಯಂತ ಕೆಟ್ಟ ತೀರ್ಮಾನವಾಗಿತ್ತು. ಆ ಹಂತದಲ್ಲಿ ಉತ್ತಮ ನಿರ್ಧಾರ ತೆಗೆದುಕೊಳ್ಳಬಹುದಾಗಿತ್ತು ಎಂದು ಕಂಪನಿಯ ಸಿಇಒ ಶ್ರೀಹರ್ಷ ಮಜೆಟಿ ಅವರು ಉದ್ಯೋಗಿಗಳಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ವಜಾಗೊಂಡಿರುವ ಉದ್ಯೋಗಿಗಳ ಕ್ಷಮೆ ಯಾಚಿಸಿರುವ ಅವರು, ಲಭ್ಯವಿರುವ ಎಲ್ಲಾ ಆಯ್ಕೆಗಳನ್ನು ಪರಿಶೀಲಿಸಿದ ಬಳಿಕ ಅತ್ಯಂತ ಕಠಿಣವಾದ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿಸಿದ್ದಾರೆ.

ಆಹಾರ ವಿತರಣಾ ವಹಿವಾಟಿನ ಬೆಳವಣಿಗೆ ದರವು ಕಂಪನಿ ಅಂದುಕೊಂಡಿದ್ದಕ್ಕಿಂತ ಕಡಿಮೆ ಆಗಿದೆ. ಹೀಗಾಗಿ ಲಾಭದ ಗುರಿ ಸಾಧನೆಗಾಗಿ ಪರೋಕ್ಷ ವೆಚ್ಚಗಳನ್ನು ತಗ್ಗಿಸುವತ್ತ ಗಮನ ಹರಿಸುವ ಅಗತ್ಯವಿದೆ. ಮೂಲಸೌಕರ್ಯ, ಕಚೇರಿ ಇತ್ಯಾದಿಗಳಿಗೆ ಸಂಬಂಧಿಸಿದ ಪರೋಕ್ಷ ವೆಚ್ಚಗಳನ್ನು ತಗ್ಗಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ನೌಕರರ ಮೇಲಿನ ಒಟ್ಟಾರೆ ವೆಚ್ಚವನ್ನೂ ಭವಿಷ್ಯದ ಗುರಿಗೆ ಅನುಗುಣವಾಗಿ ಹೊಂದಿಸಬೇಕಿದೆ ಎಂದು ಅವರು ಹೇಳಿದ್ದಾರೆ.

ವಜಾ ಆಗಿರುವ ನೌಕರರಿಗೆ ಅವರ ಸೇವಾ ಅವಧಿ ಮತ್ತು ಶ್ರೇಣಿಗೆ ಅನುಗುಣವಾಗಿ ಮೂರರಿಂದ ಆರು ತಿಂಗಳವರೆಗಿನ ವೇತನ ನೀಡುವ ಯೋಜನೆಯನ್ನು ಕಂಪನಿಯು ಜಾರಿಗೊಳಿಸಿದೆ. ಮೀಟ್ ಮಾರ್ಕೆಟ್‌ಪ್ಲೇಸ್ ಅನ್ನು ಶೀಘ್ರವೇ ಮುಚ್ಚುವುದಾಗಿ ಅವರು ತಿಳಿಸಿದ್ದಾರೆ. ಆದರೆ, ಇನ್‌ಸ್ಟಾಮಾರ್ಟ್ ಮೂಲಕ ಮಾಂಸ ವಿತರಣೆ ಮುಂದುವರಿಸಲಾಗುವುದು ಎಂದಿದ್ದಾರೆ.

ಚಿನ್ನದ ದರ ₹ 433 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ 10 ಗ್ರಾಂಗೆ ₹ 433ರಷ್ಟು ಏರಿಕೆ ಕಂಡು ₹ 57,025ರಂತೆ ಮಾರಾಟ ಆಯಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 990ರಷ್ಟು ಹೆಚ್ಚಾಗಿ ₹ 69,208ಕ್ಕೆ ತಲುಪಿತು.

ಅಮೆರಿಕದ ಆರ್ಥಿಕತೆಯ ಬೆಳವಣಿಗೆಯು ಮಂದಗತಿಯಲ್ಲಿ ಇರುವ ಸಾಧ್ಯತೆ ಹಾಗೂ ಫೆಡರಲ್ ರಿಸರ್ವ್‌ನ ಬಿಗಿಯಾದ ಹಣಕಾಸು ನೀತಿಯಿಂದಾಗಿ ಹಿಂಜರಿತದ ಆತಂಕ ಹೆಚ್ಚಾಗಿದೆ. ಹೀಗಾಗಿ, ಹೂಡಿಕೆಗೆ ಸುರಕ್ಷಿತ ಮಾರ್ಗವಾಗಿರುವ ಚಿನ್ನದ ಬೆಲೆಯು ಶುಕ್ರವಾರ ಏರಿಕೆ ಕಾಣುವಂತೆ ಆಯಿತು ಎಂದು ವಿಶ್ಲೇಷಕರು ಹೇಳಿದ್ದಾರೆ.

ಫೆಬ್ರುವರಿಯಲ್ಲಿ ನಡೆಯಲಿರುವ ಫೆಡರಲ್ ರಿಸರ್ವ್ ಸಭೆಯಲ್ಲಿ ಬಡ್ಡಿದರವನ್ನು ಶೇ 0.25ರಷ್ಟು ಹೆಚ್ಚಿಸುವ ಘೋಷಣೆ ಆಗಲಿದೆ ಎಂದು ಮಾರುಕಟ್ಟೆ ವಹಿವಾಟುದಾರರು ನಿರೀಕ್ಷೆ ಮಾಡಿದ್ದಾರೆ. ಇದು ಅಮೆರಿಕದ ಬಾಂಡ್ ಗಳಿಕೆ ಮೇಲೆ ಪರಿಣಾಮ ಬೀರುವ ಜೊತೆಗೆ ಚಿನ್ನದ ದರ ಹೆಚ್ಚಳಕ್ಕೆ ಕಾರಣವಾಗುತ್ತಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಹಿರಿಯ ಉಪಾಧ್ಯಕ್ಷ ನವ್‌ನೀತ್ ದಮನಿ ತಿಳಿಸಿದ್ದಾರೆ.

ಕಳಸಾ-ಬಂಡೂರಿ ಡಿಪಿಆರ್‌ಗೆ ವಿರೋಧ: ಗೋವಾ ವಿಧಾನಸಭೆಯಲ್ಲಿ ನಿರ್ಣಯ

ಪ್ರಜಾವಾಣಿ ವಾರ್ತೆ

ಪಣಜಿ: ಮಹದಾಯಿ ಯೋಜನೆಯ (ಕಳಸಾ- ಬಂಡೂರಿ ನಾಲಾ ಯೋಜನೆ) ಸಮಗ್ರ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ಜಲ ಆಯೋಗ ಅನುಮೋದನೆ ನೀಡಿರುವುದಕ್ಕೆ ವಿರೋಧ ಪಕ್ಷಗಳಿಂದ ತೀವ್ರ ಟೀಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಗುರುವಾರ ತಡರಾತ್ರಿ ಮುಕ್ತಾಯಗೊಂಡ ರಾಜ್ಯ ವಿಧಾನಸಭೆಯು ಮಹದಾಯಿ ನದಿ ಜಲಾನಯನ ಪ್ರದೇಶದಿಂದ ನೀರನ್ನು ಬೇರೆಡೆಗೆ ತಿರುಗಿಸುವ ಯಾವುದೇ ಪ್ರಯತ್ನವನ್ನು ವಿರೋಧಿಸಲು ಸರ್ವಾನುಮತದಿಂದ ನಿರ್ಧರಿಸಿತು.

ಈ ವಿಷಯದ ಬಗ್ಗೆ ಆರು ಗಂಟೆಗಳ ಚರ್ಚೆಯ ನಂತರ ಗುರುವಾರ ತಡರಾತ್ರಿ ನಿರ್ಣಯವನ್ನು ಅಂಗೀಕರಿಸಲಾಯಿತು. ಪ್ರತಿಯೊಬ್ಬ ಸದಸ್ಯರು ಈ ವಿಷಯದ ಬಗ್ಗೆ ಮಾತನಾಡಿದರು.

ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಯೂರಿ ಅಲೆಮಾವೊ ಅವರು ಅಂತರರಾಜ್ಯ ನದಿ ನೀರು ಹಂಚಿಕೆ ವಿಷಯದಲ್ಲಿ ಬಿಜೆಪಿ ರಾಜಕೀಯ ಮಾಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರೆ, ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಮಹದಾಯಿ ಜಲ ವಿವಾದ ನ್ಯಾಯಾಧಿಕರಣದ ತೀರ್ಪನ್ನು ನ್ಯಾಯಯುತವಾಗಿ ಜಾರಿಗೆ ತರಲು ಕೇಂದ್ರ ಸರ್ಕಾರ ಮಹದಾಯಿ ನೀರು ನಿರ್ವಹಣಾ ಪ್ರಾಧಿಕಾರ ರಚಿಸಬೇಕೆಂದು ಒತ್ತಾಯಿಸಿದರು.

'ಕೇಂದ್ರ ಸರ್ಕಾರವು ಮಹದಾಯಿ ಸಮಸ್ಯೆಯನ್ನು ಅಸ್ತ್ರಗೊಳಿಸಿದೆ ಮತ್ತು ಈಗ ಅದನ್ನು ರಾಜಕೀಯ ಅಸ್ತ್ರವಾಗಿ ಬಳಸುತ್ತಿದೆ' ಎಂದು ಅಲೆಮಾವೊ ಹೇಳಿದರು.

ಅಲೆಮಾವೊ ಅವರ ಹೇಳಿಕೆ ತಳ್ಳಿಹಾಕಿದ ಸಾವಂತ್, ನ್ಯಾಯಾಧಿಕರಣದ ತೀರ್ಪಿನ ನ್ಯಾಯಯುತ ಅನುಷ್ಠಾನಕ್ಕಾಗಿ ಕೇಂದ್ರದ ಮೇಲೆ ಒತ್ತಡ ಹೇರಲು ಸರ್ಕಾರ ಸಾಧ್ಯವಿರುವ ಎಲ್ಲವನ್ನೂ ಮಾಡುತ್ತಿದೆ ಎಂದು ಹೇಳಿದರು.

56 ಮಕ್ಕಳಿಗೆ ಶೌರ್ಯ ಪ್ರಶಸ್ತಿ ಪ್ರದಾನ

ನವದೆಹಲಿ (ಪಿಟಿಐ): ನೀರಿನಲ್ಲಿ ಮುಳುಗುತ್ತಿದ್ದ ಜನರನ್ನು ರಕ್ಷಿಸಿದ ಇಬ್ಬರು ಯುವಕರು, ಬೆಂಕಿ ಹೊತ್ತಿಕೊಂಡ ವಾಹನದಿಂದ ನಾಲ್ವರು ಮಕ್ಕಳನ್ನು ರಕ್ಷಿಸಿದ ಪಂಜಾಬ್ ಬಾಲಕಿಗೆ ಮಕ್ಕಳ ಹಕ್ಕುಗಳಿಗಾಗಿ ಕೆಲಸ ಮಾಡುವ ಸಂಸ್ಥೆಯೊಂದು ಶುಕ್ರವಾರ ಶೌರ್ಯ ಪ್ರಶಸ್ತಿ ನೀಡಿ ಗೌರವಿಸಿದೆ.

ಇಂಡಿಯನ್ ಕೌನ್ಸಿಲ್ ಫಾರ್ ಚೈಲ್ಡ್ ವೆಲ್ಫೇರ್ (ಐಸಿಸಿಡಬ್ಲ್ಯು) ಮೂರು ವರ್ಷಗಳ ನಂತರ ಈ ಪ್ರಶಸ್ತಿಯನ್ನು ವಿವಿಧ ರಾಜ್ಯಗಳ 56 ಮಕ್ಕಳಿಗೆ ನೀಡಲಾಯಿತು.

2020ರ ಸಾಲಿನ 22 ಪ್ರಶಸ್ತಿ ವಿಜೇತರು, 2021ರ ಸಾಲಿನ 16 ಹಾಗೂ 2022ರ ಸಾಲಿನ 18 ಮಂದಿ ಪ್ರಶಸ್ತಿ ವಿಜೇತರನ್ನು ಶುಕ್ರವಾರ ಸನ್ಮಾನಿಸಲಾಯಿತು ಎಂದು ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ. ಐಸಿಸಿಡಬ್ಲ್ಯು ಮಾರ್ಕಂಡೇಯ ಪ್ರಶಸ್ತಿ, ಪ್ರಹ್ಲಾದ ಪ್ರಶಸ್ತಿ, ಏಕಲವ್ಯ ಪ್ರಶಸ್ತಿ, ಅಭಿಮನ್ಯು ಪ್ರಶಸ್ತಿ, ಶ್ರವಣ್ ಪ್ರಶಸ್ತಿ, ಧ್ರುವ ಪ್ರಶಸ್ತಿ ಸೇರಿದಂತೆ ಐಸಿಸಿಡಬ್ಲ್ಯುನ ಇತರ ಆರು ವಿಶೇಷ ಪ್ರಶಸ್ತಿಗಳು ಸೇರಿವೆ.

ಚಿರತೆಯೊಂದಿಗೆ ಹೋರಾಡಿ ತನ್ನ ಸ್ನೇಹಿತನ ಜೀವ ಉಳಿಸಿದ 18 ವರ್ಷದ ಮೋಹಿತ್ ಚಂದ್ರ ಉಪ್ರೇಟಿ ಅವರಿಗೆ 2020ನೇ ಸಾಲಿನ ಮಾರ್ಕಂಡೇಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

2021ನೇ ಸಾಲಿನ ಇದೇ ಪ್ರಶಸ್ತಿಯನ್ನು ಛತ್ತೀಸಗಢದ 16 ವರ್ಷದ ಅಮನ್ ಜ್ಯೋತಿ ಜಾಹಿರೆ ಎಂಬ ಬಾಲಕನಿಗೆ ನೀಡಲಾಗಿದೆ.

ಸುಸ್ಥಿತಿಗೆ ಬಂದ ಇ–ಪಾಸ್‌ಬುಕ್: ಇಪಿಎಫ್‌ಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಇ-ಪಾಸ್‌ಬುಕ್ ಸೇವೆಯು ಇದೀಗ ಸರಿಯಾಗಿ ಕೆಲಸ ಮಾಡುತ್ತಿದೆ ಎಂದು ಸಂಘಟನೆಯು ಶುಕ್ರವಾರ ಟ್ವಿಟರ್ ಮೂಲಕ ಪ್ರತಿಕ್ರಿಯೆ ನೀಡಿದೆ.

ಕಳೆದ 10 ದಿನಗಳಿಂದ ಇ–ಪಾಸ್‌ಬುಕ್ ತೆರೆಯಲು ಸಾಧ್ಯವಾಗುತ್ತಿಲ್ಲ ಎಂದು ಬಳಕೆದಾರರು ಟ್ವಿಟರ್‌ನಲ್ಲಿ ಇಪಿಎಫ್‌ಒ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು.

ಈ ಕುರಿತು ಸಂಘಟನೆಯು ತನ್ನ ಅಧಿಕೃತ ಟ್ವಿಟರ್ ಹ್ಯಾಂಡಲ್ ಮೂಲಕ ಪ್ರತಿಕ್ರಿಯೆ ನೀಡಿದ್ದು, 'ಪಾಸ್‌ಬುಕ್ ತಾಂತ್ರಿಕ ಕಾರಣಗಳಿಂದಾಗಿ ಬಳಕೆಗೆ ಅಲಭ್ಯವಾಗಿತ್ತು. ಇದೀಗ ಸರಿಯಾಗಿ ಕೆಲಸ ಮಾಡುತ್ತಿದೆ' ಎಂದು ತಿಳಿಸಿದೆ.

ಎಲ್‌ಐಸಿಯಿಂದ ಜೀವನ್ ಆಜಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್‌ಐಸಿಯು ಜೀವನ್ ಆಜಾದ್ ಎನ್ನುವ ಹೊಸ ಯೋಜನೆಯನ್ನು ಆರಂಭಿಸಿದೆ. ಈ ಯೋಜನೆಯು ಸುರಕ್ಷತೆಯ ಜೊತೆಗೆ ಉಳಿತಾಯವನ್ನೂ ಒಳಗೊಂಡಿದೆ.

ವಿಮೆ ಮಾಡಿಸಿದವರು ಅಕಾಲಿಕ ಮರಣ ಹೊಂದಿದಲ್ಲಿ ಕುಟುಂಬದವರಿಗೆ ಹಣಕಾಸಿನ ಬೆಂಬಲವನ್ನು ಇದು ನೀಡಲಿದೆ. ವ್ಯಕ್ತಿ ಮೃತಪಟ್ಟಾಗ ಕುಟುಂಬದವರಿಗೆ ಸಿಗುವ ಹಣಕಾಸಿನ ನೆರವು ಒಟ್ಟು ಪ್ರೀಮಿಯಂನ ಶೇ 105ಕ್ಕಿಂತಲೂ ಕಡಿಮೆ ಇರುವಂತಿಲ್ಲ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕೆಲವು ನಿರ್ದಿಷ್ಟ ಷರತ್ತುಗಳೊಂದಿಗೆ ಕಂತುಗಳಲ್ಲಿಯೂ ಖಾತರಿ ಮೊತ್ತ ಪಡೆಯಬಹುದು. 15 ವರ್ಷಗಳಿಂದ 20 ವರ್ಷಗಳ ಅವಧಿಯನ್ನು ಆಯ್ಕೆ ಮಾಡಿಕೊಳ್ಳಬಹುದು.

ಗರಿಷ್ಠ ಖಾತರಿ ಮೊತ್ತವು ₹ 5 ಲಕ್ಷ ಇರಲಿದೆ. ಪ್ರೀಮಿಯಂ ಅನ್ನು ವರ್ಷಕ್ಕೊಮ್ಮೆ, ಆರು ತಿಂಗಳಿಗೆ, ಮೂರು ತಿಂಗಳಿಗೆ ಅಥವಾ ತಿಂಗಳಿಗೊಮ್ಮೆ ಪಾವತಿಸಬಹುದು ಎಂದು ಹೇಳಿದೆ.

ಅಸ್ಕಾ ದೇಶದ ನಂ.1 ಪೊಲೀಸ್ ಠಾಣೆ

ಭುವನೇಶ್ವರ(ಪಿಟಿಐ): ಒಡಿಶಾದ ಗಂಜಾಂ ಜಿಲ್ಲೆಯ ಅಸ್ಕಾ ಪೊಲೀಸ್ ಠಾಣೆ ದೇಶದ ನಂಬರ್ 1 ಠಾಣೆ ಎಂಬ ಕೀರ್ತಿಗೆ ಪಾತ್ರವಾಗಿದೆ.

ಶುಕ್ರವಾರ ನವದೆಹಲಿಯಲ್ಲಿ ನಡೆದ ಡಿಜಿಪಿ/ಐಜಿಪಿಗಳ ಸಮ್ಮೇಳನದಲ್ಲಿ ಅಸ್ಕಾ ಪೊಲೀಸ್ ಠಾಣೆಯ ಪ್ರಭಾರಿ ಇನ್‌ಸ್ಪೆಕ್ಟರ್ ಪ್ರಶಾಂತ ಕುಮಾರ್ ಸಾಹೋ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪ್ರಶಸ್ತಿ ನೀಡಿದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

20–1–2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10550
ದಪ್ಪ ಗುಜರಾತ್(ಹೊಸ)	11600-11650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1625)
ಒಂದು ವಾರದ ಡೆಲಿವರಿ	1620 (1620)
ಸೋಯಾ ಕಚ್ಚಾ	1150 (---)
ಪಾಮ್ ವಾರದ ಡೆಲಿವರಿ	915 (916)
ಸೂರ್ಯಕಾಂತಿ ಎಣ್ಣೆ ಕಚ್ಚಾ	1120 (1120)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,800 (56,450)
ಬೆಳ್ಳಿ ಕೆ.ಜಿ 68,300 (67,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿರಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	480-500
ರಾಶಿ	550-600
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	500
ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	22500-40000
ಚಿತ್ರದುರ್ಗ	
ಆಪಿ	45600-46000
ಬೆಟ್ಟೆ	34400-34800
ಕೆಂಪುಗೋಟು	29800-30200
ರಾಶಿ	45100-45500
ಹೊಸನಗರ	
ಚಾಲಿ	26499-27899
ಕೆಂಪುಗೋಟು	32081-38009
ರಾಶಿ	46609-47349

ಕಾರ್ಕಳ	
ಹೊಸತು	30000-40000
ಹಳತು	40000-54500
ಕುಮಟ	
ಚಿಪ್ಪು	27509-32999
ಕೋಕ	16509-29509
ಫ್ಯಾಕ್ಟರಿ	11509-19879
ಹಳೆಚಾಲಿ	36609-40799
ಹೊಸಚಾಲಿ	34109-36749
ಸಿದ್ದಾಪುರ	
ಬಿಳಿಗೋಟು	30699-33499
ಚಾಲಿ	37399-41199
ಕೋಕ	27099-33189
ಕೆಂಪುಗೋಟು	28119-32919
ರಾಶಿ	43599-45839
ತಟ್ಟಿಬೆಟ್ಟೆ	38009-42519

ಶಿರಸಿ	
ಬೆಟ್ಟೆ	33100-43839
ಬಿಳಿಗೋಟು	20899-37600
ಚಾಲಿ	33599-42676
ಕೆಂಪುಗೋಟು	31990-34879
ರಾಶಿ	35099-46409
ಯಲ್ಲಾಪುರ	
ಬಿಳಿಗೋಟು	24899-34699
ಕೋಕ	16899-28499
ಹಳೆಚಾಲಿ	36199-42391
ಹೊಸಚಾಲಿ	32899-36099
ಕೆಂಪುಗೋಟು	26899-35699
ರಾಶಿ	45899-52969
ತಟ್ಟಿಬೆಟ್ಟೆ	37899-45099

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	14000	13900	154.60 ಸೆಂಟ್ಸ್
ಎಸಿ	6720	6850	6050	
ಆರ್‌ಪಿ	8400	8400	7950	ಲಂಡನ್
ಆರ್‌ಸಿ	4500	164 on OT	4250	1918 ಡಾಲರ್ಸ್

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

...ಸವಿನೆನಪು...

ನಿಮ್ಮ ಪ್ರೀತಿ, ಆದರ್ಶಗಳೇ ನಮ್ಮ ಜೀವನಕ್ಕೆ ದಾರಿದೀಪ, ನಿಮ್ಮಗಳ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ
ಕೆ. ಹೇಮಾರೆಡ್ಡಿ,
ಎಚ್. ಸುನಿಲ್‌ಕುಮಾರ್ ಮತ್ತು ದೀಕ್ಷಾ ಎಂ., ರಿಯಾ ಎಸ್. ರೆಡ್ಡಿ, ಮಾ॥ ದಕ್ಷ್.ಎಸ್., ಎಚ್.ಭರತ್ ಮತ್ತು ಕಾವ್ಯ, ಎಚ್. ಶೋಭ ಮತ್ತು ಡಾ॥ ವಿ.ರಾಜೀವ್ ಎಂ.ಡಿ., ಆರ್. ಪ್ರಣವ್ ಸ್ವರೂಪ್, ಆರ್. ಹರಿತ್ರ ರೆಡ್ಡಿ ಹಾಗೂ ಬಂಧು-ಮಿತ್ರರು

ಶ್ರೀ ಡಿ. ಕೃಷ್ಣಾರೆಡ್ಡಿ ಮತ್ತು ಶ್ರೀಮತಿ ಅಮರಾವತಮ್ಮ
ದೊಮ್ಮಲೂರು, ಬೆಂಗಳೂರು
ನಿಧನ: 21-1-1992 ನಿಧನ 12-7-2007

LOOKING FOR JOB OPPORTUNITY
Refer Classifieds on Wednesday

ಭಾವಪೂರ್ಣ ಶ್ರದ್ಧಾಂಜಲಿ

ವಿಶ್ವನಾಥ ಗೌಡ

ನಮ್ಮ ಪೂಜ್ಯ ತಂದೆಯವರಾದ ಶ್ರೀ ವಿಶ್ವನಾಥ ಗೌಡ ರವರು ದಿನಾಂಕ 19-01-2023 ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಕಾರ್ಯಗಳು ಸ್ವಗೃಹ ಕಗ್ಗದಾಸಪುರ, ಬೆಂಗಳೂರು-93 ನಡೆಯಲ್ಲಿದೆ.
ಇಂತಿ ದು:ಖತಪ್ತರು
ಕೆ.ವಿ. ಸವಿತಾ, ಕೆ.ವಿ.ಗೀತಾ, ಕೆ.ವಿ.ಅನಿಲಕುಮಾರ್ ಹಾಗೂ ಬಂಧು-ಮಿತ್ರರು.
ಫೋ : 88610 64279.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

1ನೇ ವರ್ಷದ ಚಿರಸ್ಮರಣೆ



ಶ್ರೀ ಎಸ್ ಹೆಚ್ ಮಂಜುನಾಥ ಸ್ವಾಮಿ
ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ಬೆವಿಕಮ್, ಬೆಂಗಳೂರು
22.7.1957 – 21.01.2022
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆಯಿತು. ಸದಾ ನಿಮ್ಮ ನೆನಪಲ್ಲಿರುವ
ಶ್ರೀಮತಿ ಪುಷ್ಪಲತಾ ಮತ್ತು ಮಕ್ಕಳಾದ ಚಿ. ಹರ್ಷ ಮತ್ತು ಚಿ. ಅಶೋಕ

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಶಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವಾಹನ

Four Wheelers Selling

Others

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ವ್ಯಾಪಾರ

Business to Business

Services

ಫ್ರಾಂಚೈಸಿಗಾಗಿ B to B ONLINE ಸೇವೆಗಳನ್ನು ಗ್ರಾಮಗಳಿಗೆ ಪರಿಚಯಿಸಲು ಜಿಲ್ಲಾ ತಾಲ್ಲೂಕುಗಳಿಗೆ ಫ್ರಾಂಚೈಸಿಗಾಗಿ ಸಂಪರ್ಕಿಸಿ: ಆಶೀರ್ವಾದ್ ಪೇಸ್ ಬೆಂಗಳೂರು. 8217593354.

TRAVEL CORNER

ಭಾರತೀಯ ರೈಲ್ವೆ
ಮಹಾಶಿವರಾತ್ರಿ ವಿಶೇಷ ರೈಲು
ವಾರಣಾಸಿ- ಗಯಾ ಪ್ರಯಾಗರಾಜ್ - ಅಯೋಧ್ಯ
12.02.23- 9 ದಿವಸ - 2SL Rs 16500
ರೈಲಿನಲ್ಲಿ ಪ್ರಯಾಣ- ವಸತಿ ಬಸ್-ಊಟ ಸೆಕ್ಯೂರಿಟಿ ಟೂರ್ ಮ್ಯಾನೇಜರ್
8754404260-9620393938
ಭಾರತ ಸರ್ಕಾರದಿಂದ ಮಾನ್ಯತೆ ಪಡೆದಿದೆ ಟ್ರಾವೆಲ್ ಟೈಮ್ಸ್
BOOK ONLINE - WWW.ULARAIL.COM

23.1.2023 ಕೇರಳ, ತಮಿಳುನಾಡು ಪ್ರವಾಸ 4.2.2023 ಗುಜರಾತ್, ಮಧ್ಯಪ್ರದೇಶ 19.2.2023 ದೆಹಲಿ, ಅಮೃತ್ಸರ್ ವೈಷ್ಣೋದೇವಿ, ಹರಿದ್ವಾರ, ಅಯೋಧ್ಯಾ, ಕಾಶಿ 23.4.2023 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್(ಹನುಮಂತನಗರ) 9845035349, 9482435755

★7.02.2023 16ದಿನಗಳು★ 95ದಿವ್ಯದೇಶ ಪ್ರವಾಸ. 04.03.2023 13/8ದಿನಗಳು ವಿಮಾನದಲ್ಲಿ ಕಾಶಿ,ಪ್ರಯಾಗ ಗಯಾ,ಆಗ್ರಾ ಮಥುರ, ಅಯೋಧ್ಯ.ಆರ್.ಗಾಂಧಿ ಟೂರ್ಸ್(ರಿ) ತ್ಯಾಗರಾಜನಗರ. 9945445809/ 9902433500

★22.02.2023 14ದಿನಗಳು★ ಮಧ್ಯಪ್ರದೇಶ ಗುಜರಾತ್, ರಾಜಸ್ಥಾನ, 4ಜ್ಯೋತಿರ್ಲಿಂಗ ದ್ವಾರಕಾ, ನಿಷ್ಕಳಂಕಮಹಾದೇವ್, ಅಂಬಾಜಿ,ಜೆಸ್ಮಲೇರ್, ಬಿಕಾನೇರ್ ಜೈಪುರ. ಶ್ರೀಗಂಗಾ ಟೂರಿಸ್ಟ್: 9480253807/ 8105522123

DH
To Place your ad in Deccan Herald & Prajavani Classifieds
For details contact :
9901641752 : 9886213331
9845114560 : 9731810277
080 - 45557163 / 164

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘ (ರಿ)
ಪ್ರಕಟಣೆ
ಸಂಘದ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಕರ್ನಾಟಕ ರಾಜ್ಯ ತಿಗಳರ (ವನ್ನಿಕುಲ ಕ್ಷತ್ರಿಯರ) ಸಂಘ (ರಿ) ನಂ. 150, ಲಾಲ್‌ಬಾಗ್ ಸಿದ್ದಾಪುರ, ಜಯನಗರ 1ನೇ ಬ್ಲಾಕ್, ಬೆಂಗಳೂರು – 560011 ಈ ಸಂಘದ ಕಾರ್ಯಕಾರಿ ಸಮಿತಿ ಸಹಕಾರ ಸಂಘಗಳ ಉಪ ನಿಬಂಧಕರು, 2ನೇ ವಲಯ, ಬೆಂಗಳೂರು ನಗರ ಜಿಲ್ಲೆ, ಇವರ ಆದೇಶ ದಿನಾಂಕ: 26.08.2022 ರಲ್ಲಿ ಸೂಚಿಸಲಾಗಿರುತ್ತದೆ. ಆದ್ದರಿಂದ ಸಂಘದ ಚುನಾವಣೆ ಸಂಬಂಧ ಸಂಘದ ದೃಢೀಕೃತ ಬೈಲಾ ರೀತ್ಯಾ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಕರಡು ಮತದಾರರ ಪಟ್ಟಿಯನ್ನು ಸಿದ್ದಪಡಿಸಿ ಸಂಘದ ನಾಮ ಫಲಕದಲ್ಲಿ ಪ್ರಕಟಿಸಲಾಗಿರುತ್ತದೆ. ಈ ಕರಡು ಮತದಾರರ ಪಟ್ಟಿಯ ಬಗ್ಗೆ ಆಕ್ಷೇಪಣೆಗಳೇನದರೂ ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ ಮುಂದಿನ 15 ದಿನದೊಳಗೆ ನಿಮ್ಮ ಆಕ್ಷೇಪಣೆಗಳನ್ನು ಸೂಕ್ತ ದಾಖಲಾತಿ ಗಳೊಂದಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಅಥವಾ ಚುನವಣಾಧಿ ಕಾರಿಗಳಿಗೆ ಸಲ್ಲಿಸಲು ತಿಳಿಸಿದೆ. ತಪ್ಪಿದ್ದಲ್ಲಿ ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಪರಿಗಣಿಸಿ ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಸಿದ್ದಪಡಿಸಿ ಸಂಘದ ಚುನಾವಣಾಧಿ ಕಾರಿಗಳಿಗೆ ನೀಡಿ ಸಂಘದ ಚುನಾವಣೆಯನ್ನು ನಡೆಸಲಾಗುವುದೆಂದು ಈ ಮೂಲಕ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದೆ.
ದಿನಾಂಕ: 21.01.2023
ಸಹಿ /- ಪ್ರಧಾನ ಕಾರ್ಯದರ್ಶಿ.

TATA MOTORS Connecting Aspirations
ಸಂಕ್ರಾಂತಿಯಂದು ಟಾಟಾ ವಾಹನ ಖರೀದಿಸಿ ನಿಮ್ಮ ಬಾಳಿನ ಹೊಸ ಅಧ್ಯಾಯ ಪ್ರಾರಂಭಿಸಿ



100%* ವರೆಗೆ ಸಾಲ ಸೌಲಭ್ಯ
81235 23146
INTRA V50
* T & C Apply

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ.8884777502, 8884777503.

ಪ್ರವಾಸ

Travel

ಮಹಾಶಿವರಾತ್ರಿ ಪ್ರಯುಕ್ತ 9/2/2023 ಮತ್ತು 24/2/2023ರಿಂದ ವಿಮಾನ ಮತ್ತು ಎ.ಸಿ.ಬಸ್ಸಿನಲ್ಲಿ 13/16 ದಿನಗಳ ನೈಮಿಶಾರಣ್ಯ ಮುಕ್ತಿನಾಥ್,ಪಶುಪತಿನಾಥ್, ಫೋಕ್ರ,ಭಕ್ತಿಪುರ್,ಕಾಶಿ,ಪೂರಿ, ಕೋಲ್ಕತ್ತಾ, ಇತ್ಯಾದಿ.ಹಾಗೂ 27/4/2023ರಿಂದ 34ದಿನಗಳ ಚಾರಧಾಮ್ ಸಮೇತ ವೈಷ್ಣೋದೇವಿ,ಅಮೃತ್ ಸರ್,ಕಾಶಿ, ಗುಲ್ಮಾರ್ಗ್,ಕಾಶ್ಮೀರ,ಹರಿದ್ವಾರ, ನವದೆಹಲಿ.~ಏಷ್ಯನ್ ಟ್ರಾವೆಲ್ ಲೈನ್ಸ್ 164/3,ಅರ್.ವಿ.ರಸ್ತೆ ಬೆಂಗಳೂರು.~04,ಸಂಪರ್ಕಿಸಿ: ಷಣ್ಮುಗಾನಂದ:9480182865. 8105657052.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೇಣುಗೋಪಾಲ್ ಧೂತ್‌ಗೆ ಮಧ್ಯಂತರ ಜಾಮೀನು



ಮುಂಬೈ(ಪಿಟಿಐ): ವಿಡಿಯೊಕಾನ್ ಸಮೂಹದ ಸಂಸ್ಥಾಪಕ ವೇಣುಗೋಪಾಲ್ ಧೂತ್ ಅವರಿಗೆ ಬಾಂಬೆ ಹೈಕೋರ್ಟ್ ಶುಕ್ರವಾರ ಮಧ್ಯಂತರ ಜಾಮೀನು ಮಂಜೂರು ಮಾಡಿದೆ.

ಇದೇ ವೇಳೆ, 'ಧೂತ್ ಅವರ ಬಂಧನಕ್ಕೆ ಸಿಬಿಐ ಉಲ್ಲೇಖಿಸಿರುವ ಕಾರಣಗಳು ಸಾಮಾನ್ಯವಾದದ್ದು ಮತ್ತು ಭೌತಿಕ ಆಧಾರವಿಲ್ಲದ್ದು' ಎಂದು ಕೋರ್ಟ್ ಹೇಳಿದೆ.

ವಿಡಿಯೊಕಾನ್–ಐಸಿಐಸಿಐ ಬ್ಯಾಂಕ್ ಅಕ್ರಮವಾಗಿ ಸಾಲ ಮಂಜೂರು ಮಾಡಿದ ಆರೋಪದಡಿ ಡಿ.26ರಂದು ಸಿಬಿಐ ಅಧಿಕಾರಿಗಳು ಧೂತ್ ಅವರನ್ನು ಬಂಧಿಸಿದ್ದರು. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದರು.

ಇದೇ ಪ್ರಕರಣದಲ್ಲಿ ಜನವರಿ 9ರಂದು ಐಸಿಐಸಿಐ ಬ್ಯಾಂಕ್‌ನ ಸಿಇಒ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಚಂದಾ ಕೊಚ್ಚರ್ ಹಾಗೂ ಅವರ ಪತಿ ದೀಪಕ್ ಕೊಚ್ಚರ್ ಅವರಿಗೆ ಬಾಂಬೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು.

ಆರೋಪ ಪಟ್ಟಿಗಳು ಸಾರ್ವಜನಿಕ ದಾಖಲೆಯಲ್ಲ: ಸುಪ್ರೀಂ ಕೋರ್ಟ್

'ಆನ್‌ಲೈನ್‌ಗೆ ಅಪ್‌ಲೋಡ್ ಅಗತ್ಯವಿಲ್ಲ'

ನವದೆಹಲಿ (ಪಿಟಿಐ): 'ಕ್ರಿಮಿನಲ್ ಅಪರಾಧ ಪ್ರಕರಣಗಳಿಗೆ ಸಂಬಂಧಿಸಿ ಸಲ್ಲಿಸಲಾಗುವ ಆರೋಪ ಪಟ್ಟಿ ಸಾರ್ವಜನಿಕ ದಾಖಲೆಯಲ್ಲ. ಉಚಿತವಾಗಿ ಲಭ್ಯವಾಗುವಂತೆ ಇದನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಆರೋಪ ಪಟ್ಟಿಗಳು ಸಾರ್ವಜನಿಕವಾಗಿ ಸಿಗುವಂತೆ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಬೇಕು ಎಂದು ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಸಿ.ಟಿ.ರವಿಕುಮಾರ್ ಅವರಿದ್ದ ಪೀಠವು ಶುಕ್ರವಾರ ವಜಾ ಮಾಡಿತು.

'ಆರೋಪ ಪಟ್ಟಿಗಳನ್ನು ಅಪ್‌ಲೋಡ್ ಮಾಡುವುದು ಕ್ರಿಮಿನಲ್ ಅಪರಾಧ ಸಂಹಿತೆ (ಸಿಆರ್‌ಪಿಸಿ) ನಿಯಮಗಳಿಗೂ ವಿರುದ್ಧವಾದುದು' ಎಂದು ಪೀಠವು ಅಭಿಪ್ರಾಯಪಟ್ಟಿತು.

ಎನ್‌ಜಿಒ ಅಥವಾ ಇತರೆ ಸಂಸ್ಥೆಗಳು ಸೇರಿದಂತೆ ಸಂಬಂಧಿಸಿದಲ್ಲದವರಿಗೆ ಆರೋಪ ಪಟ್ಟಿ ದೊರೆತಲ್ಲಿ ಅದು ದುರ್ಬಳಕೆ ಆಗುವ ಸಾಧ್ಯತೆಗಳು ಇರುತ್ತವೆ ಎಂದು ಪೀಠವು ಮೌಖಿಕವಾಗಿ ಅಭಿಪ್ರಾಯಪಟ್ಟಿತು.

ಸ್ವಯಂ ಪ್ರೇರಿತವಾಗಿ ಮಾಹಿತಿ ಪ್ರಕಟಿಸುವುದು ಸಾರ್ವಜನಿಕ ಸೇವಾ ಸಂಸ್ಥೆಗಳ ಕರ್ತವ್ಯ. ಅಪರಾಧವನ್ನು ಯಾರು ಎಸಗಿದ್ದಾರೆ, ಆರೋಪಿ ಯಾರು ಎಂದು ತಿಳಿಯುವ ಹಕ್ಕು ಪ್ರತಿ ನಾಗರಿಕನಿಗೂ ಇದೆ ಎಂದು ವಕೀಲ ಪ್ರಶಾಂತ್ ಭೂಷಣ್ ಅವರು ಪ್ರತಿಪಾದಿಸಿದ್ದರು.

ಸಿಆರ್‌ಪಿಸಿ ಸೆಕ್ಷನ್ 173ರ ಅನ್ವಯ ಪೊಲೀಸರು ದಾಖಲಿಸುವ ಎಫ್‌ಐಆರ್‌ಗಳು ಉಚಿತವಾಗಿ ಸಾರ್ವಜನಿಕವಾಗಿ ಸಿಗುವಂತಿರಬೇಕು ಎಂದು ಕೋರಿ ಪತ್ರಕರ್ತ ಸೌರವ್ ದಾಸ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿತು.

ಬಿಹಾರ ಜಾತಿ ಗಣತಿ: ಅರ್ಜಿಗಳ ವಿಚಾರಣೆಗೆ ನಕಾರ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಜಾತಿ ಗಣತಿ ನಡೆಸುವ ರಾಜ್ಯ ಸರ್ಕಾರದ ತೀರ್ಮಾನವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ವಿವಿಧ ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿತು.

ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ವಿಕ್ರಂನಾಥ್ ಅವರಿದ್ದ ಪೀಠವು, 'ಈ ಅರ್ಜಿಗಳು ವಿಚಾರಣೆಗೆ ಅರ್ಹವಲ್ಲ. ಅರ್ಜಿದಾರರು ಸಂಬಂಧಿಸಿದ ಹೈಕೋರ್ಟ್ ಮೊರೆ ಹೋಗಬಹುದು' ಎಂದು ಹೇಳಿತು.

'ಇದು, ಪ್ರಚಾರದ ಆಸಕ್ತಿವುಳ್ಳ ಅರ್ಜಿಯಾಗಿದೆ. ಇಂತಹ ಜಾತಿಗೆ, ಇಷ್ಟು ಪ್ರಮಾಣದ ಮೀಸಲು ನಿಗದಿಪಡಿಸಿ ಎಂದು ನಾವು ಹೇಗೆ ಹೇಳಲು ಸಾಧ್ಯ. ಹೀಗೆ ನಿರ್ದೇಶನ ನೀಡಲು ಹಾಗೂ ಇಂತಹ ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಲು ಆಗದು' ಎಂದು ಸ್ಪಷ್ಟಪಡಿಸಿತು.

ಸರ್ಕಾರೇತರ ಸೇವಾ ಸಂಸ್ಥೆ ಸಲ್ಲಿಸಿದ್ದ ಅರ್ಜಿಯು ಒಳಗೊಂಡಂತೆ ಮೂರು ಪ್ರತ್ಯೇಕ ಅರ್ಜಿಗಳು ಈ ಸಂಬಂಧ ಸಲ್ಲಿಕೆಯಾಗಿದ್ದವು.

ರೋಡ್ ಷೋಗೆ ನಿಷೇಧ: ಆಂಧ್ರದ ಅರ್ಜಿ ವಜಾ

ನವದೆಹಲಿ: ರಾಷ್ಟ್ರೀಯ ಹೆದ್ದಾರಿ, ರಸ್ತೆಗಳಲ್ಲಿ ಸಾರ್ವಜನಿಕ ರ‍್ಯಾಲಿ ನಡೆಸದಂತೆ ಆಂಧ್ರಪ್ರದೇಶ ಸರ್ಕಾರ ಹೊರಡಿಸಿದ್ದ ಆದೇಶವನ್ನು ಜನವರಿ 23ರವರೆಗೆ ಆಂಧ್ರಪ್ರದೇಶ ಹೈಕೋರ್ಟ್ ಅಮಾನತು ಮಾಡಿತ್ತು. ಇದನ್ನು ಪ್ರಶ್ನಿಸಿ ಆಂಧ್ರಪ್ರದೇಶ ಸರ್ಕಾರವು ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

'ಜನವರಿ 23ರಂದು ಹೈಕೋರ್ಟ್‌ನ ವಿಭಾಗೀಯ ಪೀಠವು ಈ ಕುರಿತು ವಿಚಾರಣೆ ನಡೆಸಲಿದೆ. ಅಲ್ಲಿ ನೀವು ನಿಮ್ಮ ವಾದ ಮಂಡಿಸಬಹುದು' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠ ಹೇಳಿತು.

ಕಳೆದ ವರ್ಷ ಡಿ.28ರಂದು ನೆಲ್ಲೂರು ಜಿಲ್ಲೆಯಲ್ಲಿ ನಡೆದ ಟಿಡಿಪಿ ನಡೆಸಿದ ರೋಡ್ ಷೋ ವೇಳೆ ಸಂಭವಿಸಿದ ಕಾಲ್ತುಳಿತದಲ್ಲಿ ಎಂಟು ಮಂದಿ ಮೃತಪಟ್ಟಿದ್ದರು. ಆದ್ದರಿಂದ ಆಂಧ್ರಪ್ರದೇಶ ಸರ್ಕಾರವು ಹೆದ್ದಾರಿಗಳಲ್ಲಿ ರೋಡ್ ಷೋ ನಡೆಸದಂತೆ ಜನವರಿ 2ರಂದು ಆದೇಶ ಹೊರಡಿಸಿತ್ತು. 'ಈ ಆದೇಶದಲ್ಲಿ ವಿರೋಧದ ಧ್ವನಿಗಳನ್ನು ಅಡಗಿಸುವ ಉದ್ದೇಶ ಇದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿತ್ತು.

ನಿಖಾ ಹಲಾಲ: ವಿಚಾರಣೆಗೆ ಐವರು ನ್ಯಾಯಮೂರ್ತಿಗಳ ಪೀಠ ಸ್ಥಾಪನೆ

ನವದೆಹಲಿ (ಪಿಟಿಐ): ಮುಸ್ಲಿಂ ಸಮುದಾಯದಲ್ಲಿ ಆಚರಣೆಯಲ್ಲಿರುವ ಬಹುಪತ್ನಿತ್ವ ಮತ್ತು 'ನಿಖಾ ಹಲಾಲ' ಪದ್ಧತಿಗಳ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಲು ಐವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ ಸ್ಥಾಪಿಸುವುದಾಗಿ ಸುಪ್ರೀಂ ಕೋರ್ಟ್ ಶುಕ್ರವಾರ ತಿಳಿಸಿದೆ.

ಈ ಹಿಂದೆ ರಚಿಸಿದ್ದ ಸಾಂವಿಧಾನಿಕ ಪೀಠದಲ್ಲಿ ಇದ್ದವರ ಪೈಕಿ ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಮತ್ತು ಹೇಮಂತ್ ಗುಪ್ತಾ ನಿವೃತ್ತರಾಗಿದ್ದು, ಹೊಸದಾಗಿ ಐವರು ನ್ಯಾಯಮೂರ್ತಿಗಳ ಪೀಠ ರಚಿಸುವ ಅಗತ್ಯವಿದೆ ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿರುವವರ ಪೈಕಿ ಒಬ್ಬರಾದ ವಕೀಲ ಅಶ್ವಿನಿ ಉಪಾಧ್ಯಾಯ ಅವರ ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರನ್ನೊಳಗೊಂಡ ನ್ಯಾಯಪೀಠ ಪರಿಗಣಿಸಿದೆ.

ಐವರು ನ್ಯಾಯಮೂರ್ತಿಗಳ ಪೀಠದ ಮುಂದೆ ಮುಖ್ಯವಾದ ವಿಷಯಗಳು ಬಾಕಿ ಉಳಿದಿವೆ. ನಾವು ಪೀಠವೊಂದನ್ನು ರಚಿಸುತ್ತೇವೆ ಎಂದು ಸಿಜೆಐ ಹೇಳಿದರು.

ಕಳೆದ ವರ್ಷ ಆ.30 ರಂದು ಅರ್ಜಿಗಳ ವಿಚಾರಣೆ ನಡೆಸಿದ್ದ ಸಾಂವಿಧಾನಿಕ ಪೀಠವು, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ರಾಷ್ಟ್ರೀಯ ಮಹಿಳಾ ಆಯೋಗ, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗವನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಿಗೆ ಕಕ್ಷಿದಾರರನ್ನಾಗಿ ಮಾಡಿ, ಪ್ರತಿಕ್ರಿಯೆ ಸಲ್ಲಿಸುವಂತೆ ಕೋರಿತ್ತು.

ಬಹುಪತ್ನಿತ್ವ ಮತ್ತು 'ನಿಖಾ ಹಲಾಲ' ಅನ್ನು ಅಸಾಂವಿಧಾನಿಕ ಮತ್ತು ಕಾನೂನುಬಾಹಿರ ಎಂದು ಘೋಷಿಸಲು ನಿರ್ದೇಶನ ನೀಡುವಂತೆ ಉಪಾಧ್ಯಾಯ ಅವರು ಪಿಐಎಲ್‌ನಲ್ಲಿ ಕೋರಿದ್ದಾರೆ.

ಬಹು ಪತ್ನಿತ್ವ ಪದ್ಧತಿಯು ಮುಸ್ಲಿಂ ಪುರುಷನಿಗೆ ನಾಲ್ಕು ವಿವಾಹವಾಗಲು ಅನುವು ಮಾಡಿಕೊಡುತ್ತದೆ ಹಾಗೂ ನಿಖಾ ಹಲಾಲ ವಿಚ್ಛೇದನದ ಬಳಿಕ ಮಹಿಳೆಯು ತನ್ನ ಮಾಜಿ ಪತಿಯ ಜತೆಗೆ ಮದುವೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದ್ದಾಗಿದೆ.

ರೋಜ್‌ಗಾರ್ ಮೇಳ: ಭಾರತವು ಬದಲಾವಣೆಗೆ ಸಾಕ್ಷಿಯಾಗಿದೆ: ಮೋದಿ

71 ಸಾವಿರ ಮಂದಿಗೆ ನೇಮಕಾತಿ ಪತ್ರ

ನವದೆಹಲಿ (ಪಿಟಿಐ): ರೋಜ್‌ಗಾರ್ ಮೇಳದ ಭಾಗವಾಗಿ ವಿವಿಧ ಇಲಾಖೆಗಳ 71,426 ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ವರ್ಚುವಲ್ ಮೂಲಕ ನೇಮಕಾತಿ ಆದೇಶಗಳನ್ನು ವಿತರಣೆ ಮಾಡಿದರು.

ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, 'ಭಾರತವು ಬದಲಾವಣೆಗೆ ಸಾಕ್ಷಿಯಾಗಿದೆ. ವೇಗವಾಗಿ ಬೆಳೆಯುತ್ತಿರುವ ನಮ್ಮ ದೇಶದಲ್ಲಿ ಉದ್ಯೋಗ ಮತ್ತು ಸ್ವ-ಉದ್ಯೋಗ ಅವಕಾಶಗಳನ್ನು ನಿರಂತರವಾಗಿ ಸೃಷ್ಟಿಸಲಾಗುತ್ತಿದೆ. ದೇಶವು ಕ್ಷಿಪ್ರ ಬೆಳವಣಿಗೆಗೆ ಸಾಕ್ಷಿಯಾದಾಗ, ಸ್ವ-ಉದ್ಯೋಗದ ಅಸಂಖ್ಯಾತ ಅವಕಾಶಗಳು ಸೃಷ್ಟಿಯಾಗುತ್ತವೆ. ಕಳೆದ ಎಂಟು ವರ್ಷಗಳಲ್ಲಿ ಕೈಗೊಂಡ ಮೂಲಸೌಕರ್ಯಗಳ ವ್ಯಾಪಕ ಅಭಿವೃದ್ಧಿಯು ಸ್ವಉದ್ಯೋಗ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳನ್ನು ತೆರೆದಿಟ್ಟಿದೆ. ಇದಕ್ಕೆ ದೇಶವು ಇಂದು ಸಾಕ್ಷಿಯಾಗಿದೆ' ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ರೋಜ್‌ಗಾರ್ ಮೇಳದಡಿ 71 ಸಾವಿರ ಉದ್ಯೋಗ ನೇಮಕಾತಿ ಆದೇಶಗಳನ್ನು ವರ್ಚುವಲ್ ಮೂಲಕ ವಿತರಿಸಿದರು — ಪಿಟಿಐ ಚಿತ್ರ

'ರೋಜ್‌ಗಾರ್ ಮೇಳ'ವು ನಮ್ಮ ಸರ್ಕಾರದ ಹೆಗ್ಗುರುತಾಗಿ ಮಾರ್ಪಟ್ಟಿದೆ. ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು ಮತ್ತು ಮತ್ತಷ್ಟು ವೇಗ ಹೆಚ್ಚಿಸುವ ಸಲುವಾಗಿ ನಮ್ಮ ಸರ್ಕಾರವು ಹಲವು ಬದಲಾವಣೆಗಳನ್ನು ಮಾಡಿದೆ' ಎಂದರು.

ನೇಮಕಾತಿ ಆದೇಶ ಪಡೆದವರಲ್ಲಿ ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಕಿರಿಯ ಎಂಜಿನಿಯರ್‌ಗಳು, ಲೋಕೊ ಪೈಲಟ್‌ಗಳು, ತಂತ್ರಜ್ಞರು, ಇನ್‌ಸ್ಪೆಕ್ಟರ್, ಉಪ ತನಿಖಾಧಿಕಾರಿಗಳು, ಕಾನ್‌ಸ್ಟೆಬಲ್, ಸ್ಟೆನೊಗ್ರಾಫರ್, ಕಿರಿಯ ಲೆಕ್ಕಾಧಿಕಾರಿಗಳು, ಗ್ರಾಮೀಣ ಅಂಚೆ ಸಿಬ್ಬಂದಿ, ಆದಾಯ ತೆರಿಗೆ ತನಿಖಾಧಿಕಾರಿಗಳು, ಶಿಕ್ಷಕರು, ನರ್ಸ್‌ಗಳು, ವೈದ್ಯರು, ಸಾಮಾಜಿಕ ಭದ್ರತಾ ಅಧಿಕಾರಿ ಹುದ್ದೆಗಳಿಗೆ ಆಯ್ಕೆಯಾದವರು ಇದ್ದರು.

ಪ್ರಧಾನಿ ಅವರು ಈ ಯೋಜನೆಯಡಿ ಈವರೆಗೆ 2.17 ಲಕ್ಷಕ್ಕೂ ಹೆಚ್ಚು ಜನರಿಗೆ ನೇಮಕಾತಿ ಆದೇಶಗಳನ್ನು ವಿತರಿಸಿದ್ದಾರೆ. 2023ರ ಡಿಸೆಂಬರ್ ಒಳಗೆ ತ್ವರಿತವಾಗಿ 10 ಲಕ್ಷ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳಿಗೆ ಮೋದಿ ಅವರು ಕಳೆದ ಜೂನ್‌ನಲ್ಲಿ ಆದೇಶಿಸಿದ್ದರು.

'71 ಸಾವಿರ ಉದ್ಯೋಗ ತುಂಬಾ ಕಡಿಮೆ'

'ಸರ್ಕಾರದಲ್ಲಿ ಈಗಲೂ 30 ಲಕ್ಷ ಹುದ್ದೆಗಳು ಖಾಲಿ ಇವೆ. ಹೀಗಿರುವಾಗ ಯುವ ಜನರಿಗೆ ಪ್ರಧಾನಿಯವರು ಬರೀ 71 ಸಾವಿರ ನೇಮಕಾತಿ ಪತ್ರಗಳನ್ನು ವಿತರಿಸಿರುವುದು ಕಡಿಮೆಯಲ್ಲವೇ. ನಿಮ್ಮ ಭರವಸೆ ಪ್ರಕಾರ ಎಂಟು ವರ್ಷಗಳಲ್ಲಿ 16 ಕೋಟಿ ಜನರಿಗೆ ಉದ್ಯೋಗ ನೀಡಬೇಕಾಗಿತ್ತು. ಯಾಕೆ ನೀಡಲಿಲ್ಲ ಎಂಬುದನ್ನು ತಿಳಿಸಬಹುದೇ' ಎಂದು ಕಾಂಗ್ರೆಸ್ ಪಕ್ಷ ಮೋದಿ ಅವರನ್ನು ಪ್ರಶ್ನಿಸಿದೆ.

'ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಪ್ರಕ್ರಿಯೆ ನಡೆಯುತ್ತಿದೆ. ನೀವು ವರ್ಷಕ್ಕೆ 2 ಕೋಟಿ ಉದ್ಯೋಗಗಳನ್ನು ನೀಡುವ ಭರವಸೆಯನ್ನು ನೀಡಿದ್ದೀರಿ. ಕಳೆದ 8 ವರ್ಷಗಳಲ್ಲಿ ಕೊಡಬೇಕಿದ್ದ ಆ ಉದ್ಯೋಗಗಳು ಎಲ್ಲಿವೆ ಎನ್ನುವುದನ್ನು ಯುವ ಜನರಿಗೆ ತಿಳಿಸಿ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟ್ವಿಟರ್‌ನಲ್ಲಿ ಪ್ರಶ್ನಿಸಿದ್ದಾರೆ.

'ಕಿರಿಯರಿಗೆ ಅವಕಾಶ ನೀಡುವ ಬಗ್ಗೆ ಯೋಚಿಸಬೇಕು'

ಜೈಪುರ/ಹನುಮಾನ್‌ಗಢ (ಪಿಟಿಐ): ನ್ಯೂಜಿಲೆಂಡ್ ಪ್ರಧಾನಿ ಜೆಸಿಂಡ ಆರ್ಡರ್ನ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದನ್ನು ಉಲ್ಲೇಖಿಸಿ, ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಅವರು ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರನ್ನು ಶುಕ್ರವಾರ ಮತ್ತೊಮ್ಮೆ ಟೀಕಿಸಿದ್ದಾರೆ.

'ಜೆಸಿಂಡ ಅವರು ಎಂಟು ವರ್ಷದ ಹಿಂದೆ ನ್ಯೂಜಿಲೆಂಡ್‌ನ ಪ್ರಧಾನಿಯಾದರು. ಆದರೆ, ತಮ್ಮ ಜನಪ್ರಿಯತೆ ಕಡಿಮೆಯಾಗಿದ್ದರಿಂದ ಜೆಸಿಂಡ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಪಕ್ಷ ಕಟ್ಟುವ ಕಾರ್ಯದಲ್ಲಿ ತೊಡಗುವುದಾಗಿಯೂ ಹೇಳಿದರು. ಆದ್ದರಿಂದ, ಕಿರಿಯರಿಗೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಹಿರಿಯರು ಯೋಚಿಸಬೇಕು' ಎಂದರು.

ಜೈಪುರ ಮಹಾರಾಜ ಕಾಲೇಜಿನ ವಿದ್ಯಾರ್ಥಿ ಸಂಘದ ಕಚೇರಿಯನ್ನು ಉದ್ಘಾಟಿಸಿ, ವಿದ್ಯಾರ್ಥಿಗಳೊಂದಿಗೆ ಅವರು ಮಾತನಾಡಿದರು. 'ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿ ಅವರು 2004ರಲ್ಲಿ ನನ್ನನ್ನೂ ಒಳಗೊಂಡು 15-20 ಯುವಕರನ್ನು ಕರೆಸಿಕೊಂಡು ಪ್ರಣಾಳಿಕೆ ಕುರಿತು ಚರ್ಚಿಸಿದ್ದರು. ಪ್ರಣಾಳಿಕೆಯಲ್ಲಿ ಏನಿರಬೇಕು ಎನ್ನುವ ನಮ್ಮ ಆಕಾಂಕ್ಷೆಯನ್ನೂ ಅವರು ಕೇಳಿದ್ದರು' ಎಂದರು.

ವ್ಹಾ ತಾಜ್....

ಶುಕ್ರವಾರ ನಸುಕಿನಲ್ಲಿ ಕಂಡು ಬಂದ ಆಗ್ರಾದ ತಾಜ್‌ಮಹಲ್‌ನ ನೋಟ –ಪಿಟಿಐ ಚಿತ್ರ

ದೆಹಲಿ: ಇಬ್ಬರು ಶಂಕಿತ ಉಗ್ರರ ಬಂಧನ

ನವದೆಹಲಿ(ಪಿಟಿಐ): ಗಣರಾಜ್ಯೋತ್ಸವದ ಪಥಸಂಚಲನಕ್ಕೆ ರಾಷ್ಟ್ರ ರಾಜಧಾನಿಯಲ್ಲಿ ಭದ್ರತೆ ಬಿಗಿಗೊಳಿಸುತ್ತಿರುವಾಗಲೇ ಖಾಲಿಸ್ತಾನಿ ಉಗ್ರ ಸಂಘಟನೆಯ ನಂಟು ಹೊಂದಿರುವ ಇಬ್ಬರು ಶಂಕಿತ ಉಗ್ರರನ್ನು ದೆಹಲಿ ಪೊಲೀಸರು ಶುಕ್ರವಾರ ಪಂಜಾಬ್‌ನಲ್ಲಿ ಬಂಧಿಸಿದ್ದಾರೆ.

ಬಂಧಿತರನ್ನು ಕೆನಡಾ ಮೂಲದ ಪಾತಕಿ, ಉಗ್ರ ಲಖ್ಬೀರ್ ಸಿಂಗ್ ಲಾಂಡಾನ ಸಹಚರರಾದ, ಪಂಜಾಬ್‌ನ ಗುರ್ದಾಪುರದ ನಿವಾಸಿ ರಾಜನ್ ಭಟ್ಟಿ, ಫಿರೋಜ್‌ಪುರದ ಕನ್ವಾಲ್‌ಜೀತ್ ಸಿಂಗ್ ಯಾನೆ ಚಿನ್ನಾ ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಖಾಲಿಸ್ತಾನಿ ಭಯೋತ್ಪಾದಕ- ಪಾತಕಿಗಳ ಜಾಲದ ವಿರುದ್ಧ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಭಟ್ಟಿಯನ್ನು ಬಂಧಿಸಲಾಯಿತು. ಈತ ದೇಶದಿಂದ ಪರಾರಿಯಾಗಿರುವ ಪಾತಕಿ ಲಾಂಡಾ ಹರಿಕ್‌ನ ಸಹಚರನಾಗಿದ್ದಾನೆ. ಈತ ಹಲವು ಪ್ರಕರಣಗಳಲ್ಲಿ ಪಂಜಾಬ್ ಪೊಲೀಸರಿಗೆ ಬೇಕಾಗಿದ್ದ ಎಂದು ಡಿಸಿಪಿ (ವಿಶೇಷ ಘಟಕ) ಮನೀಶಿ ಚಂದ್ರ ತಿಳಿಸಿದರು.

ಜಾಲತಾಣ ಇನ್‌ಫ್ಲುಯೆನ್ಸರ್‌ಗಳಿಗೆ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ಸಾಮಾಜಿಕ ಜಾಲತಾಣ ಇನ್‌ಫ್ಲುಯೆನ್ಸರ್‌ಗಳು ಯಾವುದೇ ವಾಣಿಜ್ಯ ಉತ್ಪನ್ನ ಮತ್ತು ಸೇವೆಗಳಿಗೆ ನೀಡುವ ಪ್ರಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಗ್ರಾಹಕ ವ್ಯವಹಾರಗಳ ಇಲಾಖೆಯು ಮಾರ್ಗಸೂಚಿಯನ್ನು ಹೊರಡಿಸಿದೆ. ಈ ಮಾರ್ಗಸೂಚಿಯನ್ನು ಉಲ್ಲಂಘಿಸುವವರಿಗೆ ₹10 ಲಕ್ಷದಿಂದ ₹50 ಲಕ್ಷದವರೆಗೆ ದಂಡ ವಿಧಿಸಲು ಅವಕಾಶವಿದೆ.

ಇನ್‌ಫ್ಲುಯೆನ್ಸರ್‌ಗಳು ಮತ್ತು ಗಣ್ಯರು ಉತ್ಪನ್ನಗಳು ಹಾಗೂ ಸೇವೆಗಳ ಬಗ್ಗೆ ನೀಡುವ ಪ್ರಚಾರದಿಂದ ಗ್ರಾಹಕರಿಗೆ ಆಗುವ ಸಂಭಾವ್ಯ ವಂಚನೆಯನ್ನು ತಡೆಯಲು ಈ ಮಾರ್ಗಸೂಚಿಗಳನ್ನು ಜಾರಿಗೆ ತರಲಾಗಿದೆ. ಇದನ್ನು ಉಲ್ಲಂಘಿಸುವವರು ಗ್ರಾಹಕ ಹಕ್ಕುಗಳ ರಕ್ಷಣಾ ಕಾಯ್ದೆ ಅಡಿ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಗ್ರಾಹಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಹೇಳಿದ್ದಾರೆ.

ಇನ್‌ಫ್ಲುಯೆನ್ಸರ್‌ಗಳ ಪ್ರಚಾರದಿಂದ ತಮಗೆ ವಂಚನೆಯಾಗಿದೆ ಎಂದು ಸಾಮಾಜಿಕ ಜಾಲತಾಣ ವೀಕ್ಷಕರು ಅಥವಾ ಫಾಲೋವರ್‌ಗಳು ಭಾವಿಸಿದರೆ, ಕಾನೂನು ಕ್ರಮಕ್ಕೆ ಮುಂದಾಗಬಹುದು ಎಂದು ಅವರು ಹೇಳಿದ್ದಾರೆ.

ಮಾರ್ಗಸೂಚಿಗಳು

- ಸಾಮಾಜಿಕ ಜಾಲತಾಣ ಇನ್‌ಫ್ಲುಯೆನ್ಸರ್‌ಗಳು, ಗಣ್ಯರು ಮತ್ತು ಕಂಪ್ಯೂಟರ್ ಮೂಲಕ ಸೃಷ್ಟಿಸಲಾದ ಅವತಾರ್ ರೂಪದ ಇನ್‌ಫ್ಲುಯೆನ್ಸರ್‌ಗಳಿಗೆ ಈ ಮಾರ್ಗಸೂಚಿಗಳು ಅನ್ವಯವಾಗುತ್ತದೆ
- ಉತ್ಪನ್ನ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಮಾಹಿತಿಗಳಿಗೆ ಆಧಾರವಿರಬೇಕು. ಉತ್ಪನ್ನ ಮತ್ತು ಸೇವೆಗಳನ್ನು ತಾವು ಸ್ವತಃ ಬಳಸದೆಯೇ, ಪ್ರಚಾರ ನೀಡಬಾರದು
- ಪ್ರಚಾರದ ಸ್ವರೂಪವನ್ನು ಇನ್‌ಫ್ಲುಯೆನ್ಸರ್‌ಗಳು ಬಹಿರಂಗಪಡಿಸಬೇಕು. ತಮ್ಮ ಪೋಸ್ಟ್‌ಗಳಲ್ಲಿ ನೀಡುತ್ತಿರುವ ಪ್ರಚಾರವು 'ಜಾಹೀರಾತು' ಅಥವಾ 'ಪ್ರಾಯೋಜಿತ' ಎಂಬ ಬ್ಯಾಡ್ಜ್ ಅನ್ನು ಎದ್ದುಕಾಣುವ ರೀತಿಯಲ್ಲಿ ಹಾಕಿರಬೇಕು
- ಉತ್ಪನ್ನ ಮತ್ತು ಸೇವೆಯನ್ನು ಒದಗಿಸುತ್ತಿರುವ ಕಂಪನಿಯ ಜತೆಗೆ ತಮಗಿರುವ ಸಂಬಂಧ ಏನು ಎಂಬುದನ್ನು ಬಹಿರಂಗಪಡಿಸಬೇಕು. ಕಂಪನಿಯಿಂದ ತಾವು ಹಣ ಪಡೆದಿದ್ದೇವೆಯೇ, ಉತ್ಪನ್ನವನ್ನು ಉಚಿತವಾಗಿ ಪಡೆದಿದ್ದೇವೆಯೇ ಅಥವಾ ಉಚಿತ ಪ್ರವಾಸದ ಪ್ಯಾಕೇಜ್ ಪಡೆದಿದ್ದೇವೆಯೇ ಅಥವಾ ಯಾವುದೇ ರೀತಿಯ ಅನುಕೂಲ ಪಡೆದಿದ್ದೇವೆಯೇ ಎಂಬುದನ್ನು ಬಹಿರಂಗ ಪಡಿಸಬೇಕು

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ:ಡೇನಿಯಲ್ ಮೆಡ್ವೆಡೆವ್‌ಗೆ ಸೋಲು

ಇಗಾ, ಕೊಕೊ ಗಾಫ್ ಗೆಲುವಿನ ಓಟ

ಮೆಲ್ಬರ್ನ್ (ಎಎಫ್‌ಪಿ): ವಿಶ್ವದ ಅಗ್ರ ರ‍್ಯಾಂಕ್‌ನ ಆಟಗಾರ್ತಿ ಇಗಾ ಶ್ವಾಂಟೆಕ್ ಮತ್ತು ಅಮೆರಿಕದ ಆಟಗಾರ್ತಿಯರಾದ ಕೊಕೊ ಗಾಫ್ ಹಾಗೂ ಜೆಸ್ಸಿಗಾ ಪೆಗೂಲ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಮೂರನೇ ಸುತ್ತಿನ ಪಂದ್ಯದಲ್ಲಿ ಪೋಲೆಂಡ್‌ನ ಇಗಾ 6–0, 6–1 ರಲ್ಲಿ ಸ್ಪೇನ್‌ನ ಕ್ರಿಸ್ಟಿನಾ ಬುಕ್ಸಾ ಅವರನ್ನು ಮಣಿಸಿದರು. ಶಿಸ್ತಿನ ಆಟಗಾಡಿದ ಇಗಾ ಕೇವಲ 55 ನಿಮಿಷಗಳಲ್ಲಿ ಗೆದ್ದರು. ಅವರು ಮುಂದಿನ ಸುತ್ತಿನಲ್ಲಿ ಎಲೆನಾ ರಿಬಾಕಿನಾ ವಿರುದ್ಧ ಪೈಪೋಟಿ ನಡೆಸುವರು.

ಜೆಸ್ಸಿಕಾ ಪೆಗೂಲ —ಎಎಫ್‌ಪಿ ಚಿತ್ರ

18 ವರ್ಷದ ಗಾಫ್ ಅವರು 6–3, 6–2 ರಲ್ಲಿ ಅಮೆರಿಕದವರೇ ಆದ ಬರ್ನಾರ್ಡಾ ಪೆರಾ ಅವರನ್ನು ಸೋಲಿಸಿದರು. 16ರ ಘಟ್ಟದಲ್ಲಿ ಅವರು ಲಾತ್ವಿಯದ ಯೆಲೆನಾ ಒಸ್ಟಪೆಂಕೊ ಅವರನ್ನು ಎದುರಿಸುವರು.

3ನೇ ಶ್ರೇಯಾಂಕದ ಆಟಗಾರ್ತಿ ಅಮೆರಿಕದ ಜೆಸ್ಸಿಕಾ ಪೆಗೂಲ 6-0, 6-2 ರಲ್ಲಿ ಮಾರ್ಟಾ ಕೊಸ್ತುಕ್ ವಿರುದ್ಧ ಜಯಿಸಿದರು. 6ನೇ ಶ್ರೇಯಾಂಕದ ಆಟಗಾರ್ತಿ ಗ್ರೀಸ್‌ನ ಮರಿಯ ಸಕರಿ ಆಘಾತ ಅನುಭವಿಸಿದರು. ಚೀನಾದ ಜು ಲಿನ್ 7-6 (7/3), 1-6, 6-4 ರಲ್ಲಿ ಸಕರಿಗೆ 'ಕಹಿ' ಉಣಿಸಿದರು.

ಮೆಡ್ವೆಡೆವ್‌ಗೆ ನಿರಾಸೆ: ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಏಳನೇ ಶ್ರೇಯಾಂಕದ ಆಟಗಾರ ರಷ್ಯಾದ ಡೇನಿಯಲ್ ಮೆಡ್ವೆಡೆವ್ ಸೋತು ಹೊರಬಿದ್ದರು. ಅಮೆರಿಕದ ಸೆಬಾಸ್ಟಿಯನ್ ಕೋರ್ಡ 7-6 (9/7), 6-3, 7-6 (7/0) ರಲ್ಲಿ ಮೆಡ್ವೆಡೆವ್‌ಗೆ ಸೋಲುಣಿಸಿದರು.

ಇನ್ನೊಂದು ಪಂದ್ಯದಲ್ಲಿ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಸ್ 6-2, 7-6 (7/5), 6-3 ರಲ್ಲಿ ಟಾಲೊನ್ ಗ್ರಿಕ್‌ಸ್ಪೂರ್ ಅವರನ್ನು ಮಣಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಇತರ ಪಂದ್ಯಗಳಲ್ಲಿ ಕೆನಡಾದ ಫೆಲಿಕ್ಸ್ ಉಜೆರ್ ಅಲಿಯಾಸಿಮ್ 6-1, 3-6, 6-1, 6-4 ರಲ್ಲಿ ಅರ್ಜೆಂಟೀನಾದ ಫ್ರಾನ್ಸಿಸ್ಕೊ ಸೆರುಂಡೊಲೊ ವಿರುದ್ಧ; ರಷ್ಯಾದ ಕರೆನ್ ಕಚನೊವ್ 6-3, 6-4, 3-6, 7-6 (11/9) ರಲ್ಲಿ ಅಮೆರಿಕದ ಫ್ರಾನ್ಸೆಸ್ ಟೈಫೊ ವಿರುದ್ಧವೂ ಗೆದ್ದರು.

ಬೆಳಗಿನ ಜಾವದವರೆಗೆ ಆಟ: ಬ್ರಿಟನ್‌ನ ಆ್ಯಂಡಿ ಮರೆ ಮತ್ತು ಆಸ್ಟ್ರೇಲಿಯಾದ ಥನಾಸಿ ಕೋಕಿನಾಕಿಸ್ ನಡುವಣ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯ ಸ್ಥಳೀಯ ಕಾಲಮಾನ ಶುಕ್ರವಾರ ಬೆಳಗಿನ ಜಾವ 4 ಗಂಟೆ 5 ನಿಮಿಷಕ್ಕೆ ಕೊನೆಗೊಂಡಿದೆ.

5 ಗಂಟೆ 45 ನಿಮಿಷ ಮ್ಯಾರಥಾನ್ ಸೆಣಸಾಟ ನಡೆದ ಈ ಪಂದ್ಯವನ್ನು ಮರೆ 4-6, 6-7 (4), 7-6 (5), 6-3, 7-5 ರಲ್ಲಿ ಗೆದ್ದರು.

ರಾಹುಲ್ ಸಂದೇಶ ಪ್ರತಿ ಮನೆಗೆ ತಲುಪಿಸಲು ಅಭಿಯಾನ: ಜೈರಾಮ್

ಜ.26ರಿಂದ 'ಹಾಥ್ ಸೆ ಹಾಥ್ ಜೋಡೊ' ಯಾತ್ರೆ

ಕಥುವಾ, ಜಮ್ಮು ಮತ್ತು ಕಾಶ್ಮೀರ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸಂದೇಶವನ್ನು ದೇಶದ ಪ್ರತಿ ಮನೆಗೆ ತಲುಪಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿರುವ 'ಹಾಥ್ ಸೆ ಹಾಥ್ ಜೋಡೊ' ಅಭಿಯಾನವನ್ನು ಕಾಂಗ್ರೆಸ್ ಮುಂದಿನ ವಾರ ಆರಂಭಿಸಲಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಹೇಳಿದ್ದಾರೆ.

ಎರಡು ತಿಂಗಳ ಅಭಿಯಾನ ಇದಾಗಿದ್ದು, ಜನವರಿ 26ರಂದು ಆರಂಭವಾಗಿ ಮಾರ್ಚ್ 26ರವರೆಗೆ ನಡೆಯಲಿದೆ.

ದೇಶದಲ್ಲಿ ದ್ವೇಷ ಕೊನೆಗಾಣಿಸಿ ಪ್ರೀತಿ ಹಂಚಬೇಕು ಎಂಬ ಸಂದೇಶ ಹೊತ್ತು ರಾಹುಲ್ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಪಾದಯಾತ್ರೆ ಹಮ್ಮಿಕೊಂಡಿದ್ದಾರೆ. ಅವರ ಸಂದೇಶವನ್ನು ಪ್ರತಿ ಮನೆಗೆ ತಲುಪಿಸಲು ಕಾಂಗ್ರೆಸ್ ಕಾರ್ಯಕರ್ತರನ್ನು ಎಲ್ಲಾ 2.5 ಲಕ್ಷ ಪಂಚಾಯಿತಿಗಳು, 6 ಲಕ್ಷ ಗ್ರಾಮಗಳು ಮತ್ತು 10 ಲಕ್ಷ ಮತಗಟ್ಟೆಗಳಿಗೆ ಕಳಿಸಲಾಗುವುದು ಎಂದು ಜೈರಾಮ್ ರಮೇಶ್ ಅವರು ಭಾರತ್ ಜೋಡೊ ಯಾತ್ರೆ ವೇಳೆ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಕಾಂಗ್ರೆಸ್ ಆರೋಪಪಟ್ಟಿ ಸಿದ್ಧಪಡಿಸಿದೆ. ಅದನ್ನು ದೆಹಲಿಯಲ್ಲಿ ಶನಿವಾರ ಬಿಡುಗಡೆ ಮಾಡಲಾಗುವುದು. ಆರೋಪಪಟ್ಟಿಯ ಪ್ರತಿ ಮತ್ತು ರಾಹುಲ್ ಅವರ ಸಂದೇಶವನ್ನು ತೆಗೆದುಕೊಂಡು ಪ್ರತಿ ಮನೆಗೂ ಹೋಗುತ್ತೇವೆ ಎಂದರು. ರಾಹುಲ್ ನೇತೃತ್ವದ ಭಾರತ್ ಜೋಡೊ ಯಾತ್ರೆಯು ಆರ್‌ಎಸ್‌ಎಸ್-ಬಿಜೆಪಿ ಸಿದ್ಧಾಂತ ಮತ್ತು ಕಾಂಗ್ರೆಸ್ ಸಿದ್ಧಾಂತದ ನಡುವಿನ ಹೋರಾಟ. ಕಾಂಗ್ರೆಸ್ ಸದಾ ಭ್ರಾತೃತ್ವದಲ್ಲಿ ನಂಬಿಕೆಯಿಡುತ್ತದೆ ಎಂದರು.

ಜಮ್ಮು ಮತ್ತು ಕಾಶ್ಮೀರದ ಕಥುವಾದಲ್ಲಿ ಶುಕ್ರವಾರ ನಡೆದ ಭಾರತ್ ಜೋಡೊ ಯಾತ್ರೆಯಲ್ಲಿ ಬೆಂಬಲಿಗರ ಜೊತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೆಜ್ಜೆ ಹಾಕಿದರು —ಪಿಟಿಐ ಚಿತ್ರ

ಮಾಂಸಾಹಾರ ನಿಷೇಧಕ್ಕೆ ವಿರೋಧ: ಬಂಧನ, ಬಿಡುಗಡೆ

ನವದೆಹಲಿ (ಪಿಟಿಐ): ದೆಹಲಿ ವಿಶ್ವವಿದ್ಯಾಲಯದ ಹಂಸರಾಜ್ ಕಾಲೇಜಿನ ಕ್ಯಾಂಟೀನ್ ಮತ್ತು ಹಾಸ್ಟೆಲ್‌ನಲ್ಲಿ ಮಾಂಸಾಹಾರ ನಿಷೇಧ ಆದೇಶದ ವಿರುದ್ಧ ಕಾಲೇಜಿನ ಹೊರಗೆ ಪ್ರತಿಭಟಿಸುತ್ತಿದ್ದ 40 ವಿದ್ಯಾರ್ಥಿಗಳನ್ನು ಪೊಲೀಸರು ಬಂಧಿಸಿದ್ದಾರೆ ಎಂದು ವಿದ್ಯಾರ್ಥಿ ಸಂಘಗಳ ಪ್ರತಿನಿಧಿಗಳು ಆರೋಪಿಸಿದ್ದಾರೆ.

ಮಾಂಸಾಹಾರವನ್ನು ಕೈಬಿಟ್ಟ ನಿರ್ಧಾರದ ವಿರುದ್ಧ ಕಾಲೇಜಿನ ಹಾಸ್ಟೆಲ್ ಎದುರು ಪ್ರತಿಭಟಿಸಲು ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾದ (ಎಸ್‌ಎಫ್‌ಐ) ಹಂಸರಾಜ್ ಕಾಲೇಜು ಘಟಕ ಬುಧವಾರ ಕರೆ ನೀಡಿತ್ತು.

'ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದೆವು. ಆದಾಗ್ಯೂ ಆಡಳಿತ ಮಂಡಳಿಯು ಕಾಲೇಜು ಆವರಣದೊಳಗೆ ಪ್ರವೇಶಿಸಲು ಅವಕಾಶ ನೀಡಲಿಲ್ಲ' ಎಂದು ಎಸ್‌ಎಫ್‌ಐ ಕಾರ್ಯಕರ್ತೆ ಸಮಾ ತಿಳಿಸಿದರು.

'ಪ್ರತಿಭಟನಾ ಸ್ಥಳದಿಂದ ತೆರಳುವಂತೆ ಸೂಚಿಸಲಾಗಿತ್ತು. ಆದಾಗ್ಯೂ 30ರಿಂದ 35 ವಿದ್ಯಾರ್ಥಿಗಳು ಪ್ರತಿಭಟಿಸುತ್ತಿದ್ದರು. 14ರಿಂದ 15 ವಿದ್ಯಾರ್ಥಿಗಳನ್ನು ಬಂಧಿಸಿ ಬಳಿಕ ಬಿಡುಗಡೆ ಮಾಡಲಾಯಿತು' ಎಂದು ಉಪ ಪೊಲೀಸ್ ಆಯುಕ್ತ (ಉತ್ತರ) ಸಾಗರ್ ಸಿಂಗ್ ಕಲ್‌ಸೀ ಅವರು ತಿಳಿಸಿದ್ದಾರೆ.

ಮಹಿಳಾ ಕ್ರಿಕೆಟ್: ದಕ್ಷಿಣ ಆಫ್ರಿಕಾ ಮಣಿಸಿದ ಭಾರತ

ದೀಪ್ತಿ, ಅಮನ್‌ಜೋತ್ ಮಿಂಚು

ಈಸ್ಟ್ ಲಂಡನ್, ದಕ್ಷಿಣ ಆಫ್ರಿಕಾ (ಪಿಟಿಐ): ಅಮನ್‌ಜೋತ್ ಕೌರ್ ಮತ್ತು ದೀಪ್ತಿ ಶರ್ಮಾ ಅವರ ಆಲ್‌ರೌಂಡ್ ಆಟದಿಂದ ಭಾರತ ತಂಡ, ಮಹಿಳಾ ತ್ರಿಕೋನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಶುಭಾರಂಭ ಮಾಡಿತು. ಇಲ್ಲಿನ ಬಫೆಲೊ ಪಾರ್ಕ್ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಭಾರತ, 27 ರನ್‌ಗಳಿಂದ ಆತಿಥೇಯ ದಕ್ಷಿಣ ಆಫ್ರಿಕಾ ವಿರುದ್ಧ ಗೆದ್ದಿತು.

ಮೊದಲು ಬ್ಯಾಟ್ ಮಾಡಿದ ಭಾರತ, 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 147 ರನ್ ಪೇರಿಸಿದರೆ, ದಕ್ಷಿಣ ಆಫ್ರಿಕಾ ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 120 ರನ್ ಮಾತ್ರ ಗಳಿಸಿತು.

ಯಸ್ತಿಕಾ ಭಾಟಿಯಾ (35)ಉತ್ತಮ ಆಟವಾಡಿದರು. ದೀಪ್ತಿ (33 ರನ್, 23 ಎ.) ಮತ್ತು ಅಮನ್‌ಜೋತ್ (ಔಟಾಗದೆ 41, 30 ಎ.) ಅವರು ಆರನೇ ವಿಕೆಟ್‌ಗೆ 50 ಎಸೆತಗಳಲ್ಲಿ 76 ರನ್ ಸೇರಿಸಿ ಸವಾಲಿನ ಮೊತ್ತಕ್ಕೆ ಕಾರಣರಾದರು.

ಆ ಬಳಿಕ ಬೌಲಿಂಗ್‌ನಲ್ಲೂ ಮಿಂಚಿದ ದೀಪ್ತಿ 30 ರನ್‌ಗಳಿಗೆ ಮೂರು ವಿಕೆಟ್ ಪಡೆದರು. ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಅನಾರೋಗ್ಯದ ಕಾರಣ ಈ ಪಂದ್ಯದಲ್ಲಿ ಆಡಲಿಲ್ಲ. ಸ್ಮೃತಿ ಮಂದಾನ ತಂಡವನ್ನು ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 147 (ಯಷ್ತಿಕಾ ಭಾಟಿಯಾ 35, ದೀಪ್ತಿ ಶರ್ಮಾ 33, ಅಮನ್‌ಜೋತ್ ಕೌರ್ ಔಟಾಗದೆ 41, ನೊಂಕುಲುಲೆಕೊ ಮಾಬ 15ಕ್ಕೆ 2, ಡೆಲ್ಮಿ ಟಕರ್ 14ಕ್ಕೆ 1) ದಕ್ಷಿಣ ಆಫ್ರಿಕಾ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 120 (ಮೆರಿಯನ್ ಕಾಪ್ 22, ಸುನ್ ಲುಸ್ 29, ಕ್ಲೊ ಟ್ರಿಯೊನ್ 26, ದೀಪ್ತಿ ಶರ್ಮಾ 30ಕ್ಕೆ 3, ದೇವಿಕಾ ವೈದ್ಯ 19ಕ್ಕೆ 2) ಫಲಿತಾಂಶ: ಭಾರತಕ್ಕೆ 27 ರನ್ ಗೆಲುವು

ಪ್ರಶಸ್ತಿಯೊಂದಿಗೆ ಪ್ರಣವಿ ಅರಸ್

ಪ್ರಣವಿಗೆ ಪ್ರಶಸ್ತಿ

ಮುಂಬೈ (ಪಿಟಿಐ): ಕರ್ನಾಟಕದ ಪ್ರಣವಿ ಅರಸ್ ಅವರು ಇಲ್ಲಿ ಕೊನೆಗೊಂಡ ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್ ಎರಡನೇ ಲೆಗ್‌ನ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಶುಕ್ರವಾರ ನಡೆದ ಕೊನೆಯ ಸುತ್ತಿನ ಸ್ಪರ್ಧೆಯನ್ನು ಅವರು 70 ಸ್ಟ್ರೋಕ್‌ಗಳೊಂದಿಗೆ ಕೊನೆಗೊಳಿಸಿದರು. ಮೈಸೂರಿನ ಗಾಲ್ಫರ್ ಮೂರು ದಿನಗಳಲ್ಲಿ ಒಟ್ಟು 210 ಸ್ಕೋರ್ ಮಾಡಿದರು.

ವಾಣಿ ಕಪೂರ್ (215) ಎರಡನೇ ಸ್ಥಾನ ಗಳಿಸಿದರು. ತಲಾ 218 ಸ್ಕೋರ್ ಮಾಡಿದ ಸ್ನೇಹಾ ಸಿಂಗ್, ಅಮನ್‌ದೀಪ್ ದ್ರಾಲ್, ನಿಶ್ನಾ ಪಟೇಲ್ ಮತ್ತು ಅಫ್ಶಾನ್ ಫಾತಿಮಾ ಅವರು ಜಂಟಿ ಮೂರನೇ ಸ್ಥಾನದಲ್ಲಿ ಕಾಣಿಸಿಕೊಂಡರು.

ಎರಡನೇ ಸುತ್ತಿನ ಬಳಿಕ 142 ಸ್ಕೋರ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದ ಅಫ್ಶಾನಾ, ಅಂತಿಮ ಸುತ್ತಿನಲ್ಲಿ (76) ಲಯ ಕಂಡುಕೊಳ್ಳಲು ವಿಫಲರಾದರು.

ಕಾಶ್ಮೀರ: ಭಾರತ್ ಜೋಡೊ ಯಾತ್ರೆಗೆ ಭದ್ರತೆ

ಶ್ರೀನಗರ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ' ಯಾತ್ರೆ ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಚರಿಸುವ ಅವಧಿಯಲ್ಲಿ ಸುರಕ್ಷತೆಗೆ ಸಂಬಂಧಿಸಿ ಎಲ್ಲ ಅಗತ್ಯ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಹೇಳಿದರು.

ಭದ್ರತೆಯ ದೃಷ್ಟಿಯಿಂದ ಯಾತ್ರೆಗೆ ಯಾವುದೇ ಸಮಸ್ಯೆಯಿಲ್ಲ ಎಂದು ಸಿನ್ಹಾ ಸುದ್ದಿಗಾರರಿಗೆ ತಿಳಿಸಿದರು. ಭಾರತ್ ಜೋಡೊ ಯಾತ್ರೆ ಗುರುವಾರ ಜಮ್ಮು ಮತ್ತು ಕಾಶ್ಮೀರ ಪ್ರವೇಶಿಸಿದ್ದು, ಜ.30ರಂದು ಶ್ರೀನಗರದಲ್ಲಿ ಅಂತ್ಯವಾಗಲಿದೆ

ಸಂಜಯ್ ರಾವುತ್ ಭಾಗಿ

ಮುಂಬೈ: ಶಿವಸೇನಾ ಅಧ್ಯಕ್ಷ ಉದ್ಧವ್ ಠಾಕ್ರೆ ಅವರ ಆಪ್ತ ಸಂಜಯ್ ರಾವುತ್ ಅವರು ಜಮ್ಮು ಮತ್ತು ಕಾಶ್ಮೀರದಲ್ಲಿ ಶುಕ್ರವಾರ ಭಾರತ್ ಜೋಡೊ ಯಾತ್ರೆಯಲ್ಲಿ ಪಾಲ್ಗೊಂಡರು.

ನವೆಂಬರ್‌ನಲ್ಲಿ ಯಾತ್ರೆ ಮಹಾರಾಷ್ಟ್ರದ ಮೂಲಕ ಹಾದು ಹೋದ ವೇಳೆ ಯುವಸೇನಾ ಅಧ್ಯಕ್ಷ ಆದಿತ್ಯ ಠಾಕ್ರೆ ಭಾಗಿಯಾಗಿದ್ದರು.

ಯಾತ್ರೆಯ 125ನೇ ದಿನದಂದು ಕಥುವಾದಲ್ಲಿ ರಾಜ್ಯಸಭಾ ಸದಸ್ಯ ರಾವತ್ ಭಾಗಿಯಾಗಿ, ರಾಹುಲ್‌ರನ್ನು ಶ್ಲಾಘಿಸಿದರು. 'ನಾನು ಶಿವಸೇನಾವನ್ನು ಪ್ರತಿನಿಧಿಸುತ್ತಿದ್ದೇನೆ. ದೇಶದ ವಾತಾವರಣ ಬದಲಾಗುತ್ತಿದೆ ಮತ್ತು ರಾಹುಲ್ ಅವರನ್ನು ಧ್ವನಿ ಎತ್ತುವ ನಾಯಕನಾಗಿ ನೋಡುತ್ತಿದ್ದೇನೆ' ಎಂದು ರಾವುರ್ ಹೇಳಿದರು.

'ಜಮ್ಮುವಿನಲ್ಲಿ 5 ಡಿಗ್ರಿ ಸೆಲ್ಸಿಯಸ್ ತಾಪಮಾನವಿದ್ದು ಮಳೆ ನಡುವೆಯೂ ರಾವತ್ ಅವರು ರಾಹುಲ್ ಗಾಂಧಿ ಅವರೊಂದಿಗೆ 12 ಕಿ.ಮೀ ನಡೆದರು' ಎಂದು ಸಾಮ್ನಾ ಟ್ವೀಟ್ ಮಾಡಿದೆ.

ಟಿಟಿ: ಸೆಮಿಗೆ ಮಣಿಕಾ ಬಾತ್ರಾ

ದೋಹಾ (ಪಿಟಿಐ): ಒಲಿಂಪಿಯನ್ ಆಟಗಾರ್ತಿ ಭಾರತದ ಮಣಿಕಾ ಬಾತ್ರಾ ಅವರು ಇಲ್ಲಿ ನಡೆಯುತ್ತಿರುವ ಡಬ್ಲ್ಯು ಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಸೆಮಿಫೈನಲ್ ತಲುಪಿದ್ದಾರೆ.

ಶುಕ್ರವಾರ ಮಹಿಳಾ ಸಿಂಗಲ್ಸ್ ವಿಭಾಗದ ಎಂಟರಘಟ್ಟದ ಪಂದ್ಯದಲ್ಲಿ ಮಣಿಕಾ 11-6, 11-9, 4-11, 5-11, 11-7ರಿಂದ ಕೊರಿಯಾದ ಹೊಜೊ ಅವರನ್ನು ಪರಾಭವಗೊಳಿಸಿದರು.

ಮೊದಲ 2 ಗೇಮ್‌ಗಳನ್ನು ಗೆದ್ದ ಮಣಿಕಾ ಅವರು ಬಳಿಕ ಎರಡು ಗೇಮ್‌ಗಳನ್ನು ಕೈಚೆಲ್ಲಿದರು. ಆದರೆ ನಿರ್ಣಾಯಕ ಗೇಮ್ ಗೆಲ್ಲುವಲ್ಲಿ ಯಶಸ್ವಿಯಾದರು. ಮುಂದಿನ ಪಂದ್ಯದಲ್ಲಿ ಮಣಿಕಾ ಚೀನಾದ ಜಾಂಗ್ ರುಯಿ ಅವರನ್ನು ಎದುರಿಸುವರು.

ಮುಂಬೈ ರೇಸ್

ಕ್ಯಾಪ್ರಿಸ್ಕ ಗೆಲ್ಲುವ ನಿರೀಕ್ಷೆ

ಬೈಕುಲ್ಲಾ ಕ್ಲಬ್ ಟ್ರೋಫಿ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ಯಾಪ್ರಿಸ್ಕ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಗೋಲ್ಡೀವ 2, ತೂಫಾನ್ 5, ಸ್ಪಿರಿಚುಯಲ್ ರಾಕ್ 7
2ನೇ ರೇಸ್: ಕೊಯಿರ್ ಡಿ ಲಯನ್ 5, ಸಕ್ಸಸರ್ 1, ನೈಟ್ ಟೆಂಪ್ಲಾರ್ 3
3ನೇ ರೇಸ್: ಎಕ್ಸಲೆಂಟ್ ಸ್ಟಾರ್ 6, ಅಟಾಶ್ 9, ಮೇಜರೆಲ್ಲಾ ಬ್ಲ್ಯೂ 8
4ನೇ ರೇಸ್: ಗೋಲ್ಡನ್ ನೀಲ್ 4, ಟ್ರೆಶರ್ ಗೋಲ್ಡ್ 9, ಓನ್ ವಾಯ್ಸ್ 3
5ನೇ ರೇಸ್: ಕಾರ್ಡೆಲಿಯ 5, ಜೆನೆರೋಸಿಟಿ 7, ಬಬ್ಲಿ ಬಾಯ್ 1
6ನೇ ರೇಸ್: ಅಟ್ರೈನ್ಸ್ 3, ಸ್ಪೆಕ್ಯಾಕುಲೇಟರ್ 5, ಬ್ರೇವ್ ಬ್ಯೂಟಿ 10
7ನೇ ರೇಸ್: ಸೂಪರ್‌ಲಗ್ಗೆರಾ 2, ಜೆಟ್‌ಟೈಫೂನ್ 6, ಜೆಟ್‌ಫೈರ್ 1
8ನೇ ರೇಸ್: ಕ್ಯಾಪ್ರಿಸ್ಕ 1, ಚಮೋನಿಕ್ಸ್ 3

ಉತ್ತಮ ಬೆಟ್: ಕೊಯಿರ್ ಡಿ ಲಯನ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಗೌತಮ್‌ಗೆ ಮೂರು ವಿಕೆಟ್; ಸೋಲಿನಿಂದ ಪಾರಾದ ಕೇರಳ: ಪಂದ್ಯ ಡ್ರಾ

ಎಂಟರ ಘಟ್ಟಕ್ಕೆ ಮಯಂಕ್ ಬಳಗ

ತಿರುವನಂತಪುರ: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟ ಪ್ರವೇಶಿಸಿತು.

ತುಂಬಾ ಕ್ರೀಡಾಂಗಣದಲ್ಲಿ ಶುಕ್ರವಾರ ಮುಕ್ತಾಯವಾದ ಸಿ ಗುಂಪಿನ ಪಂದ್ಯದಲ್ಲಿ ಕೇರಳ ತಂಡವು ಕರ್ನಾಟಕದ ಎದುರು ಡ್ರಾ ಮಾಡಿಕೊಂಡು, ಸೋಲಿನ ಆತಂಕದಿಂದ ಪಾರಾಯಿತು. ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಗಳಿಸಿದ್ದ ಕರ್ನಾಟಕ ತಂಡವು ಮೂರು ಪಾಯಿಂಟ್ ಪಡೆಯಿತು. ಗುಂಪಿನ ಅಂಕಪಟ್ಟಿಯಲ್ಲಿ ಒಟ್ಟು 29 ಅಂಕಗಳೊಂದಿಗೆ ಅಗ್ರಸ್ಥಾನಕ್ಕೇರಿತು.

ಕರ್ನಾಟಕ ತಂಡವು ಇನ್ನೊಂದು ಪಂದ್ಯ ಆಡಬೇಕಿದೆ. ಲೀಗ್ ಸುತ್ತಿನ ಕೊನೆಯ ಮತ್ತು ಏಳನೇ ಪಂದ್ಯದಲ್ಲಿ ಜಾರ್ಖಂಡ್ ಎದುರು ರಾಂಚಿಯಲ್ಲಿ ಮಯಂಕ್ ಬಳಗ ಕಣಕ್ಕಿಳಿಯಲಿದೆ. 23 ಅಂಕ ಗಳಿಸಿರುವ ಜಾರ್ಖಂಡ್ ಸದ್ಯ ಎರಡನೇ ಸ್ಥಾನದಲ್ಲಿದೆ.

ಪಂದ್ಯದ ಕೊನೆಯ ದಿನವಾದ ಶುಕ್ರವಾರ ಕರ್ನಾಟಕ ತಂಡವು ಮೊದಲ ಇನಿಂಗ್ಸ್‌ನಲ್ಲಿ 143 ರನ್‌ಗಳ ಮುನ್ನಡೆ ಪಡೆದು ಡಿಕ್ಲೇರ್ ಮಾಡಿಕೊಂಡಿತು. ಎರಡನೇ ದಿನದ ಮಧ್ಯಾಹ್ನವೇ ಬ್ಯಾಟಿಂಗ್ ಆರಂಭಿಸಿದ್ದ ಮಯಂಕ್ ಬಳಗವು ನಾಲ್ಕನೇ ದಿನದಾಟದ ಮಧ್ಯಾಹ್ನದವರೆಗೂ ಆಡಿತು. 163.1 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 485 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಕೃಷ್ಣಪ್ಪ ಗೌತಮ್

ಎರಡನೇ ಇನಿಂಗ್ಸ್‌ನಲ್ಲಿ ಕೇರಳಕ್ಕೆ ಆರಂಭದಲ್ಲಿಯೇ ಆಘಾತ ನೀಡಿದ ಕರ್ನಾಟಕ ಗೆಲುವಿಗಾಗಿ ಪ್ರಯತ್ನಿಸಿತು. ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್ (22–7–35–3) ಅವರ ಶಿಸ್ತಿನ ದಾಳಿಯಿಂದಾಗಿ 86 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ಆದರೆ, ಮೊದಲ ಇನಿಂಗ್ಸ್‌ನಲ್ಲಿ ಶತಕ ಹೊಡೆದಿದ್ದ ಸಚಿನ್ ಬೇಬಿ (ಔಟಾಗದೆ 37) ತಂಡದ ವಿಕೆಟ್‌ಗಳ ಪತನ ತಡೆದರು. ವತ್ಸಲ್ ಗೋವಿಂದ್ (26; 76ಎ) ಮತ್ತು ಸಲ್ಮಾನ್ ನಿಜಾರ್ (ಔಟಾಗದೆ 4; 29ಎ) ಸಚಿನ್‌ಗೆ ಉತ್ತಮ ಜೊತೆ ನೀಡಿದರು. ಕೇರಳ ತಂಡವು 51 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 96 ರನ್ ಗಳಿಸಿದ್ದಾಗ ಇನಿಂಗ್ಸ್‌ಗೆ ತೆರೆಯೆಳೆಯಲಾಯಿತು.

ರಣಜಿ ಟ್ರೋಫಿ ಕ್ರಿಕೆಟ್: ಸಿ ಗುಂಪು

ತಂಡ	ಪಂದ್ಯ	ಜಯ	ಸೋಲು	ಡ್ರಾ	ಅಂಕ
ಕರ್ನಾಟಕ	6	3	0	3	29
ಜಾರ್ಖಂಡ್	6	3	1	2	23
ಕೇರಳ	6	3	1	2	20
ರಾಜಸ್ಥಾನ	6	2	1	3	20
ಗೋವಾ	6	2	1	3	18
ಛತ್ತೀಸಗಢ	6	2	4	0	13
ಸರ್ವಿಸಸ್	6	1	4	1	7
ಪುದುಚೇರಿ	6	1	5	0	6

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇರಳ: 130.1 ಓವರ್‌ಗಳಲ್ಲಿ 342, ಕರ್ನಾಟಕ:163.1 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 485 ಡಿಕ್ಲೇರ್ಡ್ (ಬಿ.ಆರ್. ಶರತ್ 53, ಶುಭಾಂಗ್ ಹೆಗಡೆ ಔಟಾಗದೆ 50, ವೈಶಾಖ ಚಂದ್ರನ್ 117ಕ್ಕೆ3, ನಿಧೀಶ್ 102ಕ್ಕೆ2, ಜಲಜ್ ಸಕ್ಸೆನಾ 124ಕ್ಕೆ2) ಎರಡನೇ ಇನಿಂಗ್ಸ್: ಕೇರಳ: 51 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 96 (ಸಚಿನ್ ಬೇಬಿ ಔಟಾಗದೆ 37, ವತ್ಸಲ್ ಗೋವಿಂದ್ 26, ಕೃಷ್ಣಪ್ಪ ಗೌತಮ್ 35ಕ್ಕೆ3) ಫಲಿತಾಂಶ:ಡ್ರಾ. ಕರ್ನಾಟಕಕ್ಕೆ ಮೊದಲ ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಮೂರು ಅಂಕ.

ಕುಸ್ತಿ: ತನಿಖೆಗೆ ಸಮಿತಿ ನೇಮಕ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪಗಳ ತನಿಖೆಗೆ ಭಾರತ ಒಲಿಂಪಿಕ್ ಸಂಸ್ಥೆಯು (ಐಒಎ) ಏಳು ಸದಸ್ಯರ ಸಮಿತಿಯನ್ನು ನೇಮಿಸಿದೆ.

ಐಒಎ ಅಧ್ಯಕ್ಷೆ ಪಿ.ಟಿ.ಉಷಾ ನೇತೃತ್ವದಲ್ಲಿ ಶುಕ್ರವಾರ ನಡೆದ ತುರ್ತು-ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳ-ಲಾಗಿದೆ. ಶೂಟರ್ ಅಭಿನವ್ ಬಿಂದ್ರಾ ಸಭೆಯಲ್ಲಿ ಪಾಲ್ಗೊಂಡಿದ್ದರು.

ಮಹಿಳಾ ಬಾಕ್ಸರ್ ಎಂ.ಸಿ. ಮೇರಿಕೋಮ್, ಕುಸ್ತಿಪಟು ಯೋಗೇಶ್ವರ್ ದತ್, ಆರ್ಚರಿ ಸ್ಪರ್ಧಿ ಡೋಲಾ ಬ್ಯಾನರ್ಜಿ ಮತ್ತು ಭಾರತ ವೇಟ್‌ಲಿಫ್ಟಿಂಗ್ ಫೆಡರೇಷನ್ ಅಧ್ಯಕ್ಷ ಸಹದೇವ್ ಯಾದವ್ ಅವರು ಸಮಿತಿ-ಯಲ್ಲಿದ್ದಾರೆ.

‘ಬ್ರಿಜ್‌ಭೂಷಣ್ ಮೇಲಿನ ಲೈಂಗಿಕ ದೌರ್ಜನ್ಯ ಆರೋಪಗಳ ತನಿಖೆಗೆ ಶೀಘ್ರದಲ್ಲೇ ಸಮಿತಿಯನ್ನು ನೇಮಕ ಮಾಡಬೇಕು’ ಎಂದು ಶುಕ್ರವಾರ ಬೆಳಿಗ್ಗೆ ಕುಸ್ತಿಪಟುಗಳು ಪಿ.ಟಿ.ಉಷಾ ಅವರನ್ನು ಆಗ್ರಹಿಸಿದ್ದರು.

‘ಅಧ್ಯಕ್ಷರನ್ನು ಕಿತ್ತುಹಾಕುವುದಲ್ಲದೆ, ಸಂಪೂರ್ಣ ಫೆಡರೇಷನ್‌ಅನ್ನು ವಜಾ ಮಾಡಬೇಕು. ಡಬ್ಲ್ಯುಎಫ್‌ಐನ ದೈನಂದಿನ ಆಡಳಿತ ನೋಡಿಕೊಳ್ಳಲು ಕುಸ್ತಿಪಟುಗಳು ಸಲಹೆ ಪಡೆದು ಹೊಸ ಸಮಿತಿ ನೇಮಿಸಬೇಕು’ ಎಂದು ಮನವಿ ಪತ್ರದಲ್ಲಿ ಒತ್ತಾಯಿಸಿದ್ದರು.

ಪ್ರತಿಭಟನಾನಿರತ ಕುಸ್ತಿಪಟುಗಳನ್ನು ಉದ್ದೇಶಿಸಿ ಬಜರಂಗ್ ಪೂನಿಯಾ ಮಾತನಾಡಿದರು. ವಿನೇಶಾ ಫೋಗಟ್ ಇದ್ದಾರೆ –ಪಿಟಿಐ ಚಿತ್ರ

‘ಕುಸ್ತಿಪಟುಗಳು ಸಾಕಷ್ಟು ಧೈರ್ಯ ತಂದುಕೊಂಡು ಡಬ್ಲ್ಯುಎಫ್‌ಐ ಅಧ್ಯಕ್ಷರ ವಿರುದ್ಧ ಒಟ್ಟಾಗಿ ಪ್ರತಿಭಟಿಸುತ್ತಿದ್ದಾರೆ. ನಮಗೆ ಜೀವ ಭಯವಿದೆ. ಅವರನ್ನು ವಜಾಗೊಳಿಸದೇ ಇದ್ದಲ್ಲಿ, ಧರಣಿಯಲ್ಲಿ ನಮ್ಮೊಂದಿಗೆ ಕೈಜೋಡಿಸಿರುವ ಎಲ್ಲ ಯುವ ಕುಸ್ತಿಪಟುಗಳ ವೃತ್ತಿಜೀವನ ಕೊನೆಗೊಳ್ಳಲಿದೆ’ ಎಂದೂ ಆತಂಕ ತೋಡಿಕೊಂಡಿದ್ದರು.

ಟೋಕಿಯೊ ಒಲಿಂಪಿಕ್ಸ್ ಪದಕ ವಿಜೇತ ಕುಸ್ತಿಪಟುಗಳಾದ ರವಿ ದಹಿಯಾ, ಬಜರಂಗ್ ಪೂನಿಯಾ, ರಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸಾಕ್ಷಿ ಮಲಿಕ್, ವಿಶ್ವ ಚಾಂಪಿಯನ್‌ಷಿಪ್‌ನ ಪದಕ ವಿಜೇತರಾದ ವಿನೇಶಾ ಫೋಗಟ್ ಮತ್ತು ದೀಪಕ್ ಪೂನಿಯಾ ಪತ್ರಕ್ಕೆ ಸಹಿ ಹಾಕಿದ್ದರು.

ಬ್ರಿಜ್ ಭೂಷಣ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಮತ್ತು ಫೆಡರೇಷನ್‌ನಲ್ಲಿ ಸರ್ವಾಧಿಕಾರಿಯಂತೆ ಆಡಳಿತ ನಡೆ-ಸುತ್ತಿದ್ದಾರೆ ಎಂದು ಆರೋಪಿಸಿರುವ ಖ್ಯಾತನಾಮ ಕುಸ್ತಿಪಟುಗಳು ಬುಧವಾರ ಆರಂಭಿಸಿದ್ದ ಧರಣಿ, ಶುಕ್ರವಾರವೂ ಮುಂದುವರಿಯಿತು.

ಬೀಜಿಂಗ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಬಾಕ್ಸರ್ ಮತ್ತು ಕಾಂಗ್ರೆಸ್ ಮುಖಂಡರೂ ಆಗಿರುವ ವಿಜೇಂದರ್ ಸಿಂಗ್ ಅವರು ಶುಕ್ರವಾರ ಪ್ರತಿಭಟನೆ ನಡೆಯುತ್ತಿರುವ ಜಂತರ್ ಮಂತರ್‌ಗೆ ಭೇಟಿ ನೀಡಿ ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಿದರು.

ಸಭೆ ವಿಫಲ: ಪ್ರತಿಭಟನಾನಿರತ ಕುಸ್ತಿಪಟುಗಳು ಗುರುವಾರ ರಾತ್ರಿ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರ ನಿವಾಸದಲ್ಲಿ ಸಭೆ ನಡೆಸಿದ್ದರು. ಆದರೆ ಸಭೆಯಲ್ಲಿ ಯಾವುದೇ ತೀರ್ಮಾನಕ್ಕೆ ಬರಲು ಆಗಲಿಲ್ಲ. ಕುಸ್ತಿಪಟುಗಳು ಮಾಡಿರುವ ಆರೋಪಗಳಿಗೆ ಪ್ರತಿಕ್ರಿಯಿಸಲು ಕೇಂದ್ರ ಸರ್ಕಾರವು ಡಬ್ಲ್ಯುಎಫ್‌ಐ ಅಧ್ಯಕ್ಷರಿಗೆ ನೀಡಿರುವ 72 ಗಂಟೆಗಳ ಗಡುವು ಶನಿವಾರ ಸಂಜೆ ಕೊನೆಗೊಳ್ಳಲಿದೆ.

ಶಾಹೀನ್‌ಬಾಗ್ ಪ್ರತಿಭಟನೆಗೆ ಹೋಲಿಕೆ

ನಂದಿನಿನಗರ, ಉತ್ತರ ಪ್ರದೇಶ (ಪಿಟಿಐ): ತಮ್ಮ ವಿರುದ್ಧದ ಪ್ರತಿಭಟನೆಯನ್ನು ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಶಾಹೀನ್‌ಬಾಗ್ ಪ್ರತಿಭಟನೆಗೆ ಹೋಲಿಸಿದ್ದಾರೆ.

ಬ್ರಿಜ್‌ಭೂಷಣ್

‘ಕುಸ್ತಿಪಟುಗಳು ನನ್ನ ವಿರುದ್ಧ ನಡೆಸುತ್ತಿರುವುದು ಶಾಹೀನ್‌ಬಾಗ್ ಮಾದರಿಯ ಧರಣಿ’ ಎಂದು ಶುಕ್ರವಾರ ಟೀಕಿಸಿದರು. ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿಸಿ ದೆಹಲಿಯ ಶಾಹೀನ್‌ಬಾಗ್‌ನಲ್ಲಿ 2019ರ ಕೊನೆಯಿಂದ 2020ರ ಆರಂಭದ ವರೆಗೆ ಪ್ರತಿಭಟನೆ ನಡೆದಿತ್ತು. ‘ನಾನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುವುದಿಲ್ಲ. ಪ್ರತಿಭಟನೆಯ ಹಿಂದೆ ಕಾಂಗ್ರೆಸ್ ಪಕ್ಷದ ಪಿತೂರಿಯಿದೆ. ಇದು ನನ್ನ ವಿರುದ್ಧ ನಡೆಯುತ್ತಿರುವ ಹೋರಾಟ ಅಲ್ಲ. ಕಾಂಗ್ರೆಸ್ ಪಕ್ಷ ನನ್ನ ಮೂಲಕ ಬಿಜೆಪಿ ವಿರುದ್ಧ ನಡೆಸುತ್ತಿರುವ ವ್ಯವಸ್ಥಿತ ದಾಳಿ’ ಎಂದು ಬಿಜೆಪಿ ಸಂಸದರೂ ಆಗಿರುವ ಅವರು ದೂರಿದರು.

ಟಿ20 ವಿಶ್ವಕಪ್: ಭಾರತಕ್ಕೆ ಆಸ್ಟ್ರೇಲಿಯಾ ತಂಡದ ಸವಾಲು

ಪೊಚೆಫ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ: ಅಮೋಘ ಲಯದಲ್ಲಿರುವ ಭಾರತ ತಂಡವು 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ ಸಿಕ್ಸ್ ಪಂದ್ಯದಲ್ಲಿ ಶನಿವಾರ ಆಸ್ಟ್ರೇಲಿಯಾ ಸವಾಲು ಎದುರಿಸಲಿದೆ.

ಡಿ ಗುಂಪಿನಲ್ಲಿ ಸತತ ಮೂರು ಪಂದ್ಯಗಳನ್ನು ಗೆದ್ದಿದ್ದ ಶಫಾಲಿ ವರ್ಮಾ ನಾಯಕತ್ವದ ಭಾರತ ತಂಡವು ಅಗ್ರ-ಸ್ಥಾನದೊಂದಿಗೆ ಸೂಪರ್ ಸಿಕ್ಸ್ ಹಂತ ತಲುಪಿದೆ. ಶಫಾಲಿ ಅವರೊಂದಿಗೆ ಶ್ವೇತಾ ಶೆರಾವತ್ ತಂಡದ ಬ್ಯಾಟಿಂಗ್‌ನಲ್ಲಿ ಮಿಂಚುತ್ತಿದ್ದಾರೆ. ಬೌಲಿಂಗ್‌ನಲ್ಲಿ ಮನ್ನತ್ ಕಶ್ಯಪ್, ಅರ್ಚನಾ ದೇವಿ ಪರಿಣಾಮಕಾರಿ ಎನಿಸಿದ್ದಾರೆ.

ಉತ್ತಮ ಲಯದೊಂದಿಗೆ ಪಂದ್ಯವನ್ನು ಗೆಲ್ಲುವ ವಿಶ್ವಾಸದಲ್ಲಿ ಭಾರತ ತಂಡವಿದೆ.

ಆಸ್ಟ್ರೇಲಿಯಾ ತಂಡವು ಎ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದಿತ್ತು.

ಪಂದ್ಯ ಆರಂಭ: ಸಂಜೆ 5.15

ಕ್ವಾರ್ಟರ್‌ಫೈನಲ್‌ಗೆ ಆಸ್ಟ್ರೇಲಿಯಾ

ರೂರ್ಕೆಲಾ (ಪಿಟಿಐ): ಬ್ಲೇಕ್ ಗೋವರ್ಸ್ ಗಳಿಸಿದ ಅಮೋಘ ನಾಲ್ಕು ಗೋಲುಗಳ ಬಲದಿಂದ ಆಸ್ಟ್ರೇಲಿಯಾ ತಂಡವು ಪುರುಷರ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್‌ಗೆ ನೇರ ಪ್ರವೇಶ ಪಡೆಯಿತು.

ಇಲ್ಲಿ ಶುಕ್ರವಾರ ನಡೆದ ‘ಎ’ ಗುಂಪಿನ ಅಂತಿಮ ಹಣಾಹಣಿಯಲ್ಲಿ ಕಾಂಗರೂ ನಾಡಿನ ಬಳಗ 9–2ರಿಂದ ದಕ್ಷಿಣ ಆಫ್ರಿಕಾ ತಂಡವನ್ನು ಪರಾಭ-ವಗೊಳಿಸಿತು. ಆಸ್ಟ್ರೇಲಿಯಾ ತಂಡವು ಕ್ವಾರ್ಟರ್‌ಫೈನಲ್‌ನಲ್ಲಿ, ಮಲೇಷ್ಯಾ ಮತ್ತು ಸ್ಪೇನ್ ನಡುವಣ ಕ್ರಾಸ್‌ಓವರ್ ಪಂದ್ಯದಲ್ಲಿ ಜಯಿಸುವ ತಂಡವನ್ನು ಎದುರಿಸಲಿದೆ.

ಆಸ್ಟ್ರೇಲಿಯಾ (ಕೆಂಪು ಪೋಷಾಕು) ಆಟಗಾರರ ಸಂಭ್ರಮ– ಪಿಟಿಐ ಚಿತ್ರ

ದಕ್ಷಿಣ ಆಫ್ರಿಕಾ ಎದುರಿನ ಪಂದ್ಯದಲ್ಲಿ ಗೋವರ್ಸ್ 4, 15, 19 ಮತ್ತು 20ನೇ ನಿಮಿಷಗಳಲ್ಲಿ ಕೈಚಳಕ ತೋರಿದರು.

ಟಾಮ್ ಕ್ರೇಗ್ (10ನೇ ನಿ.), ಜೇಕ್ ಹಾರ್ವಿ (22ನೇ ನಿ.), ಡೇನಿಯಲ್ ಬೀಲ್ (28ನೇ ನಿ.), ಜೆರೆಮಿ ಹೇಯ್‌ವರ್ಡ್ (32ನೇ ನಿ.) ಮತ್ತು ಟಿಮ್ ಬ್ರ್ಯಾಂಡ್ (47ನೇ ನಿ.) ವಿಜೇತ ತಂಡದ ಪರ ಗೋಲು ಗಳಿಸಿದರು.

ದಕ್ಷಿಣ ಆಫ್ರಿಕಾ ತಂಡದ ಎರಡು ಗೋಲುಗಳನ್ನು ಟುಲಿ ಕೊಬಿಲೆ (8ನೇ ನಿ.) ಮತ್ತು ಕೊಕ್ ತೆವಿನ್ (58ನೇ ನಿ.) ದಾಖಲಿಸಿದರು.

ಎ ಗುಂಪಿನ ಇನ್ನೊಂದು ಪಂದ್ಯದಲ್ಲಿ ಅರ್ಜೆಂಟೀನಾ ಮತ್ತು ಫ್ರಾನ್ಸ್ ತಂಡಗಳು 5–5ರಿಂದ ಡ್ರಾ ಸಾಧಿಸಿದವು.

ಬೆಲ್ಜಿಯಂಗೆ ಭರ್ಜರಿ ಗೆಲುವು: ಬಿ ಗುಂಪಿನ ಪಂದ್ಯದಲ್ಲಿ ಬೆಲ್ಜಿಯಂ ತಂಡವು 7–1ರಿಂದ ಜಪಾನ್ ತಂಡಕ್ಕೆ ಸೋಲುಣಿಸಿತು. ಬೆಲ್ಜಿಯಂ ತಂಡಕ್ಕಾಗಿ ಬೂನ್ ಟಾಮ್ ಐದು ಗೋಲು (21, 26, 27, 50, 55ನೇ ನಿಮಿಷ) ದಾಖಲಿಸಿ ಮಿಂಚಿದರು.

ಭಾರತಕ್ಕೆ ಸರಣಿ ಜಯದ ಕನಸು

ಏಕದಿನ ಕ್ರಿಕೆಟ್: ಆತಿಥೇಯರಿಗೆ ತಿರುಗೇಟು ನೀಡುವ ತವಕದಲ್ಲಿ ಕಿವೀಸ್

ರಾಯಪುರ (ಪಿಟಿಐ): ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡ ಶನಿವಾರ ಇಲ್ಲಿ ನಡೆಯಲಿರುವ ಎರಡನೇ ಏಕದಿನ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಕಣಕ್ಕಿಳಿಯಲಿದೆ.

ಶುಭಮನ್ ಗಿಲ್ ಅಬ್ಬರದ ದ್ವಿಶತಕದ ಬಲದಿಂದ ನ್ಯೂಜಿಲೆಂಡ್ ವಿರುದ್ಧ ಮೊದಲ ಪಂದ್ಯದಲ್ಲಿ ಜಯ ಸಾಧಿಸಿರುವ ಭಾರತ ತಂಡವು ಸರಣಿ ಕೈವಶದ ಮೇಲೆ ಕಣ್ಣಿಟ್ಟಿದೆ. ಹೈದರಾಬಾದಿನ ಪಂದ್ಯದಲ್ಲಿ ಬೃಹತ್ ಮೊತ್ತದ ಗುರಿಯೊಡ್ಡಿದ್ದ ಭಾರತ ತಂಡವು ಪ್ರಯಾಸದ ಜಯ ಸಾಧಿಸಿತ್ತು.

ಕಿವೀಸ್ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳನ್ನು ಬೇಗನೇ ನಿಯಂತ್ರಿಸಿದ್ದ ಬೌಲರ್‌ಗಳು ಮಧ್ಯಮಕ್ರಮಾಂಕವನ್ನು ಕಟ್ಟಿಹಾಕುವಲ್ಲಿ ವಿಫಲವಾಗಿತ್ತು. 350 ರನ್‌ಗಳ ಜಯದ ಗುರಿ ಬೆನ್ನಟ್ಟಿದ್ದ ನ್ಯೂಜಿಲೆಂಡ್ 131 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡಿತ್ತು. ಆದರೆ ನಂತರ ಮೈಕಲ್ ಬ್ರೇಸ್‌ವೆಲ್ ಅಬ್ಬರದ ಶತಕ ಹಾಗೂ ಮಿಚೆಲ್ ಸ್ಯಾಂಟ್ನರ್ ಅರ್ಧಶತಕದ ನೆರವಿನಿಂದ ಗೆಲುವಿನ ಸನಿಹ ಸಾಗಿತ್ತು. ಕೊನೆಗೂ 12 ರನ್‌ಗಳಿಂದ ಜಯಿಸುವಲ್ಲಿ ಭಾರತ ಸಫಲವಾಯಿತು.

ರಾಯಪುರ ಕ್ರೀಡಾಂಗಣದಲ್ಲಿ ಭಾರತ ತಂಡದ ಅಭ್ಯಾಸ ಸಂದರ್ಭದಲ್ಲಿ ಕೋಚ್ ರಾಹುಲ್ ದ್ರಾವಿಡ್, ಬ್ಯಾಟಿಂಗ್ ಕೋಚ್ ವಿಕ್ರಂ ರಾಥೋಡ್ ಮತ್ತು ನಾಯಕ ರೋಹಿತ್ ಶರ್ಮಾ–ಪಿಟಿಐ ಚಿತ್ರ

ಶಾರ್ದೂಲ್ ಠಾಕೂರ್ ಮತ್ತು ಸಿರಾಜ್ ಅವರಿಬ್ಬರು ವಿಕೆಟ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಆದರೆ ರನ್‌ಗಳನ್ನು ನಿಯಂತ್ರಿಸುವಲ್ಲಿ ಅವರೂ ಸೇರಿದಂತೆ ಆರು ಬೌಲರ್‌ಗಳು ಸಫಲರಾಗಿರಲಿಲ್ಲ. ಆದ್ದರಿಂದ ಈ ಪಂದ್ಯದಲ್ಲಿ ಬೌಲಿಂಗ್ ವಿಭಾಗದಲ್ಲಿ ಬದಲಾವಣೆಗಳಾಗುವ ಸಾಧ್ಯತೆ ಇದೆ. ಶಾರ್ದೂಲ್ ಅವರ ಬದಲಿಗೆ ಕಾಶ್ಮೀರ್ ಎಕ್ಸ್‌ಪ್ರೆಸ್ ಉಮ್ರಾನ್ ಮಲಿಕ್ ಸ್ಥಾನ ಪಡೆಯುವ ನಿರೀಕ್ಷೆ ಇದೆ. ಬ್ಯಾಟಿಂಗ್ ವಿಭಾಗದಲ್ಲಿ ಬದಲಾವಣೆ ಮಾಡುವ ಸಾಧ್ಯತೆ ಇಲ್ಲ. ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್ ಮತ್ತು ಇಶಾನ್ ಕಿಶನ್ ಲಯಕ್ಕೆ ಮರಳಿದರೆ, ಕಿವೀಸ್ ಬೌಲಿಂಗ್ ಪಡೆಗೆ ಕಠಿಣ ಸವಾಲಾಗಬಹುದು.

ಬಲಾಬಲ

ಪಂದ್ಯ	114
ಭಾರತ ಜಯ	56
ನ್ಯೂಜಿಲೆಂಡ್ ಜಯ	50
ಫಲಿತಾಂಶವಿಲ್ಲ	7
ಟೈ	1

65,000
ರಾಯಪುರ ಕ್ರೀಡಾಂಗಣದ ಆಸನ ಸಾಮರ್ಥ್ಯ

ಪಿಚ್ ಹೇಗಿದೆ: ರಾಯಪುರದ ಶಹೀದ್ ವೀರನಾರಾಯಣ ಸಿಂಗ್ ಕ್ರೀಡಾಂಗಣದ ಪಿಚ್ ಬ್ಯಾಟರ್‌ಗಳಿಗೆ ಹೆಚ್ಚು ನೆರವಾಗುವ ಲಕ್ಷಣಗಳಿವೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬೆಂಗಳೂರಿನಲ್ಲಿ ಇಂದಿನಿಂದ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್

ಆತ್ಮವಿಶ್ವಾಸದಲ್ಲಿ ಕರ್ನಾಟಕ ತಂಡಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಕರ್ನಾಟಕ ತಂಡಗಳು ಶನಿವಾರ ಇಲ್ಲಿ ಆರಂ-ಭವಾಗಲಿರುವ 72ನೇ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂ-ಪಿಯನ್‌ಷಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿವೆ.

ಕರ್ನಾಟಕ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು (ಕೆಬಿಎ) ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ಸಹಯೋಗದಲ್ಲಿ ಆಯೋಜಿಸಿರುವ ಟೂರ್ನಿಯ ಪಂದ್ಯಗಳು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ.

ಜನವರಿ 27ರ ವರೆಗೆ ನಡೆಯುವ ಟೂರ್ನಿಯಲ್ಲಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ತಲಾ 16 ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ.

ಶನಿವಾರ ನಡೆಯುವ ಮೊದಲ ಪಂದ್ಯದಲ್ಲಿ ಆತಿಥೇಯ ಬಾಲಕರು ಮಣಿಪುರ ತಂಡವನ್ನು ಹಾಗೂ ಬಾಲಕಿಯರು ಆಂಧ್ರ ತಂಡವನ್ನು ಎದುರಿಸಲಿದ್ದಾರೆ.

‘ಬಾಲಕ ಮತ್ತು ಬಾಲಕಿಯರ ವಿಭಾಗಗಳಲ್ಲಿ ಸುಮಾರು 400 ಸ್ಪರ್ಧಿಗಳು, 80 ಕೋಚ್‌ಗಳು ಮತ್ತು 50 ತಾಂತ್ರಿಕ ಅಧಿಕಾರಿಗಳು ಪಾಲ್ಗೊಳ್ಳುವರು’ ಎಂದು ಕೆಬಿಎ ಉಪಾಧ್ಯಕ್ಷ ಆರ್.ರಾಜನ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಿಎಫ್‌ಐ ತಾಂತ್ರಿಕ ಸಮಿತಿ ಮುಖ್ಯಸ್ಥ ನಾರ್ಮನ್ ಐಸಾಕ್, ಕೆಬಿಎ ಪದಾಧಿ-ಕಾರಿಗಳಾದ ಎಸ್.ಗುಣಶೇಖರ, ಆರ್. ಪ್ರಕಾಶ್, ಎಚ್.ಶ್ರೀನಿವಾಸಮೂರ್ತಿ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಕರ್ನಾಟಕ ತಂಡಗಳು: ಬಾಲಕರು: ಎಸ್.ಸಂಕೇತ್, ಎಂ.ಅಮರ್ತ್ಯ, ನಿಹಾಲ್, ಎಂ.ಬಿ.ಶಶಾಂಕ್ ಗೌಡ, ಪ್ರಿಯಾನ್ಶು, ಅವಿನಾಶ್ ನಾಯಕ್, ಎನ್.ಎಂ.ವಿಷ್ಣು, ಆರ್.ನಿತಿನ್ ಕುಮಾರ್, ಕುಶಾಲ್ ಗೌಡ, ಗೋಸ್ವಾಮಿ ಶಿವಂ, ಎಸ್.ಭುವನ್, ಕೆ.ಲಿಂಗೇಶ್. ಕೋಚ್: ಉಮಾಶಂಕರ್, ಮ್ಯಾನೇಜರ್: ಗುಣಶೇಖರ್

ಬಾಲಕಿಯರು: ನಿಹಾರಿಕಾ ರೆಡ್ಡಿ, ಮೇಖಲಾ ಗೌಡ, ಆದ್ಯಾ ಪಿ. ಐತಾಳ್, ಹನಾ ಬಾಬಿ ಜೇಕಬ್, ಆದ್ಯಾ ನಾಗಲಿಂಗ, ಆದ್ಯಾ ಗೌಡ, ಐಶ್ವರ್ಯಾ ಎಸ್., ಅದಿತಿ ನಾಗರಾಜನ್, ಎಂ.ಕೆ.ಯಶಸ್ವಿನಿ, ಪ್ರೀತಿ ಎಂ., ಪ್ರಿಯಾಂಕಾ, ಎನ್.ಖುಷಿ. ಕೋಚ್: ಕೆ.ಸತ್ಯನಾರಾಯಣ, ಮ್ಯಾನೇಜರ್: ಜೆ.ವಾಣಿಶ್ರೀ

ಪ್ರಜಾವಾಣಿ

ಪ್ರಜಾ ಪ್ಲಸ್+

'ಪುಣ್ಯವತಿ'ಯಾದ ಪ್ರಿಯಾಂಕಾ

2

METRO

ರಿಪಬ್ಲಿಕ್ ಡೇ ಗ್ರ್ಯಾಂಡ್ ಸೇಲ್

5 ಸ್ಟಾರ್ ಗುಣಮಟ್ಟ, ಹೋಲ್‌ಸೇಲ್ ಬೆಲೆಗಳು!

ಬ್ಲಾಕ್ ಬಸ್ಟರ್ ಕೊಡುಗೆಗಳು • ಬಂಪರ್ ಲಾಭಗಳು!

COMBO OFFER — AASHIRVAAD ATTA 5 kg + SUNPURE SUNFLOWER OIL 5 L — ₹219 OFF* — COMBO PRICE ₹999 — COMBINED MRP ₹1,218#

COMBO OFFER — ALMOND 500 g + CASHEW 500 g + RAISIN 500 g COMBO — 65% OFF* — COMBO PRICE ₹829 — COMBINED MRP ₹2,348#

*Offer valid till 22nd Jan, 2023

STRAWBERRY Each — BUY MORE THAN 2 PACKS @ ₹45 Each — OFFER PRICE ₹55 — MARKET PRICE ₹65#

*Fruits offer valid till 22nd Jan, 2023

BUY CHICKEN WORTH ₹499 OR ABOVE & GET 6 N EGGS WORTH ₹60 @ ₹1

*Offer valid only once per card per day

TOOR DAL POPULAR LOOSE 1 kg — OFFER PRICE ₹109

*Offer valid till 22nd Jan, 2023

GRB COW GHEE JAR 500 ml — 13% OFF*

*Offer valid till 22nd Jan, 2023

RED LABEL TEA 500 g — 13% OFF* — OFFER PRICE ₹247.95 — MRP ₹285# — BUY 3 N & ABOVE

BRU INSTANT SUPER STRONG 200 g — 13% OFF* — OFFER PRICE ₹165.30 — MRP ₹190# — BUY 3 N & ABOVE

MAAZA 1.5 L — 25% OFF* — OFFER PRICE ₹67.50 — MRP ₹90#

McCAIN FROZEN SELECT RANGE — 35% OFF* — BUY 2 N & ABOVE

PEARS PURE & GENTLE GLYCERIN SOAP / DOVE CREAM BEAUTY BATHING SOAP 3 N x 75 g EACH — 15% OFF* — BUY 3 N & ABOVE

COMBO OFFER — HARPIC BATHROOM CLEANER 500 ml + LIZOL DISINFECTANT CITRUS 1 L + COLIN PUMP 250 ml — 15.86% OFF* — OFFER PRICE ₹325.60 — MRP ₹387#

TIDE JASMINE & ROSE / LEMON 6 kg + 2 kg FREE — 17% OFF* — OFFER PRICE ₹820.87 — MRP ₹989#

Whirlpool 7 kg TOP LOAD WASHING MACHINE PREMIER GENX — 26% OFF* — OFFER PRICE ₹15,499 — MRP ₹20,900#

Panasonic 27 L CONVECTION MICROWAVE OVEN — 26% OFF* — OFFER PRICE ₹12,990 — MRP ₹17,590#

ANCHOR by Panasonic DELSY GYSER 15 L V 2 kW — 57% OFF* — OFFER PRICE ₹4,999 — MRP ₹11,599#

Haier ON PURCHASE OF 1.39 m (55) 4K SMART LED TV — Get Crompton Mixer Grinder worth ₹3,500 @ ₹1 — OFFER PRICE ₹39,990 — MRP ₹69,990#

HAVELLS SEGNO MIXER GRINDER 500 W — 49% OFF* — OFFER PRICE ₹2,399 — MRP ₹4,695#

HITACHI Inspire the Next 1.5 Ton 3 STAR INVERTER SPLIT AIR CONDITIONER HFEO — 38% OFF* — OFFER PRICE ₹36,990 — MRP ₹59,700#

Get Branded CABIN Trolley worth ₹7,500 @ ₹499

On purchase of FOOTWEAR worth ₹4,999 or more — PUMA, LIBERTY, DUKE — MIN. 50% OFF*

Aristocrat Black Pearl: 40cm X 23 cm X 55 cm
Safari Zion: 39cm X 23 cm X 54 cm

KAMILIANT, AMERICAN TOURISTER — MIN. 50% OFF*

DRIVE YOUR LUCK — STAND A CHANCE TO WIN A CAR — ON PURCHASE OF AMERICAN TOURISTER LUGGAGE WORTH ₹5,999 OR MORE*

BIANCA HOME DECOR — FLAT 50% OFF ON BIANCA BRAND + EXTRA 25% ON METRO SELLING PRICE — ON PURCHASE OF ₹2999

PUMA WINTERWEAR RANGE — 70% OFF*

Prestige NON STICK BUILD YOUR KITCHEN SET COMBO — 50% OFF*

Pigeon COOKER COMBO 2 L + 3 L + 5 L — 40% OFF* — OFFER PRICE ₹1,799 — MRP ₹2,995#

Tarrington House SPIN MOP — 60% OFF* — OFFER PRICE ₹599 — MRP ₹1,499#
1 N SPIN MOP: 1.1 m
1 N BUCKET: 42 cm x 26 m x 18 cm

ONLINE PRICE CHALLENGE!* 365 DAYS A YEAR ON CONSUMER DURABLES & DOMESTIC APPLIANCES — Maximum payout limit is ₹5,000. Conditions apply.

LOWER THAN ONLINE WITH METRO'S ADDED BENEFITS — IF YOU FIND ANYTHING CHEAPER, WE PAY THE DIFFERENCE!* — ASK OUR STAFF & GET THE LOWEST PRICE!

METRO Wholesale — PhonePe — Pay with PhonePe & Get FLAT ₹250 CASH BACK* — On wallet payments of minimum bill value of ₹7500

MobiKwik Wallet & All UPI Accepted Here — GET FLAT ₹200* CASHBACK — *T&C Apply: Offer valid for once per user per month | Min. transaction of ₹5000 | Offer valid from 1st - 31st January, 2023 — Offer Valid on Transactions done through Mobikwik Wallet & UPI — Download the MobiKwik app Now!

Paytm CASHBACK CARNIVAL — Paytm Postpaid — Paytm Wallet — Flat ₹200 Min Payment of ₹6,000
- Offer Valid from 5th Jan to 31st Jan'23
- Offer Valid once per user during offer period
- Offer Valid on Transactions done through Paytm Wallet only
- Cashback will be received in the form of a scratch card which needs to be claimed within '7 Days'

SCAN TO DOWNLOAD THE METRO WHOLESALE APP NOW! Download App Today — GET IT ON Google Play — App is open only for business owners

Register online at: register.metro.co.in — EASY ONLINE REGISTRATION — 5 MINUTES — For business customers only — YOU CAN SCAN HERE FOR EASY REGISTRATION

Fill the details and submit your registration along with the business license and KYC

While visiting the store collect your METRO card from the customer entrance

• ಯಶವಂತಪುರ • ಕನಕಪುರ ರಸ್ತೆ • ಎಲೆಕ್ಟ್ರಾನಿಕ್ ಸಿಟಿ ಸಮೀಪ • ಬಿನ್ನಿಪೇಟೆ • ವೈಟ್‌ಫೀಲ್ಡ್ • ಮೈಸೂರು ರಸ್ತೆ

☎ 1860-266-2010 www.metro.co.in

*Offers valid till 26th January, 2023 — Timings: 6:00 am to 10:00 pm

ನೊಂದಾಯಿತ ಉದ್ಯಮೀ ಸದಸ್ಯರಿಗೆ ಮಾತ್ರ ಪ್ರವೇಶ ಇಲ್ಲಿ ತೋರಿಸಲಾಗಿರುವ ಚಿತ್ರಗಳು ಸೂಚನಾತ್ಮಕ ಮಾತ್ರ

• ಕನಿಷ್ಠ ಖರೀದಿ ನಿಯಮಗಳು ಅನ್ವಯಿಸುತ್ತವೆ. • ಕೊಡುಗೆಗಳ ಸ್ಟಾಕ್ ಮುಗಿಯುವ ವರೆಗೆ ಮಾತ್ರ ಮತ್ತು ಯಾವುದೇ ಮುನ್ಸೂಚನೆ ಇಲ್ಲದೆಯೇ ಕೊಡುಗೆಗಳನ್ನು ಬದಲಾಯಿಸುವ ನಿಯಮಗಳಿಗೆ ಒಳಪಟ್ಟಿರುತ್ತದೆ.

*ಸ್ಕೀಮ್‌ನ ನಿಯಮ ಮತ್ತು ಷರತ್ತುಗಳ ಪ್ರಕಾರ ಕೊಡುಗೆ ಅನ್ವಯಿಸುತ್ತದೆ. ಕೊಡುಗೆಯನ್ನು ಪಡೆಯುವುದಕ್ಕೂ ಮೊದಲು ಅನ್ವಯಿಸಿದರೆ, ದಯವಿಟ್ಟು ಅದರ ನಿಯಮ ಮತ್ತು ಷರತ್ತುಗಳನ್ನು ಗಮನವಿಟ್ಟು ಓದಿ. ಕೊಡುಗೆಗಳು MRP ಮೇಲೆ ಅನ್ವಯಿಸುತ್ತದೆ. ಎಲ್ಲ ಬೆಲೆಗಳು GST ಒಳಗೊಂಡಿವೆ. ಪ್ರಮಾಣ ನಿರ್ಬಂಧಗಳು ಅನ್ವಯಿಸಬಹುದು. ಉಚಿತ ಕೊಡುಗೆಗಳು ಪೂರ್ವಸೂಚನೆ ಇಲ್ಲದೇ ಬದಲಾವಣೆಗೆ ಒಳಪಟ್ಟಿರುತ್ತವೆ. ಸೀಮಿತ ಅವಧಿಯ ಕೊಡುಗೆ. ಹೋಲಿಕೆ ಬೆಲೆಗಳು ಸೂಚನೆ ಇಲ್ಲದೇ ಬದಲಾವಣೆಗೆ ಒಳಪಟ್ಟಿವೆ. ಕೊಡುಗೆಯು ಕನಿಷ್ಠ ಖರೀದಿ ಷರತ್ತಿಗೆ ಒಳಪಟ್ಟಿದೆ. ಕೊಡುಗೆಯು ಆಯ್ದ ಸ್ಟೋರ್‌ಗಳಲ್ಲಿ ಮಾನ್ಯವಾಗಿದೆ.
#MRP (ಎಲ್ಲ ತೆರಿಗೆಗಳನ್ನೂ ಒಳಪಟ್ಟು). ಕೊಡುಗೆಗಳು ಬೆಂಗಳೂರು ಔಟ್ಲೆಟ್‌ಗಳಲ್ಲಿ ಮಾತ್ರ ಅನ್ವಯಿಸುತ್ತವೆ.

METRO Wholesale — 5 STAR QUALITY, WHOLESALE PRICES!

‘ಅರವಿಂದ್ ಸ್ವಾಮಿ’ಗೆ ಮಿಲನ ಜೋಡಿ

ಅನೀಶ್ ಹಾಗೂ ಮಿಲನ

‘ಲವ್ ಮಾಕ್ಟೇಲ್’ ಖ್ಯಾತಿಯ ನಟಿ ಮಿಲನ ನಾಗರಾಜ್ ಹೊಸ ಚಿತ್ರಕ್ಕೆ ಕಾಲ್‌ಶೀಟ್ ನೀಡಿದ್ದಾರೆ. ‘ಲವ್ ಮಾಕ್ಟೇಲ್–2’ ಬಿಡುಗಡೆ ಬಳಿಕ ಬ್ಯಾಕ್ ಟು ಬ್ಯಾಕ್ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿರುವ ಮಿಲನಾ, ಈ ಚಿತ್ರದಲ್ಲಿ ವಿಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

‘ಲವ್ ಮಾಕ್ಟೇಲ್’ ಖ್ಯಾತಿಯ ನಟಿ ಮಿಲನ ನಾಗರಾಜ್ ಹೊಸ ಚಿತ್ರಕ್ಕೆ ಕಾಲ್‌ಶೀಟ್ ನೀಡಿದ್ದಾರೆ. ಬ್ಯಾಕ್ ಟು ಬ್ಯಾಕ್ ಸಿನಿಮಾಗಳನ್ನು ಒಪ್ಪಿಕೊಳ್ಳುತ್ತಿರುವ ಮಿಲನ, ಈ ಚಿತ್ರದಲ್ಲಿ ವಿಭಿನ್ನವಾದ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ನಟ ಅನೀಶ್ ಹಾಗೂ ‘ನಮ್ ಗಣಿ ಬಿಕಾಂ ಪಾಸ್’, ‘ಗಜಾನನ ಆ್ಯಂಡ್ ಗ್ಯಾಂಗ್’ ಸಿನಿಮಾ ಖ್ಯಾತಿಯ ನಿರ್ದೇಶಕ ಅಭಿಷೇಕ್ ಶೆಟ್ಟಿ ಕಾಂಬಿನೇಶನ್‌ನಲ್ಲಿ ಮೂಡಿಬರಲಿರುವ ಸಿನಿಮಾ ‘ಆರಾಮ್ ಅರವಿಂದ್ ಸ್ವಾಮಿ’. ರೊಮ್ಯಾಂಟಿಕ್ ಕಾಮಿಡಿ ಸಬ್ಜೆಕ್ಟ್ ಒಳಗೊಂಡ ಈ ಚಿತ್ರದ ನಾಯಕಿಯಾಗಿ ಮಿಲನ ಆಯ್ಕೆಯಾಗಿದ್ದಾರೆ.

ಮಿಲನಾ ಇದೇ ಮೊದಲ ಬಾರಿಗೆ ಅನೀಶ್ ಜೊತೆ ತೆರೆ ಹಂಚಿಕೊಳ್ಳುತ್ತಿದ್ದಾರೆ. ಮಿಲನಾ ಅವರು ಈ ಚಿತ್ರದಲ್ಲಿ ಬಹಳ ವಿಭಿನ್ನ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಚಿತ್ರದಲ್ಲಿ ಎರಡು ಶೇಡ್ಸ್‌ನಲ್ಲಿ ಅವರು ಕಾಣಿಸಿಕೊಳ್ಳುತ್ತಿದ್ದು, ಮಲಯಾಳಿ ಹುಡುಗಿ ಹಾಗೂ ಟೀಚರ್ ಪಾತ್ರವನ್ನು ನಿಭಾಯಿಸುತ್ತಿದ್ದಾರೆ. ಈಗಾಗಲೇ ಮಿಲನ ಶೂಟಿಂಗ್‌ನಲ್ಲಿ ಪಾಲ್ಗೊಂಡಿದ್ದಾರೆ ಎಂದು ಮಾಹಿತಿ ಹಂಚಿಕೊಂಡರು ನಿರ್ದೇಶಕ ಅಭಿಷೇಕ್ ಶೆಟ್ಟಿ.

‘ಆರಾಮ್ ಅರವಿಂದ್ ಸ್ವಾಮಿ’ ಚಿತ್ರಕ್ಕೆ ಅಭಿಷೇಕ್ ಶೆಟ್ಟಿ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ‘ಅಕಿರ’ ಸಿನಿಮಾ ಖ್ಯಾತಿಯ ಶ್ರೀಕಾಂತ್ ಪ್ರಸನ್ನ, ‘ಗುಳ್ಟು’ ಸಿನಿಮಾ ಖ್ಯಾತಿಯ ಪ್ರಶಾಂತ್ ರೆಡ್ಡಿ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ರೊಮ್ಯಾಂಟಿಕ್ ಕಾಮಿಡಿ ಸಿನಿಮಾದಲ್ಲಿ ಅನೀಶ್ ಇಲ್ಲಿಯವರೆಗಿನ ಸಿನಿಮಾಗಳಿಗಿಂತ ಭಿನ್ನವಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿರುವ ಚಿತ್ರತಂಡ ಶೀಘ್ರದಲ್ಲೇ ಮೋಷನ್ ಪೋಸ್ಟರ್ ಬಿಡುಗಡೆಗೂ ಸಜ್ಜಾಗುತ್ತಿದೆ. ❖

ತೇಜಸ್ವಿನಿಗೆ ರೊಮ್ಯಾನ್ಸ್ ಜೊತೆ ಸ್ವಲ್ಪ ತಮಾಷೆ



ನಟಿ ತೇಜಸ್ವಿನಿ ಶರ್ಮಾ ಈಗ ಸ್ವಲ್ಪ ರೊಮ್ಯಾಂಟಿಕ್ ಹಾಸ್ಯ ಪ್ರಧಾನ ಚಿತ್ರದತ್ತ ವಾಲಿದ್ದಾರೆ. ಸಸ್ಪೆನ್ಸ್, ಕ್ರೈಂ ಥ್ರಿಲ್ಲರ್ ಪ್ರಕಾರದ ಕಥೆಗಳಲ್ಲಿ ಕಾಣಿಸಿಕೊಂಡಿದ್ದ ಅವರಿಗೆ ಈಗ ಲಘು ಪಾತ್ರಗಳು ಇಷ್ಟವಾಗಿವೆಯಂತೆ. ಅಂದಹಾಗೆ ಈ ಚಿತ್ರದಲ್ಲಿ ತೇಜಸ್ವಿನಿ ಮೇಕಪ್ ಕಲಾವಿದೆಯಾಗಿ ಕಾಣಿಸಿಕೊಳ್ಳಲಿದ್ದಾರೆ. ತುಂಬಾ ಬಬ್ಲಿಯಾಗಿರುವ ಪಾತ್ರವಿದು ಎಂದಿದ್ದಾರೆ ಅವರು.

ಲಿಖಿತ್ ಶೆಟ್ಟಿ ನಾಯಕರಾಗಿರುವ ಈ ಚಿತ್ರಕ್ಕೆ ಇನ್ನೂ ಹೆಸರಿಡಬೇಕಿದೆ. ಲಿಖಿತ್ ಅವರ ಬ್ಯಾನರ್‌ನಡಿ ಈ ಚಿತ್ರ ನಿರ್ಮಾಣಗೊಳ್ಳುತ್ತಿದೆ. ಲಿಖಿತ್ ಅವರು ಫ್ಯಾಮಿಲಿ ಪ್ಯಾಕ್, ಸಂಕಷ್ಟಕರ ಗಣಪತಿ ಚಿತ್ರಗಳಲ್ಲಿ ನಾಯಕನಾಗಿ ಕಾಣಿಸಿಕೊಂಡವರು. ಈ ಹೊಸ ಚಿತ್ರಕ್ಕೆ ಎನ್. ವಿನಾಯಕ ಅವರು ನಿರ್ದೇಶಕರು. ಅವರಿಗೆ ಇದು ಮೊದಲ ಚಿತ್ರ. ಈ ಚಿತ್ರದಲ್ಲಿ ಇಬ್ಬರು ನಾಯಕಿಯರಿದ್ದಾರೆ. ತೇಜಸ್ವಿನಿ ಜತೆ ಖುಷಿ ರವಿ ಅವರೂ ತೆರೆ ಹಂಚಿಕೊಂಡಿದ್ದಾರೆ. ಫೆಬ್ರುವರಿಯಿಂದ ಚಿತ್ರೀಕರಣ ನಡೆಯಲಿದೆ. ಮನೋಹರ್ ಜೋಷಿ ಈ ಚಿತ್ರದ ಛಾಯಾಗ್ರಾಹಕರು.

ತೇಜಸ್ವಿನಿ ಅವರು ‘ಸೂಪರ್ ಕಪಲ್’ ವೆಬ್ ಸರಣಿಯ ಮೂಲಕ ಖ್ಯಾತರಾದವರು. ಅಲ್ಲಿಯೂ ತುಂಬಾ ಲಘುವಾಗಿರುವ ಪಾತ್ರ. ಅಲ್ಲಿ ತೊಡಗಿಸಿಕೊಂಡಿರುವುದು ಈ ಚಿತ್ರಕ್ಕೆ ಸಹಾಯಕವಾಯಿತು ಎಂದರು ತೇಜಸ್ವಿನಿ. ❖

‘ವೈರಂ’ ಟೀಸರ್ ಬಂತು

ಒಬ್ಬ ಆಂಗ್ರಿ ಯಂಗ್ ಮ್ಯಾನ್ ಸುತ್ತ ಹೆಣೆಯಲಾದ ಕಥಾಹಂದರ ಹೊಂದಿರುವ ಚಿತ್ರ ವೈರಂ. ಹಿರಿಯನಟ ದೇವರಾಜ್ ಪುತ್ರ ಪ್ರಣಾಮ್ ದೇವರಾಜ್ ಅಭಿನಯದ ದ್ವಿತೀಯ ಚಿತ್ರವಿದು. ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ನಟ ದೇವರಾಜ್, ಚಂದ್ರಕಲಾ ದೇವರಾಜ್ ಹಾಗೂ ರಾಗಿಣಿ ಪ್ರಜ್ವಲ್ ಟೀಸರ್ ಬಿಡುಗಡೆ ಮಾಡಿದರು. ಸಾಯಿಶಿವನ್ ಈ ಚಿತ್ರದ ನಿರ್ದೇಶಕ.

ಚಿಕ್ಕ ವಯಸ್ಸಿನಿಂದ ಅಪ್ಪ, ಅಣ್ಣನ ಸಿನಿಮಾಗಳನ್ನು ನೋಡಿಕೊಂಡು ಬೆಳೆದವನು. 4 ವರ್ಷಗಳ ನಂತರ ಈ ಸ್ಟೇಜ್ ಮೇಲೆ ನಿಂತು ಮಾತನಾಡುತ್ತಿದ್ದೇನೆ.. ಹಿಂದಿನ ಚಿತ್ರದಲ್ಲಿ ಚಾಕೊಲೇಟ್ ಬಾಯ್ ಆಗಿದ್ದೆ. ಈ ಸಿನಿಮಾದಲ್ಲಿ ಆ್ಯಕ್ಷನ್ ಹೀರೋ ಆಗಿದ್ದೇನೆ. ಸಾಯಿ ಶಿವನ್ ಅವರಲ್ಲಿ ತುಂಬಾ ವಿಶ್ವಾಸ ಇದೆ. ನಿರ್ಮಾಪಕರಾಗಿ ಮಲ್ಲಿಕಾರ್ಜುನ ಹಾಗೂ ವೇಮಾರೆಡ್ಡಿ ಅವರು ತುಂಬಾ ಬೆಂಬಲಿಸಿದ್ದಾರೆ. ಛಾಯಾಗ್ರಹಣವೂ ಅದ್ಭುತವಾಗಿದೆ. ನಾನು ಇಷ್ಟು ಚೆನ್ನಾಗಿ ತೆರೆಮೇಲೆ ಕಾಣಿಸಲು ಅವರೇ ಕಾರಣ. ಒಬ್ಬ ಹೀರೋ ಗುರುತಿಸಿಕೊಳ್ಳುವುದು ಅವನೆದುರು ಪ್ರಬಲ ವಿಲನ್ ಇದ್ದಾಗ. ನನಗೆ ಎರಡನೇ ಚಿತ್ರದಲ್ಲೇ ಗರುಡಾರಾಮ್ ಅವರಂಥ ಖಳನಟರೆದುರು ಅಭಿನಯಿಸುವ ಅವಕಾಶ ಸಿಕ್ಕಿತು. ಶಂಕರ್ ಅಶ್ವಥ್ ಹಾಗೂ ವೀಣಾಸುಂದರ್ ನನ್ನ ತಂದೆ, ತಾಯಿ ಪಾತ್ರ ಮಾಡಿದ್ದಾರೆ. ಚಿತ್ರದಲ್ಲಿ ಆನಂದಿಸುವಂತಹ 4 ಹಾಡುಗಳಿವೆ. ಕವಿರಾಜ್, ನಾಗೇಂದ್ರ ಪ್ರಸಾದ್, ರಾಮ್ ನಾರಾಯಣ್ ಹಾಡುಗಳನ್ನು ಬರೆದಿದ್ದಾರೆ ಎಂದು ನಾಯಕ ಪ್ರಣಾಮ್ ದೇವರಾಜ್ ತಿಳಿಸಿದರು.

ಚಿತ್ರದ ನಾಯಕಿ ಮೋನಾಲ್ ಮಾತನಾಡುತ್ತ ಇದು ನನ್ನ ಮೊದಲ ಕನ್ನಡ ಚಿತ್ರ. ಒಬ್ಬ ಕ್ರೈಸ್ತ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಒಂದೊಳ್ಳೆ ಪ್ರೇಮಕಥೆ ಚಿತ್ರದಲ್ಲಿದೆ ಎಂದರು.

ಚಿತ್ರದಲ್ಲಿ ಜನರಿಗೆ ಒಂದು ಸಾರ್ವತ್ರಿಕ ಸಂದೇಶ ಇದೆ. ಜನ ಬದಲಾಗಬೇಕು ಎಂದು ಹೇಳಲಾಗಿದೆ. ಜನ ಬೆಂಬಲಿಸುತ್ತಾರೆ ಎಂಬ ನಂಬಿಕೆಯಿದೆ ಎಂದರು ಖಳನಾಯಕ ಗರುಡಾರಾಮ್.

ಚಿತ್ರದಲ್ಲಿ ಹೀರೊ ಬದ್ಧತೆ, ಇನ್ವಾಲ್‌ಮೆಂಟ್ ತುಂಬಾ ಚೆನ್ನಾಗಿತ್ತು. ಆತ ಸಿಂಗಲ್ ಟೇಕ್ ಆರ್ಟಿಸ್ಟ್ ಎಂದು ನಿರ್ದೇಶಕ ಸಾಯಿಶಿವನ್, ಪ್ರಣಾಮ್ ದೇವರಾಜ್ ಅವರನ್ನು ಶ್ಲಾಘಿಸಿದರು.

ನಿರ್ಮಾಪಕರಾದ ಜೆ.ಮಲ್ಲಿಕಾರ್ಜುನ ಹಾಗೂ ವೇಮಾರೆಡ್ಡಿ ಅವರು ಚಿತ್ರದ ಬಗ್ಗೆ ಮಾತನಾಡಿದರು. ಗೋಪಿನಾಥ್ ಅವರ ಛಾಯಾಗ್ರಹಣ ಹಾಗೂ ಮಹತಿ ಸ್ವರಸಾಗರ್ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ❖

ಆಡದೇ ಉಳಿದ ಮಾತುಗಳು ಕೈಬರಹದಲ್ಲಿ!

ಶ್ರುತಿ ಚಂದ್ರಶೇಖರ್

ಜ. 23 ವಿಶ್ವ ಕೈಬರಹ ದಿನ

‘**Handwriting** is mind writing’ ಅಂತ ಹೇಳ್ತಾರೆ. ಹೌದು ನಮ್ಮ ಕೈಬರಹ ಮನಸ್ಸನ್ನು ಅರ್ಥೈಸಿಕೊಳ್ಳಲು ಇರುವ ಸಾಧನ. ಹಾಗಾಗಿ ಕೈಬರಹವನ್ನು ವಿಶ್ಲೇಷಿಸುವುದರ ಮೂಲಕ ವ್ಯಕ್ತಿಯ ವ್ಯಕ್ತಿತ್ವವನ್ನು ಸುಲಭವಾಗಿ ಅರಿಯಬಹುದು.

ಹೀಗೆ ಹೇಳಿದ ತಕ್ಷಣ ಸ್ವಲ್ಪ ಅಚ್ಚರಿ ಅನಿಸಬಹುದು. ಆದರೆ, ನಿಜಕ್ಕೂ ಸಾಧ್ಯವಿದೆ. ಕೈಬರಹ ವ್ಯಕ್ತಿತ್ವವನ್ನು ಅನಾವರಣ ಗೊಳಿಸುತ್ತದೆ. ಅಂತರ್ಮುಖಿಯೋ, ಬಹಿರ್ಮುಖಿಯೋ, ಆತ್ಮವಿಶ್ವಾಸದ ಮಟ್ಟ, ವ್ಯಕ್ತಿಗಿರುವ ಸಾಮಾಜಿಕ ಕೌಶಲಗಳು, ಸ್ವಭಾವತಃ ಇರುವ ಸಾಮರ್ಥ್ಯವು ನಡೆಸುವ ವೃತ್ತಿಗೆ ಎಷ್ಟು ಪೂರಕ ಹೀಗೆ ಹಲವು ವಿಚಾರಗಳನ್ನು ಕೈಬರಹ ವಿಶ್ಲೇಷಿಸಿ ತಿಳಿಯಬಹುದು.

ಮಕ್ಕಳ ಬೆಳವಣಿಗೆಗೆ ವಿಶ್ಲೇಷಣೆ ಪೂರಕ: ಮಗನೊ, ಮಗಳು ಸರಿಯಾಗಿ ಓದುತ್ತಿಲ್ಲ, ಓದಿದ್ದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಅಥವಾ ಓದಿದ್ದು ನೆನಪಿನಲ್ಲಿ ಉಳಿಯುತ್ತಿಲ್ಲ. ಓದಿನ ಕಡೆ ಗಮನ ಹರಿಸುತ್ತಿಲ್ಲ ಎಂಬ ದೂರುಗಳು ಸಾಮಾನ್ಯವಾಗಿ ಪೋಷಕರಿಂದ ಬರುತ್ತವೆ. ಇದರ ಹಿಂದೆ ಅನೇಕ ಕಾರಣಗಳಿರಬಹುದು. ಆ ಕಾರಣಗಳು ಯಾರ ಅರಿವಿಗೂ ಬಾರದೇ ಹೋಗಬಹುದು. ಮಕ್ಕಳಿಗೂ ತಮ್ಮ ಭಾವನೆಗಳನ್ನು ಸರಿಯಾಗಿ ವ್ಯಕ್ತಪಡಿಸಲು ಆಗದೇ ಇರಬಹುದು. ಆದರೆ, ಅವರ ಕೈಬರಹ ಮಾತ್ರ ಆಡದೇ ಉಳಿದ ಮಾತುಗಳನ್ನು ತೆರೆದಿಡುತ್ತದೆ. ಇದರ ವಿಶ್ಲೇಷಣೆಯಿಂದ ಸೂಕ್ಷ್ಮವಾಗಿ ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ. ಇದು ಸರಿಯಾದ ಸಮಯಕ್ಕೆ ಅವರ ಭಾವನೆಗಳಿಗೆ ಸ್ಪಂದಿಸಲು ಅನುವು ಮಾಡಿಕೊಡುತ್ತದೆ.

ಕೈಬರಹ ವಿಶ್ಲೇಷಣೆಯಿಂದ ಆಗುವ ಪ್ರಯೋಜನಗಳೇನು?: ಕೆಲವು ಮಕ್ಕಳ ಬರವಣಿಗೆ ಓದಲು ಆಗದ ಹಾಗೇ ಇರುತ್ತದೆ. ಇನ್ನು ಕೆಲವರು ದುಂಡಾಗೇನೋ ಬರೆಯುತ್ತಾರೆ. ಆದರೆ ವ್ಯಾಕರಣದೋಷವಿರುತ್ತದೆ. ಇನ್ನು ಕೆಲವರಿಗೆ ಮೌಖಿಕವಾಗಿ ಹೇಳಲು ಇಷ್ಟಪಡುತ್ತಾರೆ, ಬರೆಯುವುದು ಕಷ್ಟ ಅವರಿಗೆ.

ಕೆಲವು ಮಕ್ಕಳು ಹೋಂವರ್ಕ್ ಅಪೂರ್ಣಗೊಳಿಸುತ್ತಾರೆ. ಅವರ ಅತಿಯಾದ ತುಂಟತನ, ಸುಳ್ಳು ಹೇಳುವ ಸ್ವಭಾವ, ದೋಷಪೂರಿತ ವರ್ತನೆಗಳನ್ನು (behavioral issues) ಕೈಬರಹದಲ್ಲಿ ಸುಲಭವಾಗಿ ಪತ್ತೆ ಹಚ್ಚಬಹುದು.

ಶಕ್ತಿ, ಸಾಮರ್ಥ್ಯ ಅರಿಯಲು ರಹದಾರಿ: ಕೈಬರಹ ಸಮಸ್ಯೆ ಅಷ್ಟೆ ಅಲ್ಲ ವ್ಯಕ್ತಿಯ ಶಕ್ತಿ, ಸಾಮರ್ಥ್ಯವನ್ನು ಹೇಳುತ್ತದೆ. ಸ್ವಭಾವದತ್ತವಾಗಿ ಇರುವ ಕಲಿಕಾ ಶೈಲಿಯನ್ನು(learning styles) ತಿಳಿಸುತ್ತದೆ. ಆ ಶೈಲಿಗೆ ಅನುಗುಣವಾಗಿ ಪೋಷಕರು ತಮ್ಮ ಮಕ್ಕಳಿಗೆ ಪಾಠ ಹೇಳಿಕೊಡಬಹುದು. ಅತಿಯಾದ ನಿರೀಕ್ಷೆ, ದೋಷಪೂರಿತ ಮನೆ ವಾತಾವರಣ, ಸಿಂಗಲ್ ಪೇರೆಂಟ್, ಸಂಬಂಧಗಳಲ್ಲಿನ ಬಿರುಕು, ದಂಪತಿ ಜಗಳ ಎಲ್ಲವೂ ಮಗುವಿನ ಭಾವಾನಾತ್ಮಕ ನಡವಳಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಹೆಲಿಕ್ಯಾಪ್ಟರ್ ಪೇರೆಂಟಿಂಗ್‌ನಿಂದ ರೋಸಿಹೋಗುವ ಮಕ್ಕಳು ಒಂದೋ ಅಂತರ್ಮುಖಿಯಾಗಿ ತಮ್ಮ ಆಸಕ್ತಿಗಳಿಂದ ವಿಮುಖರಾಗುತ್ತಾರೆ.

ದೌರ್ಬಲ್ಯವಲ್ಲ ಅದು ಸಾಮರ್ಥ್ಯ: ಮಗು ತುಂಬಾ ಮಾತನಾಡುತ್ತದೆ. ಆಟ ಆಡುತ್ತದೆ, ಅತಿಯಾದ ತುಂಟತನ, ಅತಿಯಾದ ವಾದ, ಥಟ್ಟನೇ ಭಾವನಾತ್ಮಕವಾಗಿ ಸ್ಪಂದಿಸುವುದು, ಬಹುಬೇಗ ಜನರ ಸಂಪರ್ಕ ಸಾಧಿಸುವುದು, ಅರೆ ಗಳಿಗೆಯೂ ಸುಮ್ಮನಿರದ ಚುರುಕುತನ ಹೀಗೆ ಹಲವಾರು ಗುಣಗಳನ್ನು ತಾಯಂದಿರು ದೌರ್ಬಲ್ಯವೆಂಬಂತೆ ಬಿಂಬಿಸುತ್ತಾರೆ. ಆದರೆ, ಇವು ಮೇಲ್ನೋಟಕ್ಕೆ ದೌರ್ಬಲ್ಯವೆನಿಸಿದರೂ ಇದನ್ನು ಸಾಮರ್ಥ್ಯವಾಗಿ ಬದಲಿಸಬಹುದು. ಇಂಥ ಸಂದರ್ಭದಲ್ಲಿ ಬೈದೋ, ಹೊಡೆದೂ ಮಕ್ಕಳನ್ನು ತೆಪ್ಪಗಿರಿಸುವ ಬದಲು ಸಾಮರ್ಥ್ಯವನ್ನು ಪ್ರತಿಭೆಯಾಗಿ ಮಾರ್ಪಾಡು ಮಾಡಬೇಕು.

ವಿಶ್ಲೇಷಣಾ ಪ್ರಕ್ರಿಯೆ ಹೀಗಿರಲಿದೆ: ದುಂಡಗೆ ಕೈಬರಹವಿದ್ದರೆ ಸಾಲದು, ಬರಹ ತೆರೆದಿಡುವ ವ್ಯಕ್ತಿಗತ ಸಮಸ್ಯೆಗಳಿಗೆ ಉತ್ತರವೂ ಸಿಗಬೇಕು. ಮಗು ಎದುರಿಸುತ್ತಿರುವ ಯಾವುದೇ ಬಗೆಯ ಭಾವನಾತ್ಮಕ ಮತ್ತು ನಡವಳಿಕೆಯ ಸಮಸ್ಯೆಗಳನ್ನು ತಿಳಿಸುವ ಕೈಬರಹವನ್ನು ಹಂತ ಹಂತವಾಗಿ ತಿದ್ದಿ, ಪರಿಹಾರ ನೀಡಬಹುದು.

ಮೊದಲ ಹಂತದಲ್ಲಿ ಕೈಬರಹದಲ್ಲಿ ಸ್ಪಷ್ಟತೆ ತರಲು ಪ್ರಯತ್ನಿಸಲಾಗುವುದು. ವೇಗವನ್ನು ಹೆಚ್ಚಳ ಮಾಡಲಾಗುವುದು. ಕೈಬರಹ ಒಪ್ಪವಾಗುವಂತೆ ಮಾಡಲಾಗುವುದು. ನಂತರ ನಿಧಾನಕ್ಕೆ ಕೈಬರಹದ ಮೂಲಕ ಮಗುವಿನ ಮನಸ್ಸಿನಾಳಕ್ಕೆ ಇಳಿಯಲು ಪ್ರಯತ್ನಿಸಲಾಗುವುದು. ಅಲ್ಲಿರುವ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಮಗುವಿನೊಂದಿಗೆ ಸೌಹಾರ್ದ ಸಂಬಂಧವನ್ನು ಬೆಳೆಸಲಾಗುವುದು. ನಂತರ ಮಗು ನಿಧಾನಕ್ಕೆ ತನ್ನೊಳಗೆ ಆಗುತ್ತಿರುವ ಸಮಸ್ಯೆಗಳನ್ನು ಬಿಚ್ಚಿಡುವಂತೆ ಪ್ರೇರೇಪಿಸಲಾಗುವುದು. ಸಮಸ್ಯೆಯ ತೀವ್ರತೆ ಅರಿತು ಸಮಾಲೋಚನೆ ನೀಡಲಾಗುವುದು.

(ಲೇಖಕರು: ಕೈಬರಹ ತಜ್ಞೆ)

ನಾಳೆ ‘ಚೆಕಾವ್ ಟು ಶಾಂಪೇನ್’



ಬೆಂಗಳೂರು ಥಿಯೇಟರ್ ಆನ್ಸಂಬಲ್ ಅಭಿನಯಿಸುವ ಆ್ಯಂಟನ್ ಚೆಕಾವ್ ಕಥೆಗಳ ಆಧರಿತ ‘ಚೆಕಾವ್ ಟು ಶಾಂಪೇನ್’ ನಾಟಕ ನಾಳೆ (ಭಾನುವಾರ) ಸಂಜೆ 7 ಗಂಟೆಗೆ ಕನಕಪುರ ರಸ್ತೆಯಲ್ಲಿರುವ ದೊಡ್ಡಕಲ್ಲಸಂದ್ರದ ಶಂಕರ ಫೌಂಡೇಷನ್‌ನ ಡಮರು ವಿಭಾಗದಲ್ಲಿ ಪ್ರದರ್ಶನಗೊಳ್ಳಲಿದೆ.

ತಿಳಿ ಹಾಸ್ಯ, ಲವಲವಿಕೆ, ವಿನೋದಗಳಿಂದ ಪ್ರಾರಂಭವಾಗುವ ಈ ನಾಟಕ ಬದುಕಿನಲ್ಲಿ ಅನುಭವಿಸುವ ಕ್ಷುದ್ರತೆ, ಅನ್ಯಾಯ, ಜಿಗುಪ್ಸೆಯನ್ನು ಸೂಕ್ಷ್ಮವಾಗಿ, ತೀಕ್ಷ್ಣವಾಗಿ ವಿವೇಚಿಸಿ, ವಿಡಂಬಿಸುತ್ತಾ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ.

ನಾಟಕ: ಚೆಕಾವ್ ಟು ಶಾಂಪೇನ್, **ರಚನೆ:** ಡಾ. ಹೇಮಾ ಪಟ್ಟಣಶೆಟ್ಟಿ **ವಿನ್ಯಾಸ ಮತ್ತು ನಿರ್ದೇಶನ:** ಅಭಿಮನ್ಯು ಭೂಪತಿ, **ಸ್ಥಳ:** ಶಂಕರ ಫೌಂಡೇಷನ್,ದೊಡ್ಡಕಲ್ಲಸಂದ್ರ, ಕನಕಪುರ ರಸ್ತೆ. **ಸಮಯ:** ಸಂಜೆ 7ಕ್ಕೆ



‘ಬೆಂಗಳೂರು 69’ರಲ್ಲಿ ಗ್ರೇಸಿಲಾ

‘ಬೆಂಗಳೂರು 69’ ಚಿತ್ರ ಟ್ರೈಲರ್ ಮೂಲಕ ಸದ್ದು ಮಾಡಿರುವುದು ಗೊತ್ತಿದೆ. ಈ ಚಿತ್ರದಲ್ಲಿ ಯುರೋಪ್‌ನ ತಾರೆ ಗ್ರೇಸಿಲಾ ಪಿಶ್ನರ್ ನಟಿಸುತ್ತಿದ್ದಾರೆ.

ಝಾಕಿರ್ ಹುಸೈನ್ ಕರೀಂಖಾನ್ ಹಾಗೂ ದುಬೈ ಮೂಲದ ಕನ್ನಡಿಗರಾದ ಗುಲ್ಜಾರ್ ದಂಪತಿ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಕ್ರಾಂತಿ ಚೈತನ್ಯ ಅವರು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಈ ಸಿನಿಮಾ ಹೊಸದೊಂದು ಕ್ರೈಮ್ ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿದೆ. ‘ಟಗರು’ ಖ್ಯಾತಿಯ ಅನಿತಾ ಭಟ್ ನಾಯಕಿ. ಪವನ್ ಶೆಟ್ಟಿ ಹಾಗೂ ತೆಲುಗಿನ ನಟ ‘ಛತ್ರಪತಿ’ ಶಫಿ ನಾಯಕರಾಗಿದ್ದಾರೆ.

ಗ್ರೇಸಿಲ್ ಅಭಿನಯದ ದೃಶ್ಯಗಳನ್ನು ಮರುಭೂಮಿಯಲ್ಲಿ ಚಿತ್ರೀಕರಿಸಲಾಗಿದೆ.

‘ಬೆಂಗಳೂರು 69' ಇದೊಂದು ಕ್ರೈಮ್ ಥ್ರಿಲ್ಲರ್ ಕಥಾಹಂದರದ ಚಿತ್ರವಾಗಿದೆ. ಚಿತ್ರ ಶೀಘ್ರ ಬಿಡುಗಡೆಯಾಗಲಿದೆ ಎಂದಿದೆ ಚಿತ್ರತಂಡ.

ಚಿತ್ರಕ್ಕೆ ಪರಮೇಶ್ ಅವರ ಛಾಯಾಗ್ರಹಣವಿದೆ. ವಿಕ್ರಮ್ ಹಾಗೂ ಚಂದನಾ ಸಂಗೀತ, ಅಕ್ಷಯ್ ಪಿ. ರಾವ್ ಸಂಕಲನವಿದೆ. ಪಿ. ಎನ್. ವೈ. ಪ್ರಸಾದ್ ಹಾಗೂ ಜಯದೇವ್ ಮೋಹನ್ ಸಂಭಾಷಣೆ ಬರೆದಿದ್ದಾರೆ. ❖

ಅರಮನೆ ಮೈದಾನದಲ್ಲಿ ಸಿರಿಧಾನ್ಯ ವೈಭವ

ಸಾವೆ ಉಪ್ಪಿಟ್ಟು, ಮೊಳಕೆ ಕಟ್ಟಿದ ರಾಗಿ, ಸಿರಿಧಾನ್ಯಗಳ ಆರೋಗ್ಯಯುತ ಪೇಯ, ಬರಗು ದೋಸೆ, ಊದಲು ಇಡ್ಲಿ, ಸಿರಿಧಾನ್ಯಗಳ ಇಡ್ಲಿ ಮಿಕ್ಸ್... ಹೀಗೆ ಸಿರಿಧಾನ್ಯಗಳ ವೈವಿಧ್ಯವೇ ಅನಾವರಣಗೊಂಡಿದೆ.

– ಇದು ನಗರದ ಅರಮನೆ ಮೈದಾನದಲ್ಲಿರುವ ತ್ರಿಪುರವಾಸಿನಿಯಲ್ಲಿ ಶುಕ್ರವಾರದಿಂದ ಆರಂಭವಾಗಿರುವ ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳದಲ್ಲಿ ಕಂಡುಬಂದ ದೃಶ್ಯ.

ಕೃಷಿ ಇಲಾಖೆ ಸಹಯೋಗದಲ್ಲಿ ಅಂತರರಾಷ್ಟ್ರೀಯ ಸಿರಿಧಾನ್ಯ ಮತ್ತು ಸಾವಯವ ಮೇಳ ಆಯೋಜಿಸಲಾಗಿದೆ. ಮೇಳದಲ್ಲಿ ಭವಿಷ್ಯದ ಪೀಳಿಗೆಯ ಪ್ರಜ್ಞಾವಂತ ಆಹಾರವೆಂದು ಕರೆಯವ ಸಿರಿಧಾನ್ಯಗಳ ಮೌಲ್ಯವರ್ಧನೆ ಕಣ್ಮನ ಸೆಳೆಯುತ್ತಿದೆ. ಮೇಳಕ್ಕೆ ಬಂದವರು ಸಿರಿಧಾನ್ಯಗಳನ್ನು ಪರಿಚಯಿಸಿಕೊಳ್ಳುತ್ತಾ, ಅವುಗಳ ಖಾದ್ಯ ಸವಿಯುವ ಜತೆಗೆ ಖರೀದಿ ಮಾಡಬಹುದು. ಶನಿವಾರ ಮತ್ತು ಭಾನುವಾರವೂ ಈ ಸಿರಿಧಾನ್ಯ ವೈಭವವನ್ನು ಕಣ್ತುಂಬಿಕೊಳ್ಳಬಹುದು.

ಕರ್ನಾಟಕ ವಿಭಾಗದಲ್ಲಿ 84 ಮಳಿಗೆಗಳಿದ್ದು, ಸಿರಿಧಾನ್ಯದ ನವೋದ್ಯಮವು ಅನಾವರಣಗೊಂಡಿದೆ. ರಾಗಿ, ನವಣೆ, ಸಾವೆಯ ಶ್ಯಾವಿಗೆ, ಬಹುವಿಧದ ಸಿರಿಧಾನ್ಯದ ರೊಟ್ಟಿ, ಸಾವೆ ಕಿಚಡಿ, ಪಲಾವ್, ಸಾಮೆ, ನವಣೆ, ಕೊರಲೆ, ಹಾರಕ, ಊದಲು ಸಿರಿಧಾನ್ಯದ ಅನ್ನ... ಹೀಗೆ ಈ ಎಲ್ಲ ಪದಾರ್ಥಗಳ ರುಚಿ ಸವಿಯಬಹುದು.

ಮೇಳದಲ್ಲಿ ಹಲವು ರೈತ ಉತ್ಪಾದಕ ಸಂಸ್ಥೆಗಳು, ಪ್ರಾದೇಶಿಕ ಸಾವಯವ ಒಕ್ಕೂಟದ ಮಳಿಗೆಗಳಿವೆ. ಸಿರಿಧಾನ್ಯಗಳ ಲಘು ಆಹಾರ, ರಾಗಿ ಬೈಟ್ಸ್, ಮೈದಾ ಮುಕ್ತ

ಚೋಕೊ, ಮಸಾಲ ಓಟ್ಸ್ ಸೆಳೆಯುತ್ತಿವೆ.

ಸಾವಯವ ಉತ್ಪನ್ನಗಳು, ಬೇಳೆಕಾಳುಗಳು, ಡೇರಿ ಉತ್ಪನ್ನಗಳೂ ಇವೆ. ಸಾವಯವ ಹತ್ತಿಯಿಂದ ಮಾಡಿದ ವಸ್ತ್ರಗಳು, ಸೌಂದರ್ಯವರ್ಧಕಗಳು ಇವೆ. ಸಿರಿಧಾನ್ಯ ಸಂಸ್ಕರಿಸುವ ಯಂತ್ರೋಪಕರಣಗಳಿವೆ.

ದೇಶದ ವಿವಿಧ ಭಾಗಗಳಿಂದ ಸಿರಿಧಾನ್ಯ ಮತ್ತು ಸಾವಯವ ಉತ್ಪಾದಕ ಕಂಪನಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶನದಲ್ಲಿಟ್ಟಿವೆ.

ಸಿರಿಧಾನ್ಯಗಳು, ಅಕ್ಕಿ, ಅವಲಕ್ಕಿ, ನೂಡಲ್ಸ್, ಪಾಸ್ತಾ, ದೋಸೆ, ಇಡ್ಲಿ, ಬಿಸಿಬೇಳೆ ಬಾತ್, ಕುರುಂ ಕುರುಂ, ಸಿರಿಧಾನ್ಯ ಮಾಲ್ಟ್ ಗ್ರಾಹಕರನ್ನು ಸೆಳೆಯುತ್ತಿವೆ. ❖

ಭೂಮಿಕಾ ಬೆಳ್ಳಿತೆರೆ ಪಯಣ

'ಭಾಗ್ಯಲಕ್ಷ್ಮಿ' ಧಾರಾವಾಹಿಯ ಲಕ್ಷ್ಮಿ ಪಾತ್ರಧಾರಿ ಭೂಮಿಕಾ ರಮೇಶ್ ಈಗ 'ಡಿಸೆಂಬರ್ 24' ಚಿತ್ರದ ಮೂಲಕ ನಾಯಕಿಯಾಗಿ ಬೆಳ್ಳಿತೆರೆಗೆ ಪ್ರವೇಶಿಸಿದ್ದಾರೆ. ವೈದ್ಯಕೀಯ ಸಂಶೋಧನೆಗೆ ಸಂಬಂಧಪಟ್ಟ ಘಟನೆಗಳನ್ನಿಟ್ಟುಕೊಂಡು ನಿರ್ಮಾಣವಾದ ಈ ಚಿತ್ರಕ್ಕೆ ನಾಗರಾಜ್ ಎಂ.ಜಿ.ಗೌಡ ಅವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಫೆಬ್ರುವರಿ ಮೊದಲವಾರ ಈ ಚಿತ್ರ ತೆರೆ ಕಾಣಲಿದೆ.

ಭಾರತದಲ್ಲಿ ಸಾಕಷ್ಟು ನವಜಾತ ಶಿಶುಗಳು ಉಸಿರಾಟದ ಸಮಸ್ಯೆಯಿಂದಾಗಿಯೇ ಮರಣ ಹೊಂದುತ್ತಿವೆ. ಇದಕ್ಕೆ ಔಷಧ ಕಂಡುಹಿಡಿಯುವುದೇ ಚಿತ್ರದ ಮುಖ್ಯಕಥೆ. 2015ರಿಂದ 2019ರ ನಡುವೆ ಹುಲಿಯೂರುದುರ್ಗದಲ್ಲಿ ನಡೆದ ನೈಜ ಘಟನೆಯನ್ನು ಪ್ರೇರಣೆಯಾಗಿಟ್ಟುಕೊಂಡು ಈ ಕಥೆ ಹೆಣೆಯಲಾಗಿದೆ. ವೈದ್ಯಕೀಯ ವಿದ್ಯಾರ್ಥಿನಿಯಾಗಿ ಭೂಮಿಕಾ ರಮೇಶ್ ನಾಯಕಿ ಪಾತ್ರದಲ್ಲಿದ್ದಾರೆ. ರಘು ಎಸ್. ಈ ಚಿತ್ರದ ನಿರ್ಮಾಪಕರು. ವೆಂಕಿ ಯು.ಡಿ.ವಿ. ಅವರ ಸಂಕಲನ, ವಿನಯ್‌ಗೌಡ ಅವರ ಛಾಯಾಗ್ರಹಣ, ಪ್ರವೀಣ್ ನಿಕೇತನ, ವಿಶಾಲ್ ಆಲಾಪ್ ಅವರ ಸಂಗೀತ, ಮಂಜು ಮಹದೇವ್ ಅವರ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ. ❖

ನೋಕಿಯಾ ಟ್ಯಾಬ್ಲೆಟ್

ಬೇಸಿಕ್ ಫೀಚರ್ ಮೊಬೈಲ್ ಮೂಲಕ ಗ್ಯಾಜೆಟ್ ಮಾರುಕಟ್ಟೆಯಲ್ಲಿ ಮುನ್ನಡೆ ಸಾಧಿಸಿರುವ ನೋಕಿಯಾ, ಟ್ಯಾಬ್ಲೆಟ್ ಲೋಕದಲ್ಲೂ ಹೆಸರು ಗಳಿಸಿದೆ. ನೋಕಿಯಾ, ಟಿ21 ಹೆಸರಿನ ಆಕರ್ಷಕ ಟ್ಯಾಬ್ ಒಂದನ್ನು ಬಿಡುಗಡೆ ಮಾಡಿದ್ದು, 10.36 ಇಂಚಿನ ಡಿಸ್‌ಪ್ಲೇ ಹೊಂದಿದೆ.

ಹಿಂಭಾಗದಲ್ಲಿ 8 ಮೆಗಾಪಿಕ್ಸೆಲ್ ಕ್ಯಾಮೆರಾ ಮತ್ತು ಫ್ಲ್ಯಾಶ್ ಇದ್ದು, ಮುಂಭಾಗದಲ್ಲೂ 8 ಮೆಗಾಪಿಕ್ಸೆಲ್ ಸೆಲ್ಫಿ ಕ್ಯಾಮೆರಾ ಇದರ ವಿಶೇಷತೆಯಾಗಿದೆ ಎಂದು ನೋಕಿಯಾ ಹೇಳಿದೆ. ಹೊಸ ನೋಕಿಯಾ ಟಿ21 ಟ್ಯಾಬ್‌ನಲ್ಲಿ 8200 mAh ಬ್ಯಾಟರಿ, 18W ಫಾಸ್ಟ್ ಚಾರ್ಜಿಂಗ್ ವೈಶಿಷ್ಟ್ಯಗಳು ದೊರೆಯಲಿವೆ. 4 GB RAM ಮತ್ತು 64 GB ಸ್ಟೋರೇಜ್ ಇದ್ದು, ಮೈಕ್ರೋಎಸ್‌ಡಿ ಕಾರ್ಡ್ ಮೂಲಕ 512 GB ವರೆಗೆ ವಿಸ್ತರಿಸಬಹುದಾಗಿದೆ. Unisoc T612 ಪ್ರೊಸೆಸರ್ ಬೆಂಬಲ ಇದ್ದು, Android™ 12 ಓಎಸ್ ಮೂಲಕ ಕಾರ್ಯ ನಿರ್ವಹಿಸುತ್ತದೆ.

ಬೆಲೆ ಮತ್ತು ಲಭ್ಯತೆ

ಹೊಸ ನೋಕಿಯಾ ಟಿ21 ಟ್ಯಾಬ್ ಭಾರತದಲ್ಲಿ ₹19,999 ದರ ಹೊಂದಿದೆ. ಆದರೆ, ₹2,000 ವಿಶೇಷ ಡಿಸ್ಕೌಂಟ್ ಹೊಂದಿದ್ದು, ಅದರ ಮೂಲಕ, ಗ್ರಾಹಕರಿಗೆ ₹17,999ಕ್ಕೆ ಲಭ್ಯವಾಗಲಿದೆ. ಉಳಿದಂತೆ, ಪ್ರಿ ಬುಕಿಂಗ್ ಮಾಡುವ ಗ್ರಾಹಕರಿಗೆ ₹1,000 ಡಿಸ್ಕೌಂಟ್ ಹಾಗೂ ₹1,999 ಮೌಲ್ಯದ ಫ್ಲಿಪ್ ಕವರ್ ಉಚಿತವಾಗಿ ದೊರೆಯುತ್ತದೆ, ಈ ಕೊಡುಗೆ ಸೀಮಿತ ಅವಧಿಗೆ ಇರಲಿದೆ ಎಂದು ನೋಕಿಯಾ ಹೇಳಿದೆ. ❖

ಕಳ್ಳು ಮಾರುತ್ತಾರಂತೆ ಶ್ರುತಿ

'ಕರಿ ಹೈದ ಕರಿ ಅಜ್ಜ' ಚಿತ್ರತಂಡ

ಪವಾಡ ಪುರುಷ ಕೊರಗಜ್ಜ ಜೀವನಾಧಾರಿತ ಸುಧೀರ್ ಅತ್ತಾವರ ನಿರ್ದೇಶನದ ಸಿನಿಮಾ 'ಕರಿ ಹೈದ ಕರಿ ಅಜ್ಜ'ದದಲ್ಲಿ ಕಳ್ಳು (ಸೇಂದಿ) ಮಾರುತ್ತಾರಂತೆ ನಟಿ ಶ್ರುತಿ. ಅವರೇಕೆ ಕಳ್ಳು ಮಾರುತ್ತಾರೆ. ಏಕೆ? ಇಲ್ಲಿದೆ ವಿವರ.

ಸಿನಿ ಹನಿ

ಭೈರಕ್ಕಿಯಾಗಿ ಶ್ರುತಿ

'ಈ ಚಿತ್ರದಲ್ಲಿ ಭೈರಕ್ಕಿ ಪಾತ್ರ ಮುಖ್ಯ. ಭೈರಕ್ಕಿ ಕೊರಗಜ್ಜನ ಸಾಕು ತಾಯಿ. ಈ ಪಾತ್ರವನ್ನು ನಟಿ ಶ್ರುತಿ ನಿರ್ವಹಿಸಿದ್ದಾರೆ. ಅದರಲ್ಲಿ ಅವರು ಕಳ್ಳು ಮಾರುವ ಹೆಣ್ಣು ಮಗಳು. ಈಗ ಜನ ವಿಸ್ಕಿ, ಬ್ರಾಂದಿಯನ್ನು ಕೊರಗಜ್ಜಗೆ ನೀಡುತ್ತಿದ್ದಾರೆ. ದೇವರಿಗೆ ನಾವು ಏನೂ ಬೇಕಾದರೂ ಕೊಡಬಹುದು. ಹಾಗೆಂದು ಇಂದಿನ ಜನ ವಿಸ್ಕಿ, ಬ್ರಾಂದಿ ಕೊಡುತ್ತಿರುವುದು ಕೊರಗ ಜನಾಂಗಕ್ಕೆ ಬೇಸರ ತಂದಿದೆ. ಈ ಚಿತ್ರದಲ್ಲಿ ಕೊರಗಜ್ಜನ ನೈಜ ಕಥೆ ಹೇಳಲಾಗಿದೆ. ಕಥೆಯ ಮೂಲಮಾಹಿತಿ ಕೊರಗ ಜನಾಂಗದಿಂದ ಸಂಗ್ರಹಿಸಿ ಸಿನಿಮಾ ಮಾಡಲಾಗಿದೆ' ಎಂದಿದೆ ಚಿತ್ರತಂಡ.

ಚಿತ್ರದ ಶೂಟಿಂಗ್ ಇತ್ತೀಚೆಗೆ ಮುಕ್ತಾಯವಾಗಿದೆ. ಭರತ್ ಸೂರ್ಯ ನಟನೆ ನಾಯಕನಾಗಿ ನಟಿಸಿದ್ದಾರೆ. ಹಾಲಿವುಡ್, ಬಾಲಿವುಡ್ ಹಾಗೂ ಫ್ರೆಂಚ್ ಸಿನಿಮಾಗಳ ನೃತ್ಯ ನಿರ್ದೇಶಕ, ನಟ ಸಂದೀಪ್ ಸೋಪರ್ಕರ್ ನಟಿಸಿದ್ದಾರೆ. ಈ ಚಿತ್ರದಲ್ಲಿ ಇವರು ಕೊರಗಜ್ಜನ ಜೊತೆ ಬರುವ ಗುಳಿಗ ದೈವದ ಪಾತ್ರ ನಿರ್ವಹಿಸಿದ್ದಾರೆ. ಈ ಪಾತ್ರ ನೃತ್ಯ ರೂಪದಲ್ಲಿ ಮೂಡಿಬಂದಿದೆ.

ಸುಧೀರ್ ಅತ್ತಾವರ್ ಪ್ರತಿಕ್ರಿಯಿಸಿ 'ಕೊರಗಜ್ಜ ಕೋಲು ಕೊಡುವ ಸಂಪ್ರದಾಯದ ಮೂಲಕ 'ಕರಿ ಹೈದ ಕರಿ ಅಜ್ಜ' ಚಿತ್ರದ ಶೂಟಿಂಗ್ ಮುಗಿಸಲಾಯಿತು. ಇದು 12ನೇ ಶತಮಾನದ ಕಥೆ. ಕೊರಗಜ್ಜ ಎಂದು ಕರೆಯುವ 22, 23 ವರ್ಷ ಬದುಕಿದ್ದ ಹುಡುಗನ ಕಥೆ. ನಾವು ಈ ದೃಶ್ಯವನ್ನು ಸೋಮೇಶ್ವರದಲ್ಲಿ ಶೂಟ್ ಮಾಡುವ ಮೂಲಕ ಚಿತ್ರದ ಶೂಟಿಂಗ್‌ಗೆ ಚಾಲನೆ ನೀಡಿದೆವು' ಎಂದರು.

ಹಾಲಿವುಡ್ ನಟ ಸಂದೀಪ್ ಸೋಪರ್ಕರ್ ಮಾತನಾಡಿ, 'ಈ ಚಿತ್ರ ನನಗೆ ಒಳ್ಳೆ ಅನುಭವ ನೀಡಿದೆ. ಈ ತಂಡ ಹಾಗೂ ಸಿನಿಮಾದಲ್ಲಿ ಕೆಲಸ ಮಾಡಿದ್ದು ತುಂಬಾ ಖುಷಿ ಕೊಟ್ಟಿದೆ. ಒಳ್ಳೆಯ ತಂಡ ಇದಾಗಿದ್ದು ಅದ್ಭುತ ಕೆಲಸ ಮಾಡಿದೆ. ನಾನು ಮಾಡಿರುವ ಪಾತ್ರ ಅದ್ಭುತವಾಗಿದೆ. ಹೊಸ ಅನುಭವ ನೀಡಿದೆ. ಮೊದಲಬಾರಿಗೆ ಜನಪದ ಶೈಲಿಯಲ್ಲಿ ನೃತ್ಯ ಮಾಡಿದ್ದೇನೆ' ಎಂದರು.

ನಟಿ ಶ್ರುತಿ ಮಾತನಾಡಿ, 'ಈ ಸಿನಿಮಾ ನನ್ನ ಮನಸ್ಸಿನಲ್ಲಿ ವಿಶೇಷವಾದ ಸ್ಥಾನ ಪಡೆಯುತ್ತದೆ. ನಾನಿಲ್ಲಿ ಭೈರಕ್ಕಿ ಪಾತ್ರ ಮಾಡಿದ್ದೇನೆ. ದೈವದ ಕಥೆ ಅದ್ಭುತವಾಗಿ ಈ ಕಥೆಯನ್ನು ಹೆಕ್ಕಿ ತೆಗೆದಿದ್ದು ನಿರ್ದೇಶಕರ ಧೈರ್ಯ ಮೆಚ್ಚಬೇಕು. ಇದರಲ್ಲಿ ಬರುವ ಪ್ರತಿಯೊಬ್ಬರ ಪಾತ್ರ ವರ್ಣಚಿತ್ರದಂತೆಯೇ ಇದ್ದು ನಿರ್ದೇಶಕರು ಅಷ್ಟು ತಯಾರಿ ಮಾಡಿಕೊಂಡು ಸಿನಿಮಾ ಮಾಡಿದ್ದಾರೆ. ನಮ್ಮ ಜೊತೆ ಸಾಕಷ್ಟು ರಂಗಭೂಮಿ ಕಲಾವಿದರು ಇದರಲ್ಲಿ ನಟನೆ ಮಾಡಿದ್ದಾರೆ' ಎಂದರು.

ಚಿತ್ರದ ನಿರ್ಮಾಪಕ ತ್ರಿವಿಕ್ರಮ ಸಫಲ್ಯ, 'ತುಳುನಾಡ ಜನರ ಸಂಸ್ಕೃತಿ ತೋರಿಸುವ ಆಸೆ ಇತ್ತು. ಅದು ಈ ಚಿತ್ರದ ಮೂಲಕ ಈಡೇರಿದೆ. ಸೋಮೇಶ್ವರ, ಉಳ್ಳಾಲ, ಮಡಂತ್ಯಾರ್ ಮುಂತಾದ ಸ್ಥಳದಲ್ಲಿ ಶೂಟಿಂಗ್ ಮಾಡಲಾಗಿದೆ. ಚಿತ್ರವನ್ನು ಮೇ ತಿಂಗಳಲ್ಲಿ ಬಿಡುಗಡೆ ಮಾಡುವ ಯೋಜನೆ ಇದೆ' ಎಂದರು.

ಚಿತ್ರದಲ್ಲಿ ಪ್ರಮುಖ ಪಾತ್ರವೊಂದರಲ್ಲಿ ಬಾಲಿವುಡ್ ನಟ ಕಬೀರ್ ಬೇಡಿ ನಟಿಸಿದ್ದಾರೆ. ನಾಯಕಿಯಾಗಿ ವೃತಿಕಾ ಅಭಿನಯಿಸಿದ್ದಾರೆ. ಚಿತ್ರವನ್ನು ಏಕಕಾಲದಲ್ಲಿ ಕನ್ನಡ, ತುಳು ಹಾಗೂ ಮಲಯಾಳಂ ಭಾಷೆಗಳಲ್ಲಿ ತಯಾರಿಸಲಾಗುತ್ತಿದೆ. ಧೃತಿ ಕ್ರಿಯೇಷನ್ಸ್ ಹಾಗೂ ಸಕ್ಸಸ್ ಫಿಲಂಸ್ ಬ್ಯಾನರ್‌ನಲ್ಲಿ ಈ ನಿರ್ಮಾಣ ನಡೆದಿದೆ. ❖

ಪುಣ್ಯವತಿಯಾದ ಪ್ರಿಯಾಂಕಾ

ಕಾಲುಗಳಿಗೆ ಗೆಜ್ಜೆ ಕಟ್ಟಿ ಕುಣಿಯುವ ಕನಸಿದ್ದ ಹುಡುಗಿ ಇದ್ದಕ್ಕಿದ್ದಂತೆಯೇ ಹಸೆಮಣೆಯೇರಿ ತಾಳಿ ಕಟ್ಟಿಸಿಕೊಳ್ಳುವ ಸನ್ನಿವೇಶ ಬಂದರೆ ಅವಳೇನು ಮಾಡುತ್ತಾಳೆ? ಕನಸಿನ ಬೆನ್ನು ಹತ್ತುತ್ತಾಳೋ ಅಥವಾ ಸಂಸಾರ ನಡೆಸುತ್ತಾಳೋ? ಈ ತಿರುವನ್ನಿಟ್ಟುಕೊಂಡು ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದೆ ಪುಣ್ಯವತಿ ಧಾರಾವಾಹಿ.

ಮೊದಲ ಪ್ರಯತ್ನದಲ್ಲೇ ಈ ಧಾರಾವಾಹಿಯ ನಾಯಕಿ ಪದ್ಮಿನಿ ಪಾತ್ರಕ್ಕೆ ಆಯ್ಕೆಯಾದವರು ಪ್ರಿಯಾಂಕಾ ಡಿ.ಎಸ್. ಈಗಾಗಲೇ ಪ್ರೋಮೊ ಬಿಡುಗಡೆಯಾಗಿ ವೀಕ್ಷಕರನ್ನು ತಲುಪಿದೆ.

ಪ್ರಿಯಾಂಕಾ ಮೂಲತಃ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗದವರು. ಮಧ್ಯಮವರ್ಗದ ಕುಟುಂಬ. ಅಲ್ಲಿಯೇ ಪ್ರೌಢಶಿಕ್ಷಣ ಮುಗಿಸಿದರು. ಮುಂದೆ ಬೆಂಗಳೂರಿನಲ್ಲಿ ಬಿಎಸ್ಸಿ ಪದವಿಯವರೆಗೆ ಓದಿದರು. ಈ ವೇಳೆ ಕಾಲುಗಳು ನೃತ್ಯದ ಹೆಜ್ಜೆಯನ್ನೇ ಕನಸು ಕಾಣುತ್ತಿದ್ದವು. ಆದರೆ, ಮನೆಯಲ್ಲಿ ಅದಕ್ಕೆ ಬೆಂಬಲ ಸಿಗಲಿಲ್ಲ. 'ಮೊದಲು ಶಿಕ್ಷಣ ಮುಗಿಸಿಕೋ ಬಳಿಕ ನೃತ್ಯ, ನಟನೆ ಎಲ್ಲ' ಎಂದು ಅಪ್ಪ ತಾಕೀತು ಮಾಡಿದ್ದರಂತೆ.

ಹಾಗಿದ್ದರೂ ಪ್ರಿಯಾಂಕಾ ಶಾಲಾ ವೇದಿಕೆಗಳಲ್ಲಿ ನೃತ್ಯಾಭ್ಯಾಸ ಮುಂದುವರಿಸಿದ್ದರು. ಆಗಾಗ ಆಡಿಷನ್‌ಗಳಿಗೆ ಹೋಗುತ್ತಲೂ ಇದ್ದರು. ಒಮ್ಮೆ ಕಾಲೇಜಿನಲ್ಲಿ 'ಶರಪಂಜರ' ಚಿತ್ರದ ಕಲ್ಪನಾ ಅವರ ಅಭಿನಯದ ತುಣುಕನ್ನು ಪ್ರದರ್ಶಿಸಿದ್ದರಂತೆ. ಅದು ಬಹಳ ಜನರ ಗಮನ ಸೆಳೆಯಿತು. ನಂತರ ಯುಟ್ಯೂಬ್ ವಿಡಿಯೊಗಳನ್ನು ನೋಡಿ ನೃತ್ಯ, ನಟನೆ ಅಭ್ಯಾಸ ಮಾಡಿದರು. 'ಪದವಿ ಮುಗಿಯುತ್ತಿದ್ದಂತೆಯೇ ಕಲರ್ಸ್ ವಾಹಿನಿಯಿಂದ ಕರೆ ಬಂದಿತು. ಆಡಿಷನ್‌ನಲ್ಲಿ ಆಯ್ಕೆಯಾದೆ' ಎಂದು ಖುಷಿ ಹಂಚಿಕೊಂಡರು ಪ್ರಿಯಾಂಕಾ.

'ಭರತನಾಟ್ಯ, ಪಾಶ್ಚಾತ್ಯ ನೃತ್ಯ ಎರಡರಲ್ಲೂ ನನಗೆ ಆಸಕ್ತಿ ಇದೆ. ಈಗ ಧಾರಾವಾಹಿಗಾಗಿ ಇನ್ನಷ್ಟು ವೃತ್ತಿಪರವಾಗಿ ಕಲಿಯಲೇಬೇಕಿದೆ. ಹೀಗೆ ಕಲಿಕೆ, ನಟನೆ ಎರಡೂ ಜೊತೆಯಾಗಿ ಸಾಗಿವೆ' ಎಂದರು ಅವರು.

ಕಾಲೇಜು ದಿನಗಳಲ್ಲಿ ಬೇಲೂರು ರಘುನಂದನ್ ಅವರಿಂದ 'ರಂಗ ಚಿರಂತನ' ತಂಡದ ಅಡಿ ನಟನೆ, ರಂಗಭೂಮಿಯ ತರಬೇತಿ ಸಿಕ್ಕಿತ್ತು. ಇದೀಗ ಧಾರಾವಾಹಿಯ ಮೂಲಕವೂ ಒಂದಿಷ್ಟು ಕಲಿಯುತ್ತಿದ್ದೇನೆ' ಎಂದರು ಅವರು.

ಧಾರಾವಾಹಿಯಲ್ಲಿ ನನ್ನ ನಿಜ ಬದುಕಿನ ಪಾತ್ರವೇ ಸಿಕ್ಕಿದೆ. ಮಗಳ ಬಗ್ಗೆ ತುಂಬಾ ಕಾಳಜಿ ವಹಿಸುವ ಅಪ್ಪ. ಹಲವಾರು ನಿರ್ಬಂಧಗಳು. ಸಣ್ಣ ಭಯ. ಅದರ ಮಧ್ಯೆ ಸಾಧನೆಯ ಹಂಬಲ ಇತ್ಯಾದಿಗಳ ಒಟ್ಟು ಹೂರಣವೇ ಈ ಕಥೆಯಲ್ಲಿದೆ. ಅಪ್ಪನ ಪ್ರೀತಿಯ ಮಗಳಾಗಿ, ನೃತ್ಯದ ಮೇಲೆ ಅತೀವ ಪ್ರೀತಿಯುಳ್ಳವಳಾಗಿ, ನಂದನ್ (ನಾಯಕ)ನನ್ನು ಇಷ್ಟಪಡುವ, ನಾಚುವ ಹುಡುಗಿಯಾಗಿ ಇಲ್ಲಿ ಕಾಣಿಸಿಕೊಂಡಿದ್ದೇನೆ. ಹೀಗೆ ಭಿನ್ನ ಆಯಾಮಗಳಲ್ಲಿ ನನ್ನ ಪಾತ್ರ ಕಾಣಿಸಲಿದೆ. ನನಗೆ ಮುಂದೆ ಹಿರಿತೆರೆಯ ಕನಸೂ ಇದೆ. ಕಾದು ನೋಡೋಣ ಎಂದರು ಅವರು. ದಾಸಪುರಂದರ ಖ್ಯಾತಿಯ ನಿರ್ದೇಶಕ ರವಿಕಿಶೋರ್ ಈ ಧಾರಾವಾಹಿಯನ್ನೂ ನಿರ್ದೇಶಿಸುತ್ತಿದ್ದಾರೆ. ❖

ಪ್ರಿಯಾಂಕಾ ಡಿ.ಎಸ್.

ಇಂದು ಬೆಂಗಳೂರಿನಲ್ಲಿ ಹಿಂದೆಂದೂ ನಡೆಯದ ಅಮೋಘ ಘಟನೆ ನಡೆಯಲಿದೆ

DUE TO QUARREL BETWEEN UNCLE & NEPHEW
15 SHOWROOMS CLOSED

ನಾವು ನಮ್ಮ ಗಾರ್ಮೆಂಟ್ಸ್ ವ್ಯವಹಾರವನ್ನು ನಿಲ್ಲಿಸಿ ಕೋಲ್ಕತಾ, ದೆಹಲಿ ಮತ್ತು ಮುಂಬೈನ ನಮ್ಮ ಶೋರೊಮ್‌ಗಳನ್ನು ಮುಚ್ಚಲಾಗಿದೆ ಆದ್ದರಿಂದ ಕೇವಲ 4 ದಿನಗಳಲ್ಲಿ ದಾಸ್ತಾನುಗಳನು ದೊಡ್ಡ ರಿಯಾಯಿತಿ ದರದಲ್ಲಿ ಮಾರಾಟ ಮಾಡುತ್ತಿದ್ದೇವೆ
ವಿಶೇಷ ಮಕ್ಕಳು, ಮಹಿಳೆಯರು ಮತ್ತು ಪುರುಷರ ಉಡುಪುಗಳ ಮಾರಾಟ

Exclusive Grand SALE UPTO 90% OFF

THE BEAR HOUSE | rocstar | INDIGO NATION | JOHN MILLER | FLYING MACHINE | NUMERO UNO THE REAL DENIM

SPECIAL COUNTER | PRETTYSECRETS | ರೂ.1750 ರಿಂದ 3500 ಬೆಲೆಯ ನೈಟ್ ಸೂಟ್‌ಗಳು, ಒಳ ಉಡುಪುಗಳು ಈಗ ಕೇವಲ ರೂ.250 ರಿಂದ 350ಕ್ಕೆ ಮಾರಾಟ

ರೂ.2100 ರಿಂದ 4750 ಬೆಲೆಯ ಕಾಟನ್ ಹೋಸರಿ ಅಂತಾರಾಷ್ಟ್ರೀಯ ಬ್ರಾಂಡೆಡ್ ಗಾರ್ಮೆಂಟ್ಸ್ ಈಡಿ ಕೇವಲ ರೂ.150 ರಿಂದ 250 ಕ್ಕೆ ಮಾತ್ರ

ರೂ.999 ರಿಂದ 1990 ಬೆಲೆಯ ಟಾಪ್ಸ್, ಜೀನ್ಸ್, ಪ್ಯಾಂಟ್, ವಿವಿಧ ಬಣ್ಣಗಳ ಕುರ್ತೀಸ್, ವೆಸ್ಟರ್ನ್ ಟಾಪ್ಸ್, ಲೆಗ್ಗಿನ್ಸ್, ಪ್ಲಾಜೊ Rs. 250 to Rs. 350/-

ರೂ.2500 ರಿಂದ 3999ಬೆಲೆಯ ಶರ್ಟ್, ಪ್ಯಾಂಟ್, ಪ್ಯೂರ್ ವುಲೆನ್ ಸ್ವೆಟರ್ಸ್ , ಟಿ ಶರ್ಟ್ ಇತ್ಯಾದಿ. Rs 250 to Rs. 650/-

ರೂ. 2100 ದಿಂದ 6500 ಮೌಲ್ಯದ ಪ್ರೀಮಿಯಂ ಪ್ಯೂರ್ 100% ಕಾಟನ್ ಶರ್ಟ್, ಪ್ಯಾಂಟ್, ಜೀನ್ಸ್ Rs. 550 to Rs. 850/-

FORMAL & CASUAL WEAR
JOHN MILLER | NUMERO UNO | INDIGO NATION
Rs. 3000-7000 Getns- Jeans, Pants, Linen Shirt, Trousers, T-shirts will be sold from Rs. 450 to Rs. 1250

PARTY WEAR
JOHN MILLER | NUMERO UNO | INDIGO NATION
Rs. 4000 to 6500/- Worth Product will be sold only Rs. 599 to Rs. 999

WINTER WEAR
JOHN MILLER | FLYING MACHINE | INDIGO NATION
Rs. 2600/- to Rs. 7000 worth Winter Wear Ladies & Gents : Sweat Shirts, Sweaters, Lowers, Huddies, Jackets only Rs. 1250

Garments are sold here at such low prices which the people of Bengaluru could never imagine.
This sale is open only to retail customers, Wholesalers need not contact.

ರೂ.900 ರಿಂದ 1750 ಬೆಲೆಯ ಪಾರ್ಕ್ ಅವೆನ್ಯೂ ಇಂಪೋರ್ಟೆಡ್ ಪ್ಯೂರ್ ಲೇದರ್ ಬೆಲ್ಟ್ ಈಡಿ ಕೇವಲ ರೂ.150 ರಿಂದ 250 ಕ್ಕೆ ಮಾತ್ರ

Note : 1. Don's compare this sale with other sales 2. Counters will be closed as soon as the garments are sold.

ಆಫರ್ 4 ದಿನಗಳು ಮಾತ್ರ 21ನೇ, 22ನೇ, 23ನೇ ಮತ್ತು 24ನೇ ಜನವರಿ 2023 (ಶನಿವಾರ, ಭಾನುವಾರ ಸೋಮವಾರ ಮತ್ತು ಮಂಗಳವಾರ)

All Cards / Digital Payments Accepted | Entry & Parking Free | Sale Time : 10 am to 9 pm

PEARL BANQUET
ನಂ.1, ಇಂಡಿಯನ್ ಎಕ್ಸ್‌ಪ್ರೆಸ್ ಕಟ್ಟಡ, ಕ್ವೀನ್ಸ್ ರಸ್ತೆ, ಇಂಜಿನಿಯರ್ ಸಂಸ್ಥೆ ಎದುರು ಬೆಂಗಳೂರು – 560 001

Scan for location